ಮಂಗಳವಾರ, ಮೇ 21, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 141 | ಪುಟ 14

● www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಪ್ರಥಮ ಚಿಕಿತ್ಸೆಯ ಅರಿವಿದ್ದರೆ ಆಗಬಹುದಾದ ಅನಾಹುತಗಳನ್ನು ತಪ್ಪಿಸಬಹುದು



ಆಳ–ಅಗಲ
ಇರಾನ್ ಅಧ್ಯಕ್ಷ ರೈಸಿ ಸಾವಿನ ಸುತ್ತ...

ಆನೇಕಲ್‌ನಲ್ಲಿ ರೇವ್ ಪಾರ್ಟಿ: ಐವರ ಸೆರೆ 7

ದ್ವಿತೀಯ ಪಿಯು ಪರೀಕ್ಷೆ–2ರ ಫಲಿತಾಂಶ ಇಂದು 10

ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
₹76,500 (ಬೆಂಗಳೂರು)	₹93,300 (ಬೆಂಗಳೂರು)	83.30

5, 8, 9ನೇ ತರಗತಿ ಎಲ್ಲರೂ ತೇರ್ಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಶಾಲೆಗಳ 5, 8 ಹಾಗೂ 9ನೇ ತರಗತಿ ವಿದ್ಯಾರ್ಥಿಗಳನ್ನು ಮುಂದಿನ ಶೈಕ್ಷಣಿಕ ತರಗತಿಯಲ್ಲಿ ಮುಂದುವರಿಸಲು ಅವಕಾಶ ಕಲ್ಪಿಸುವಂತೆ ಸೂಚಿಸಿ, ಶಿಕ್ಷಣ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

10ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ನೇಮಕಾತಿ ವೇಳೆ ಮೀಸಲು ಖಾತ್ರಿ ಕಡ್ಡಾಯ: ಶೇ 33ರಷ್ಟು ಮಹಿಳೆಯರಿಗೆ

ಹೊರಗುತ್ತಿಗೆಗೂ ಮೀಸಲಾತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನಡೆಸುವ ಹೊರಗುತ್ತಿಗೆ ನೌಕರರ ನೇಮಕಾತಿಯಲ್ಲಿ ಮೀಸಲಾತಿಯನ್ನು ಕಡ್ಡಾಯವಾಗಿ ಪಾಲಿಸುವಂತೆ ಸರ್ಕಾರ ಆದೇಶ ಹೊರಡಿಸಿದೆ. ಮೀಸಲಾತಿ ಕಲ್ಪಿಸುವಾಗಲೂ ಮಹಿಳೆಯರಿಗೆ ಶೇ 33ರಷ್ಟು ಮೀಸಲಿಡುವಂತೆಯೂ ಸೂಚಿಸಿದೆ.

ಸರ್ಕಾರಿ ಇಲಾಖೆಗಳಲ್ಲಿ ವಿವಿಧ ಹಂತದ ಸಿಬ್ಬಂದಿ ನೇಮಕಾತಿಯನ್ನು ಹೊರಗುತ್ತಿಗೆ ಆಧಾರದಲ್ಲಿ ವಿವಿಧ ಏಜೆನ್ಸಿಗಳ ಮೂಲಕ ನೇಮಕ ಮಾಡಿಕೊಳ್ಳುತ್ತಿರುವ ಕಾರಣ ಮೀಸಲಾತಿ ಸಿಗುತ್ತಿಲ್ಲ. ಏಜೆನ್ಸಿಗಳು ತಮಗೆ ಬೇಕಾದವರಿಗೆ ಉದ್ಯೋಗ ನೀಡುತ್ತಿರುವುದರಿಂದ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಸಮುದಾಯದವರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಇಲ್ಲಿಯೂ ಕಡ್ಡಾಯ ಮೀಸಲಾತಿ ಜಾರಿ ಮಾಡಬೇಕು ಎಂಬ ಹಕ್ಕೊತ್ತಾಯ ಬಹಳ ಕಾಲದಿಂದ ಇತ್ತು.

2023ರ ಡಿಸೆಂಬರ್ 21ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಹೊರಗುತ್ತಿಗೆಯಲ್ಲೂ ಮೀಸಲಾತಿ ನೀತಿಯನ್ನು ಜಾರಿಗೊಳಿಸುವ ಪ್ರಸ್ತಾವನೆಗೆ ಅಂಗೀಕಾರ ನೀಡಲಾಗಿತ್ತು. ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮವವನ್ನು ಹೊರಗುತ್ತಿಗೆ ನೌಕರರ ನೇಮಕಾತಿಗೂ ಕಡ್ಡಾಯವಾಗಿ ಅನ್ವಯಿಸಬೇಕು. ಅದಕ್ಕೆ ಕೆಲವು ಸೂಚನೆಗಳನ್ನು ಪಾಲನೆ ಮಾಡಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸೋಮವಾರ ಹೊರಡಿಸಿದ ಸುತ್ತೋಲೆಯಲ್ಲಿ ನಿರ್ದೇಶನ ನೀಡಿದೆ.

45 ದಿನಗಳಿಗಿಂತ ಕಡಿಮೆ ಅವಧಿಯ ನೇಮಕಾತಿಗೆ ಹೊರಗುತ್ತಿಗೆ ಮೀಸಲಾತಿ ನೀತಿ ಅನ್ವಯಿಸುವುದಿಲ್ಲ. ಪ್ರತಿವರ್ಷ ಹೊರ ಸಂಪನ್ಮೂಲ ಏಜೆನ್ಸಿಗಳಿಂದ ಟೆಂಡರ್ ಕರೆಯುವಾಗ ಕಡ್ಡಾಯವಾಗಿ ಮೀಸಲಾತಿಗೆ ಅನುಗುಣವಾಗಿ ಹುದ್ದೆ ಹಂಚಿಕೆ ಮಾಡಿ, ಸಿಬ್ಬಂದಿಯನ್ನು ಪೂರೈಸಲು ಷರತ್ತು-ಗಳನ್ನು ನಮೂದಿಸಬೇಕು. ಹೊರ ಸಂಪನ್ಮೂಲ ಏಜೆನ್ಸಿ ಅಂತಿಮಗೊಳಿಸಿದ ಸಿಬ್ಬಂದಿಯ ಪಟ್ಟಿಯು ಮೀಸಲಾತಿ ನಿಯಮದಂತೆ ಇರುವುದನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳಬೇಕು ಎಂದೂ ಸುತ್ತೋಲೆ ಹೇಳಿದೆ.

ಒಂದು ವೇಳೆ ನೇಮಕಾತಿಯಾದ ಅಭ್ಯರ್ಥಿ ಕರ್ತವ್ಯಕ್ಕೆ ಹಾಜರಾಗದಿದ್ದಾಗ ಅಥವಾ ಅರ್ಧದಲ್ಲಿ ಉದ್ಯೋಗ ತೊರೆದಾಗ ಆ ಸ್ಥಾನ ಭರ್ತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಅದೇ ಪ್ರವರ್ಗದ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕು.

ಈ ಸೂಚನೆಗಳು ಸರ್ಕಾರದ ಎಲ್ಲ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ನಿಗಮ, ಮಂಡಳಿಗಳು, ವಿಶ್ವವಿದ್ಯಾಲಯಗಳಿಗೆಅನ್ವಯವಾಗಲಿದೆ ಎಂದು ತಿಳಿಸಲಾಗಿದೆ.

ಆದೇಶದಲ್ಲಿ ಏನಿದೆ?

- ಹೊರಗುತ್ತಿಗೆ ಸಿಬ್ಬಂದಿ ಒದಗಿಸುವ ಏಜೆನ್ಸಿ ನೀಡುವ ಸಿಬ್ಬಂದಿಯ ಜಾತಿ ಪ್ರಮಾಣಪತ್ರ ಮತ್ತು ಇತರೆ ದಾಖಲೆಗಳನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಪರಿಶೀಲಿಸಿಯೇ ಕಾರ್ಯಾದೇಶ ನೀಡಲು ಕ್ರಮ ವಹಿಸಬೇಕು
- ಯಾವುದೇ ಇಲಾಖೆಯಲ್ಲಿ 20 ಅಥವಾ ಅದಕ್ಕಿಂತ ಅಧಿಕ ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಮಾತ್ರ ಮೀಸಲಾತಿ ನೀತಿ ಜಾರಿ
- ಅಭ್ಯರ್ಥಿಯ ಕನಿಷ್ಠ ವಯೋಮಿತಿ 18 ವರ್ಷ ಮತ್ತು ಗರಿಷ್ಠ ವಯೋಮಿತಿ 60 ವರ್ಷ ಆಗಿರುತ್ತದೆ
- ಸಾಮಾಜಿಕ ನ್ಯಾಯ ಮತ್ತು ಸಮಾನ ಉದ್ಯೋಗಾವಕಾಶಗಳನ್ನು ಒದಗಿಸುವ ಉದ್ದೇಶದಿಂದ ಜಾರಿಗೆ ತರಲಾಗುವ ಈ ನಿಯಮಗಳಡಿ, ನೇಮಕಾತಿ ಆದವರನ್ನು ಕಾಯಂಗೆ ಪರಿಗಣಿಸುವಂತಿಲ್ಲ

ಯಾವ ಹುದ್ದೆಗಳಲ್ಲಿ ಹೊರಗುತ್ತಿಗೆ ಹೆಚ್ಚು?

- ವಾಹನ ಚಾಲಕರು
- ಡಾಟಾ ಎಂಟ್ರಿ ಆಪರೇಟರ್‌ಗಳು
- ಸ್ವಚ್ಛತಾ ಸಿಬ್ಬಂದಿ
- ಗ್ರೂಪ್ ಡಿ ಸಿಬ್ಬಂದಿ
- ಟೈಪಿಂಗ್ ಸಿಬ್ಬಂದಿ

ಇರಾನ್ ಅಧ್ಯಕ್ಷ ರೈಸಿ ಸಾವು


ಹಂಗಾಮಿ ಅಧ್ಯಕ್ಷರಾಗಿ ಮೊಹಮ್ಮದ್ ಮೊಖಬರ್ ನೇಮಕ

ದುಬೈ (ಎಪಿ/ಎಎಫ್‌ಪಿ/ರಾಯಿಟರ್ಸ್): ಇರಾನ್–ಅಜರ್‌ಬೈಜಾನ್ ಗಡಿ ಸನಿಹದ ಪರ್ವತ ಪ್ರದೇಶದಲ್ಲಿ ಹೆಲಿಕಾಪ್ಟರ್ ಪತನಗೊಂಡು, ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ, ಅಲ್ಲಿನ ವಿದೇಶಾಂಗ ಸಚಿವ ಹುಸೇನ್ ಅಮಿರ್ ಅಬ್ದುಲ್ಲಾಹಿಯಾನ್ ಹಾಗೂ ಕೆಲವು ಅಧಿಕಾರಿಗಳು ಮೃತಪಟ್ಟಿದ್ದಾರೆ.

ಇರಾನ್‌ನ ಪರಮೋಚ್ಚ ನಾಯಕನ ಸ್ಥಾನಕ್ಕೆ ರೈಸಿ ಅವರೇ ಉತ್ತರಾಧಿಕಾರಿ ಎಂದು ಅಂದಾಜಿಸಲಾಗಿತ್ತು. ಈಗ



ಇಬ್ರಾಹಿಂ ರೈಸಿ



ಮೊಖಬರ್

ಅಯಾತ್ ಉಲ್ಲಾ ಅಲಿ ಖಮೇನಿ ಅವರು ಇರಾನ್‌ನ ಪರಮೋಚ್ಚ ನಾಯಕರಾಗಿದ್ದಾರೆ.

ಭಾನುವಾರ ಪತನಗೊಂಡ ಹೆಲಿಕಾಪ್ಟರ್‌ನ ಅವಶೇಷಗಳು ಸೋಮವಾರ ಮುಂಜಾನೆ ಪತ್ತೆಯಾಗಿವೆ. ಅಧ್ಯಕ್ಷರು ಇದ್ದ ಹೆಲಿಕಾಪ್ಟರ್ ಪರ್ವತಕ್ಕೆ ಬಡಿದು, ಚೂರಾಯಿತು ಎಂದು ಸರ್ಕಾರಿ ಮಾಧ್ಯಮ ಹೇಳಿದೆ. ರೈಸಿ ಹಾಗೂ ಇತರರು ಪೂರ್ವ ಅಜರ್‌ಬೈಜಾನ್ ಪ್ರಾಂತ್ಯದಲ್ಲಿ ಅಣೆಕಟ್ಟು ಯೋಜನೆಯೊಂದನ್ನು ಉದ್ಘಾಟಿಸಿ ಮರಳುತ್ತಿದ್ದಾಗ ಈ ದುರ್ಘಟನೆ ನಡೆದಿದೆ.

11ನೇ ಪುಟ ನೋಡಿ

ಬೆನ್ನೇರಿದ ಭಯ: ದೂರಿನಿಂದ ದೂರ!

● ಸಂಧ್ಯಾ ಹೆಗಡೆ



ಹಾಸನ: ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಹೊಳೆನರಸೀಪುರದ ಸರ್ವಾಧಿಕಾರದ ಸಾಮ್ರಾಜ್ಯದಲ್ಲಿ ದುಡಿದು ತಿನ್ನುವವರ ಧ್ವನಿ ಅಡಗಿದೆ. ಹೊಟ್ಟೆಪಾಡಿಗಾಗಿ ಕೂಲಿ ಮಾಡುವವರು, ಮನೆಗೆಲಸದವರು, ರಸ್ತೆ ಬದಿ ವ್ಯಾಪಾರ ಮಾಡುವ ಅನೇಕ ಮಹಿಳೆಯರು, ಇನ್ನೂ ಅನೇಕರು ದೌರ್ಜನ್ಯದ ಬಲಿಪಶುಗಳಾದರೂ, ಕರುಳ ಕುಡಿಗಾಗಿ ನೋವನ್ನು ಅದುಮಿಟ್ಟು ಒಡಲೊಳಗೆ ರೋದಿಸುತ್ತಿದ್ದಾರೆ.

ಪೆನ್‌ಡ್ರೈವ್ ಹಂಚಿಕೆ ಪ್ರಕರಣ ಬೆಳಕಿಗೆ ಬಂದ ಮೇಲೆ ಜಿಲ್ಲೆಯಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವ ಅದೆಷ್ಟೋ ತಾಯಂದಿರಲ್ಲಿ ಇಷ್ಟುಕಾಲ ಸೆರಗೊಳಗೆ ಅವಿತಿಟ್ಟುಕೊಂಡಿದ್ದ ಕೆಂಡ ಸುಡಲಾರಂಭಿಸಿದೆ.

'ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವ ಸಂತ್ರಸ್ತೆಯರಲ್ಲಿ ಹಲವರ ಆಕ್ರೋಶ ಕಟ್ಟೆಯೊಡೆದಿದೆ. ದೂರು ನೀಡುವ ಇಚ್ಛೆಯೂ ಅವರಲ್ಲಿದೆ. ಆದರೆ, ತಮ್ಮ ಮಕ್ಕಳು, ಅವರ ಭವಿಷ್ಯ, ಸಾಮಾಜಿಕ ಅವಮಾನ ಎದುರಿಸಲು ಅಶಕ್ತರಾಗಿ ಅವರು ಸುಮ್ಮನಾಗಿದ್ದಾರೆ. ತಮ್ಮ ಮಗನ ವಯಸ್ಸಿನ ವ್ಯಕ್ತಿ ಬಲಾತ್ಕಾರದಿಂದ ದೌರ್ಜನ್ಯವೆಸಗಿರುವ ದುಃಸ್ವಪ್ನದಿಂದ ಅವರಿಗೆ ಹೊರಬರಲು ಆಗುತ್ತಿಲ್ಲ. ಆದರೆ, ಮಕ್ಕಳ ಒಳಿತನ್ನು ಯೋಚಿಸಿ ಅವರು ದೂರು ನೀಡಲು ಹಿಂದೇಟು ಹಾಕುತ್ತಿದ್ದಾರೆ' ಎನ್ನುತ್ತಾರೆ ಸಾಮಾಜಿಕ ಕಾರ್ಯಕರ್ತೆಯೊಬ್ಬರು.

10ನೇ ಪುಟ ನೋಡಿ

ಅಂಜಲಿ ಕೊಲೆ ಪ್ರಕರಣದ ತನಿಖೆ ಸಿಐಡಿಗೆ ವಹಿಸಲು ಸದ್ಯದಲ್ಲೇ ಆದೇಶ: ಜಿ. ಪರಮೇಶ್ವರ

‘ಬಿಜೆಪಿ ಸರ್ಕಾರದ ಅವಧಿಯಲ್ಲೇ ಹೆಚ್ಚು ಕೊಲೆ’

ಪ್ರಜಾವಾಣಿ ವಾರ್ತೆ



ಹುಬ್ಬಳ್ಳಿಯಲ್ಲಿ ಸೋಮವಾರ ಅಂಜಲಿ ಅಂಬಿಗೇರ ಅವರ ಮನೆಗೆ ಭೇಟಿ ನೀಡಿದ ಸಚಿವ ಜಿ.ಪರಮೇಶ್ವರ ಅವರು ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ಶಾಸಕ ಪ್ರಸಾದ ಅಬ್ಬಯ್ಯ, ಪಾಲಿಕೆ ಸದಸ್ಯ ನಿರಂಜನಯ್ಯ ಹಿರೇಮಠ ಉಪಸ್ಥಿತರಿದ್ದರು

ಹುಬ್ಬಳ್ಳಿ: ‘ನಮ್ಮ ಸರ್ಕಾರದ ಅವಧಿಯಲ್ಲಿ ಈ ವರ್ಷದ ಜನವರಿ 1ರಿಂದ ಏಪ್ರಿಲ್ 23ರವರೆಗೆ ರಾಜ್ಯದಲ್ಲಿ 430 ಕೊಲೆ ನಡೆದಿವೆ ಎಂದು ಬಿಜೆಪಿಯವರು ಆರೋಪಿಸಿದ್ದಾರೆ. ಆದರೆ, ಈ ಹಿಂದೆ ಅವರ ಸರ್ಕಾರದ ಅವಧಿಯಲ್ಲಿ ಹೆಚ್ಚು ಕೊಲೆಗಳು ನಡೆದಿವೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

‘ಬಿಜೆಪಿ ಸರ್ಕಾರದ ಜನವರಿ 1ರಿಂದ ಏಪ್ರಿಲ್ 23ರವೆಗಿನ ಅವಧಿಯಲ್ಲಿ 2021ರಲ್ಲಿ 449, 2022ರಲ್ಲಿ 466 ಮತ್ತು 2023ರಲ್ಲಿ 431 ಕೊಲೆ ನಡೆದಿವೆ. ಯಾರ ಅವಧಿಯಲ್ಲಿ ಹೆಚ್ಚು ಕೊಲೆಗಳು ನಡೆದಿವೆ ಎಂಬುದನ್ನು ಈ ಅಂಕಿ ಅಂಶಗಳೇ ಹೇಳುತ್ತವೆ’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿಲ್ಲ. ಗಣೇಶ ಉತ್ಸವ, ಹೋಳಿ, ಈದ್ ಸಂದರ್ಭದಲ್ಲಿ ಗಲಭೆ ನಡೆದಿಲ್ಲ. ಲೋಕಸಭಾ ಚುನಾವಣೆ ವೇಳೆಯಲ್ಲೂ ನಡೆದಿಲ್ಲ. ಹೆಚ್ಚಿನ ಪೊಲೀಸ್ ಸಿಬ್ಬಂದಿ ಬಳಸಿ, ಕಾನೂನು ಸುವ್ಯವಸ್ಥೆ ಕಾಪಾಡಲಾಗಿದೆ’ ಎಂದು ಅವರು ಸಮರ್ಥಿಸಿಕೊಂಡರು.

‘ಹುಬ್ಬಳ್ಳಿಯಲ್ಲಿ ನಡೆದ ಅಂಜಲಿ ಅಂಬಿಗೇರ ಕೊಲೆ ಪ್ರಕರಣದ ತನಿಖೆಯನ್ನು ಸಿಐಡಿಗೆ ಒಪ್ಪಿಸಲು ಸದ್ಯದಲ್ಲೇ ಆದೇಶ ಹೊರಡಿಸಲಾಗುವುದು. ನೇಹಾ ಮತ್ತು ಅಂಜಲಿ ಅವರ ಕೊಲೆ ಪ್ರಕರಣಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ನಿಷ್ಪಕ್ಷಪಾತ ತನಿಖೆ ನಡೆಯಬೇಕು ಹಾಗೂ ಕೊಲೆಗಾರರಿಗೆ ಕಠಿಣ ಶಿಕ್ಷೆಯಾಗಬೇಕು’ ಎಂದರು.

‘ಕಡು ಬಡವರಾದ ಅಂಜಲಿ ಕುಟುಂಬದವರು ತಮಗೆ ಮನೆ, ಒಬ್ಬ ಸಹೋದರಿಗೆ ಸರ್ಕಾರಿ ಉದ್ಯೋಗ ಕೊಡಿ ಮತ್ತು ಆರ್ಥಿಕ ನೆರವು ಕೋರಿದ್ದಾರೆ. ಈಗ ಚುನಾವಣಾ ನೀತಿ ಸಂಹಿತೆ ಇರುವುದರಿಂದ ಏನನ್ನೂ ಹೇಳಲ್ಲ. ನೀತಿ ಸಂಹಿತೆ ಮುಗಿದ ಬಳಿಕ ಇದರ ಬಗ್ಗೆ ತೀರ್ಮಾನಿಸಲಾಗುವುದು’ ಎಂದರು.

ಇದಕ್ಕೂ ಮೊದಲು ಪರಮೇಶ್ವರ ಅವರು ಅಂಜಲಿ ಅಂಬಿಗೇರ ಮತ್ತು ನೇಹಾ ಹಿರೇಮಠ ಅವರ ಮನೆಗಳಿಗೆ ಭೇಟಿ ನೀಡಿ. ಎರಡೂ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಹಲ್ಲೆಗೊಳಗಾದ ಮಹಿಳೆಗೆ ಆರ್ಥಿಕ ಸಂಕಷ್ಟ

ದಾವಣಗೆರೆ: ಹುಬ್ಬಳ್ಳಿಯ ಅಂಜಲಿ ಅಂಬಿಗೇರ ಹತ್ಯೆ ಆರೋಪಿಯಿಂದ, ಚಲಿಸುತ್ತಿದ್ದ ರೈಲಿನಲ್ಲಿ ಹಲ್ಲೆಗೆ ಒಳಗಾಗಿ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗದಗ ಜಿಲ್ಲೆ ಮುಳಗುಂದದ ಲಕ್ಷ್ಮಿ (27) ಆರ್ಥಿಕ ಸಂಕಷ್ಟದಲ್ಲಿದ್ದು, ಆಸ್ಪತ್ರೆಯ ಶುಲ್ಕ ಭರಿಸದಂಥ ಸ್ಥಿತಿಯಲ್ಲಿದ್ದಾರೆ.

ಲಕ್ಷ್ಮಿ ಅವರು ಮಗನನ್ನು ಸಿದ್ದಗಂಗಾ ಶಿಕ್ಷಣ ಸಂಸ್ಥೆಯಲ್ಲಿ ದಾಖಲಿಸಲು ಪತಿ ಮಹಾಂತೇಶ್ ಅವರೊಂದಿಗೆ ತುಮಕೂರಿಗೆ ತೆರಳಿ ಮೇ 16ರಂದು ವಿಶ್ವಮಾನವ ಎಕ್ಸ್‌ಪ್ರೆಸ್ ರೈಲಿನಲ್ಲಿ ವಾಪಸಾಗುತ್ತಿದ್ದರು. ಅದೇ ರೈಲಿನಲ್ಲಿದ್ದ ಅಂಜಲಿ ಅಂಬಿಗೇರ ಹತ್ಯೆ ಆರೋಪಿ ಗಿರೀಶ ಸಾವಂತ, ಲಕ್ಷ್ಮಿ ಅವರ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿದ್ದ.

ಈ ಸಂದರ್ಭ ಲಕ್ಷ್ಮಿ ಅವರ ಎಡಗೈ ನರಗಳು ಕತ್ತರಿಸಿದ್ದವು. ಆರಂಭದಲ್ಲಿ ದಾವಣಗೆರೆ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಲಕ್ಷ್ಮಿ, ನಂತರ ಎಸ್.ಎಸ್. ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಶಸ್ತ್ರಚಿಕಿತ್ಸೆ ಮಾಡಲು ಆರಂಭದಲ್ಲಿ ಆಸ್ಪತ್ರೆಯಿಂದ ₹30,000 ಆಗುತ್ತದೆ ಎಂದು ಹೇಳಿದ್ದರು. ₹10,000 ಮುಂಗಡ ಪಾವತಿಸಿದ ಬಳಿಕ ವೈದ್ಯರು ಚಿಕಿತ್ಸೆ ನೀಡಿದ್ದಾರೆ. ಈಗಾಗಲೇ ಔಷಧ ಸೇರಿ ₹30,000 ಖರ್ಚಾಗಿದೆ. ಆಸ್ಪತ್ರೆಯಿಂದ ಮನೆಗೆ ಕಳುಹಿಸುವ ಸಂದರ್ಭ ಶುಲ್ಕವು ₹ 80,000 ದಾಟಬಹುದು ಎಂದು ಅಂದಾಜಿಸಲಾಗಿದೆ. ಕೂಲಿ ಮಾಡಿ ಜೀವನ ನಡೆಸುವ ನಮ್ಮ ಬಳಿ ಅಷ್ಟು ಹಣವಿಲ್ಲ’ ಎಂದು ಮಹಾಂತೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ನನ್ನ ಪತ್ನಿಗೆ ಆರೋಪಿ ಇರಿದ ವೇಳೆ ಚಾಕು ಒಂದೂವರೆ ಇಂಚಿನಷ್ಟು ಕೈಯೊಳಗೆ ಚುಚ್ಚಿ ಗಾಯ ಮಾಡಿದ್ದು, ನರಗಳು ಕತ್ತರಿಸಿದ್ದರಿಂದ ಬೆರಳುಗಳು ಅಲುಗಾಡುತ್ತಿಲ್ಲ. ಮೂರ್ನಾಲ್ಕು ತಿಂಗಳು ವಿಶ್ರಾಂತಿ ಪಡೆಯುವಂತೆ ವೈದ್ಯರು ಸಲಹೆ ನೀಡಿದ್ದು, ಗಾಯಗೊಂಡ ಕೈಯಿಂದ ಯಾವುದೇ ಕೆಲಸ ಮಾಡಲು ಆಗದು. ನಾನು ಕೂಲಿ ಕೆಲಸ ಮಾಡುತ್ತಿದ್ದು, ಮೂವರು ಮಕ್ಕಳಿದ್ದಾರೆ.

ಸಂಸಾರ ಸಲಹುವುದೇ ಕಷ್ಟವಾಗಿದೆ. ಆಸ್ಪತ್ರೆಗೆ ಹಣ ಪಾವತಿಸಲು ಸಾಧ್ಯವಾಗುತ್ತಿಲ್ಲ ಎಂದು ಅವರು ಅಳಲು ತೋಡಿಕೊಂಡರು.

‘ಆಸ್ಪತ್ರೆಯಲ್ಲಿ ಊಟ, ತಿಂಡಿ, ಔಷಧಕ್ಕೆ ಹಣವಿಲ್ಲ. ಈಗಾಗಲೇ ಸ್ನೇಹಿತರ ಬಳಿ ಸಾಲ ಮಾಡಿದ್ದೇನೆ. ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಸಿಕೊಂಡು ಹೋದರೆ ಸಾಕು, ಹೇಗೋ ಜೀವನ ಮಾಡಬಹುದು. ನಮಗೆ ಕೂಲಿ ಕೆಲಸ ಬಿಟ್ಟರೆ ಬೇರೆ ದಾರಿ ಇಲ್ಲ’ ಎಂದು ಅವರು ಹೇಳಿದರು.

‘ರೈಲ್ವೆ ಪೊಲೀಸರು ₹5000 ಕೊಟ್ಟಿದ್ದು ಬಿಟ್ಟರೆ ಈವರೆಗೆ ನೆರವು ನೀಡಿಲ್ಲ. ಇಲಾಖೆಯಿಂದ ಪರಿಹಾರ ದೊರಕಿಸಿಕೊಡಬೇಕು’ ಎಂದು ಅವರು ಆಗ್ರಹಿಸಿದರು.

ಎಸಿಪಿ ವಿಜಯಕುಮಾರ್ ಅಮಾನತು

ಹುಬ್ಬಳ್ಳಿ: ಅಂಜಲಿ ಅಂಬಿಗೇರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹುಬ್ಬಳ್ಳಿ ದಕ್ಷಿಣ ಉಪವಿಭಾಗದ ಸಹಾಯಕ ಪೊಲೀಸ್ ಆಯುಕ್ತ (ಎಸಿಪಿ) ವಿಜಯಕುಮಾರ್ ತಳವಾರ ಅವರನ್ನು ಅಮಾನತುಗೊಳಿಸಲಾಗಿದೆ.

ಈ ಹಿಂದೆ, ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿಸಿಪಿ ರಾಜೀವ್ ಅವರನ್ನು ಅಮಾನತು ಮಾಡಲಾಗಿತ್ತು. ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯದ ಜಂಟಿ ನಿರ್ದೇಶಕ ಕುಶಾಲ್ ಚೌಕ್ಸೆ ಅವರನ್ನು ಹುಬ್ಬಳ್ಳಿ ಧಾರವಾಡ ಕಾನೂನು ಸುವ್ಯವಸ್ಥೆ ವಿಭಾಗದ ನೂತನ ಡಿಸಿಪಿಯಾಗಿ ನೇಮಕಗೊಳಿಸಿ ಆದೇಶಿಸಲಾಗಿದೆ.

‘ವಿದೇಶಾಂಗ ಸಚಿವಾಲಯಕ್ಕೆ ಶೀಘ್ರ ಪತ್ರ’



ಜಿ. ಪರಮೇಶ್ವರ

ಹುಬ್ಬಳ್ಳಿ: ‘ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಪ್ರಜ್ವಲ್ ರೇವಣ್ಣ ಬಂಧನಕ್ಕೆ ನ್ಯಾಯಾಲಯದಿಂದ ವಾರಂಟ್ ತೆಗೆದುಕೊಂಡಿದ್ದೇವೆ. ಇದನ್ನು ವಿದೇಶಾಂಗ ಸಚಿವಾಲಯಕ್ಕೆ ಕಳುಹಿಸಿ, ಅವರ ಪಾಸ್‌ಪೋರ್ಟ್ ರದ್ದುಪಡಿಸಲು ಅಧಿಕೃತವಾಗಿ ಪತ್ರ ಬರೆಯುತ್ತೇವೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

‘ಪ್ರಜ್ವಲ್ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿಯವರನ್ನು ಕೋರಿದ್ದರು. ಈಗ ನಾವು (ಕರ್ನಾಟಕ ಸರ್ಕಾರ) ಅಧಿಕೃತವಾಗಿ ನ್ಯಾಯಾಲಯದ ವಾರಂಟ್ ಆದೇಶದ ಜೊತೆಗೆ ವಿದೇಶಾಂಗ ಸಚಿವಾಲಯಕ್ಕೆ ಪತ್ರ ಬರೆಯುತ್ತೇವೆ. ಅದರಂತೆ ಪಾಸ್‌ಪೋರ್ಟ್ ಅಧಿಕಾರಿಗಳು ಕ್ರಮ ಕೈಗೊಳ್ಳಲೇಬೇಕು’ ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಪಾಸ್‌ಪೋರ್ಟ್ ರದ್ದಾದ ತಕ್ಷಣ ಪ್ರಜ್ವಲ್ ಯಾವುದೇ ದೇಶದಲ್ಲಿದ್ದರೂ ವಾಪಸ್ ಭಾರತಕ್ಕೆ ಬರಲೇಬೇಕು. ಆಗ ಅವರನ್ನು ನಾವು ಬಂಧಿಸುತ್ತೇವೆ. ಪ್ರಜ್ವಲ್ ಎಲ್ಲಿದ್ದಾರೆಂದು ನಮಗೆ ಮಾಹಿತಿ ಇಲ್ಲ. ಅವರ ಬಂಧನಕ್ಕೆ ಸಹಕರಿಸಲು ಇಂಟರ್‌ಪೋಲ್‌ಗೆ 3 ಸಲ ಪತ್ರ ಬರೆದಿದ್ದೇವೆ. ಅವರಿಂದ ಉತ್ತರ ಬಂದಿಲ್ಲ. ಬ್ಲ್ಯೂ ಕಾರ್ನರ್ ನೋಟಿಸ್ ಕೂಡ ಹೊರಡಿಸಲಾಗಿದೆ’ ಎಂದರು.

ಫೋನ್ ಟ್ಯಾಪಿಂಗ್ ದಾಖಲೆ ನೀಡಲಿ: ‘ಯಾವುದೇ ವ್ಯಕ್ತಿಗಳ ದೂರವಾಣಿ ಕರೆಗಳನ್ನು ಸರ್ಕಾರ ಟ್ಯಾಪಿಂಗ್ ಮಾಡುತ್ತಿಲ್ಲ. ಇಂತಹ ಯಾವುದೇ ದಾಖಲೆಗಳಿದ್ದರೆ ಎಚ್.ಡಿ. ಕುಮಾರಸ್ವಾಮಿ ಬಿಡುಗಡೆ ಮಾಡಿ, ದೂರು ನೀಡಲಿ. ಕ್ರಮ ಕೈಗೊಳ್ಳುತ್ತೇವೆ’ ಎಂದು ಪರಮೇಶ್ವರ ತಿಳಿಸಿದರು.

‘ಸರ್ಕಾರ ಫೋನ್ ಟ್ಯಾಪಿಂಗ್ ಮಾಡಬೇಕಾದರೆ ಆದೇಶ ಹೊರಡಿಸುವುದು ಸೇರಿ ಹಲವು ವಿಧಾನಗಳಿವೆ. ಖಾಸಗಿ ಏಜೆನ್ಸಿ ಮೂಲಕ ಟ್ಯಾಪಿಂಗ್ ನಡೆದಿದ್ದರೆ, ಅದು ನಮ್ಮ ಗಮನಕ್ಕೆ ಇಲ್ಲ’ ಎಂದರು.

ಯುವ ಸಾಹಿತಿ ಲಕ್ಕೂರು ಆನಂದ ಅನುಮಾನಾಸ್ಪದ ಸಾವು



ಕಲಬುರಗಿ: ಆಳಂದ ತಾಲ್ಲೂಕಿನ ಕಡಗಂಚಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಸಂಶೋಧನಾ ವಿದ್ಯಾರ್ಥಿಯೂ ಆಗಿರುವ ಯುವ ಕವಿ, ಸಾಹಿತಿ ಲಕ್ಕೂರು ಆನಂದ (44) ಅವರು ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ.

ಆನಂದ ಮೂಲತಃ ಕೋಲಾರದ ಮಾಲೂರು ತಾಲ್ಲೂಕಿನ ಲಕ್ಕೂರು ಗ್ರಾಮದವರು. ಸಿಯುಕೆ ಕನ್ನಡ ವಿಭಾಗದಲ್ಲಿ ಎರಡು ವರ್ಷಗಳಿಂದ ಪಿಎಚ್.ಡಿ. ಮಾಡುತ್ತಿದ್ದರು. ಕಡಗಂಚಿ ಗ್ರಾಮದ ಪೆಟ್ರೋಲ್ ಬಂಕ್ ಬಳಿ ಆನಂದ ಶವವಾಗಿ ಪತ್ತೆಯಾಗಿದ್ದಾರೆ ಎಂದು ಅವರ ಸ್ನೇಹಿತರು ಹೇಳಿದರು.

ಆನಂದ ಮೃತದೇಹವನ್ನು ಶವಾಗಾರದಲ್ಲಿ ಇರಿಸಲಾಗಿದೆ. ಪೋಷಕರು ಕೋಲಾರದಿಂದ ಬಂದ ಬಳಿಕ, ಅವರ ಹೇಳಿಕೆಯನ್ನು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗುವುದು ಎಂದು ನರೋಣ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಅವರಿಗೆ ತಾಯಿ, ತಂಗಿ ಹಾಗೂ ತಮ್ಮ ಇದ್ದಾರೆ.

ಗೌಡರ ಕುಟುಂಬದ ವಿರುದ್ಧ ಮಾತುಕತೆ ಆಡಿಯೊ

ಶಿವರಾಮೇಗೌಡ ಸಂಭಾಷಣೆ ಬಹಿರಂಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್‌ಗೆ ಸಂಬಂಧಿಸಿದಂತೆ ವಕೀಲ ಹಾಗೂ ಬಿಜೆಪಿ ಮುಖಂಡ ದೇವರಾಜೇಗೌಡ ಮತ್ತು ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಅವರ ಮಧ್ಯೆ ನಡೆಯಿತು ಎನ್ನಲಾದ ದೂರವಾಣಿ ಸಂಭಾಷಣೆಯ ಮತ್ತೊಂದು ಆಡಿಯೊ ಬಹಿರಂಗಗೊಂಡಿದೆ.

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ ಕುರಿತು ಶಿವರಾಮೇಗೌಡ ಕೀಳುಮಟ್ಟದ ಭಾಷೆ ಬಳಸಿದ್ದಾರೆ ಎಂದು ಜೆಡಿಎಸ್ ನಾಯಕರು ಮತ್ತು ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆಡಿಯೊದಲ್ಲಿರುವುದೇನು?: ದೇವರಾಜೇಗೌಡರ ಜತೆ ಮಾತನಾಡುವಾಗ, ‘ಶಿವರಾಮೇಗೌಡ ಅವರು, ದೇವೇಗೌಡ ಏನೂ ಕಡಿಮೆ ಇಲ್ಲ. ಇನ್ನೂ ಆತ್ಮಹತ್ಯೆ ಮಾಡಿಕೊಂಡಿಲ್ವ’ ಎನ್ನುವ ಮಾತು ಆಡಿದ್ದಾರೆನ್ನಲಾಗಿದೆ. ಈ ಮಾತು ಜೆಡಿಎಸ್ ಕಾರ್ಯಕರ್ತರನ್ನು ಕೆರಳಿಸಿದೆ.

‘ಮಾಜಿ ಪ್ರಧಾನಿ ದೇವೇಗೌಡರ ಕುಟುಂಬವನ್ನು ಬಲಿ ಕೊಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಎಚ್.ಡಿ.ಕುಮಾರಸ್ವಾಮಿ ತನ್ನ ಮಗ ನಿಖಿಲ್‌ನನ್ನು ಮುಂದಕ್ಕೆ ತರಲು ಮತ್ತು ಪ್ರಜ್ವಲ್ ಅನ್ನು ಮೂಲೆಗುಂಪು ಮಾಡಲು ವಿಡಿಯೊ ಬಿಟ್ಟಿದ್ದಾರೆ ಎಂದು ಹೇಳು’ ಎಂಬುದು ಆಡಿಯೊದಲ್ಲಿದೆ.

ಶಿವರಾಮೇಗೌಡ: ಕುಮಾರಸ್ವಾಮಿನೇ ಬಿಟ್ಟಿರಬೇಕು ಅಂತ ಹೇಳಿ. ಕುಮಾರಸ್ವಾಮಿಗೆ ಅವ್ನ ಮಗ ಮುಂದಕ್ಕೆ ಬರಬೇಕು ಅಂತ ಆಸೆ ಇದೆ. ಇವನು (ಪ್ರಜ್ವಲ್) ಮುಂದಕ್ಕೆ ಬಂದ್ ಬಿಟ್ನಲ್ಲ, ಆದ್ದರಿಂದ ಬಿಟ್ಟಿದ್ದಾನೆ ಅಂತ ಹೇಳಿ

ದೇವರಾಜೇಗೌಡ: ಹಾಂ

ಶಿವರಾಮೇಗೌಡ: ದ್ಯಾವೇಗೌಡ, ದ್ಯಾವೇಗೌಡನ ಮಕ್ಕಳು ಏನೂ ಕಡ್ಮೆ ಅಂತ ತಿಳ್ಕೊಬೇಡ. ಆತ್ಮಹತ್ಯೆ ಮಾಡ್ಕೊಳಲಿಲ್ವಾ ದೇವೇಗೌಡ.... ಕೇಳಣ್ಣ ಕೇಳಣ್ಣ ಒಂದು ನಿಮಿಷ ಕೇಳಿ... ಇನ್ನು ಏನೇನು ವಿಡಿಯೊ ಗಳಿವೆ?

ದೇವರಾಜೇಗೌಡ: ಹಾಂ

ಶಿವರಾಮೇಗೌಡ: ಬೆಳಿಗ್ಗೆ ಡಿಕೆ ಮಾತನಾಡಿದ್ರು, ನಿಮ್ ಹತ್ರ ಏನೇನ್ ಇದೆಯೋ ನಮಗೆ ಕೊಡಿ. ನೀವೇನು ತಲೆ ಕೆಡಿಸ್ಕೋಬೇಡಿ. ಅವರನ್ನು ಬಲಿ ಹಾಕೋಕೆ ಸರ್ಕಾರನೇ ತೀರ್ಮಾನ ಮಾಡಿದೆ. ಅರ್ಥ ಆಯ್ತಾ.

ದೇವರಾಜೇಗೌಡ: ಸರಿ ಅಣ್ಣಾ

ಶಿವರಾಮೇಗೌಡ: ನೀವೇನು ಪೆನ್‌ಡ್ರೈವ್ ಹಂಚಿಲ್ಲ. ಹಂಚಿದ್ರೂ ತಪ್ಪೇನಿದೆ ಹೇಳಿ

ದೇವರಾಜೇಗೌಡ: ರಾಂಗು ರೈಟು ಅನ್ನೊದ್‌ಕಿಂತಾ ಅಣ್ಣ...

ಶಿವರಾಮೇಗೌಡ: ಏನು ಆಗಲ್ಲ. ನೀವೇನ್ ಲಾಯರ್ ಅಲ್ವೇನ್ರಿ

ದೇವರಾಜೇಗೌಡ: ಅಣ್ಣಾ, ಕಾನೂನು ಪ್ರಕಾರ ಪನಿಶ್ಮೆಂಟ್ ಆಗತ್ತೆ. ಹೆಣ್ಣುಮಕ್ಕಳ ಮಾನ ಮರ್ಯಾದೆ ಪ್ರಶ್ನೆ. ಅವರ ಶೀಲದ ಬಗ್ಗೆ ನಾವು ಯೋಚ್ನೆ ಮಾಡ್ಬೇಕಣ್ಣ

ಶಿವರಾಮೇಗೌಡ: ಅದರ ಬಗ್ಗೆ ನಿವ್ಯಾಕೆ ಯೋಚನೆ ಮಾಡ್ತೀರಿ

ಪೆನ್‌ಡ್ರೈವ್ ವಿಚಾರದಲ್ಲಿ ಸರ್ಕಾರ ಮಟ್ಟದಲ್ಲೇ ಪಿತೂರಿ ನಡೆದಿದೆ ಎಂಬ ದೇವರಾಜೇಗೌಡ ಅವರ ಹೇಳಿಕೆಯಲ್ಲಿ ಸತ್ಯಾಂಶ ಇದೆ. ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಸುದ್ದಿ 2 ನಿಮಿಷ

ಕೆಲವೆಡೆ ಮುಂದುವರಿದ ಮಳೆ



ಬೆಂಗಳೂರು: ನಗರದ ದಕ್ಷಿಣ ಹಾಗೂ ಪಶ್ಚಿಮ ಭಾಗದ ಹಲವು ಪ್ರದೇಶಗಳಲ್ಲಿ ಸೋಮವಾರ ಉತ್ತಮ ಮಳೆಯಾಯಿತು. ಹಲವು ಸ್ಥಳಗಳಲ್ಲಿ ತಡರಾತ್ರಿಯವರೆಗೂ ತುಂತುರು ಮಳೆ ಮುಂದುವರಿದಿತ್ತು.

ಸೋಮವಾರ ಬೆಳಿಗ್ಗೆಯಿಂದ ನಗರದಾದ್ಯಂತ ಮೋಡದ ವಾತಾವರಣವಿತ್ತು. ಮಧ್ಯಾಹ್ನ ಹಾಗೂ ಸಂಜೆ ವೇಳೆಯಲ್ಲಿ ಕೆಲವೆಡೆ ಉತ್ತಮ ಮಳೆಯಾಯಿತು.

ಎಚ್. ಗೊಲ್ಲಹಳ್ಳಿ, ರಾಜರಾಜೇಶ್ವರಿನಗರ, ಹಮ್ಮಿಗೆಪುರದಲ್ಲಿ ತಲಾ 2 ಸೆಂ.ಮೀ, ಗೊಟ್ಟಿಗೆರೆಯಲ್ಲಿ 1.2 ಸೆಂ.ಮೀ, ಉತ್ತರಹಳ್ಳಿ, ಕೆಂಗೇರಿ, ಅಂಜನಾಪುರ, ಅರಕೆರೆ, ದೊರೆಸಾನಿಪಾಳ್ಯದಲ್ಲಿ ತಲಾ ಒಂದು ಸೆಂ.ಮೀ ಮಳೆಯಾಗಿದೆ.

ನಂದಿನಿ ಲೇಔಟ್, ಪೀಣ್ಯ ಕೈಗಾರಿಕೆ ಪ್ರದೇಶ, ಹೇರೋಹಳ್ಳಿ, ವಿಜಯನಗರ, ನಾಗಪುರ, ವನ್ನಾರಪೇಟೆ, ಎಚ್‌ಎಎಲ್ ವಿಮಾನ ನಿಲ್ದಾಣ, ಹರಳೂರು, ಬಿಟಿಎಂ ಲೇಔಟ್, ಬಿಳೇಕಹಳ್ಳಿ, ಗೊಟ್ಟಿಗೆರೆ, ಪಟ್ಟಾಭಿರಾಮನಗರ, ವಿದ್ಯಾಪೀಠ ಸುತ್ತಮುತ್ತ ಹಗುರ ಮಳೆಯಾಯಿತು.

ನಾನೂ ಆರ್‌ಎಸ್‌ಎಸ್ ಕಾರ್ಯಕರ್ತ ವಿದಾಯ ಭಾಷಣದಲ್ಲಿ ನ್ಯಾಯಮೂರ್ತಿ

ಕೋಲ್ಕತ್ತ (ಪಿಟಿಐ): ಕಲ್ಕತ್ತ ಹೈಕೋರ್ಟ್‌ನ ನ್ಯಾಯಮೂರ್ತಿ ರಂಜನ್ ದಾಶ್ ಅವರು, ಸೋಮವಾರ ನಿವೃತ್ತಿ ನಂತರದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾಡಿದ ವಿದಾಯ ಭಾಷಣದಲ್ಲಿ ನಾನು ಆರ್‌ಎಸ್‌ಎಸ್ ಕಾರ್ಯಕರ್ತ ಎಂದು ಹೇಳಿಕೊಂಡರು.

ನ್ಯಾಯಮೂರ್ತಿಗಳು, ವಕೀಲರ ಸಂಘದ ಸದಸ್ಯರ ಸಮ್ಮುಖದಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ‘ಮತ್ತೆ ಕರೆ ಬಂದರೆ ನಾನು ಆರ್‌ಎಸ್‌ಎಸ್ ಸೇವೆಗೆ ಮರಳಲು, ಯಾವುದೇ ಹೊಣೆ ನಿಭಾಯಿಸಲು ಸಿದ್ಧ’ ಎಂದರು.

ಈ ಮಾತು ಕೆಲವರಿಗೆ ಇಷ್ಟವಾಗದಿರಬಹುದು. ಆದರೆ, ನಾನು ಆರ್‌ಎಸ್‌ಎಸ್‌ನಲ್ಲಿ ಇದ್ದೆ. ಮತ್ತು ಈಗಲೂ ಆ ಸಂಘಟನೆಯ ಸದಸ್ಯ ಎಂಬುದನ್ನು ಒಪ್ಪಿಕೊಳ್ಳಲೇಬೇಕು ಎಂದು ಹೇಳಿದರು.

ನ್ಯಾಯಮೂರ್ತಿ ದಾಶ್ ಅವರು ಒಡಿಶಾ ಹೈಕೋರ್ಟ್‌ನಿಂದ ಇಲ್ಲಿಗೆ ವರ್ಗಾವಣೆಯಾಗಿದ್ದರು. ಕಲ್ಕತ್ತ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿ 14 ವರ್ಷ ಕಾರ್ಯನಿರ್ವಹಿಸಿದ್ದರು.

‘ಬಾಲ್ಯದಿಂದಲೂ ನಾನು ಆರ್‌ಎಸ್‌ಎಸ್ ಜೊತೆಗೆ ಗುರುತಿಸಿಕೊಂಡಿದ್ದೆನೆ. ಅಲ್ಲಿ ನಾನು ಧೈರ್ಯವನ್ನು ಒಗ್ಗೂಡಿಸಿಕೊಂಡಿದ್ದೇನೆ. ಎಲ್ಲರನ್ನು ಸಮಾನವಾಗಿ ಕಾಣುವ, ಮುಖ್ಯವಾಗಿ ದೇಶಭಕ್ತಿ ಹಾಗೂ ಕೆಲಸದಲ್ಲಿ ಬದ್ಧತೆಯನ್ನು ಕಲಿತಿದ್ದೇನೆ’ ಎಂದು ಹೇಳಿದರು.



ಎಐಡಿಎಸ್‌ಒ ಸ್ವಾತಂತ್ರ್ಯ ಉದ್ಯಾನದಲ್ಲಿ ಈಚೆಗೆ ಆಯೋಜಿಸಿದ್ದ ‘ವಿದ್ಯಾರ್ಥಿ ಹೋರಾಟದ ವಿಜಯೋತ್ಸವದ ಸಮಾವೇಶ’ದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು.

ನಾಲ್ಕು ವರ್ಷದ ಪದವಿ ಸ್ಥಗಿತ: ವಿಜಯೋತ್ಸವ

ಬೆಂಗಳೂರು: ‘ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ನೇತೃತ್ವದಲ್ಲಿ ಎರಡು ವರ್ಷ ನಡೆದ ವಿದ್ಯಾರ್ಥಿ ಹೋರಾಟದ ಫಲವಾಗಿ ರಾಜ್ಯದಲ್ಲಿ ನಾಲ್ಕು ವರ್ಷದ ಪದವಿಯನ್ನು ರದ್ದುಗೊಳಿಸಲಾಗಿದೆ’ ಎಂದು ಆರ್ಗನೈಸೇಷನ್‌ನ ರಾಷ್ಟ್ರೀಯ ಅಧ್ಯಕ್ಷ ವಿ.ಎನ್. ರಾಜಶೇಖರ್ ಹೇಳಿದರು.

ಎಐಡಿಎಸ್‌ಒ ಈಚೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಆಯೋಜಿಸಿದ್ದ ‘ವಿದ್ಯಾರ್ಥಿ ಹೋರಾಟದ ಐತಿಹಾಸಿಕ ವಿಜಯೋತ್ಸವದ ಸಮಾವೇಶ’ದಲ್ಲಿ ಅವರು ಮಾತನಾಡಿದರು.

‘ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ) ಅನುಷ್ಠಾನವನ್ನು ಹಿಮ್ಮೆಟ್ಟಿಸಿದ ಮೊದಲ ರಾಜ್ಯ ಕರ್ನಾಟಕ ಆಗಿದೆ. ಎನ್‌ಇಪಿ ಅಡಿಯಲ್ಲಿ ಹಿಂದಿನ ಬಿಜೆಪಿ ಸರ್ಕಾರವು 13,800 ಸರ್ಕಾರಿ ಶಾಲೆಗಳನ್ನು ಮುಚ್ಚುವ ಹುನ್ನಾರ ನಡೆಸಿತ್ತು. ಇದರ ವಿರುದ್ಧವಾಗಿ ಎಐಡಿಎಸ್‌ಒ ರಾಜ್ಯವ್ಯಾಪಿ 36 ಲಕ್ಷ ಸಹಿ ಸಂಗ್ರಹಿಸಿತ್ತು’ ಎಂದು ತಿಳಿಸಿದರು.

ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್, ‘ಎಲ್ಲ ವಿದ್ಯಾರ್ಥಿಗಳಿಗೂ ಶಿಕ್ಷಣವು ದೊರೆಯಬೇಕು ಮತ್ತು ಶಿಕ್ಷಣದ ಸಂಪೂರ್ಣ ಆರ್ಥಿಕ ಜವಾಬ್ದಾರಿಯನ್ನು ಸರ್ಕಾರವೇ ವಹಿಸಬೇಕು. ಆದರೆ, 1986ರಲ್ಲಿ ಅಂದಿನ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿದ್ದ ಎನ್‌ಇಪಿ ಶಿಕ್ಷಣದ ವ್ಯಾಪಾರೀಕರಣಕ್ಕೆ ಬಾಗಿಲು ತೆರೆಯಿತು. 2000ರಲ್ಲಿ ವಾಜಪೇಯಿ ಸರ್ಕಾರ ನೇಮಿಸಿದ್ದ ಬಿರ್ಲಾ ಕಮಿಟಿಯು, ಹಂತ ಹಂತವಾಗಿ ಸರ್ಕಾರಿ ಶಾಲಾ-ಕಾಲೇಜುಗಳನ್ನು ಖಾಸಗೀಕರಣಗೊಳಿಸಲು ಶಿಫಾರಸು ಮಾಡಿತ್ತು’ ಎಂದರು.

ಎಐಡಿಎಸ್‌ಒ ಅಧ್ಯಕ್ಷೆ ಅಶ್ವಿನಿ ಕೆ.ಎಸ್., ಉಪಾಧ್ಯಕ್ಷರಾದ ಹಣಮಂತು ಎಚ್.ಎಸ್., ಅಭಯಾ ದಿವಾಕರ್, ಅಪೂರ್ವ, ಚಂದ್ರಕಲಾ, ರಾಜ್ಯ ಖಜಾಂಚಿ ಸುಭಾಷ್, ರಾಜ್ಯ ಕಚೇರಿ ಕಾರ್ಯದರ್ಶಿ ಮಹಾಂತೇಶ್ ಭಾಗವಹಿಸಿದ್ದರು.

ನಗರದಲ್ಲಿ ಇಂದು

ಅನ್ನಪೂರ್ಣಾಂಬ ಸಮೇತ ನಗರೇಶ್ವರಸ್ವಾಮಿ ಬ್ರಹ್ಮ ರಥೋತ್ಸವ: ಬೆಳಿಗ್ಗೆ 8ಕ್ಕೆ ಮೂಲ ದೇವರುಗಳಿಗೆ ಪಂಚಾಮೃತ ಅಭಿಷೇಕ, 10.30ಕ್ಕೆ ಮಂಗಳಾರತಿ ವಿನಿಯೋಗ, ಸಂಜೆ 4.30ಕ್ಕೆ ನಂದೀಶ್ವರಸ್ವಾಮಿಗೆ ಪಂಚಾಮೃತ ಅಭಿಷೇಕ, 6ಕ್ಕೆ ಗಣಪತಿ ಪೂಜೆ, ದೇವನಾಂ ದಿ, ಪಂಚಗವ್ಯ, ಅಂಕುರಾರ್ಪಣ, ಕಂಕಣಬಂಧನ, ವಾಸ್ತುಪರ್ಯಗ್ನಿಕರಣ, ಭೇರಿತಾಡನ, ಧ್ವಜ ಪೂಜೆ, ಹೋಮ, ಆಯೋಜನೆ: ಬಿ.ಎ.ಎಸ್.ವಿ. ನಗರ್ತ ಸಮಿತಿ, ಸ್ಥಳ: ನಗರೇಶ್ವರಸ್ವಾಮಿ ದೇವಸ್ಥಾನದ ಆವರಣ, ನಗರ್ತಪೇಟೆ

ಬಸವ ಜಯಂತಿ, ವಚನ ಸಂಗೀತ, ರಾಗಂ ಅವರ ‘ಯೋಗಸ್ಥ’ ಮುಖಪುಟ ಬಿಡುಗಡೆ: ಬಸವರಾಜ ಯಲಿಗಾರ, ಉದ್ಘಾಟನೆ: ಬಲವಂತರಾವ್ ಪಾಟೀಲ್, ಅಧ್ಯಕ್ಷತೆ: ರಾಜಶೇಖರ ಮಠಪತಿ, ಅತಿಥಿಗಳು: ಪಿನಾಕಪಾಣಿ, ವೈ. ವೆಂಕಟೇಶಪ್ಪ, ಉಪಸ್ಥಿತಿ: ಕೆ.ಎಲ್. ಪಂಚಾಕ್ಷರಿ, ಗುಂಡೀಗೆರೆ ವಿಶ್ವನಾಥ್, ಆಯೋಜನೆ: ಕಲಾರಾಧನಾ ಪ್ರತಿಷ್ಠಾನ, ಜ್ಞಾನ ಸಂಬುದ್ಧ ಸಾಂಸ್ಕೃತಿಕ ವೇದಿಕೆ, ಸ್ಥಳ: ಕೆ.ಆರ್. ಲಿಂಗಪ್ಪ ಸಭಾಂಗಣ, ಕಲಾರಾಧನಾ ಪ್ರತಿಷ್ಠಾನ, ಗೋವಿಂದರಾಜನಗರ, ಸಂಜೆ 5.30

ಪ್ರಸನ್ನ ವೆಂಕಟರಮಣಸ್ವಾಮಿ ರಥೋತ್ಸವ: ಪುಷ್ಪಮಂಟಪೋತ್ಸವ, ಆಯೋಜನೆ: ಹಿಂದೂ ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ, ಕೋಟೆ; ಸಂಜೆ 7ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.
nagaradalli_indu@prajavani.co.in

ಮೂಲಸೌಕರ್ಯ ಕಲ್ಪಿಸದವರಿಂದ ಜನರಿಗೆ ತೊಂದರೆ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಖಾಸಗಿ ಲೇಔಟ್ ಡೆವಲಪರ್‌ಗಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಲಸೌಕರ್ಯಗಳನ್ನು ಸರಿಯಾಗಿ ಕಲ್ಪಿಸದ ಖಾಸಗಿ ಲೇಔಟ್ ಡೆವಲಪರ್‌ಗಳಿಗೆ ನೋಟಿಸ್ ಜಾರಿ ಮಾಡುವಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಯಲಹಂಕ ವ್ಯಾಪ್ತಿಯಲ್ಲಿ ಅಪಾರ್ಟ್‌ಮೆಂಟ್, ವಿಲ್ಲಾಗಳಿಗೆ ನೀರು ನುಗ್ಗಿರುವ ಪ್ರದೇಶಗಳಿಗೆ ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ, ಅವ್ಯವಸ್ಥೆಗಳಿರುವ ಲೇಔಟ್‌ಗಳ ಡೆವಲಪರ್‌ಗಳಿಗೆ ನೋಟಿಸ್ ನೀಡಿ, ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

‘ಖಾಸಗಿ ಲೇಔಟ್‌ಗಳಲ್ಲಿ ನೀರು ಹರಿಯಲು ಸೂಕ್ತ ವ್ಯವಸ್ಥೆ ರೂಪಿಸದೆ ಮನೆಗಳಿಗೆ ನೀರು ನುಗ್ಗಿದೆ. ಮಳೆ ನೀರು ಹಾಗೂ ಒಳಚರಂಡಿ ನೀರನ್ನು ಒಟ್ಟಿಗೆ ಬಿಟ್ಟಿರುವ ಕಾರಣಕ್ಕೆ ಸಮಸ್ಯೆಗಳಾಗುತ್ತಿವೆ. ಬಡಾವಣೆಗಳನ್ನು ನಿರ್ಮಿಸುವಾಗ ಸೂಕ್ತ ವ್ಯವಸ್ಥೆ ಮಾಡದಿರುವುದು ಡೆವಲಪರ್‌ಗಳ ತಪ್ಪು. ಜನರಿಂದ ಹಣ ಪಡೆದು ಮಳೆ ನೀರು ಹರಿಯಲು ಸೂಕ್ತ ವ್ಯವಸ್ಥೆ ಮಾಡದಿರುವುದು ಸರಿಯಲ್ಲ. ಡೆವಲಪರ್‌ಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನಿಭಾಯಿಸಿಲ್ಲದ್ದರಿಂದ ನಿವಾಸಿಗಳು ಸಂಕಷ್ಟ ಎದುರಿಸುತ್ತಿದ್ದಾರೆ. ಅವರಿಂದ ಆಗಿರುವ ತೊಂದರೆ ನಿವಾರಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು’ ಎಂದು ಹೇಳಿದರು.

‘ಪರಿಹಾರ ನೀಡಬೇಕು ಎಂಬ ಉದ್ದೇಶದಿಂದಲೇ ತೊಂದರೆಯಾದ ಜಾಗಗಳಿಗೆ ಭೇಟಿ ನೀಡಿದ್ದೇನೆ. ಪ್ರತಿ ವರ್ಷ ಎಲ್ಲೆಲ್ಲಿ ಮಳೆಯಿಂದ ತೊಂದರೆ ಆಗುತ್ತದೆಯೋ ಆ ಪ್ರದೇಶಗಳನ್ನು ಗುರುತಿಸಿ ಹಂತ ಹಂತವಾಗಿ ಅಭಿವೃದ್ಧಿ ಮಾಡಲಾಗುವುದು. ಎಲ್ಲೆಲ್ಲಿ ಖಾಸಗಿ ಲೇಔಟ್‌ನವರು ರಾಜಕಾಲುವೆ ಒತ್ತುವರಿ ಮಾಡಿದ್ದಾರೋ ಅಲ್ಲಿ ಕ್ರಮ ಕೈಗೊಳ್ಳಲಾಗುವುದು. ಒಳಚರಂಡಿ ವ್ಯವಸ್ಥೆ ಅಳವಡಿಸದವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುವುದು’ ಎಂದು ತಿಳಿಸಿದರು.



ಯಲಹಂಕದಲ್ಲಿ ಅಪಾರ್ಟ್‌ಮೆಂಟ್‌ಗಳಿಗೆ ಕಾಲುವೆಯಿಂದ ನೀರು ನುಗ್ಗಿದ್ದ ಪ್ರದೇಶಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು

‘ಬಿಬಿಎಂಪಿ ಚುನಾವಣೆ ನಡೆಸುವ ಆಸೆ ಇದೆ’

‘ಬಿಬಿಎಂಪಿಗೆ ಚುನಾವಣೆ ನಡೆಸಬೇಕೆಂಬ ಅಭಿಲಾಷೆ ನಮಗೂ ಇದೆ. ಆದರೆ, ಈ ವಿಚಾರ ನ್ಯಾಯಾಲಯದಲ್ಲಿ ಇರುವುದರಿಂದ ತಡವಾಗುತ್ತಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಬೆಂಗಳೂರಿಗೆ ಒಂದು ಒಳ್ಳೆಯ ಪ್ರವಾಸಿ ಕೇಂದ್ರ ಬೇಕು ಎನ್ನುವ ಆಲೋಚನೆಯಿಂದ ಸ್ಕೈಡೆಕ್ ನಿರ್ಮಾಣ ಮಾಡಲು ಅಧಿಕಾರಿಗಳು ಯೋಜನಾ ವರದಿ ನೀಡಿದ್ದಾರೆ. ಟೆಂಡರ್ ಕರೆಯಲು ಸಿದ್ಧತೆ ಮಾಡಿಕೊಂಡಿದ್ದು, ಪಾರ್ಕಿಂಗ್, ಜಾಗದ ಲಭ್ಯತೆ ಮತ್ತಿತರ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಕೆಲಸ ಆರಂಭಿಸಲಾಗುವುದು’ ಎಂದರು.

‘ಎರಡು ವರ್ಷಗಳ ಹಿಂದೆ ಈ ಭಾಗದಲ್ಲಿ ಕಾಲುವೆ ಇರಲಿಲ್ಲ. ಪಾಲಿಕೆ ವತಿಯಿಂದ ಕಾಲುವೆ ನಿರ್ಮಿಸಿ ಅದನ್ನು ಮುಂದೆ ತೆಗೆದುಕೊಂಡು ಹೋಗದೆ ಇಲ್ಲಿಗೆ ನಿಲ್ಲಿಸಿದ್ದಾರೆ. ಇದರಿಂದಾಗಿ ಸಣ್ಣ ಮಳೆಗೆ ಮನೆಗಳಿಗೆ ನೀರು ನುಗ್ಗಿದೆ. ಈ ಕಾಲುವೆಯನ್ನು ವಿಸ್ತರಿಸಿ, ಮಳೆ ನೀರು ಕಾಲುವೆ ಹಾಗೂ ಚರಂಡಿಯನ್ನು ಪ್ರತ್ಯೇಕ ಮಾಡಬೇಕು. ಪುಟ್ಟೇನಹಳ್ಳಿ ಕೆರೆಗೆ ಕೊಳಚೆ ನೀರು ಬಿಡಬಾರದು’ ಎಂದು ಯಲಹಂಕದ ರಮಣಶ್ರೀ ಗಾರ್ಡೇನಿಯಾ ಲೇಔಟ್ ಸ್ಥಳೀಯ ನಿವಾಸಿಗಳು ಮನವಿ ಮಾಡಿದರು.

‘ಮುಂದೆ ಅರಣ್ಯ ಇಲಾಖೆ ಜಾಗ ಇರುವ ಕಾರಣ, ಅವರು ಕಾಲುವೆಯನ್ನು ಮುಂದೆ ವಿಸ್ತರಿಸಲು ಅನುಮತಿ ನೀಡಿರಲಿಲ್ಲ. ಪಾಲಿಕೆ ಅಧಿಕಾರಿಗಳು ಅರಣ್ಯ ಅಧಿಕಾರಿಗಳ ಜತೆ ಸಭೆ ಮಾಡಿದ್ದು, ಕಾಲುವೆಯನ್ನು ಮುಂದಕ್ಕೆ ವಿಸ್ತರಿಸಲು ಅನುಮತಿ ಪಡೆಯಲಾಗಿದೆ. ಮಳೆ ನೀರು ಹಾಗೂ ಚರಂಡಿ ನೀರು ಹರಿಯಲು ಪ್ರತ್ಯೇಕವಾಗಿ ವ್ಯವಸ್ಥೆ ಮಾಡಲಾಗುವುದು. ಆದಷ್ಟು ಬೇಗ ಈ ಕಾಮಗಾರಿ ಪೂರ್ಣಗೊಳಿಸಲಾಗುವುದು’ ಎಂದು ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

‘ಬೆಂಗಳೂರಿನ ಯಾವುದೇ ಕೆರೆಗಳಿಗೆ ಕೊಳಚೆ ನೀರು ಹರಿಸುವುದಿಲ್ಲ. ಸಂಸ್ಕರಿಸಿದ ನೀರನ್ನು ಮಾತ್ರ ಬಿಡಲಾಗುವುದು. ಈ ಬಾರಿ ಏಳು ಸಾವಿರ ಕೊಳವೆಬಾವಿ ಬತ್ತಿದ ಪರಿಣಾಮ ನೀರಿನ ಸಮಸ್ಯೆ ಎದುರಾಗಿದ್ದು, ಮುಂದೆ ಇಂತಹ ಸಮಸ್ಯೆ ಬಾರದಂತೆ ಎಚ್ಚರ ವಹಿಸಲಾಗುವುದು’ ಎಂದರು.

ರಾಚೇನಹಳ್ಳಿ ಕೆರೆ ಪಕ್ಕದಲ್ಲಿರುವ ಜವಾಹರಲಾಲ್ ನೆಹರೂ ಆಧುನಿಕ ವಿಜ್ಞಾನ ಸಂಶೋಧನಾ ಕೇಂದ್ರದಲ್ಲಿ ಹಾದುಹೋಗಿರುವ ರಾಜಕಾಲುವೆ ನಿರ್ಮಾಣ ಕಾಮಗಾರಿಯನ್ನು ಡಿ.ಕೆ. ಶಿವಕುಮಾರ್ ಪರಿಶೀಲನೆ ನಡೆಸಿದರು. ‘ಒಂದು ತಿಂಗಳ ಒಳಗಾಗಿ ಈ ಕಾಮಗಾರಿ ಪೂರ್ಣಗೊಳಿಸಲಾಗುವುದು. ಅಷ್ಟರ ಒಳಗಾಗಿ ಮತ್ತೆ ಮಳೆ ಬಂದರೆ ಪ್ರವಾಹ ಪರಿಸ್ಥಿತಿ ತಡೆಯಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ’ ಎಂದು ಅಧಿಕಾರಿಗಳು ಹೇಳಿದರು.

ಗೆದ್ದಲಹಳ್ಳಿ ಬಳಿ ರಾಜಕಾಲುವೆ ಕಾಮಗಾರಿ ಪರಿಶೀಲನೆ ನಡೆಸಿದ ಶಿವಕುಮಾರ್, ‘ಖಾಸಗಿ ಬಡಾವಣೆ ನಿರ್ಮಿಸಿದವರು ಸರಿಯಾದ ರೀತಿಯಲ್ಲಿ ಮೂಲಸೌಕರ್ಯ ಒದಗಿಸದ ಕಾರಣ ನಿಮ್ಮ ಮನೆಗಳಿಗೆ ನೀರು ನುಗ್ಗಿದೆ. ಪರಿಹಾರ ಕಲ್ಪಿಸಲಾಗುವುದು’ ಎಂದು ಭರವಸೆ ನೀಡಿದರು.

‘ವಿಲ್ಲಾಗಳಿಗೆ ಒಳಚರಂಡಿ ವ್ಯವಸ್ಥೆ ಇಲ್ಲ’

‘ಯಲಹಂಕದಲ್ಲಿರುವ ರಮಣಶ್ರೀ ಗಾರ್ಡೇನಿಯಾ ಲೇಔಟ್ ಹಾಗೂ ನಾರ್ತ್ ಹುಡ್ ವಿಲ್ಲಾ ಪ್ರದೇಶದಲ್ಲಿ ಒಳಚರಂಡಿ, ಮಳೆ ನೀರು ಹರಿಯುವ ವ್ಯವಸ್ಥೆ ಇಲ್ಲದ್ದರಿಂದ ನೀರು ನುಗ್ಗಿದೆ. ಮಳೆ ನೀರು ನಿಲ್ಲದಂತೆ 520 ಮೀಟರ್ ಉದ್ದದ 1,600 ಎಂ.ಎಂ ಪೈಪ್ ಅಳವಡಿಸಲಾಗುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ರಮಣಶ್ರೀ ಗಾರ್ಡೇನಿಯಾ ಲೇಔಟ್‌ನಲ್ಲಿ ಶನಿವಾರ ಸುರಿದ ಮಳೆಯಿಂದಾಗಿ ಸುಮಾರು 22 ವಿಲ್ಲಾಗಳಿಗೆ ನೀರು ನುಗ್ಗಿ ಸಮಸ್ಯೆಯುಂಟಾಗಿದ್ದ ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿಯೊಂದಿಗೆ ಸೋಮವಾರ ಭೇಟಿ ನೀಡಿ, ಪರಿಶೀಲನೆ ನಡೆಸಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ಪುಟ್ಟೇನಹಳ್ಳಿ ಕೆರೆಯು ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿದೆ. ಈ ಕೆರೆಯ ಪಕ್ಕದ ಪ್ರದೇಶದಲ್ಲಿ ವಿಲ್ಲಾ ಹಾಗೂ ಅಪಾರ್ಟ್‌ಮೆಂಟ್‌ಗಳು ನಿರ್ಮಾಣವಾಗಿದ್ದು, ಒಳಚರಂಡಿ ವ್ಯವಸ್ಥೆ ಇಲ್ಲ. ರಾಜಕಾಲುವೆ ನಿರ್ಮಾಣ ಮಾಡಿ ಕೆರೆಗೆ ಮಳೆನೀರನ್ನು ಬಿಡಲು ಅರಣ್ಯ ಇಲಾಖೆಯ ವನ್ಯಜೀವಿ ಮಂಡಳಿಯಿಂದ ಅನುಮತಿ ಸಿಕ್ಕಿರಲಿಲ್ಲ. ಈ ಹಿನ್ನೆಲೆಯಲ್ಲಿ ಪರ್ಯಾಯವಾಗಿ, ಕೆರೆಯ ವಾಯು ವಿಹಾರ ಮಾರ್ಗದ ಪಕ್ಕದಲ್ಲಿ ರಾಜಕಾಲುವೆಗೆ ಸಂಪರ್ಕ ಕಲ್ಪಿಸಲಾಗುವುದು’ ಎಂದರು.

‘ರಮಣಶ್ರೀ ಲೇಔಟ್ ಪ್ರದೇಶದಲ್ಲಿ ಒಂದೂವರೆ ವರ್ಷದ ಹಿಂದೆ ಯಾವುದೇ ಮನೆಗಳು ಇಲ್ಲದ್ದರಿಂದ ಯಾವುದೇ ಸಮಸ್ಯೆ ಇರಲಿಲ್ಲ. ಇದೀಗ ವಿಲ್ಲಾ ಹಾಗೂ ಅಪಾರ್ಟ್‌ಮೆಂಟ್‌ಗಳು ನಿರ್ಮಾಣವಾಗಿದ್ದು, ಮಳೆ ನೀರು ನಿಲ್ಲುವಂತಾಗಿದೆ. ಸ್ಥಳದಲ್ಲಿ ತಾತ್ಕಾಲಿಕವಾಗಿ ಪಂಪ್ ವ್ಯವಸ್ಥೆ ಮಾಡಿಕೊಂಡು ನೀರನ್ನು ಬೇರೆಡೆ ಬಿಡಲಾಗುತ್ತಿದೆ’ ಎಂದು ತುಷಾರ್ ಗಿರಿನಾಥ್ ಹೇಳಿದರು.

ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಮಾತನಾಡಿ, ‘ಯಲಹಂಕದ ರಮಣಶ್ರೀ ಗಾರ್ಡೇನಿಯಾ ಲೇಔಟ್‌ನಲ್ಲಿ ನೀರು ನಿಲ್ಲದಂತೆ ಕ್ರಮವಹಿಸಲು ಪಾಲಿಕೆಗೆ ಅರಣ್ಯ ಇಲಾಖೆ ವತಿಯಿಂದ ಅಗತ್ಯ ಸಹಕಾರ ನೀಡಲಾಗುವುದು’ ಎಂದು ತಿಳಿಸಿದರು.

ನಗರದಲ್ಲಿ 5,670 ರಸ್ತೆ ಗುಂಡಿಗಳು

‘ಬೆಂಗಳೂರು ನಗರದಲ್ಲಿ 5 ಸಾವಿರ ಗುಂಡಿಗಳು ವಾರ್ಡ್ ರಸ್ತೆಗಳಲ್ಲಿವೆ. 670 ಗುಂಡಿಗಳು ಮುಖ್ಯ, ಉಪಮುಖ್ಯ-ರಸ್ತೆಗಳಲ್ಲಿವೆ. ಇವಲ್ಲದೆ, 66 ಸ್ಥಳಗಳಲ್ಲಿ ರಸ್ತೆ ಬಹುತೇಕ ಹದಗೆಟ್ಟಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಾರ್ಡ್ ರಸ್ತೆ ಗುಂಡಿಗಳನ್ನು ಮುಚ್ಚಲು ವಲಯಗಳ ಮುಖ್ಯ ಎಂಜಿನಿಯರ್‌ಗಳಿಗೆ ಸೂಚಿಸಲಾಗಿದೆ. ಕೋಲ್ಡ್ ಮಿಕ್ಸ್, ಹಾಟ್ ಮಿಕ್ಸ್‌ಗಳೆಲ್ಲವೂ ನಮ್ಮಲ್ಲಿ ಲಭ್ಯ ಇವೆ. ಸದ್ಯ ಮಳೆಯಾಗುತ್ತಿರುವುದರಿಂದ ಗುತ್ತಿಗೆದಾರರು ಕೆಲಸ ಮಾಡುತ್ತಿಲ್ಲ. ಇನ್ನೆರಡು ದಿನದ ನಂತರ ಮಳೆ ಇರುವುದಿಲ್ಲ. ಮಳೆ ಸುಮಾರು 10 ದಿನ ಬಿಡುವು ನೀಡಲಿದೆ ಎಂಬ ಮಾಹಿತಿ ಇದೆ. ಈ ಸಂದರ್ಭದಲ್ಲಿ ನಗರದ ಎಲ್ಲೆಡೆ ರಸ್ತೆ ಗುಂಡಿಗಳನ್ನು ದುರಸ್ತಿ ಮಾಡಲಾಗುತ್ತದೆ’ ಎಂದು ಹೇಳಿದರು.

ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚಲು ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಅವರಿಗೆ ಸೂಚಿಸಲಾಗಿದೆ ಎಂದರು.



ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಿಬ್ಬಂದಿ ಹೆಸರಘಟ್ಟ ಕೆರೆಯ ಹಿನ್ನೀರಿನಲ್ಲಿ ಸೋಮವಾರ ಮಾದರಿ ಸಂಗ್ರಹಿಸಿದರು

—ಪ್ರಜಾವಾಣಿ ಚಿತ್ರ / ಬಿ.ಎಚ್.ಶಿವಕುಮಾರ್

ಹೆಸರಘಟ್ಟ ಹಿನ್ನೀರಿನಲ್ಲಿ ಸಾವಿರಾರು ಮೀನುಗಳ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟ ಕೆರೆಯ ಪಶ್ಚಿಮಭಾಗದ ಹಿನ್ನೀರಿನಲ್ಲಿ ಸಾವಿರಾರು ಮೀನುಗಳು ಸತ್ತಿದ್ದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಿಬ್ಬಂದಿ ಪರೀಕ್ಷೆಗಾಗಿ ಮಾದರಿಗಳನ್ನು ಸೋಮವಾರ ಸಂಗ್ರಹಿಸಿದರು.

ಸಣ್ಣ ಮೀನುಗಳು ನೂರಾರು ಸಂಖ್ಯೆಯಲ್ಲಿ ಸತ್ತಿವೆ. ಕಳೆದ ಎರಡು ದಿನಗಳಲ್ಲಿ ಅತಿ ಹೆಚ್ಚು ಮಳೆಯಾಗಿದ್ದರಿಂದ ಮಳೆನೀರಿನ ಜೊತೆಗೆ ಒಳಚರಂಡಿ ನೀರೂ ಕೆರೆಗೆ ಹರಿಯುತ್ತಿದೆ. ಪಶುಸಂಗೋಪನೆ ಇಲಾಖೆಯ ಕಚೇರಿಯ ಹಿಂದಿರುವ ಬಿದಿರು ಅರಣ್ಯದಲ್ಲಿ ಮೀನುಗಳು ಅಧಿಕ ಸಂಖ್ಯೆಯಲ್ಲಿ ಸತ್ತಿವೆ.

‘ಗ್ರೀನ್ ಸರ್ಕಲ್’ನ ಬಿರ್ಡರ್ ವಿ. ಸೆಲ್ವರಾಜನ್ ಅವರು ಭಾನುವಾರ ಮೀನು ಸತ್ತಿರುವ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿಗೆ ಮಾಹಿತಿ ನೀಡಿದ್ದರು.

‘ಮೀನುಗಳು ಸತ್ತಿರುವುದು ಮಾಲಿನ್ಯದಿಂದ ಎಂಬುದು ಸಾಬೀತಾದರೆ, ಹೆಸರಘಟ್ಟ ಕೆರೆಯಲ್ಲಿರುವ ನೀರಿನ ಬಗ್ಗೆ ಆತಂಕ ಎದುರಾಗುತ್ತದೆ. ಹಲವು ಪ್ರಭೇದಗಳ ಪಕ್ಷಿಗಳಿಗೆ ತಾಣ ಇದಾಗಿದ್ದು, ಮಾಲಿನ್ಯದ ಸಮಸ್ಯೆ ಇದ್ದರೆ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ’ ಎಂದು ಸೆಲ್ವರಾಜನ್ ಹೇಳಿದರು.

‘ಹೆಸರಘಟ್ಟ ಕೆರೆಯ ಸುತ್ತ ಸಾಕಷ್ಟು ಸಂಸ್ಥೆಗಳಿವೆ. ಪಶು ಸಂಗೋಪನಾ ಇಲಾಖೆಯ ಸೆಮನ್ ಕಲೆಕ್ಷನ್ ಸೆಂಟರ್, ಕುಕ್ಕುಟ, ಹಂದಿ ಫಾರ್ಮ್‌ಗಳಿವೆ. ಮೀನುಗಳು ಕೆರೆಯ ನೀರಿಗೆ ಸೇರುವ ಮುನ್ನವೇ ಸತ್ತಿದ್ದವೇ ಅಥವಾ ಇಲ್ಲವೇ ಎಂಬುದು ಪರೀಕ್ಷೆಯ ನಂತರವಷ್ಟೆ ತಿಳಿಯುತ್ತದೆ. ಎಲ್ಲ ರೀತಿಯ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಮತ್ತೂರು ರಸ್ತೆ ಸಮೀಪದ ಹಳ್ಳದಿಂದ ಮಳೆನೀರು ಹೆಸರಘಟ್ಟ ಕೆರೆಗೆ ಹರಿಯಲಿದ್ದು, ಅಲ್ಲಿಯ ನೀರಿನ ಮಾದರಿಯನ್ನು ಸಂಗ್ರಹಿಸಲಾಗಿದೆ’ ಎಂದು ದಾಸರಹಳ್ಳಿ ಪರಿಸರ ಅಧಿಕಾರಿ ಸುರೇಶ್ ತಿಳಿಸಿದರು.

ಹೆಸರಘಟ್ಟದ ಕೆರೆಯಲ್ಲಿ ಮೀನುಗಳು ಸತ್ತಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರವಾದ ವರದಿ ನೀಡುವಂತೆ ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಕಾರ್ಯದರ್ಶಿ ಎಚ್. ಸಿ. ಬಾಲಚಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕೆಎಸ್‌ಆರ್‌ಟಿಸಿಗೆ 40 ಎ.ಸಿ ಸ್ಲೀಪರ್ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿಗೆ 40 ಹವಾನಿಯಂತ್ರಿತ (ಎಸಿ) ಸ್ಲೀಪರ್ ಬಸ್‌ಗಳು ಬರಲಿದ್ದು, ಅದರ ‘ಮಾದರಿ’ಯನ್ನು ಈಚೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವೀಕ್ಷಿಸಿದರು.

ಏಳು ತಿಂಗಳ ಹಿಂದೆ ಎಸಿ ರಹಿತ ‘ಪಲ್ಲಕ್ಕಿ’ 40 ಸ್ಲೀಪರ್ ಬಸ್‌ಗಳನ್ನು ಕೆಎಸ್‌ಆರ್‌ಟಿಸಿ ಪರಿಚಯಿಸಿತ್ತು. ‘ಪಲ್ಲಕ್ಕಿ’ಗೆ ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ಬಂದಿದ್ದರಿಂದ ಅದೇ ಮಾದರಿಯಲ್ಲಿ ಹವಾನಿಯಂತ್ರಿತ ಬಸ್‌ಗಳನ್ನು ಖರೀದಿಸಲು ಕೆಎಸ್‌ಆರ್‌ಟಿಸಿ ನಿರ್ಧರಿಸಿತ್ತು. ಅಶೋಕ ಲೈಲೆಂಡ್ ಚಾಸಿಸ್‌ಗೆ ‘ಪ್ರಕಾಶ್ ಬಾಡಿ ಬಿಲ್ಡರ್ಸ್’ನವರು ಬಾಡಿ ನಿರ್ಮಾಣ ಮಾಡಿ ಒಂದು ಬಸ್ ಅನ್ನು ಪರಿಶೀಲನೆಗೆ ಒದಗಿಸಿದರು.



ಕೆಎಸ್‌ಆರ್‌ಟಿಸಿಗೆ ಬರಲಿರುವ ಹವಾನಿಯಂತ್ರಿತ ಸ್ಲೀಪರ್ ಬಸ್ ಅನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಈಚೆಗೆ ವೀಕ್ಷಿಸಿದರು.

ಈ ಬಸ್ 13.5 ಮೀಟರ್ ಉದ್ದವಿದ್ದು, 36 ಬರ್ತ್ ಸಾಮರ್ಥ್ಯವನ್ನು ಹೊಂದಿದೆ. 40 ಬಸ್‌ಗಳ ಖರೀದಿಗೆ ಅನುಮೋದನೆ ನೀಡಲಾಗಿದೆ. ಪ್ರಮಾಣೀಕೃತಗೊಂಡ ಬಳಿಕ ಪ್ರಾಯೋಗಿಕ ಸಂಚಾರ ನಡೆಸಬೇಕು. ಎಲ್ಲ ಪರೀಕ್ಷೆಗಳು ಮುಗಿದು ಈ ವರ್ಷದ ಅಂತ್ಯದ ಒಳಗೆ ಬಸ್‌ಗಳು ಸಂಚಾರಕ್ಕೆ ಸಿದ್ಧಗೊಳ್ಳಲಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

‘ನೀರು ನಿರ್ವಹಣೆ: ಇನ್ನಷ್ಟು ಯೋಜನೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಈಗಿನ ನೀರು ನಿರ್ವಹಣೆಯನ್ನು ಮಾದರಿಯನ್ನಾಗಿಟ್ಟುಕೊಂಡು ಮುಂದಿನ ಅವಶ್ಯಕತೆಗೆ ಇನ್ನಷ್ಟು ಸುಸ್ಥಿರ ಯೋಜನೆಗಳನ್ನು ರೂಪಿಸುವ ಅಗತ್ಯವಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ಹೇಳಿದರು.

ವಿಶ್ವಸಂಸ್ಥೆಯ ‘ಕ್ಲೈಮ್ಯಾಟ್ ಚೇಂಜ್ ಇನೋವೇಷನ್’ ಕಾರ್ಯಾಗಾರದಲ್ಲಿ ನೀರು ಸರಬರಾಜು, ನಿರ್ವಹಣೆ, ಎದುರಾದ ಸವಾಲುಗಳು, ಅವುಗಳನ್ನು ಜಲಮಂಡಳಿ ಸಮರ್ಪಕವಾಗಿ ನಿಭಾಯಿಸಿದ ರೀತಿಗಳನ್ನು ಅವರು ಪ್ರಸ್ತುತ ಪಡಿಸಿದರು.

‘ನಗರದಲ್ಲಿ ಶೇ 40ರಷ್ಟು ಜನರು ಅಂತರ್ಜಲದ ಮೇಲೆ ಅವಲಂಬಿತರಾಗಿದ್ದಾರೆ. ಮಳೆಯ ಕೊರತೆಯಿಂದ ಅಂತರ್ಜಲ ಕುಸಿದ ಕಾರಣ ಶೇ 50ರಷ್ಟು ಕೊಳವೆಬಾವಿಗಳು ಬತ್ತಿಹೋದವು. ಇದರಿಂದ ಕಾವೇರಿ ನೀರಿನ ಮೇಲೆ ಒತ್ತಡ ಹೆಚ್ಚಾಯಿತು. ಎದುರಾಗಿದ್ದ ನೀರಿನ ಅಭಾವವನ್ನು ಹೊಸ ತಂತ್ರಜ್ಞಾನಗಳು ಹಾಗೂ ಸುಸ್ಥಿರ ಯೋಜನೆಗಳ ಅಳವಡಿಕೆಯಿಂದಾಗಿ ಬೆಂಗಳೂರು ಜಲಮಂಡಳಿ ಸಮರ್ಥವಾಗಿ ನಿಭಾಯಿಸಲಾಯಿತು’ ಎಂದು ಮಾಹಿತಿ ನೀಡಿದರು.

ನೀರಿನ ಸಮರ್ಪಕ ಬಳಕೆಗೆ ಕಟ್ಟುನಿಟ್ಟಿನ ಕ್ರಮಗಳ ಅಳವಡಿಕೆ, ನೀರಿನ ಉಳಿತಾಯಕ್ಕೆ ಏರಿಯೇಟರ್‌ಗಳ ಅಳವಡಿಕೆ, ಸಂಸ್ಕರಿಸಿದ ನೀರಿನ ಬಳಕೆಗೆ ಪ್ರೋತ್ಸಾಹ, ಕೊಳವೆಬಾವಿಗಳ ನಿರ್ವಹಣೆಗೆ ಆಧುನಿಕ ತಂತ್ರಜ್ಞಾನಗಳ ಅಳವಡಿಕೆ... ಹೀಗೆ ಹಲವು ನೂತನ ಕ್ರಮಗಳ ಬಗ್ಗೆ ಜಲಮಂಡಳಿ ಅಧ್ಯಕ್ಷರು ವಿವರಣೆ ನೀಡಿದರು. ದೇಶದ ವಿವಿಧ ನಗರಗಳಿಂದ ಭಾಗವಹಿಸಿದ್ದ ಅಧಿಕಾರಿಗಳು ಹಾಗೂ ನಗರ ಯೋಜನೆಯಲ್ಲಿ ತೊಡಗಿಕೊಂಡವರು ತಮ್ಮ ನಗರಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪ್ರಸ್ತುತಪಡಿಸಿದರು. ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ನೀರಿನ ಅಭಾವ ನಿರ್ವಹಣೆಯಲ್ಲಿ ಜಲಮಂಡಳಿ ಅಳವಡಿಸಿಕೊಂಡ ಕ್ರಮಗಳ ಬಗ್ಗೆ ಶ್ಲಾಘನೆ ವ್ಯಕ್ತವಾಯಿತು.

ಕುಡಿಯುವ ನೀರಿಗೆ ಶೀಘ್ರ ಪರಿಹಾರ: ಸೋಮಶೇಖರ್

ಕೆಂಗೇರಿ: ಜನರಿಂದ ಹಣ ಪಡೆದು ನೀರು ಬಿಡುವುದು ಮತ್ತೊಮ್ಮೆ ಗಮನಕ್ಕೆ ಬಂದರೆ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಎಸ್. ಟಿ.ಸೋಮಶೇಖರ್ ಎಚ್ಚರಿಸಿದರು.

ಜಲಮಂಡಳಿ ಅಧಿಕಾರಿಗಳ ಜತೆಗೆ ಕೆಂಗೇರಿ ವಾರ್ಡ್‌ನ ಬಾಪೂಜಿ ಕಾಲೊನಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಅವರು ಮಾತನಾಡಿದರು.

‘ನೀರು ವಿತರಣೆಯಲ್ಲಿ ತಾರತಮ್ಯ ಆಗಬಾರದು. ಎಲ್ಲರಿಗೂ ನೀರು ದೊರಕುವಂತೆ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ತಾಕೀತು ಮಾಡಿದರು.

‘ಬಿಸಿಲಿನ ತಾಪಕ್ಕೆ ನೀರಿನ ಸಮಸ್ಯೆ ನಗರದಲ್ಲಿ ಮತ್ತಷ್ಟು ಉಲ್ಬಣಗೊಂಡಿದೆ. ನೀರುಗಂಟಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು. ತಪ್ಪಿದಲ್ಲಿ ಕ್ರಮ ಜರುಗಿಸಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಮಹಿಳೆಯರ ಅಳಲು: ಬಾಪೂಜಿ ಕಾಲೊನಿಯಲ್ಲಿ ಹಲವು ದಿನಗಳಿಂದ ಕುಡಿಯುವ ನೀರಿಗೆ ಹಾಹಾಕಾರ ಎದುರಾಗಿದೆ. ಮೂರು ದಿನಕ್ಕೆ ಒಂದು ಬಾರಿ ಕಾವೇರಿ ನೀರು ಹಂಚಿಕೆ ಮಾಡಲಾಗುತ್ತಿದೆ. ನೀರಿಗಾಗಿ ಮಕ್ಕಳು, ಹೆಂಗಸರು, ವೃದ್ಧರು ಅಲೆದಾಡುವಂತಾಗಿದೆ ಎಂದು ಮಹಿಳೆಯರು ಅಲವತ್ತುಕೊಂಡರು.

ಬಿಡಬ್ಲ್ಯುಎಸ್‌ಎಸ್‌ಬಿ ಎಇಇ ದೀಪಕ್ ಮಾತನಾಡಿ, ‘ಬೆಂಗಳೂರು ಜಲಮಂಡಳಿ ವತಿಯಿಂದ ಕೆಂಗೇರಿ ವ್ಯಾಪ್ತಿಯಲ್ಲಿ ಹೊಸ ಬೋರ್‌ವೆಲ್ ಕೊರೆಸಲಾಗಿದೆ. ಶೀಘ್ರದಲ್ಲೇ ಬಾಪೂಜಿ ಕಾಲೊನಿಯ ನೀರಿನ ಸಮಸ್ಯೆ ಬಗೆಹರಿಸಲಾಗುವುದು ತಿಳಿಸಿದರು. ಬೆಂಗಳೂರು ಜಲಮಂಡಳಿ ಎಇ ರಾಹುಲ್, ಕೇಬಲ್ ಹರೀಶ್, ಟಿ.ಪ್ರಭಾಕರ್, ಕೆ.ಆರ್. ಮೂರ್ತಿ, ಶ್ರೀನಿವಾಸ್, ಶಿವಕುಮಾರ್‌ಉಪಸ್ಥಿತರಿದ್ದರು.

ಚಿತ್ರಾವಳಿ



ಕನ್ನಡ ಜನಶಕ್ತಿ ಕೇಂದ್ರವು ನಯನ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿ.ಕೃಷ್ಣಪ್ಪ ಅವರ ‘ನಮ್ಮ ಕುವೆಂಪು’ ಪುಸ್ತಕ ಬಿಡುಗಡೆಗೊಳಿಸಲಾಯಿತು. (ಎಡದಿಂದ) ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ, ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಿ.ಚಿ. ಬೋರಲಿಂಗಯ್ಯ, ಕುವೆಂಪು ಪ್ರತಿಷ್ಠಾನದ ಕಾರ್ಯದರ್ಶಿ ಕಡಿದಾಳ್ ಪ್ರಕಾಶ್, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಕೋಶಾಧ್ಯಕ್ಷ ಎಸ್.ಮಲ್ಲಿಕಾರ್ಜುನಪ್ಪ ಭಾಗವಹಿಸಿದ್ದರು.



ರಾಜ್ಯದಲ್ಲಿ ಖಾಸಗಿ ಶಾಲೆಗಳ ಶುಲ್ಕ ಹೆಚ್ಚಿಸಿರುವುದನ್ನು ಖಂಡಿಸಿ ಕರ್ನಾಟಕ ವಿದ್ಯಾರ್ಥಿಗಳ ಪೋಷಕರ ಜಾಗೃತಿ ವೇದಿಕೆಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು



ಮಾಜಿ ಸಂಸದ ಎಲ್‌ಆರ್‌ ಶಿವರಾಮೇಗೌಡ ಅವರು ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವುದನ್ನು ಖಂಡಿಸಿ ಬೆಂಗಳೂರು ನಗರ ಜೆಡಿಎಸ್ ಘಟಕದ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಎಲ್‌ಆರ್‌.ಶಿವರಾಮೇಗೌಡ ಅವರ ಪ್ರತಿಕೃತಿಯನ್ನು ದಹಿಸಿ ಪ್ರತಿಭಟನೆ ಮಾಡಿದರು —ಪ್ರಜಾವಾಣಿ ಚಿತ್ರಗಳು

ಖರೀದಿ ಲೋಪ ತಡೆಗೆ ಕೆಟಿಪಿಪಿ ಪಾಲನೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯಲ್ಲಿ ಖರೀದಿ ಪ್ರಕ್ರಿಯೆಯಲ್ಲಿ ಲೋಪಗಳಾಗಿರುವ ವರದಿ ಬಂದಿದೆ. ಇನ್ನು ಮುಂದೆ ಯಾವುದೇ ಖರೀದಿ ಪ್ರಕ್ರಿಯೆ ನಡೆಸಬೇಕಿದ್ದರೂ ಕೆಟಿಪಿಪಿ (ಕರ್ನಾಟಕ ಪಾರದರ್ಶಕ ಸಾರ್ವಜನಿಕ ಸಂಗ್ರಹಣೆ) ಕಾಯ್ದೆಯನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು ಎಂದು ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಈ ಸಂಬಂಧ ಆರೋಗ್ಯ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಿಗೆ ಮುಖ್ಯ ಜಾಗೃತಾಧಿಕಾರಿ ಭೇಟಿ ನೀಡಿದಾಗ ಲೋಪಗಳು ಕಂಡು ಬಂದಿದ್ದವು. ಬಹುತೇಕ ಆಸ್ಪತ್ರೆಗಳಲ್ಲಿ ವಾರ್ಷಿಕವಾಗಿ ಅವಶ್ಯವಿರುವ ಔಷಧ ಮತ್ತು ಸಾಮಗ್ರಿ ಖರೀದಿಸುವಾಗ ಮಾರುಕಟ್ಟೆ ದರಕ್ಕಿಂತ ಹೆಚ್ಚು ಪಾವತಿ ಮಾಡಿ ಇಲಾಖೆಗೆ ಆರ್ಥಿಕ ಹೊರೆಯನ್ನು ಉಂಟು ಮಾಡಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ರಾಜ್ಯಾನುದಾನ, ಎಬಿಎಆರ್‌ಕೆ ಅನುದಾನ, ಎನ್‌ಎಚ್‌ಎಂ ಅನುದಾನ, ಕೇಂದ್ರ ಅನುದಾನ ಸೇರಿ ಯಾವುದೇ ಅನುದಾನದಲ್ಲಿ ಖರೀದಿ ಪ್ರಕ್ರಿಯೆ ನಡೆಸುವಾಗ ನಿಯಮ ಪಾಲನೆ ಮಾಡಬೇಕು. ಎಲ್ಲ ತರಹದ ಸೇವೆ ಮತ್ತು ವಸ್ತು ಸಂಗ್ರಹಣೆಯನ್ನು ಇ-ಸಂಗ್ರಹಣೆ ಅತವಾ ಜೆಮ್ ಪೋರ್ಟಲ್ ಮೂಲಕ ಮಾಡಬೇಕು. ಔಷಧ, ರಾಸಾಯನಿಕ, ಯಂತ್ರೋಪಕರಣ, ಸಲಕರಣೆಗಳ ಬಗ್ಗೆ ವಾರ್ಷಿಕ ಬೇಡಿಕೆ ಪಟ್ಟಿ ತಯಾರಿಸಿ ಇ-ಪ್ರೊಕ್ಯೂರ್‌ಮೆಂಟ್ ಮಾಡಲು ಕ್ರಮ ವಹಿಸಬೇಕು. ತುರ್ತು ಸಂದರ್ಭದಲ್ಲಿ ಮಾತ್ರ ಮಿತಿಯೊಳಗೆ ಅವಶ್ಯಕ್ಕೆ ಅನುಗುಣವಾಗಿ ಔಷಧ, ಸಾಮಗ್ರಿ ಖರೀದಿ ಮಾಡಬಹುದು ಎಂದು ಆಯುಕ್ತರು ಸೂಚಿಸಿದ್ದಾರೆ.

ಕೆಟಿಪಿಪಿ ನಿಯಮ ಪಾಲಿಸದಿದ್ದರೆ, ಆರ್ಥಿಕ ಶಿಸ್ತು ಉಲ್ಲಂಘಿಸಿದರೆ ನಿಯಮ ಬಾಹಿರ ಸಂಗ್ರಹಣೆ ಎಂದು ಪರಿಗಣಿಸಿ ಆರೋಪಿ ಅಧಿಕಾರಿ, ಸಿಬ್ಬಂದಿಯೇ ನಷ್ಟದ ವೆಚ್ಚವನ್ನು ಭರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

25ರಿಂದ ಮೇ ಸಾಹಿತ್ಯ ಮೇಳ

ಮೇಳಕ್ಕೆ ದಶಮಾನೋತ್ಸವ ಸಂಭ್ರಮ, 7 ಸಾಧಕರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಕೊಪ್ಪಳ: ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ನಗರದ ಶಿವಶಾಂತವೀರ ಮಂಗಲ ಭವನದಲ್ಲಿ ಮೇ 25 ಮತ್ತು 26ರಂದು ಮೇ ಸಾಹಿತ್ಯ ಮೇಳ ಜರುಗಲಿದೆ. ಇದೇ ವೇಳೆ ಏಳು ಜನ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.



ಎಸ್‌ಆರ್‌ ಹಿರೇಮಠ




ಮಾಧವಿ ಭಂಡಾರಿ



ಹುಚ್ಚಮ್ಮ ಚೌದ್ರಿ



ಇಂದೂಧರ ಹೊನ್ನಾಪುರ



ಶಿವಾಜಿ ಕಾಗಣೇಕರ್



ಜನಾರ್ದನ ಜನ್ನಿ



ಸವಿರಾಜ್ ಆನಂದ್

‘ಸಂವಿಧಾನ ಭಾರತ, ಧರ್ಮ ರಾಜಕಾರಣ ವಿಷಯ ಪ್ರಧಾನವಾಗಿರಿಸಿ ಈ ಬಾರಿಯ ಸಾಹಿತ್ಯ ಮೇಳ ಹಮ್ಮಿಕೊಳ್ಳಲಾಗಿದೆ. ಮೇಳದ ದಶಮಾನೋತ್ಸವ ಇದಾದ ಕಾರಣ ಅನೇಕ ಚಿಂತಕರು, ಹೋರಾಟಗಾರರು ಮತ್ತು ವಿಷಯ ತಜ್ಞರನ್ನು ಕರೆಯಿಸಲಾಗುವುದು’ ಎಂದು ಸಾಹಿತಿ ಬಸವರಾಜ ಸೂಳಿಬಾವಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮೇಳದ ಮೊದಲ ದಿನ ಸಂವಿಧಾನ ಭಾರತ, ವರ್ತಮಾನದಲ್ಲಿ ಧರ್ಮ ರಾಜಕಾರಣ, ಬದುಕು ಹಾಡು ವಿಷಯಗಳ ಕುರಿತು ಚರ್ಚೆ; ಕವಿಗೋಷ್ಠಿ ನಡೆಯಲಿದೆ. ಎರಡನೇ ದಿನ ಚಳವಳಿ ಮತ್ತು ಧರ್ಮ ರಾಜಕಾರಣ, ನಾಳೆ ಮತ್ತು ನಾವು, ಅನುಭವ ಕಥನ ವಿಷಯಗಳ ಕುರಿತು ಚರ್ಚೆ ನಡೆಯಲಿದೆ.

ರೈತ ಹೋರಾಟಗಾರ ರಾಕೇಶ್ ಟಿಕಾಯತ್, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ, ಸುಪ್ರೀಂ ಕೋರ್ಟ್ ಹಿರಿಯ ವಕೀಲ ಮೋಹನ್ ಕಾತರಕಿ ಸೇರಿದಂತೆ ಅನೇಕರು ಮೇಳದಲ್ಲಿ ಪಾಲ್ಗೊಳ್ಳುವರು.

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಸವಿರಾಜ್ ಆನಂದ್ (ವಿಭಾ ಸಾಹಿತ್ಯ ಪ್ರಶಸ್ತಿ), ಧಾರವಾಡದ ಎಸ್. ಆರ್. ಹಿರೇಮಠ (ಬಂಡ್ರಿ ನರಸಪ್ಪ ಸಮಾಜಮುಖಿ ಶ್ರಮಜೀವಿ), ಉತ್ತರ ಕನ್ನಡ ಜಿಲ್ಲೆಯ ಕೆರೆಕೋಣದ ಮಾಧವಿ ಭಂಡಾರಿ (ನವಲಕಲ್ ಬ್ರಹ್ಮನ್ಮಠ ಶಾಂತವೀರಮ್ಮ ಮಹಾತಾಯಿ ಕಥಾ ಗೌರವ), ಬೆಳಗಾವಿಯ ಶಿವಾಜಿ ಕಾಗಣೇಕರ್ (ನಿಂಗಪ್ಪ ಸಂಶಿ ರೈತಚೇತನ ಪ್ರಶಸ್ತಿ), ಮೈಸೂರಿನ ಜನಾರ್ದನ ಜನ್ನಿ (ಪಂಚಪ್ಪ ಸಮುದಾಯ ಮಾರ್ಗಿ ಪ್ರಶಸ್ತಿ), ಬೆಂಗಳೂರಿನ ಇಂದೂಧರ ಹೊನ್ನಾಪುರ (ಚಂದ್ರಶೇಖರ ಹೊಸಮನಿ ಅಂಬೇಡ್ಕರ್ ಪತ್ರಿಕಾ ಮಾರ್ಗಿ ಪ್ರಶಸ್ತಿ) ಮತ್ತು ಕೊಪ್ಪಳ ತಾಲ್ಲೂಕಿನ ಕುಣಿಕೇರಿಯ ಹುಚ್ಚಮ್ಮ ಚೌಧರಿ (ಸಮಾಜಮುಖಿ ಮಹಿಳೆ) ಅವರಿಗೆ 26ರಂದು ಸಂಜೆ 4 ಗಂಟೆಗೆ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

‘ಜಗನ್ನಾಥ ದೇವರು ಮೋದಿ ಭಕ್ತ’ ಸಂಬಿತ್ ಹೇಳಿಕೆಗೆ ವಿಪಕ್ಷಗಳ ಕಿಡಿ

ನವದೆಹಲಿ (ಪಿಟಿಐ): ‘ಮಹಾಪ್ರಭು ಜಗನ್ನಾಥ ದೇವರು ಮೋದಿ ಅವರ ಭಕ್ತ’ ಎಂದು ಪುರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂಬಿತ್ ಪಾತ್ರಾ ಹೇಳಿದ್ದಾರೆ. ಈ ಹೇಳಿಕೆಗೆ ಕಾಂಗ್ರೆಸ್, ಬಿಜೆಡಿ, ಎಎಪಿ ಪಕ್ಷಗಳು ಮಂಗಳವಾರ ಟೀಕಿಸಿವೆ.



ಡಾ.ಸಂಬಿತ್ ಪಾತ್ರ

ಒಡಿಯಾ ಭಾಷೆಯಲ್ಲಿ ಚುನಾವಣಾ ಪ್ರಚಾರದಲ್ಲಿ ಮಾತನಾಡುತ್ತಾ ಸಂಬಿತ್ ಈ ರೀತಿ ಹೇಳಿರುವ ವಿಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿರುವ ಕಾಂಗ್ರೆಸ್ ಪಕ್ಷವು, ಪ್ರಧಾನಿ ನರೇಂದ್ರ ಮೋದಿ ಇದಕ್ಕೆ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದೆ.

ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್, ‘ದೇವರನ್ನು ಎಲ್ಲ ರಾಜಕೀಯಗಳಿಂದ ಬಿಜೆಪಿ ದೂರ ಇರಿಸಬೇಕು. ದೇವರು ಎಲ್ಲರಿಗಿಂತ ದೊಡ್ಡವನು. ಜಗನ್ನಾಥನ ಊರಿನವರ ಅಸ್ಮಿತೆಗೇ ಕೊಟ್ಟಿರುವ ಪೆಟ್ಟು ಇದು. ಕೋಟ್ಯಂತರ ಭಕ್ತರ ಭಾವನೆಗಳಿಗೆ ಮಾಡಿದ ಅಪಮಾನವಿದು’ ಎಂದು ಪ್ರತಿಕ್ರಿಯಿಸಿದ್ದಾರೆ.

> **ಇದು ದುರಹಂಕಾರದ ಪರಮಾವಧಿ. ದೇವರನ್ನೇ ಮೋದಿ ಭಕ್ತ ಎನ್ನುವುದು ಭಗವಂತನಿಗೆ ಮಾಡಿದ ಅವಮಾನ**
> **ಅರವಿಂದ ಕೇಜ್ರಿವಾಲ್**
> ದೆಹಲಿ ಮುಖ್ಯಮಂತ್ರಿ

> **ಮೋದಿ ತಮ್ಮನ್ನು ಸಾಮ್ರಾಟ ಎಂದು ಭಾವಿಸಿದ್ದು, ಅವರ ಆಸ್ಥಾನದವರು ಅವರನ್ನೇ ದೇವರೆನ್ನುತ್ತಿದ್ದಾರೆ ಎಂದರೆ ‘ಪಾಪದ ಲಂಕೆ’ ಮುಳುಗುವ ಕಾಲ ಸನ್ನಿಹಿತವಾಗಿದೆ ಎಂದೇ ಅರ್ಥ**
> **ರಾಹುಲ್ ಗಾಂಧಿ**
> ಕಾಂಗ್ರೆಸ್ ನಾಯಕ

‘ಮೋದಿ ಅವರ ರೋಡ್ ಶೋ ನಂತರ ನಾನು ಹಲವು ಸುದ್ದಿ ವಾಹಿನಿಗಳಿಗೆ ಮಾತನಾಡುತ್ತಿದ್ದೆ. ಮೋದಿ ಅವರು ಜಗನ್ನಾಥ ದೇವರ ಭಕ್ತ ಎಂದು ಹೇಳುವುದು ನನ್ನ ಉದ್ದೇಶವಾಗಿತ್ತು. ಅಕಸ್ಮಾತ್ತಾಗಿ ಬಾಯಿತಪ್ಪಿ ಜಗನ್ನಾಥ ದೇವರು ಮೋದಿ ಭಕ್ತ ಎಂದು ಹೇಳಿಬಿಟ್ಟೆ. ಬಾಯಿತಪ್ಪಿ ಮಾತನಾಡುವುದು ಮನುಷ್ಯ ಸಹಜ ಎನ್ನುವುದನ್ನೂ ಒಪ್ಪುವಿರಿ ಎಂದು ಭಾವಿಸಿದ್ದೇನೆ. ಇದನ್ನು ದೊಡ್ಡ ವಿವಾದ ಮಾಡಬೇಡಿ’ ಎಂದು ನವೀನ್ ಪಟ್ನಾಯಕ್ ಅವರ ಪೋಸ್ಟ್‌ಗೆ ‘ಎಕ್ಸ್’ನಲ್ಲಿ ಸಂಬಿತ್ ಪಾತ್ರಾ ಅವರು ಪ್ರತಿಕ್ರಿಯೆ ನೀಡಿದ್ದಾರೆ.

ಪ್ರವೇಶ ಶುಲ್ಕ ಹೆಚ್ಚಳ: ಎಸ್‌ಎಫ್‌ಐ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಖಾಸಗಿ ಶಾಲೆಗಳಲ್ಲಿ ಪ್ರವೇಶ ಶುಲ್ಕ ಸೇರಿ ವಿವಿಧ ಶುಲ್ಕಗಳನ್ನು ಹೆಚ್ಚಿಸಿರುವ ಕ್ರಮವನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಖಂಡಿಸಿದೆ.

ನಿಯಮಬಾಹಿರವಾಗಿ ಶುಲ್ಕ ಹೆಚ್ಚಿಸಿರುವ ರಾಜ್ಯದ ಖಾಸಗಿ ಶಾಲೆಗಳ ಆಡಳಿತ ಮಂಡಳಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಹಾಗೂ ಇಲಾಖೆ ಆಯುಕ್ತೆ ಬಿ.ಬಿ.ಕಾವೇರಿ ಅವರಿಗೆ ಸೋಮವಾರ ಮನವಿ ಸಲ್ಲಿಸಲಾಯಿತು.

ರಾಜ್ಯದ ಬಹುತೇಕ ಖಾಸಗಿ ಶಾಲೆಗಳು 2024-25ನೇ ಸಾಲಿನಲ್ಲಿ ಪ್ರವೇಶ ಶುಲ್ಕ, ಬಟ್ಟೆ, ಶೂ–ಸಾಕ್ಸ್, ಟೈ, ಬೆಲ್ಟ್, ಸ್ಮಾರ್ಟ್ ಕ್ಲಾಸ್, ಬೋಧನಾ ಶುಲ್ಕ ಸೇರಿ ವಿವಿಧ ಶುಲ್ಕ ಹೆಚ್ಚಳ ಮಾಡಿವೆ ಎಂದು ಎಸ್‌ಎಫ್‌ಐ ಪದಾಧಿಕಾರಿಗಳು ದೂರಿದ್ದಾರೆ.

ಬೇಬಿ ಸಿಟ್ಟಿಂಗ್‌ನಿಂದ ಹಿಡಿದು ಎಲ್ಲ ತರಗತಿಯ ಪ್ರವೇಶ ಶುಲ್ಕವನ್ನೂ ಹೆಚ್ಚಿಸಲಾಗಿದೆ. ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಸರ್ಕಾರದ ನಿಯಮ ಮೀರಿ ಹಣ ವಸೂಲಿಗೆ ಮುಂದಾದರೂ ಶಿಕ್ಷಣ ಇಲಾಖೆ ಮೌನವಾಗಿರುವುದು ಸರಿಯಲ್ಲ ಎಂದು ಆಕ್ರೋಶ ಹೊರಹಾಕಿದರು.

ಶಿಕ್ಷಣ ಕಾಯ್ದೆ ಉಲ್ಲಂಘಿಸಿ ಬಹುತೇಕ ಶಾಲೆಗಳಲ್ಲಿ ಬಟ್ಟೆ, ಶೂ,ಸಾಕ್ಸ್, ನೋಟ್ ಬುಕ್ ಅನ್ನು ಶಾಲೆಗಳಲ್ಲಿ ಮಾರಾಟ ಮಾಡುತ್ತಿರುವುದು ಕಾನೂನು ಬಾಹಿರ. ಅಂತಹ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಮಸ್ಯೆಗಳ ಪರಿಹಾರಕ್ಕಾಗಿ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಜಂಟಿ ಸಭೆ ಮಾಡಬೇಕು. ಎಸ್‌ಎಫ್‌ಐ ಸಂಘಟನೆ ಮುಂಖಡರನ್ನೂ ಸಭೆಗೆ ಆಹ್ವಾನಿಸಬೇಕು ಎಂದು ಆಗ್ರಹಿಸಿದರು.

ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಅಮರೇಶ ಕಡಗದ, ಕಾರ್ಯದರ್ಶಿ ಭೀಮನಗೌಡ, ಪದಾಧಿಕಾರಿಗಳಾದ ಶಿವಕುಮಾರ್ ಮ್ಯಾಗಳಮನಿ, ರಮೇಶ ವೀರಾಪೂರು, ಶಿವಪ್ಪ, ವಿಶ್ವ ಅಂಗಡಿ, ಚಿದಾನಂದ, ಬಾಬು ಮನವಿ ಸಲ್ಲಿಕೆ ವೇಳೆ ಪಾಲ್ಗೊಂಡಿದ್ದರು.

10 ನಕ್ಸಲರ ಬಂಧನ

ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಸೋಮವಾರ 10 ನಕ್ಸಲೀಯರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇವರಲ್ಲಿ ಒಬ್ಬತನ ತಲೆಗೆ ₹1 ಲಕ್ಷ ಇನಾಮು ಘೋಷಿಸಲಾಗಿತ್ತು ಎಂದು ಅವರು ಹೇಳಿದ್ದಾರೆ.

ದುಲೇಡ್ ಗ್ರಾಮದ ಬಳಿಯಿರುವ ಅರಣ್ಯ ಪ್ರದೇಶದಲ್ಲಿ ಜಿಲ್ಲಾ ಮೀಸಲು ಕಾವಲು ಪಡೆ, ಸ್ಥಳೀಯ ಪೊಲೀಸರು ಹಾಗೂ ಸಿಆರ್‌ಪಿಎಫ್‌ನ 204, 206 ಮತ್ತು 208ನೇ ಬೆಟಾಲಿಯನ್, ನಕ್ಸಲ್ ವಿರೋಧಿ ಕಾರ್ಯಾಚರಣೆ ಕೈಗೊಂಡಿದ್ದವು.



ಪ್ರಜಾ ಮತ 2024

ಜನತಂತ್ರದ ಹಬ್ಬ





ಲೋಕಸಭಾ ಚುನಾವಣೆಯ ಐದನೇ ಹಂತದಲ್ಲಿ ಸೋಮವಾರ (ಎಡದಿಂದ) ರಕ್ಷಣಾ ಸಚಿವ ರಾಜನಾಥ್ ಸಿಂಗ್; ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಮತ್ತು ಪುತ್ರ ಅರ್ಜುನ್ ತೆಂಡೂಲ್ಕರ್; ಉದ್ಯಮಿ ಮುಕೇಶ್ ಅಂಬಾನಿ ಹಾಗೂ ಪತ್ನಿ ನೀತಾ, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮತ್ತು ಪತ್ನಿ ರಶ್ಮಿ ಠಾಕ್ರೆ ಮತದಾನ ಮಾಡಿದರು —ಪಿಟಿಐ ಚಿತ್ರ

5ನೇ ಹಂತ • ದೇಶದ 49 ಕ್ಷೇತ್ರಗಳಲ್ಲಿ ಮತದಾನ • ಮತಯಂತ್ರ ತಿರುಚಿದ ಕುರಿತು ಹಲವೆಡೆ ದೂರು

ಶೇ 59 ಮತದಾನ, ಕೆಲವೆಡೆ ಘರ್ಷಣೆ

ನವದೆಹಲಿ (ಪಿಟಿಐ): ಆರು ರಾಜ್ಯಗಳು, ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿರುವ 49 ಕ್ಷೇತ್ರಗಳಲ್ಲಿ ಸೋಮವಾರ ಐದನೇ ಹಂತದಲ್ಲಿ ಚುನಾವಣೆ ನಡೆದಿದ್ದು, ಪ್ರಾಥಮಿಕ ವರದಿಗಳ ಪ್ರಕಾರ ಶೇಕಡ 59.06 ರಷ್ಟು ಮತದಾನವಾಗಿದೆ.

ಪಶ್ಚಿಮ ಬಂಗಾಳದ ವಿವಿಧೆಡೆ ಹಿಂಸಾಚಾರ, ಉತ್ತರಪ್ರದೇಶದ ಕೆಲವೆಡೆ ಮತದಾನ ಬಹಿಷ್ಕಾರ ಘಟನೆಗಳು ನಡೆದಿವೆ. ಅಲ್ಲದೆ, ಒಡಿಶಾ, ಪಶ್ಚಿಮ ಬಂಗಾಳದ ಕೆಲವೆಡೆ ಮತಯಂತ್ರಗಳಲ್ಲಿ ತಾಂತ್ರಿಕದೋಷ ಕಂಡುಬಂದಿದ್ದು, ಕೆಲಕಾಲ ಗೊಂದಲ ಉಂಟಾಗಿತ್ತು.

ತಡರಾತ್ರಿಯ ಮಾಹಿತಿಯ ಅನುಸಾರ, ಮಹಾರಾಷ್ಟ್ರದಲ್ಲಿ ಕನಿಷ್ಠ ಪ್ರಮಾಣದಲ್ಲಿ ಅಂದರೆ ಶೇ 53.51 ರಷ್ಟು ಮತದಾನ ಆಗಿದ್ದರೆ, ಪಶ್ಚಿಮ ಬಂಗಾಳದಲ್ಲಿ ಗರಿಷ್ಠ ಅಂದರೆ ಶೇ 73.14ರಷ್ಟು ಮತದಾನವಾಗಿದೆ.

4.26 ಕೋಟಿ ಮಹಿಳೆಯರು, 5,409 ಲಿಂಗತ್ವ ಅಲ್ಪಸಂಖ್ಯಾತರು ಸೇರಿದಂತೆ ಒಟ್ಟು 8.95 ಕೋಟಿ ಮತದಾರರು ಮತದಾನದ ಹಕ್ಕು ಹೊಂದಿದ್ದರು. ಒಟ್ಟು 94,732 ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು.

ಆರನೇ ಹಂತದ ಮತದಾನ ಮೇ 25, ಏಳು ಮತ್ತು ಅಂತಿಮ ಹಂತದ ಮತದಾನ ಜೂನ್ 1ರಂದು ನಡೆಯಲಿದೆ.

ಹಿಂಸಾಚಾರ: ಪಶ್ಚಿಮಬಂಗಾಳದಲ್ಲಿ ಬಾರಕ್‌ಪೋರ್, ಬೊಂಗಾಂವ್, ಅರಂಬಾಗ್ ಕ್ಷೇತ್ರಗಳ ವ್ಯಾಪ್ತಿಯಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಘರ್ಷಣೆಗಳು ನಡೆದಿವೆ.

ವಿದ್ಯುನ್ಮಾನ ಮತಯಂತ್ರ ತಿರುಚಿದ ಹಾಗೂ ಏಜೆಂಟರು ಮತಗಟ್ಟೆ ಪ್ರವೇಶಿಸಲು ಅಡ್ಡಿಪಡಿಸಿದ್ದು ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳಿಂದ ಒಟ್ಟು 1,036 ದೂರುಗಳನ್ನು ಸ್ವೀಕರಿಸಲಾಗಿದೆ ಎಂದು ಚುನಾವಣಾ ಆಯೋಗವು ತಿಳಿಸಿದೆ.

ಅರಂಬಾಗ್ ಕ್ಷೇತ್ರದ ಖಾನಕುಲ್‌ನಲ್ಲಿ ಪಕ್ಷಗಳ ಕಾರ್ಯಕರ್ತರ ನಡುವೆ ಘರ್ಷಣೆಯಾಗಿ, ಗೊಂದಲದ ಸ್ಥಿತಿ ಮೂಡಿತ್ತು. ಹೂಗ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಬಿಜೆಪಿ ಅಭ್ಯರ್ಥಿ, ಹಾಲಿ ಸಂಸದ ಲಾಕೆಟ್ ಚಟರ್ಜಿ ವಿರುದ್ಧ ಟಿಎಂಸಿ ಕಾರ್ಯಕರ್ತರು ಪ್ರತಿಭಟಿಸಿದರು.

ಸಂಸದರು ಬರುತ್ತಿದ್ದಂತೆ ಕಾರ್ಯಕರ್ತರು 'ಚೋರ್, ಚೋರ್' ಘೋಷಣೆ ಕೂಗಿದರು. ಆಕ್ರೋಶಗೊಂಡ ಚಟರ್ಜಿ ಅವರು ಕಾರಿನಿಂದ ಇಳಿದು ಪ್ರತಿಯಾಗಿ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. ಪೊಲೀಸರು ಪರಿಸ್ಥಿತಿ ನಿಯಂತ್ರಿಸಿದರು.

ಹೌರಾ ಕ್ಷೇತ್ರದ ಲಿಲುಹಾ, ಬೊಂಗಾಂವ್ ಕ್ಷೇತ್ರ ವ್ಯಾಪ್ತಿಯ ಗಾಯೇಶ್‌ಪುರ್‌ನಲ್ಲಿಯೂ ಘರ್ಷಣೆಗಳು ನಡೆದಿವೆ. ಗಾಯೇಶ್‌ಪುರ್‌ನಲ್ಲಿ ಬಿಜೆಪಿ ನಾಯಕ ಸುಬೀರ್ ಬಿಸ್ವಾಸ್ ಮೇಲೆ ಹಲ್ಲೆಯಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಲ್ಯಾಣಿ ವಲಯದ ಮತಗಟ್ಟೆಯಲ್ಲಿ ಟಿಎಂಸಿ ಅಭ್ಯರ್ಥಿಯ ಗುರುತಿನ ಚೀಟಿ ಹೊಂದಿದ್ದ ವ್ಯಕ್ತಿಯನ್ನು ಕೇಂದ್ರ ಸಚಿವ, ಬಿಜೆಪಿ ಅಭ್ಯರ್ಥಿ ಶಂತನು ಠಾಕೂರ್ ಹಿಡಿದಿದ್ದು, ಬಳಿಕ ಪೊಲೀಸರಿಗೆ ಒಪ್ಪಿಸಿದರು.

ಮತಯಂತ್ರ ತಿರುಚಿದ ದೂರು: ಉತ್ತರ ಪ್ರದೇಶದಲ್ಲಿ ವಿವಿಧೆಡೆ ಮತಯಂತ್ರಗಳನ್ನು ತಿರುಚಿದ ಹಾಗೂ ಮತಹಕ್ಕು ಚಲಾಯಿಸಲು ಮತಗಟ್ಟೆಗಳಿಗೆ ಜನರನ್ನು ಬಿಡುತ್ತಿಲ್ಲ ಎಂಬ ಆರೋಪಗಳು ಕೇಳಿಬಂದವು.

ಬೆಲಾ ಖಾರಾ ಗ್ರಾಮದ ಮೂರು ಮತಗಟ್ಟೆಗಳಲ್ಲಿ ಇಂತಹ ಆರೋಪ ಕೇಳಿಬಂದಿದ್ದು, ಮತದಾರರಿಗೆ ಬಿಜೆಪಿಯವರು ಅಡ್ಡಿ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿತು.

ರಾಯ್‌ಬರೇಲಿ ಕ್ಷೇತ್ರದ ರಾಸುಲ್ಪುರ್ ಮತಗಟ್ಟೆಯನ್ನು ಬೆಳಿಗ್ಗೆ 8ರಿಂದ ಬಂದ್ ಮಾಡಿದ್ದು, ಮತದಾರರು ವಾಪಸು ಹೋದರು. ಇಂಥ ವಾಮಮಾರ್ಗ ಮೂಲಕ ಬಿಜೆಪಿ 400 ಸೀಟುಗಳ ಗಡಿ ದಾಟಲಿದೆ ಎಂದು ಕಾಂಗ್ರೆಸ್ 'ಎಕ್ಸ್'ನಲ್ಲಿ ಟೀಕಿಸಿದೆ.

ಗೊಂಡಾ ಕ್ಷೇತ್ರದ ಮಂಕಾಪುರ್ ವಲಯದ ಎರಡು ಮತಗಟ್ಟೆಗಳಲ್ಲಿ ನ್ಯಾಯಯುತ ಮತದಾನ ನಡೆಯುತ್ತಿಲ್ಲ ಎಂದು ಸಮಾಜವಾದಿ ಪಕ್ಷದ ಅಭ್ಯರ್ಥಿ ಶ್ರೇಯಾವರ್ಮಾ ಆಯೋಗಕ್ಕೆ ದೂರು ನೀಡಿದರು.

ಬಹಿಷ್ಕಾರ: ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಮತ್ತು ರೈಲ್ವೆ ಸೇತುವೆ ನಿರ್ಮಾಣದ ಭರವಸೆ ನೀಡಿದರಷ್ಟೇ ಮತದಾನ ಮಾಡುವುದಾಗಿ ಪಟ್ಟುಹಿಡಿದಿದ್ದ ನಾಗರಿಕರು, ಕೌಶಂಬಿ, ಹಿಸಾಂಪುರ ಮಾಧೋ ಗ್ರಾಮದಲ್ಲಿ ಮತದಾನ ಬಹಿಷ್ಕರಿಸಿದರು.

ಮಹಾರಾಷ್ಟ್ರದಲ್ಲಿ ಬಹುತೇಕ ಮತಗಟ್ಟೆಗಳ ಬಳಿ ಮತದಾರರಿಗೆ ನೆರಳಿನ ವ್ಯವಸ್ಥೆ ಸೇರಿದಂತೆ ಕನಿಷ್ಠ ಸೌಲಭ್ಯಗಳನ್ನು ಕಲ್ಪಿಸಿಲ್ಲ ಎಂದು ಶಿವಸೇನೆ ಉದ್ಧವ್ ಬಣದ ಮುಖಂಡ ಆದಿತ್ಯ ಠಾಕ್ರೆ ಆರೋಪಿಸಿದರು.

ನಕಲಿ ವಿದ್ಯುನ್ಮಾನ ಯಂತ್ರವನ್ನು ಬಳಸಿದ ಆರೋಪದಡಿ ಶಿವಸೇನೆ ಉದ್ಧವ್ ಬಣದ ಇಬ್ಬರು ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.



ಮತದಾನ ಮಾಡಿದ ಬಾಲಿವುಡ್ ಮಂದಿ. **ಎಡದಿಂದ ಬಲಕ್ಕೆ:** ಮನೋಜ್ ಬಾಜ್‌ಪೇಯಿ, ಸನ್ನಿ ಡಿಯೋಲ್, ಅನಿಲ್ ಕಪೂರ್, ಐಶ್ವರ್ಯಾ ರೈ, ಹೃತಿಕ್ ರೋಷನ್, ವರುಣ್ ಧವನ್ **(ಕೆಳಗಿನ ಸಾಲು)** ಜಾಹ್ನವಿ ಕಪೂರ್, ಅಮೀರ್ ಖಾನ್, ಸೋನಾಕ್ಷಿ ಸಿನ್ಹಾ, ಇಮ್ರಾನ್ ಹಾಶ್ಮಿ, ಕಿರಣ್ ರಾವ್, ವಿದ್ಯಾ ಬಾಲನ್ —ಪಿಟಿಐ ಚಿತ್ರ

ರಾಜ್ಯಗಳು	ಕ್ಷೇತ್ರಗಳು	ಮತ ಪ್ರಮಾಣ
ಮಹಾರಾಷ್ಟ್ರ	13	53.51
ಪಶ್ಚಿಮ ಬಂಗಾಳ	07	73.14
ಬಿಹಾರ	05	53.78
ಜಾರ್ಖಂಡ್	03	63.06
ಒಡಿಶಾ	05	62.23
ಉತ್ತರ ಪ್ರದೇಶ	14	57.79
ಜಮ್ಮು ಮತ್ತು ಕಾಶ್ಮೀರ	01	59
ಲಡಾಖ್	01	68.47

ಚುನಾವಣೆಯಲ್ಲಿ ಕಂಡದ್ದು...



ಮೋನಿಕಾ ಮೋರೆ

- 2014ರಲ್ಲಿ ಘಾಟ್ಕೋಪರ್ ರೈಲು ಅವಘಡದಲ್ಲಿ ಎರಡೂ ಕೈ ಕಳೆದುಕೊಂಡಿದ್ದು, ಕೈಗಳ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ, 27 ವರ್ಷ ವಯಸ್ಸಿನ ಮೋನಿಕಾ ಮೋರೆ ಮುಂಬೈನಲ್ಲಿ ಇದೇ ಮೊದಲಿಗೆ ಮತ ಚಲಾಯಿಸಿದರು. ಅಪಘಾತದ ಬಳಿಕ ಆರು ವರ್ಷ ಆಕೆಗೆ ಎರಡು ಕೈ ಇರಲಿಲ್ಲ. 2020ರ ಆಗಸ್ಟ್‌ನಲ್ಲಿ ಯಶಸ್ವಿಯಾಗಿ ಕೈ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.
- ಐದನೇ ಹಂತದ ಚುನಾವಣೆಯಲ್ಲಿ ಸೋಮವಾರ ಮುಂಬೈನಲ್ಲಿ ಬಾಲಿವುಡ್‌ನ ಅನೇಕ ಹೆಸರಾಂತ ನಟರು ಮತ ಹಕ್ಕು ಚಲಾಯಿಸುವ ಮೂಲಕ ಗಮನಸೆಳೆದರು.
- ಉದ್ಯಮಿಗಳಾದ ಆನಂದ್ ಮಹೀಂದ್ರಾ, ಅನಿಲ್ ಅಂಬಾನಿ, ಎನ್.ಚಂದ್ರಶೇಖರನ್, ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ, ಮಹಾರಾಷ್ಟ್ರ ನವನಿರ್ಮಾಣ ಸೇನಾ ಮುಖ್ಯಸ್ಥ ರಾಜ್‌ಠಾಕ್ರೆ, ಶಿವಸೇನೆ ಉದ್ಧವ್ ಬಣದ ಅಧ್ಯಕ್ಷ ಉದ್ಧವ್ ಠಾಕ್ರೆ, ಕೇಂದ್ರ ಸಚಿವರಾದ ಪೀಯೂಷ್ ಗೋಯಲ್, ಭಾರತಿ ಪವಾರ್, ಕಪಿಲ್ ಪಾಟೀಲ್ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್, ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಮತ ಚಲಾಯಿಸಿದ ಇತರ ಪ್ರಮುಖರಲ್ಲಿ ಸೇರಿದ್ದಾರೆ.
- ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಕ್ಷೇತ್ರದಲ್ಲಿ ಶೇ 59ರಷ್ಟು ಅಧಿಕ ಮತದಾನವಾಗಿದೆ. ಇದು, ಕಳೆದ ನಾಲ್ಕು ದಶಕಗಳಲ್ಲಿಯೇ ಅಧಿಕವಾದುದು. ಹಿಂದೆ 1984ರಲ್ಲಿ ಶೇ 58.84ರಷ್ಟು ಮತದಾನವಾಗಿತ್ತು.
- ಮಹಾರಾಷ್ಟ್ರದ ನಾಸಿಕ್‌ನಲ್ಲಿ ಮತಯಂತ್ರಕ್ಕೆ ಮಾಲಾರ್ಪಣೆ ಮಾಡಿ ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಪಕ್ಷೇತರ ಅಭ್ಯರ್ಥಿ ಶಾಂತಿಗಿರಿ ಮಹಾರಾಜ್ ವಿರುದ್ಧ ದೂರು ದಾಖಲಾಗಿದೆ.
- ಜಾರ್ಖಂಡ್‌ನ ರಾಮಗರ್ ಜಿಲ್ಲೆಯಲ್ಲಿ ಮತಗಟ್ಟೆ ಬಳಿ ಸುಮಾರು 62 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು ಹೃದಯಾಘಾತದಿಂದ ಕುಸಿದುಬಿದ್ದಿದ್ದು ರಸ್ತೆಯಲ್ಲಿಯೇ ಮೃತಪಟ್ಟರು.

ಮತಬ್ಯಾಂಕ್ ರಾಜಕಾರಣದ ಬಗ್ಗೆ ಮಾತನಾಡಿದ್ದೆ: ಪ್ರಧಾನಿ ಮೋದಿ ಪ್ರತಿಪಾದನೆ

'ಅಲ್ಪಸಂಖ್ಯಾತರ ವಿರುದ್ಧ ಎಂದೂ ಮಾತನಾಡಿಲ್ಲ'

ಭುವನೇಶ್ವರ/ಪುರಿ (ಪಿಟಿಐ): ಅಲ್ಪಸಂಖ್ಯಾತರ ವಿರುದ್ಧ ತಾನು ಎಂದೂ ಮಾತು ಆಡಿಲ್ಲ, ಬಿಜೆಪಿಯು ಎಂದೂ ಅವರ ವಿರುದ್ಧ ಕೆಲಸ ಮಾಡಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ. ಆದರೆ, ಯಾವುದೇ ರೀತಿಯ 'ವಿಶೇಷ ಪರಿಗಣನೆ'ಯನ್ನು ತಾನು ಒಪ್ಪುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಅವರು, 'ನಾನು ಅಲ್ಪಸಂಖ್ಯಾತರ ವಿರುದ್ಧ ಮಾತನಾಡಿಲ್ಲ. ಕಾಂಗ್ರೆಸ್‌ನ ಮತಬ್ಯಾಂಕ್ ರಾಜಕಾರಣದ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ. ಕಾಂಗ್ರೆಸ್ ಪಕ್ಷವು ಸಂವಿಧಾನದ ಜಾತ್ಯತೀತ ನಿಲುವನ್ನು ನಿರಂತರವಾಗಿ ಉಲ್ಲಂಘಿಸಿದ್ದು, ಅಲ್ಪಸಂಖ್ಯಾತರನ್ನು ಓಲೈಸಲು ಬಯಸುವ ವಿರೋಧ ಪಕ್ಷಗಳ ಮತ ಬ್ಯಾಂಕ್ ರಾಜಕಾರಣವನ್ನು ನನ್ನ ಚುನಾವಣಾ ಭಾಷಣಗಳ ಮೂಲಕ ಬಯಲಿಗೆಳೆದಿದ್ದೇನೆ' ಎಂದು ತಿಳಿಸಿದರು.

'ನಾನು ಸಂತೃಪ್ತಿಯ ಪಥವನ್ನು ಅನುಸರಿಸುತ್ತೇನೆ. ಅವರದ್ದು ಓಲೈಕೆಯ ಪಥ. ನನ್ನದು 'ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್' ರಾಜಕಾರಣ. ನಾವು 'ಸರ್ವ ಧರ್ಮ ಸಮಭಾವ'ದಲ್ಲಿ ನಂಬಿಕೆ ಹೊಂದಿದ್ದೇನೆ. ನಾವು ಎಲ್ಲರನ್ನೂ ಜೊತೆಯಲ್ಲಿ ಕರೆದೊಯ್ಯುತ್ತೇವೆ. ನಾವು ಯಾರನ್ನೂ ವಿಶೇಷ ಪ್ರಜೆಗಳೆಂದು ಒಪ್ಪಿಕೊಳ್ಳದೇ ಎಲ್ಲರೂ ಸಮಾನರು ಎಂದು ಪರಿಗಣಿಸುತ್ತೇವೆ' ಎಂದು ಪ್ರತಿಪಾದಿಸಿದರು.

'ಕಾಂಗ್ರೆಸ್ ಪಕ್ಷವು ಹಿಂದೂಗಳ ಸಂಪತ್ತನ್ನು ಮುಸ್ಲಿಮರಿಗೆ ಹಂಚಲಿದೆ ಎಂದು ನೀವು ನಂಬಿದ್ದೀರಾ' ಎನ್ನುವ ಪ್ರಶ್ನೆಗೆ ಉತ್ತರಿಸಿದ ಪ್ರಧಾನಿ, 'ನಾನು ಆ ರೀತಿ ಆಲೋಚನೆ ಮಾಡುತ್ತಿರುವುದಲ್ಲ. ಯಾವುದೇ ತರ್ಕವಿಲ್ಲದೆ ಪ್ರಚಾರ ಮಾಡುವುದು ಪಾಪಕೃತ್ಯ. ನಾನು ಅಂತಹ ಪಾಪವನ್ನು ಎಂದೂ ಮಾಡಿಲ್ಲ, ಮಾಡುವುದೂ ಇಲ್ಲ. ಅಂಥ ಅತಾರ್ಕಿಕವಾದ ಪ್ರಚಾರ ಮಾಡಿದ್ದು ಅವರು (ವಿರೋಧ ಪಕ್ಷ)' ಎಂದು ಅಭಿಪ್ರಾಯಪಟ್ಟರು.

'ಟೆಂಡರ್‌ಗಳಲ್ಲಿ ಅಲ್ಪಸಂಖ್ಯಾತರಿಗೆ ಮೀಸಲಾತಿ ನೀಡುವುದಾಗಿ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಭರವಸೆ ನೀಡಲಾಗಿದೆ. ಈಗ, ನೀವು ಒಂದು ಸೇತುವೆ ನಿರ್ಮಿಸಬೇಕು. ಅದಕ್ಕೆ ಯಾರು ಅರ್ಜಿ ಸಲ್ಲಿಸುತ್ತಾರೆ? ಸಂಪನ್ಮೂಲ, ಪರಿಣತಿ, ತಾಂತ್ರಿಕತೆ ಇರುವವರು. ಆದರೆ, ನೀವು ಅಲ್ಲಿಯೂ ಮೀಸಲಾತಿ ತಂದರೆ, ನನ್ನ ದೇಶದ ಅಭಿವೃದ್ಧಿಯ ಕಥೆ ಏನಾಗಬೇಡ' ಎಂದು ಪ್ರಶ್ನಿಸಿದರು.



ಒಡಿಶಾದ ಢೆಂಕನಾಲ್‌ನಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

'250 ಜೊತೆ ಬಟ್ಟೆಯ ಆರೋಪ'

'ನಾನು ನನ್ನ ರಾಜಕೀಯ ಜೀವನದಲ್ಲಿ ಎದುರಿಸಿದ ಅತಿ ದೊಡ್ಡ ಆರೋಪ ಎಂದರೆ, 250 ಜೊತೆ ಬಟ್ಟೆ ಹೊಂದಿದ್ದೇನೆ ಎನ್ನುವುದು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಸಂದರ್ಶನದಲ್ಲಿ ಈ ವಿಚಾರ ತಿಳಿಸಿದ ಪ್ರಧಾನಿ, 'ಕಾಂಗ್ರೆಸ್ ಮುಖಂಡ, ಗುಜರಾತ್ ಮಾಜಿ ಮುಖ್ಯಮಂತ್ರಿ ಅಮರ್‌ಸಿಂಗ್ ಚೌಧರಿ ಈ ಆರೋಪ ಮಾಡಿದ್ದರು. ₹250 ಕೋಟಿ ಕದ್ದ ಮುಖ್ಯಮಂತ್ರಿ ಬೇಕೋ, 250 ಜೊತೆ ಬಟ್ಟೆ ಇರುವ ಮುಖ್ಯಮಂತ್ರಿ ಬೇಕೋ ಎಂದು ನಾನು ಜನರನ್ನು ಪ್ರಶ್ನಿಸಿದ್ದೆ. ಜನ 250 ಜೊತೆ ಬಟ್ಟೆ ಇರುವವರು ಬೇಕು ಎಂದು ಉತ್ತರಿಸಿದ್ದರು' ಎಂದರು.

'ಮುಸ್ಲಿಮರ ವಿರುದ್ಧ ದ್ವೇಷ ಭಾಷಣ'

ನವದೆಹಲಿ (ಪಿಟಿಐ): ಪ್ರಧಾನಿ ಅವರ 'ಅಲ್ಪಸಂಖ್ಯಾತರ ವಿರುದ್ಧ ನಾನು ಒಂದೂ ಮಾತು ಆಡಿಲ್ಲ' ಎಂಬ ಹೇಳಿಕೆಗೆ ತಿರುಗಿ ಬಿದ್ದಿರುವ ವಿರೋಧ ಪಕ್ಷಗಳ ಮುಖಂಡರು, ಪ್ರತಿಯೊಂದು ವೇದಿಕೆಯಲ್ಲೂ ಮುಸ್ಲಿಮರ ವಿರುದ್ಧ ದ್ವೇಷ ಭಾಷಣ ಮಾಡುವ ಮೋದಿ ಅವರು ಹೇಳುತ್ತಿರುವುದು 'ಸುಳ್ಳು' ಎಂದು ಟೀಕಿಸಿದ್ದಾರೆ.

'ಪ್ರಧಾನಿ ಹೇಳಿಕೆ ಸಂಪೂರ್ಣ ಸುಳ್ಳು. ಅವರು (ಬಿಜೆಪಿಯವರು) ಮುಸ್ಲಿಮರ ವಿರುದ್ಧ ಹೇಗೆ ಮಾತನಾಡುತ್ತಿದ್ದಾರೆ ಎಂಬುದು ಮೋದಿ ಅವರಿಗೆ ತಿಳಿದಿದೆ. ಮಂಗಳಸೂತ್ರ ಮತ್ತು ಹೆಚ್ಚು ಮಕ್ಕಳನ್ನು ಹೊಂದಿದವರು.. ಮುಂತಾದ ಹೇಳಿಕೆಗಳನ್ನು ಕೊಟ್ಟವರು ಯಾರು? ಮುಸ್ಲಿಮರು ಮತ್ತು ಇತರ ಅಲ್ಪಸಂಖ್ಯಾತರು ತಮಗೆ ಸಿಗಬೇಕಾದ ಹಲವು ಹಕ್ಕುಗಳಿಂದ ವಂಚಿತರಾಗಿದ್ದಾರೆ' ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಪ್ರತಿಕ್ರಿಯಿಸಿದ್ದಾರೆ.

ಬಿಜೆಪಿ-ಆರ್‌ಎಸ್‌ಎಸ್‌ನವರು ಅಲ್ಪಸಂಖ್ಯಾತರನ್ನು ದುರ್ಬಲಗೊಳಿಸುವ ಮತ್ತು ಅವರನ್ನು ಅಪಹಾಸ್ಯಕ್ಕೆ ಗುರಿಪಡಿಸುವ 'ದುಷ್ಟ ಯೋಜನೆ'ಯನ್ನು ಅನುಸರಿಸುತ್ತಿವೆ ಎಂದು ಆರೋಪಿಸಿದ್ದಾರೆ.

'ಪ್ರಧಾನಿ ಅವರು ಹಿಂದೂ–ಮುಸ್ಲಿಮರ ಮಧ್ಯೆ ಮಾತ್ರವಲ್ಲ, ಹಿಂದೂಗಳು ಪರಸ್ಪರ ಕಚ್ಚಾಡುವಂತೆ ಮಾಡುತ್ತಿದ್ದಾರೆ. ಮೊದಲು ಹಿಂದೂಗಳನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟುತ್ತಾರೆ. ಆ ಬಳಿಕ ಹಿಂದೂಗಳು ಸಿಖ್, ಕ್ರೈಸ್ತ ಮತ್ತು ಬೌದ್ಧರ ವಿರುದ್ದ ಜಗಳವಾಡುವಂತೆ ಮಾಡುವರು. ಅದೇ ರೀತಿ ಮರಾಠರು ಮರಾಠರಲ್ಲದವರ ವಿರುದ್ಧ, ದಲಿತರು ಇತರ ಹಿಂದುಳಿದ ವರ್ಗದವರ ವಿರುದ್ಧ ಕಚ್ಚಾಡುವ ಹಾಗೆ ಮಾಡುವರು' ಎಂದು ಎಎಪಿ ಸಂಸದ ಸಂಜಯ್ ಸಿಂಗ್ ದೂರಿದ್ದಾರೆ.

ಬಿಜೆಪಿ ಸಮರ್ಥನೆ: ಪ್ರಧಾನಿ ಅವರ ಹೇಳಿಕೆಯನ್ನು ಬಿಜೆಪಿ ಸಮರ್ಥಿಸಿಕೊಂಡಿದೆ. 'ಮೋದಿ ಅವರು ಸತ್ಯವನ್ನೇ ಹೇಳಿದ್ದಾರೆ. ಅವರ ಎಲ್ಲ ನೀತಿಗಳು ಬಡವರ ಪರವಾಗಿದ್ದು, ಎಲ್ಲರಿಗೂ ಪ್ರಯೋಜನ ನೀಡಿವೆ' ಎಂದು ಬಿಜೆಪಿ ಸಂಸದ ಸುಧಾಂಶು ತ್ರಿವೇದಿ ಪ್ರತಿಕ್ರಿಯಿಸಿದ್ದಾರೆ.

ಮೋದಿ ಅವರ ಸುಳ್ಳುಗಳು ಬೇಗನೇ ಬಯಲಾಗುತ್ತವೆ. ಅವರು ಏನೇ ಹೇಳಿದರೂ ಅವರದ್ದೇ ಸರ್ಕಾರ ಅದನ್ನು ಸುಳ್ಳಾಗಿಸುವಂಥ ಕೆಲಸ ಮಾಡುತ್ತದೆ. ಆದ್ದರಿಂದ ಜನರು ಅವರನ್ನು ನಂಬುವುದಿಲ್ಲ

ಟಿ.ಕೆ.ಎಸ್.ಇಳಂಗೋವನ್, ಡಿಎಂಕೆ ವಕ್ತಾರ

ಮಮತಾ ಸಹೋದರನ ಹೆಸರು ನಾಪತ್ತೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಕಿರಿಯ ಸಹೋದರ ಸ್ವಪನ್ ಬ್ಯಾನರ್ಜಿಯ (ಬಾಬುನ್) ಹೆಸರು ಮತದಾರರ ಪಟ್ಟಿಯಲ್ಲಿ ಇರದೇ ಇದ್ದುದರಿಂದ ಮತ ಚಲಾವಣೆ ಮಾಡಲು ಸೋಮವಾರ ಅವರಿಗೆ ಸಾಧ್ಯವಾಗಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೌರಾ ಪಟ್ಟಣದ ಮತದಾರರಾದ ಬಾಬುನ್, ಮತ ಚಲಾವಣೆ ಮಾಡಲು ಮತಗಟ್ಟೆಗೆ ಹೋದಾಗ ಅವರ ಹೆಸರು ಪಟ್ಟಿಯಲ್ಲಿ ಇರಲಿಲ್ಲ. 'ಈ ಬಗ್ಗೆ ಚುನಾವಣಾ ಆಯೋಗವು ಪರಿಶೀಲನೆ ನಡೆಸುತ್ತಿದ್ದು, ಅವರಷ್ಟೇ ಏನಾಗಿದೆ ಎಂದು ಹೇಳಲು ಸಾಧ್ಯ' ಎಂದು ಟಿಎಂಸಿ ವಕ್ತಾರ ಶಂತನು ಸೇನ್ ಹೇಳಿದ್ದಾರೆ.

ಮತದಾನ ಮಾಡಲು ಸಾಧ್ಯವಾಗದೇ ಹೋದುದಕ್ಕೆ ನಿರಾಸೆಯಾಗಿದೆ ಎಂದು ಬಾಬುನ್ ತಿಳಿಸಿದ್ದಾರೆ.

'ಮೋದಿ ಗ್ಯಾರಂಟಿ ಜಾರಿಯಾಗಿಲ್ಲ'

ಕೋಲ್ಕತ್ತ (ಪಿಟಿಐ): ವಿವಿಧ ವಿಷಯಗಳಿಗೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಈ ಹಿಂದೆ ನೀಡಿದ್ದ ಗ್ಯಾರಂಟಿಗಳು ಜಾರಿಗೆ ಬಂದಿಲ್ಲ ಎಂದು ತೃಣಮೂಲ ಕಾಂಗ್ರೆಸ್ ಮುಖಂಡ ಅಮಿತ್ ಮಿತ್ರಾ ಆರೋಪಿಸಿದರು.

ದೇಶದ ಶೇ 83ರಷ್ಟು ಯುವಜನರು ನಿರುದ್ಯೋಗಿಗಳಾಗಿದ್ದಾರೆ. ಶಿಕ್ಷಿತ ಯುವಕ, ಯುವತಿಯರಲ್ಲಿ ಮೂರನೇ ಎರಡರಷ್ಟು ಮಂದಿಗೆ ಉದ್ಯೋಗವಿಲ್ಲ ಎಂದು ಅವರು ಹೇಳಿದರು.

'ಕೌಶಲ ಭಾರತ' ಯೋಜನೆಯು ಫಲಕಾರಿಯಾಗಿಲ್ಲ. ಇದರಿಂದ ಕೇವಲ ಶೇ 4ರಷ್ಟು ಯುವಜನರು ವೃತ್ತಿಪರ ತರಬೇತಿ ಪಡೆದಿದ್ದಾರೆ ಎಂದರು.

'ನಾನು ಯಾವುದೇ ಸಂಸ್ಥೆಯ ವಿರುದ್ಧ ಅಲ್ಲ'

ಒಂಡಾ (ಪಿಟಿಐ): ರಾಮಕೃಷ್ಣ ಮಿಷನ್ ಮತ್ತು ಭಾರತ ಸೇವಾಶ್ರಮ ಸಂಘದ ಸೇವಾ ಕಾರ್ಯಗಳನ್ನು ಶ್ಲಾಘಿಸಿದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ತಾವು ಯಾವುದೇ ಸಂಘ ಸಂಸ್ಥೆಯ ವಿರುದ್ಧ ಅಲ್ಲ. ಆದರೆ, ರಾಜಕಾರಣದಲ್ಲಿ ತೊಡಗಿದ್ದ ಒಂದಿಬ್ಬರು ವ್ಯಕ್ತಿಗಳನ್ನು ಟೀಕಿಸಿದ್ದೆ ಅಷ್ಟೇ ಎಂದು ಸೋಮವಾರ ತಿಳಿಸಿದ್ದಾರೆ.



ಈ ಎರಡು ಸಂಸ್ಥೆಗಳ ಕೆಲವು ಸನ್ಯಾಸಿಗಳು ಬಿಜೆಪಿಯ ಸೂಚನೆಯಂತೆ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಶನಿವಾರ ಆರೋಪಿಸಿದ್ದರು.

ಪ್ರಧಾನಿ ಮೋದಿ ಸೇರಿದಂತೆ ಹಲವರು ಮಮತಾ ಹೇಳಿಕೆಯನ್ನು ಟೀಕಿಸಿದ್ದರು.

ಚುನಾವಣಾ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಅವರು, 'ನಾನು ರಾಮಕೃಷ್ಣ ಮಿಷನ್ ವಿರುದ್ಧ ಇಲ್ಲ. ನಾನೇಕೆ ಅದನ್ನು ಅವಮಾನಿಸಲಿ. ನಾನು ಕಾರ್ತಿಕ್ ಮಹಾರಾಜ್ ಬಗ್ಗೆ ಮಾತನಾಡಿದ್ದೆ. ಅವರು ರೆಜಿನಗರ್‌ನ ಮತದಾನದ ಬೂತ್‌ನಲ್ಲಿ ಟಿಎಂಸಿ ಕಾರ್ಯಕರ್ತ ಕುಳಿತುಕೊಳ್ಳಲು ಅವಕಾಶ ನೀಡಿರಲಿಲ್ಲ' ಎಂದು ತಿಳಿಸಿದರು.

ಮುರ್ಶಿದಾಬಾದ್ ಜಿಲ್ಲೆಯ ಭಾರತ್ ಸೇವಾಶ್ರಮ ಸಂಘದ ಸನ್ಯಾಸಿಯೊಬ್ಬರು ಬಿಜೆಪಿ ಪರವಾಗಿ ಕೆಲಸ ಮಾಡಿದ್ದರು. ರೆಜಿನಗರ್‌ನಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ಏರ್ಪಟ್ಟಾಗ ಅವರು ಜನರನ್ನು ಪ್ರಚೋದಿಸಿದ್ದರು ಎಂದು ಆರೋಪಿಸಿದರು.

ನೋಟಿಸ್ (ಕೋಲ್ಕತ್ತ ವರದಿ): ಮುರ್ಶಿದಾಬಾದ್‌ನ ಭಾರತ್ ಸೇವಾಶ್ರಮ ಸಂಘದ ಬಗ್ಗೆ ಮಮತಾ ಬ್ಯಾನರ್ಜಿ ಮಾನಹಾನಿಕರ ಹೇಳಿಕೆ ನೀಡಿದ್ದು, ಅದಕ್ಕಾಗಿ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿ ಸಂಘದ ಸ್ವಾಮಿ ಪ್ರದೀಪ್ತಾನಂದ ಮಹಾರಾಜ್ ಸೋಮವಾರ ಮಮತಾ ಅವರಿಗೆ ನೋಟಿಸ್ ಕಳುಹಿಸಿದ್ದಾರೆ.

'ದಾಳಿಗೆ ಟಿಎಂಸಿ ಪ್ರಚೋದನೆ'

ಝಾಡ್‌ಗ್ರಾಮ (ಪಶ್ಚಿಮ ಬಂಗಾಳ) (ಪಿಟಿಐ): ರಾಮಕೃಷ್ಣ ಆಶ್ರಮದ ಮೇಲೆ ನಡೆದ ದಾಳಿಯನ್ನು ಖಂಡಿಸಿರುವ ಪ್ರಧಾನಿ ನರೇಂದ್ರ ಮೋದಿ, ಟಿಎಂಸಿಯು ತನ್ನ ಮತ ಬ್ಯಾಂಕ್ ಅನ್ನು ಓಲೈಸಲು ಸನ್ಯಾಸಿಗಳ ವಿರುದ್ಧದ ದಾಳಿಗಳಿಗೆ ಪ್ರಚೋದನೆ ನೀಡುತ್ತಿದೆ ಎಂದು ಆರೋಪಿಸಿದ್ದಾರೆ.

ಪಶ್ಚಿಮ ಬಂಗಾಳದ ಝಾಡ್‌ಗ್ರಾಮದಲ್ಲಿ ಚುನಾವಣಾ ರ್‍ಯಾಲಿ ನಡೆಸಿದ ಅವರು, 'ರಾಜ್ಯದ ಹಿಂದೂಗಳ ಧಾರ್ಮಿಕ ನಂಬಿಕೆಗಳನ್ನು ಘಾಸಿಗೊಳಿಸುವ ಹೊಣೆಯನ್ನು ಟಿಎಂಸಿ ಹೊತ್ತಿರುವುದು ನಾಚಿಕೆಗೇಡಿನ ಸಂಗತಿ. ಮುಖ್ಯಮಂತ್ರಿಯು ರಾಮಕೃಷ್ಣ ಮಿಷನ್ ಮತ್ತು ಭಾರತ್ ಸೇವಾಶ್ರಮ ಸಂಘದ ಸನ್ಯಾಸಿಗಳಿಗೆ ಬೆದರಿಕೆ ಒಡ್ಡಿದ್ದಾರೆ. ಭಾನುವಾರ ರಾತ್ರಿ ರಾಮಕೃಷ್ಣ ಆಶ್ರಮದ ಮೇಲೆ ದಾಳಿ ನಡೆದಿದೆ. ರಾಜ್ಯದ ಜನ ಇದನ್ನೆಲ್ಲ ಸಹಿಸುವುದಿಲ್ಲ' ಎಂದು ಹೇಳಿದ್ದಾರೆ.

ಚುಟುಕು

ಕಂಗನಾಗೆ ಕಪ್ಪು ಬಾವುಟ ಪ್ರದರ್ಶನ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ನಟಿ ಕಂಗನಾ ರನೌತ್ ಅವರು ಸೋಮವಾರ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸ್ಥಳೀಯರಿಂದ ಪ್ರತಿಭಟನೆ ಎದುರಿಸಿದ್ದಾರೆ.

ಕಾಜಾ, ಲಾಹೌಲ್ ಮತ್ತು ಸ್ಪಿತಿಯಲ್ಲಿ ಚುನಾವಣಾ ಪ್ರಚಾರಕ್ಕೆ ತೆರಳಿದಾಗ ಕಾಂಗ್ರೆಸ್ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶಿಸಿದರಲ್ಲದೆ, 'ಗೋ ಬ್ಯಾಕ್ ಕಂಗನಾ' ಎಂದು ಘೋಷಣೆ ಕೂಗಿದರು. ಕಂಗನಾ ಮತ್ತು ಅವರ ಜತೆಗಿದ್ದವರನ್ನು ಗುರಿಯಾಗಿಸಿ ಕಲ್ಲು ಎಸೆಯಲಾಗಿದೆ ಎಂದು ಬಿಜೆಪಿ ಆರೋಪಿಸಿದೆ.



ಕಂಗನಾ ಅವರು ಕಳೆದ ಏಪ್ರಿಲ್‌ನಲ್ಲಿ ಟಿಬೆಟನ್ ಧರ್ಮಗುರು ದಲೈ ಲಾಮಾ ಅವರನ್ನು ಲೇವಡಿ ಮಾಡುವ ಮೀಮ್‌ವೊಂದನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದರು. ಅದರ ಬೆನ್ನಲ್ಲೇ ಬೌದ್ಧ ಸಂಘಟನೆಗಳು ಕಂಗನಾ ಅವರ ಮುಂಬೈನ ನಿವಾಸದ ಮುಂದೆ ಪ್ರತಿಭಟನೆ ನಡೆಸಿದ್ದವು. ಕಂಗನಾ ಆ ಬಳಿಕ ಕ್ಷಮೆಯಾಚಿಸಿದ್ದರು. ಆ ಘಟನೆಯನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದ್ದಾರೆ

'ಬಿಜೆಪಿಗೆ ರ್‍ಯಾಲಿ ನಡೆಸಲು ಅನುಮತಿ ನೀಡಲಾಗಿದ್ದ ಸ್ಥಳದ ಸನಿಹದಲ್ಲೇ ಕಾಂಗ್ರೆಸ್ ರ್‍ಯಾಲಿಗೂ ಅವಕಾಶ ನೀಡಲಾಗಿದ್ದು ದುರದೃಷ್ಟಕರ. ನಮ್ಮ ರ್‍ಯಾಲಿಯನ್ನು ತಡೆಯಲು ಕಾಂಗ್ರೆಸ್ ಕಾರ್ಯಕರ್ತರು ಯತ್ನಿಸಿದ್ದಾರೆ. ಘೋಷಣೆಗಳನ್ನು ಕೂಗಿ, ನಮ್ಮತ್ತ ಕಲ್ಲೆಸೆದರು' ಎಂದು ಕಾಜಾದಲ್ಲಿ ಕಂಗನಾ ಜತೆ ಪ್ರಚಾರದಲ್ಲಿ ಪಾಲ್ಗೊಂಡಿದ್ದ ಹಿಮಾಚಲ ಪ್ರದೇಶ ವಿಧಾನಸಭೆ ವಿರೋಧ ಪಕ್ಷದ ನಾಯಕ ಜೈರಾಮ್ ಠಾಕೂರ್ ದೂರಿದ್ದಾರೆ.

'ನಾವು ಇಡೀ ರಾಜ್ಯದಲ್ಲಿ ಪ್ರಚಾರ ಕೈಗೊಂಡಿದ್ದು, ಈ ರೀತಿಯ ಕಹಿ ಘಟನೆ ಎದುರಿಸಬೇಕಾಗಿ ಬಂದದ್ದು ಇದೇ ಮೊದಲು' ಎಂದು ಹೇಳಿದ್ದಾರೆ.

'ಕಾಂಗ್ರೆಸ್ ಕಾರ್ಯಕರ್ತರು ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದರು. ಆದರೆ ದಲೈ ಲಾಮಾ ಬಗ್ಗೆ ಕಂಗನಾ ಆಡಿದ್ದ ಮಾತಿನಿಂದ ನೋವು ಅನುಭವಿಸಿದ್ದವರು ದೊಡ್ಡ ಸಂಖ್ಯೆಯಲ್ಲಿ ಬಂದು ಪ್ರತಿಭಟನೆಯಲ್ಲಿ ಸೇರಿಕೊಂಡರು' ಎಂದು ಸ್ಥಳೀಯ ಕಾಂಗ್ರೆಸ್ ಮುಖಂಡ ಬಿಷನ್ ತಿಳಿಸಿದರು.

ಉತ್ತರ ಪ್ರದೇಶ: ಯುವಕನಿಂದ ಎಂಟು ಬಾರಿ ಮತದಾನ

ಲಖನೌ: ಉತ್ತರ ಪ್ರದೇಶದ ಫರೂಖಾಬಾದ್ ಲೋಕಸಭಾ ಕ್ಷೇತ್ರದಲ್ಲಿ ಯುವಕನೊಬ್ಬ ಮತಗಟ್ಟೆಯಲ್ಲಿ ಎಂಟು ಬಾರಿ ಮತದಾನ ಮಾಡಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಪ್ರಕರಣದ ಸಂಬಂಧ ಪೊಲೀಸರು ಯುವಕನನ್ನು ಬಂಧಿಸಿದ್ದಾರೆ. ಯುವಕ ಸ್ಥಳೀಯ ಬಿಜೆಪಿ ಮುಖಂಡನ ಮಗ ಎನ್ನಲಾಗುತ್ತಿದೆ.



ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ನಂತರ ನಯಗಾಂವ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಭಾನುವಾರ ರಾತ್ರಿ ಯುವಕನನ್ನು ಬಂಧಿಸಲಾಗಿದೆ. ಆತ ಎಟಾ ಜಿಲ್ಲೆಯ ಖಿರಿಯ ಪಮರಾನ್ ಗ್ರಾಮದ ನಿವಾಸಿ ಎಂದು ಪೊಲೀಸರು ತಿಳಿಸಿದ್ದಾರೆ. ಫರೂಖಾಬಾದ್ ಲೋಕಸಭಾ ಕ್ಷೇತ್ರದ ಆಲಿಗಂಜ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮತಗಟ್ಟೆಯಲ್ಲಿ ಘಟನೆ ನಡೆದಿದೆ. ಕ್ಷೇತ್ರದಲ್ಲಿ ಮೇ 13ರಂದು ಮತದಾನ ನಡೆದಿತ್ತು.

ಇವಿಎಂ ಯಂತ್ರದಲ್ಲಿ ಬಿಜೆಪಿ ಅಭ್ಯರ್ಥಿಯ ಹೆಸರಿನ ಮೇಲೆ ಯುವಕ ಒತ್ತುವುದು ವಿಡಿಯೊದಲ್ಲಿ ದಾಖಲಾಗಿದೆ. ಆತ ಮೊದಲು ತನ್ನ ಮತ ಚಲಾಯಿಸುತ್ತಾನೆ ನಂತರ ತನ್ನ ಮುಖ ತೋರಿಸಿ, ಮತ್ತೊಮ್ಮೆ ಮತ ಹಾಕುತ್ತಾನೆ. ಹಾಗೆ ಆತ ಎಂಟು ಬಾರಿ ಮತದಾನ ಮಾಡಿದ್ದಾನೆ. ಮತಗಟ್ಟೆ ಸಂಖ್ಯೆ 343ರಲ್ಲಿ ಈ ಪ್ರಕರಣ ನಡೆದಿದೆ.

ಸಾಮಾಜಿಕ ಜಾಲತಾಣದಲ್ಲಿ ಅಪಾರ ಗಮನ ಸೆಳೆಯುತ್ತಿರುವ ವಿಡಿಯೊ ಅನ್ನು ಸಮಾಜವಾದಿ ಪಕ್ಷದ (ಎಸ್‌ಪಿ) ನಾಯಕ ಅಖಿಲೇಶ್ ಯಾದವ್ 'ಎಕ್ಸ್' ನಲ್ಲಿ ಹಂಚಿಕೊಂಡಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಚುನಾವಣಾ ಆಯೋಗವನ್ನು ಆಗ್ರಹಿಸಿದ್ದಾರೆ.

ಎಂಥಾ ಮಾತು!



ಜನರು ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಲು ಹಾಗೂ ಬಿಜೆಪಿಯನ್ನು ಸೋಲಿಸಲು ಹೊರಟಿದ್ದಾರೆ ಎಂಬುದು ಮೊದಲ ನಾಲ್ಕು ಹಂತಗಳ ಮತದಾನದಲ್ಲೇ ಸ್ಪಷ್ಟವಾಗಿತ್ತು. ಐದನೇ ಹಂತದಲ್ಲೂ ಆ ಪ್ರಕ್ರಿಯೆ ಮುಂದುವರಿದಿದ್ದು, ದೇಶದಲ್ಲಿ ಬದಲಾವಣೆಯ ಚಂಡಮಾರುತ ಬೀಸುತ್ತಿದೆ. ದೇಶದ ಜನರು ಬಿಜೆಪಿಯ ದ್ವೇಷ ರಾಜಕಾರಣದಿಂದ ಬೇಸತ್ತಿದ್ದಾರೆ

ರಾಹುಲ್ ಗಾಂಧಿ, ಕಾಂಗ್ರೆಸ್ ಮುಖಂಡ



ಕಾಂಗ್ರೆಸ್ ಮತ್ತು ಎಎಪಿ ಪರಸ್ಪರ ಕೈಜೋಡಿಸಿವೆ. ದೇಶ ಮತ್ತು ಸಮಾಜವನ್ನು ಒಡೆದು ನಿಮ್ಮ ಆಸ್ತಿಯನ್ನು ವಶಕ್ಕೆ ತೆಗೆದುಕೊಳ್ಳುವುದು ಅವರ ಗುರಿ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಿಮ್ಮ ಆಸ್ತಿಯ ಸಮೀಕ್ಷೆ ನಡೆಸಿ ಅದನ್ನು ಮುಸ್ಲಿಮರಿಗೆ ಹಂಚಲಿದೆ. ಔರಂಗಜೇಬನ ಕಾಲದಲ್ಲಿದ್ದ 'ಜಿಜ್ಯಾ' (ತೆರಿಗೆ) ಜಾರಿಗೆ ತರಲಿದೆ. ಆದ್ದರಿಂದ ಎರಡನೇ ಔರಂಗಜೇಬನ ಹುಟ್ಟಿಗೆ ನೀವು ಅವಕಾಶ ನೀಡಬೇಡಿ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶದ ಮುಖ್ಯಮಂತ್ರಿ



ಲೋಕಸಭೆ ಚುನಾವಣೆಯ ಐದನೇ ಹಂತದಲ್ಲಿ ಜಮ್ಮು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಮತಗಟ್ಟೆಯೊಂದರಲ್ಲಿ ಜನರು ಸಾಲುಗಟ್ಟಿದ್ದರು. ಬಿಗಿ ಭದ್ರತೆ ಏರ್ಪಡಿಸಲಾಗಿತ್ತು —ಪಿಟಿಐ ಚಿತ್ರ

ಖರ್ಗೆ ಫೋಟೊ ವಿರೂಪಗೊಳಿಸಿದ ಘಟನೆ: ವರದಿ ಕೇಳಿದ ಕಾಂಗ್ರೆಸ್

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವವರಿಗೆ ಕಾಂಗ್ರೆಸ್ ಹೈಕಮಾಂಡ್ ಸೋಮವಾರ ಕಠಿಣ ಎಚ್ಚರಿಕೆ ನೀಡಿದೆ. ಕೋಲ್ಕತ್ತದಲ್ಲಿರುವ ಪಕ್ಷದ ಕಚೇರಿಯ ಹೊರ ಭಾಗದಲ್ಲಿಟ್ಟಿದ್ದ ಹೋರ್ಡಿಂಗ್‌ಗಳನ್ನು ಧ್ವಂಸಗೊಳಿಸಿದ ಕೃತ್ಯದ ಬಗ್ಗೆ ವರದಿ ಸಲ್ಲಿಸುವಂತೆ ತನ್ನ ರಾಜ್ಯ ಘಟಕಕ್ಕೆ ಸೂಚಿಸಿದೆ.

ಪಕ್ಷದ ಕಚೇರಿ ಮುಂಭಾಗದಲ್ಲಿರುವ ಖರ್ಗೆ ಅವರ ಪೋಸ್ಟರ್ ಮತ್ತು ಜಾಹೀರಾತು ಫಲಕಗಳನ್ನು ಭಾನುವಾರ ವಿರೂಪಗೊಳಿಸಲಾಗಿತ್ತು. ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರು 'ಇಂಡಿಯಾ' ಕೂಟಕ್ಕೆ ಹೊಂದಿರುವ ನಿಷ್ಠೆಯನ್ನು ಪಶ್ಚಿಮ ಬಂಗಾಳ ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಧೀರ್ ರಂಜನ್ ಚೌಧರಿ ಅವರು ಪ್ರಶ್ನಿಸಿದ್ದರು. ಅದರ ಬಗ್ಗೆ ಖರ್ಗೆ ಖಾರವಾಗಿ ಪ್ರತಿಕ್ರಿಯಿಸಿದ್ದ ಮರುದಿನ ಅವರ ಫೋಟೊವನ್ನು ವಿರೂಪಗೊಳಿಸಲಾಗಿತ್ತು.

ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, 'ಪಕ್ಷವು ಇಂತಹ ಅಶಿಸ್ತನ್ನು ಸಹಿಸುವುದಿಲ್ಲ' ಎಂದು ಹೇಳಿದ್ದಾರೆ.

'ಪಕ್ಷ ವಿರೋಧಿ ಚಟುವಟಿಕೆಯನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಅಶಿಸ್ತಿನ ಘಟನೆ ಬಗ್ಗೆ ವರದಿ ಸಲ್ಲಿಸುವಂತೆ ಪಶ್ಚಿಮ ಬಂಗಾಳ ಕಾಂಗ್ರೆಸ್ ಘಟಕದ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದ್ದೇವೆ' ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಕ್ಷದ ಕೆಲವು ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಖರ್ಗೆ ಅವರನ್ನು ಟೀಕಿಸಿ ಮಾಧ್ಯಮಗಳಿಗೆ ಹೇಳಿಕೆ ನೀಡಿರುವುದನ್ನು ಪಕ್ಷದ ಹೈಕಮಾಂಡ್ ಗಮನಕ್ಕೆ ತರಲಾಗಿದೆ ಎಂದೂ ಅವರು ಹೇಳಿದ್ದಾರೆ.

'ಕೋಲ್ಕತ್ತದ ಕಚೇರಿಯ ಹೊರಗಡೆ ಇಟ್ಟಿದ್ದ ಭಿತ್ತಿಪತ್ರ ಮತ್ತು ಜಾಹೀರಾತು ಫಲಕಗಳನ್ನು ಕೆಲವು ದುಷ್ಕರ್ಮಿಗಳು ಹಾನಿಗೊಳಿಸಿದ ಘಟನೆ ನಡೆದಿದೆ. ಇದು ಪಕ್ಷದ ಕೋಟ್ಯಂತರ ಕಾರ್ಯಕರ್ತರು ಮತ್ತು ಬೆಂಬಲಿಗರ ಭಾವನೆಗಳಿಗೆ ನೋವುಂಟು ಮಾಡಿದೆ' ಎಂದಿದ್ದಾರೆ.

ನೀತಿ ಸಂಹಿತೆಯಿಂದಾಗಿ ವಿಳಂಬ • 3 ವರ್ಷಗಳಲ್ಲಿ ನಿರ್ಮಾಣಕ್ಕೆ ಯೋಜನೆ

ನಿಮ್ಹಾನ್ಸ್ 'ಉತ್ತರ ಶಾಖೆ' ನಿರ್ಮಾಣ

ವರುಣ ಹೆಗಡೆ

ಬೆಂಗಳೂರು: ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಗೆ (ನಿಮ್ಹಾನ್ಸ್) ಬರುವ ರೋಗಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಇದರಿಂದಾಗಿ ನಗರದಲ್ಲಿ ಸಂಸ್ಥೆಯ ಶಾಖೆ ಪ್ರಾರಂಭದ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದಿದ್ದು, ಅನುಮೋದನೆಗಾಗಿ ಸಂಸ್ಥೆಯ ಆಡಳಿತ ಮಂಡಳಿ ಎದುರು ನೋಡುತ್ತಿದೆ.

ನಗರದಲ್ಲಿ ಸಂಸ್ಥೆಯ ಕಾರ್ಯವ್ಯಾಪ್ತಿ ವಿಸ್ತರಿಸಬೇಕೆಂಬ ಕೂಗು ಹಲವು ವರ್ಷಗಳಿಂದ ಇದೆ. ಇದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಲವು ತೋರಿದ್ದರಿಂದ ಸಂಸ್ಥೆಯು ಶಾಖೆ ನಿರ್ಮಾಣಕ್ಕೆ ಸಂಬಂಧಿಸಿದ ಪ್ರಸ್ತಾವ ವನ್ನು ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಸಲ್ಲಿಸಿತ್ತು. ಇದಕ್ಕೆ ಅನುಮೋದನೆ ನೀಡಿದ್ದ ಸಚಿವಾಲಯ, ವಿಸ್ತೃತ ಪ್ರಸ್ತಾವ ಸಲ್ಲಿಸಲು ಸೂಚಿಸಿತ್ತು. ಅದರಂತೆ ಸಂಸ್ಥೆಯು ಪ್ರಸ್ತಾವ ಸಲ್ಲಿಸಿದೆ. ಬಳಿಕ ಚುನಾವಣೆ ನೀತಿ ಸಂಹಿತೆ ಜಾರಿಯಾದ್ದರಿಂದ ನಿರ್ಮಾಣ ಕಾಮಗಾರಿಗೆ ಅನುಮೋದನೆ ಸಾಧ್ಯವಾಗಿಲ್ಲ. ಇದರಿಂದಾಗಿ ಹೊಸ ಸರ್ಕಾರ ರಚನೆ ಆಗುವವರೆಗೂ ಅನುಮೋದನೆಗೆ ಕಾಯಬೇಕಾಗಿದೆ.

ನಗರದ ಲಕ್ಕಸಂದ್ರದಲ್ಲಿರುವ ಸಂಸ್ಥೆಯು ಮಾನಸಿಕ ಸಮಸ್ಯೆ ಹಾಗೂ ರಸ್ತೆ ಅಪಘಾತದಲ್ಲಿ ಗಾಯಗೊಂಡವರ ಚಿಕಿತ್ಸೆಗೆ ಪ್ರಸಿದ್ಧಿ ಪಡೆದಿದೆ. 1,096 ಹಾಸಿಗೆಗಳನ್ನು ಒಳಗೊಂಡಿದ್ದು, ದೇಶದ ವಿವಿಧೆಡೆಯಿಂದ ಚಿಕಿತ್ಸೆಗಾಗಿ ರೋಗಿಗಳು ಬರುತ್ತಿದ್ದಾರೆ. ಇದರಿಂದಾಗಿ ರೋಗಿಗಳ ದಟ್ಟಣೆ ಉಂಟಾಗುತ್ತಿದ್ದು, ಚಿಕಿತ್ಸೆಗೆ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಸಂಸ್ಥೆಯು ಚಿಕಿತ್ಸೆಯ ಜತೆಗೆ ಬೋಧನೆ ಹಾಗೂ ಸಂಶೋಧನೆಗೂ ಆದ್ಯತೆ ನೀಡಿದೆ.


ಲಕ್ಕಸಂದ್ರದಲ್ಲಿರುವ ನಿಮ್ಹಾನ್ಸ್

ಸ್ಥಳ ಗುರುತು: ಉತ್ತರ ಬೆಂಗಳೂರಿನಲ್ಲಿ ನಿಮ್ಹಾನ್ಸ್ ಶಾಖೆ ಪ್ರಾರಂಭಿಸುವ ಸಂಬಂಧ ರಾಜ್ಯ ಸರ್ಕಾರವು ಕ್ಯಾಸನಹಳ್ಳಿಯಲ್ಲಿ 40 ಎಕರೆ ಪ್ರದೇಶವನ್ನು ಗುರುತಿಸಿ ಹಲವು ದಿನಗಳು ಕಳೆದಿವೆ. ಅಲ್ಲಿ ಕಾಮಗಾರಿಯನ್ನು ಆದಷ್ಟು ಬೇಗ ಪ್ರಾರಂಭಿಸುವಂತೆ ಕೇಂದ್ರ ಸರ್ಕಾರಕ್ಕೂ ರಾಜ್ಯ ಸರ್ಕಾರ ಮನವಿ ಮಾಡಿದೆ. ನೂತನ ಶಾಖೆಯು 300 ಹಾಸಿಗೆಗಳನ್ನು ಒಳಗೊಳ್ಳಲಿದೆ. ಇದಕ್ಕೆ ಅನುಮೋದನೆ ದೊರೆತ ಮೂರು ವರ್ಷಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ, ಸೇವೆ ಪ್ರಾರಂಭಿಸಲು ಸಂಸ್ಥೆಯು ಕಾರ್ಯಯೋಜನೆ ರೂಪಿಸಿದೆ. ಇದಕ್ಕೆ

> **ಬೆಂಗಳೂರು ಉತ್ತರದಲ್ಲಿ ಸಂಸ್ಥೆಯ ಶಾಖೆ ನಿರ್ಮಾಣ ಕುರಿತು ವಿಸ್ತೃತ ಪ್ರಸ್ತಾವವನ್ನು ಕೇಂದ್ರಕ್ಕೆ ಸಲ್ಲಿಸಿದ್ದು, ಅನುಮೋದನೆ ಸಿಕ್ಕ ಬಳಿಕ ಕೆಲಸ ಶುರುವಾಗಲಿದೆ.**
> **ಡಾ.ಪ್ರತಿಮಾಮೂರ್ತಿ,**
> ನಿಮ್ಹಾನ್ಸ್ ನಿರ್ದೇಶಕಿ

₹ 500 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ.

'ಪ್ರಾರಂಭದಲ್ಲಿ 2,200 ಹಾಸಿಗೆಗಳ ಬೃಹತ್ ಆಸ್ಪತ್ರೆಯನ್ನು ನಿರ್ಮಿಸಲು ಕಾರ್ಯಯೋಜನೆ ರೂಪಿಸಲಾಗಿತ್ತು. ಬಳಿಕ ಯೋಜನೆ ಪರಿಷ್ಕರಿಸಿ, 300 ಹಾಸಿಗೆಗಳ ಆಸ್ಪತ್ರೆ ನಿರ್ಮಾಣಕ್ಕೆ ಯೋಜನೆ ರೂಪಿಸಲಾಯಿತು. ಚುನಾವಣೆ ನೀತಿ ಸಂಹಿತೆ ಜಾರಿಯಿಂದಾಗಿ ಸಂಸ್ಥೆಯ ಶಾಖೆ ನಿರ್ಮಾಣಕ್ಕೆ ಹಿನ್ನಡೆಯಾಯಿತು. ಹೊಸ ಸರ್ಕಾರ ರಚನೆಯಾದ ಬಳಿಕ ಅನುಮೋದನೆ ಪಡೆದು, ನಿರ್ಮಾಣ ಕಾಮಗಾರಿ ಪ್ರಾರಂಭಿಸಬೇಕಿದೆ' ಎಂದು ಸಂಸ್ಥೆಯ ಉನ್ನತಾಧಿಕಾರಿಯೊಬ್ಬರು ತಿಳಿಸಿದರು.

ಹೊರರೋಗಿಗಳ ಸಂಖ್ಯೆ ಹೆಚ್ಚಳ

ಕೋವಿಡ್ ಅವಧಿಗೂ ಮೊದಲು ಸಂಸ್ಥೆಗೆ ಪ್ರತಿನಿತ್ಯ ಸರಾಸರಿ 1,400 ಹೊರರೋಗಿಗಳು ಬರುತ್ತಿದ್ದರು. 2020ರಲ್ಲಿ ಇಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ಜೀವನ ವಿಧಾನ ಹಾಗೂ ದೈನಂದಿನ ಕಾರ್ಯಚಟುವಟಿಕೆಯಲ್ಲಿ ವ್ಯತ್ಯಯವಾಗಿತ್ತು. ಇದರಿಂದ ಮಾನಸಿಕ ಸಮಸ್ಯೆ ಎದುರಿಸುವವರ ಸಂಖ್ಯೆಯಲ್ಲಿಯೂ ಏರಿಕೆಯಾಗಿತ್ತು. ಉದ್ಯೋಗ ನಷ್ಟ, ಆರ್ಥಿಕ ಸಮಸ್ಯೆ, ಉದ್ಯೋಗದಲ್ಲಿನ ವಾತಾವರಣ ಬದಲಾವಣೆ, ಅತಿಯಾದ ಕೆಲಸದ ಒತ್ತಡ ಸೇರಿದಂತೆ ನಾನಾ ಕಾರಣಗಳಿಂದ ಮನೋರೋಗಿಗಳ ಸಂಖ್ಯೆ ಹೆಚ್ಚಳವಾಗಿದೆ. ಕೋವಿಡ್‌ಗೂ ಮೊದಲು ಪ್ರತಿನಿತ್ಯ ಸರಾಸರಿ 1,400 ಹೊರರೋಗಿಗಳು ಬರುತ್ತಿದ್ದರು. ಈಗ ಆ ಸಂಖ್ಯೆ 2 ಸಾವಿರಕ್ಕೆ ಏರಿಕೆಯಾಗಿದೆ.

ಸಮಾಜ, ವಿಜ್ಞಾನ ಅಧ್ಯಯನಕ್ಕೆ ಉತ್ತೇಜನ

ಚಿಂತನೆ ಅಗತ್ಯ: ಬೆಂಗಳೂರು ನಗರ ವಿ.ವಿ ಕುಲಪತಿ ಲಿಂಗರಾಜ ಗಾಂಧಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲಾ, ಮಾನವಿಕ ಶಾಸ್ತ್ರ ಮತ್ತು ಸಮಾಜ ವಿಜ್ಞಾನ ಕುರಿತ ವಿಷಯಗಳಿಗೆ ಬೇಡಿಕೆ ಇತ್ತೀಚಿನ ವರ್ಷಗಳಲ್ಲಿ ಕಡಿಮೆ ಆಗುತ್ತಿದ್ದು, ಈ ಕುರಿತು ಚಿಂತನೆ ನಡೆಸುವ ಅಗತ್ಯವಿದೆ' ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ ಹೇಳಿದರು.



ಬೆಂಗಳೂರು ನಗರ ವಿಶ್ವವಿದ್ಯಾಲಯ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಕುಲಪತಿ ಲಿಂಗರಾಜ ಗಾಂಧಿ ಮಾತನಾಡಿದರು

ಬೆಂಗಳೂರು ನಗರ ವಿಶ್ವವಿದ್ಯಾಲಯ ಸೋಮವಾರ ಆಯೋಜಿಸಿದ್ದ 'ಇತಿಹಾಸ ಅಧ್ಯಾಪಕರಿಗೆ ಇಂಟರ್ನ್‌ಶಿಪ್' ಕುರಿತು ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಾನವಿಕ ಮತ್ತು ಸಮಾಜ ವಿಜ್ಞಾನ ವಿಷಯಗಳನ್ನು ಅಧ್ಯಯನ ಮಾಡಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕಿದೆ. ವಿದ್ಯಾರ್ಥಿಗಳಲ್ಲಿ ಉದ್ಯೋಗ ಅರ್ಹತೆ ಪಡೆಯಲು ಶಿಕ್ಷಣದ ಜೊತೆಗೆ ವೃತ್ತಿಗೆ ಸಂಬಂಧಿಸಿದ ಕೌಶಲಗಳ ತರಬೇತಿ ನೀಡುವ ಕೆಲಸ ಮಾಡಬೇಕಿದೆ. ಈ ಹಿನ್ನೆಲೆಯಲ್ಲಿ ಸ್ನಾತಕೋತ್ತರ ಪದವಿಯ 6ನೇ ಸೆಮಿಸ್ಟರ್‌ನಲ್ಲಿ ಇಂಟರ್ನ್‌ಶಿಪ್ ಕಡ್ಡಾಯ ಮಾಡಲಾಗಿದೆ. ಈ ಬಗ್ಗೆ ಬೋಧಕರು ಅಥವಾ ವಿದ್ಯಾರ್ಥಿಗಳು ಆತಂಕ ಪಡಬೇಕಿಲ್ಲ. ಬೆಂಗಳೂರು ನಗರ ವಿಶ್ವವಿದ್ಯಾಲಯ ಈಗಾಗಲೇ ಈ ಕುರಿತು ಮಾರ್ಗಸೂಚಿಗಳು ಸೇರಿ ಮೌಲ್ಯಮಾಪನ ವಿಧಾನಗಳನ್ನು ತಿಳಿಸುವ ಸುತ್ತೋಲೆ ಹೊರಡಿಸಿದೆ' ಎಂದರು.

'ವಿದ್ಯಾರ್ಥಿಗಳು ಸ್ವಯಂ ಉದ್ಯೋಗ, ಉದ್ಯಮಶೀಲತೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸ್ವಾವಲಂಬನೆ ಸಾಧಿಸಬೇಕು' ಎಂದರು.

ಇತಿಹಾಸ ಅಧ್ಯಯನ ಮಂಡಳಿ ಅಧ್ಯಕ್ಷ ಎಸ್. ನಾಗರತ್ನಮ್ಮ, ಪ್ರಾಧ್ಯಾಪಕರಾದ ಎಚ್.ಜಿ. ನಾರಾಯಣ, ಅನುರಾಧಾ. ವಿ., ಆನಂದ ಎಸ್., ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ಪಿ.ಟಿ. ಶ್ರೀನಿವಾಸ ನಾಯಕ ಅವರು ಭಾಗವಹಿಸಿದ್ದರು.

'ನಮ್ಮ ರೈಲು ಓಡುತ್ತಿದೆ, ಬೀಳುವುದಿಲ್ಲ...'

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ನಮ್ಮ ರೈಲು ಓಡುತ್ತಿದೆ. ಗಢ ಗಢ ನಡುಗುತ್ತಿಲ್ಲ. ಬಿದ್ದೂ ಹೋಗುವುದಿಲ್ಲ. ಬಿಜೆಪಿಯವರಿಗೆ ಯಾವ ಲಾಭವೂ ಆಗುವುದಿಲ್ಲ' ಎಂದು ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಸೋಮವಾರ ಪ್ರತಿಪಾದಿಸಿದರು.

'ಕಾಂಗ್ರೆಸ್ ಸರ್ಕಾರದ ಒಂದು ವರ್ಷದ ಸಾಧನೆ ಶೂನ್ಯ' ಎಂಬ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಒಂದು ವರ್ಷದ ಆಡಳಿತ ತೃಪ್ತಿ ತಂದಿದೆ. ಭರವಸೆ ನೀಡಿದಂತೆ ಗ್ಯಾರಂಟಿ ಯೋಜನೆಗಳನ್ನು ಈಡೇರಿಸಿದ್ದೇವೆ. 1.25 ಕೋಟಿ ಕುಟುಂಬಗಳಿಗೆ ಇವು ಸಹಕಾರಿಯಾಗಿವೆ' ಎಂದರು.


ಡಾ.ಎಚ್.ಸಿ. ಮಹದೇವಪ್ಪ

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಬಗ್ಗೆ ಎಲ್.ಶಿವರಾಮೇಗೌಡರು ನೀಡಿದ್ದಾರೆನ್ನಲಾದ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, 'ಅದು ಮೂರ್ಖತನದ ಯೋಚನೆ. ದೇವೇಗೌಡರು ಪ್ರಧಾನಿಯಾಗಿದ್ದವರು. ಪ್ರತಿಯೊಬ್ಬರಿಗೂ ಸಾರ್ಥಕ ಆಶಿಸುವುದು ಮಾನವನ ಗುಣ' ಎಂದರು.

'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ' ಎಂಬ ಬಿಜೆಪಿ ಆರೋಪದ ಕುರಿತು, 'ಕಾನೂನು ಸುವ್ಯವಸ್ಥೆ ಸಮರ್ಪಕವಾಗಿದೆ. ಅಂತೆ ಕಂತೆಗಳನ್ನು ಮಾತನಾಡಲಾಗದು. ಕಾನೂನು ಕೈಗೆತ್ತಿಕೊಳ್ಳುವವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುತ್ತದೆ' ಎಂದರು.

ಸಹೋದರರು ಕಾಲೇಜಿಗೆ ಹೊರಟಿದ್ದಾಗ ಸಂಭವಿಸಿದ ರಸ್ತೆ ಅಪಘಾತ

ತಮ್ಮನ ಸಾವು, ಅಣ್ಣನಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ರಸ್ತೆಯ ಮಂಗನಹಳ್ಳಿ ಬಳಿ ಅಪಘಾತ ಸಂಭವಿಸಿದ್ದು, ಬೈಕ್ ಸವಾರ ವಿನಾಯಕ್ ಪಲ್ಲೇದ (20) ಎಂಬುವವರು ಮೃತಪಟ್ಟಿದ್ದಾರೆ. ಬೈಕ್‌ನ ಹಿಂಬದಿಯಲ್ಲಿ ಕುಳಿತಿದ್ದ ಅಣ್ಣ ಗಿರೀಶ್ ಪಲ್ಲೇದ ಸಹ ಗಾಯಗೊಂಡಿದ್ದಾರೆ.

'ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ವಿನಾಯಕ್ ಹಾಗೂ ಗಿರೀಶ್, ಮಾಗಡಿ ರಸ್ತೆಯಲ್ಲಿರುವ ಕಾಲೇಜೊಂದರಲ್ಲಿ ಡಿಪ್ಲೊಮಾ ವ್ಯಾಸಂಗ ಮಾಡುತ್ತಿದ್ದರು. ಜೊತೆಗೆ, ಜಿಗಣಿ ಬಳಿಯ ಕಂಪನಿಯೊಂದ-ರಲ್ಲಿ ಅರೆಕಾಲಿಕ ಕೆಲಸದಲ್ಲಿದ್ದರು. ಜಿಗಣಿಯಲ್ಲಿಯೇ ಕೊಠಡಿಯೊಂ-ದರಲ್ಲಿ ಬಾಡಿಗೆಗೆ ವಾಸವಿದ್ದರು' ಎಂದು ಜ್ಞಾನಭಾರತಿ ಸಂಚಾರ ಠಾಣೆ ಪೊಲೀಸರು ಹೇಳಿದರು.

'ವಿನಾಯಕ್ ಹಾಗೂ ಗಿರೀಶ್, ಬೈಕ್‌ನಲ್ಲಿ ಜಿಗಣಿ ಕಡೆಯಿಂದ ಮಾಗಡಿ ರಸ್ತೆ ಬಳಿಯ ಕಾಲೇಜಿಗೆ ಸೋಮವಾರ ಬೆಳಿಗ್ಗೆ ಹೊರಟಿದ್ದರು. ಬೆಳಿಗ್ಗೆ 7.55 ಗಂಟೆ ಸುಮಾರಿಗೆ ಈ ಅಪಘಾತ ಸಂಭವಿಸಿದೆ' ಎಂದು ತಿಳಿಸಿದರು.

'ವಿನಾಯಕ್ ಅವರು ಬೈಕ್ ಚಲಾಯಿಸುತ್ತಿದ್ದರು. ಹಿಂಬದಿಯಲ್ಲಿ ಗಿರೀಶ್ ಕುಳಿತುಕೊಂಡಿದ್ದರು. ನೈಸ್ ರಸ್ತೆಯಲ್ಲಿ ಮಂಗನಹಳ್ಳಿ ಸಮೀಪ ಬೈಕ್‌ಗೆ ಲಾರಿಯೊಂದು ಡಿಕ್ಕಿ ಹೊಡೆದಿತ್ತು. ಬೈಕ್ ಸಮೇತ ಉರುಳಿಬಿದ್ದ ವಿನಾಯಕ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಾಳು ಗಿರೀಶ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಚಿಕಿತ್ಸೆ ಪಡೆದು-ಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಅಪಘಾತದ ಬಳಿಕ ಲಾರಿ ಸಮೇತ ಚಾಲಕ ಪರಾರಿಯಾಗಿದ್ದಾನೆ. ಲಾರಿ ಚಾಲಕನ ಅತಿ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಪ್ರಕರಣ ದಾಖಲಿಸಿಕೊಂಡು, ಚಾಲಕನ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ವಿದೇಶಕ್ಕೆ ಸಿಮ್ ಕಾರ್ಡ್ ಸಾಗಿಸಲು ಯತ್ನ: ಆರೋಪಿ ಬಂಧನ


ದೇವನಹಳ್ಳಿ: ಲಗೇಜ್ ಬ್ಯಾಗ್‌ನಲ್ಲಿ ಹಲವು ಸಿಮ್ ಕಾರ್ಡ್‌ಗಳನ್ನು ಬಚ್ಚಿಟ್ಟು ವಿದೇಶಗಳಿಗೆ ಕಳ್ಳ ಸಾಗಣೆ ಮಾಡುತ್ತಿದ್ದ ಆರೋಪಿಯನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ವಿಶಾಖಪಟ್ಟಣ ನಿವಾಸಿ ನಾ.ರಾ. ಶ್ರೀನಿವಾಸ ರಾವ್ (55) ಬಂಧಿತ ಆರೋಪಿ. ಆತನಿಂದ ಜಿಯೊ, ಏರ್‌ಟೆಲ್ ಸೇರಿದಂತೆ ವಿವಿಧ ಕಂಪನಿಗಳ 24 ಸಿಮ್ ಕಾರ್ಡ್ ಜಪ್ತಿ ಮಾಡಲಾಗಿದೆ.

ಆರೋಪಿಯು ಇತ್ತೀಚೆಗೆ ಲಗೇಜ್ ಬ್ಯಾಗ್ ಕೆಳಗೆ ಸಿಮ್ ಕಾರ್ಡ್ ಬಚ್ಚಿಟ್ಟುಕೊಂಡು ಕೆಂಪೇಗೌಡ ವಿಮಾನ ನಿಲ್ದಾಣದಿಂದ ಕಾಂಬೋಡಿಯಾಗೆ ಪ್ರಯಾಣ ಬೆಳೆಸಲು ಬಂದಿದ್ದ. ಲಗೇಜ್ ತಪಾಸಣೆ ವೇಳೆ ಬ್ಯಾಗ್‌ನಲ್ಲಿ ಹಲವು ಸಿಮ್ ಕಾರ್ಡ್ ಪತ್ತೆಯಾದವು.

ಕೂಡಲೇ ವಿಮಾನ ನಿಲ್ದಾಣ ತಪಾಸಣಾ ಸಿಬ್ಬಂದಿ ಆರೋಪಿಯನ್ನು ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ. ಅಕ್ರಮವಾಗಿ ಸಿಮ್ ಕಾರ್ಡ್‌ಗಳನ್ನು ವಿವಿಧ ದೇಶಗಳಿಗೆ ಸಾಗಿಸುವ ಕುರಿತು ಆರೋಪಿ ವಿಚಾರಣೆ ವೇಳೆ ಮಾಹಿತಿ ನೀಡಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಅಕ್ರಮವಾಗಿ ವಿದೇಶಗಳಿಗೆ ಸೀಮ್ ಕಾರ್ಡ್ ರವಾನೆ ಕರಿತು ಗುಪ್ತಚರ ಇಲಾಖೆ ಮಾಹಿತಿ ನೀಡಿತ್ತು. ಈ ಹಿನ್ನೆಲೆಯಲ್ಲಿ ವಿಮಾನ ನಿಲ್ದಾಣಕ್ಕೆ ಬರುವ ಪ್ರಯಾಣಿಕರು ಮತ್ತು ಅವರ ಲಗೇಜ್‌ಗಳ ಮೇಲೆ ತೀವ್ರ ನಿಗಾ ಇರಿಸಲಾಗಿತ್ತು.



ಆರೋಪಿತನಿಂದ ವಶಕ್ಕೆ ಪಡೆಯಲಾದ ಸಿಮ್ ಕಾರ್ಡ್‌ಗಳು

ಮಾರಕಾಸ್ತ್ರ ಹಿಡಿದು ಬಾರ್‌ಗೆ ನುಗ್ಗಿದ್ದವರ ಸೆರೆ

ಬೆಂಗಳೂರು: ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬಾರ್ ಆ್ಯಂಡ್ ರೆಸ್ಟೊರೆಂಟ್‌ವೊಂದಕ್ಕೆ ನುಗ್ಗಿ ಗ್ರಾಹಕರಿಗೆ ಜೀವ ಬೆದರಿಕೆಯೊಡ್ಡಿದ್ದ ಇಬ್ಬರು ಆರೋಪಿಗಳನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ದೇವರ ಜೀವನಹಳ್ಳಿಯ (ಡಿ.ಜೆ.ಹಳ್ಳಿ) ಸೈಯದ್ ಸುಹೇಬ್ (24) ಹಾಗೂ ಸೈಯದ್ ಮುಬಾರಕ್ (23) ಬಂಧಿತರು. ಇವರಿಬ್ಬರು ಅಪರಾಧ ಹಿನ್ನೆಲೆಯುಳ್ಳವರು ಎಂಬ ಮಾಹಿತಿ ಇದ್ದು, ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳಿಬ್ಬರು ಮಾರಕಾಸ್ತ್ರ ಹಿಡಿದು ಮೇ 12ರಂದು ರಾತ್ರಿ ಬಾಲಾಜಿ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗೆ ನುಗ್ಗಿದ್ದರು. ಸಿಬ್ಬಂದಿ ಹಾಗೂ ಗ್ರಾಹಕರಿಗೆ ಜೀವ ಬೆದರಿಕೆಯೊಡ್ಡಿದ್ದರು. ಹೀಗಾಗಿ, ಆರೋಪಿಗಳನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದರು' ಎಂದರು.

'ಶಸ್ತ್ರಾಸ್ತ್ರ ಕಾಯ್ದೆಯಡಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳ ವಿರುದ್ಧ ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ವಿಧಾನಸೌಧ ಬಳಿ ಅಪಘಾತ: ಶಾಸಕರ ಕಾರು ಜಖಂ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಬೈಲಹೊಂಗಲ: ವಿಧಾನ ಸೌಧದ ಎದುರು ಸೋಮವಾರ ಬೆಳಿಗ್ಗೆ ಅಪಘಾತ ಸಂಭವಿಸಿದ್ದು, ಬೈಲಹೊಂಗಲ ಕ್ಷೇತ್ರದ ಕಾಂಗ್ರೆಸ್ ಶಾಸಕ ಮಹಾಂತೇಶ್ ಕೌಜಲಗಿ ಅವರ ಕಾರು ಭಾಗಶಃ ಜಖಂಗೊಂಡಿದೆ.

'ಬೆಳಿಗ್ಗೆ 9.30 ಗಂಟೆ ಸುಮಾರಿಗೆ ಎರಡು ಕಾರುಗಳ ನಡುವೆ ಡಿಕ್ಕಿಯಾಗಿ ಅಪಘಾತ ಸಂಭವಿಸಿದೆ. ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ಶಾಸಕ ಮಹಾಂತೇಶ್ ಅಪಾಯದಿಂದ ಪಾರಾಗಿದ್ದಾರೆ' ಎಂದು ಕಬ್ಬನ್ ಪಾರ್ಕ್ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಮಹಾಂತೇಶ್ ಅವರು ಕಾರಿನಲ್ಲಿ ವಿಧಾನಸೌಧದಿಂದ ಅಂಬೇಡ್ಕರ್ ರಸ್ತೆಗೆ ಬಂದಿದ್ದರು. ಸರ್ಜಾಪುರದ ಅಜಯ್ ಎಂಬುವವರು ಇದೇ ಮಾರ್ಗದಲ್ಲಿ ಕಾರಿನಲ್ಲಿ ಹೊರಟಿದ್ದರು. ಅಜಯ್ ಅತೀ ವೇಗದಲ್ಲಿ ಕಾರು ಚಲಾಯಿಸಿದ್ದರು. ಅವರ ಕಾರು, ಶಾಸಕರ ಕಾರಿಗೆ ಡಿಕ್ಕಿ ಹೊಡೆದಿತ್ತು. ಇದರಿಂದಾಗಿ ಎರಡೂ ಕಾರುಗಳು ಭಾಗಶಃ ಜಖಂಗೊಂಡವು' ಎಂದರು.

'ಅಪಘಾತಕ್ಕೆ ಕಾರಣ ಎನ್ನಲಾದ ಅಜಯ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಈತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗು-ತ್ತಿದೆ. ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಶಾಸಕ ಮಹಾಂತೇಶ್ ಕೌಜಲಗಿ, 'ಸಣ್ಣ ಪ್ರಮಾಣದಲ್ಲಿ ಅಪಘಾತವಾಗಿದ್ದು, ನಾನು ಆರೋಗ್ಯವಾಗಿದ್ದೇನೆ. ಕುಟುಂಬಸ್ಥರು ಹಾಗೂ ಕ್ಷೇತ್ರದ ಜನತೆ ಭಯ ಪಡುವ ಅವಶ್ಯಕತೆ ಇಲ್ಲ. ಚೇತರಿಸಿಕೊಂಡ ಬಳಿಕ ಕ್ಷೇತ್ರಕ್ಕೆ ಬರುವೆ' ಎಂದಿದ್ದಾರೆ.

ಶಾಪಿಂಗ್ ಮಾಲ್ ಆಗಿ ಬಿಡಿಎ ಕಾಂಪ್ಲೆಕ್ಸ್: ಎಎಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿರುವ ಬಿಡಿಎ ಕಾಂಪ್ಲೆಕ್ಸ್‌ಗಳನ್ನು ತೆರವುಗೊಳಿಸಿ, ಆ ಸ್ಥಳದಲ್ಲಿ ಶಾಪಿಂಗ್ ಮಾಲ್ ನಿರ್ಮಿಸಲಾ-ಗುತ್ತಿದೆ' ಎಂದು ಆರೋಪಿಸಿರುವ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಹಾಗೂ ಸ್ಥಳೀಯರು ಬಿಡಿಎ ಕ್ರಮ ಖಂಡಿಸಿ ಕೋರಮಂಗಲದ ಬಿಡಿಎ ಕಾಂಪ್ಲೆಕ್ಸ್ ಬಳಿ ಸೋಮವಾರ ಪ್ರತಿಭಟಿಸಿದರು.

ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಸೆರಾವು ನೇತೃತ್ವದಲ್ಲಿ ಕೋರಮಂಗಲದ ಬಿ.ಡಿ.ಎ ಕಾಂಪ್ಲೆಕ್ಸ್ ಬಳಿ ಪ್ರತಿಭಟನೆ ನಡೆಯಿತು. ಸರ್ಕಾರದ ತೀರ್ಮಾನಕ್ಕೆ ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

'ಹಳೇ ಯೋಜನೆಗೆ ಸರ್ಕಾರ ಈಗ ಮರುಜೀವ ನೀಡಲು ಮುಂದಾಗಿದೆ. ಬಿಡಿಎಗೆ ಸೇರಿದ ಏಳು ಕಾಂಪ್ಲೆಕ್ಸ್‌ಗಳನ್ನು ಶಾಪಿಂಗ್ ಮಾಲ್‌ಗಳಾಗಿ ಪರಿವರ್ತಿಸಲು ಮುಂದಾಗಿದೆ' ಎಂದು ಕಾರ್ಯಕರ್ತರು ಆಪಾದಿಸಿದರು.

ಪ್ರತಿಭಟನೆ ವೇಳೆ ವೀಣಾ ಸೆರಾವು ಮಾತನಾಡಿ, 'ಯಶಸ್ವಿಯಾಗಿ ನಡೆಯುತ್ತಿರುವ ಬಿಡಿಎ ಕಾಂಪ್ಲೆಕ್ಸ್ ಅನ್ನು ತೆರವು ಮಾಡುತ್ತಿರುವ ಕ್ರಮ ಸರಿಯಲ್ಲ. ಈಗಾಗಲೇ ಸಾಕಷ್ಟು ಸಂಚಾರ ದಟ್ಟಣೆಯಿಂದ ಸಾರ್ವಜನಿಕ-ರಿಗೆ ಕಿರಿಕಿರಿ ಉಂಟಾಗುತ್ತಿದೆ. ಶಾಪಿಂಗ್ ಮಾಲ್ ನಿರ್ಮಿಸಿದರೆ ಸಮಸ್ಯೆ ಮತ್ತಷ್ಟು ಹೆಚ್ಚಲಿದೆ. ಈ ಪ್ರದೇಶಕ್ಕೆ ಸರಿಯಾದ ಮೇಲ್ಸೇತುವೆ ಮತ್ತು ಮೆಟ್ರೊ ಸಂಪರ್ಕ ಸಹ ಇರುವುದಿಲ್ಲ. ಸರ್ಕಾರಿ ಆಸ್ತಿಯನ್ನು ಖಾಸಗೀಕರಣ ಮಾಡುತ್ತಿರುವ ನಿರ್ಧಾರ ಸರಿಯಲ್ಲ. ಸ್ಥಳದಲ್ಲಿದ್ದ ಮರಗಳನ್ನು ಕಡಿಯಲಾಗಿದೆ' ಎಂದು ಆಪಾದಿಸಿದದರು.

'ಖಾಸಗೀಕರಣ ಮಾಡಿ ಅದರಿಂದ ಲಾಭ ಪಡೆಯುವ ಉದ್ದೇಶ ಸರಿಯಲ್ಲ. ಬ್ರ್ಯಾಂಡ್ ಬೆಂಗಳೂರು ಅಂದರೆ ಖಾಸಗೀಕರಣವೇ? ಶಾಪಿಂಗ್ ಮಾಲ್‌ನಿಂದ ಸಾರ್ವಜನಿಕರಿಗೆ ಯಾವುದೇ ಪ್ರಯೋಜನ ಇಲ್ಲ. ಬಿಡಿಎ ಕಾಂಪ್ಲೆಕ್ಸ್‌ಗಳನ್ನು ತೆರವು ಮಾಡಲು ಬಿಡುವುದಿಲ್ಲ' ಎಂದು ಎಚ್ಚರಿಸಿದರು.

ಆಮ್ ಆದ್ಮಿ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ ಮಾತನಾಡಿ, 'ಬಿಡಿಎ ಕಾಂಪ್ಲೆಕ್ಸ್ ಕಟ್ಟಡದ ಕೆಳಭಾಗದಲ್ಲಿ ಹಲವು ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಹೀಗಿದ್ದರೂ, ಮೇಲ್ಭಾಗದಲ್ಲಿ ಕಟ್ಟಡವನ್ನು ತೆರವು ಮಾಡಲು ಮುಂದಾಗಿದ್ದಾರೆ. ನಮ್ಮ ಹೋರಾಟದ ಬಳಿಕ ತೆರವು ಕಾರ್ಯಾಚರಣೆ ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಸದ್ಯಕ್ಕೆ ಹೋರಾಟವನ್ನು ನಿಲ್ಲಿಸುತ್ತೇವೆ. ತೆರವು ಮುಂದುವರಿದರೆ ಮತ್ತೆ ಹೋರಾಟ ನಡೆಸುತ್ತೇವೆ' ಎಂದು ಎಚ್ಚರಿಕೆ ನೀಡಿದರು.

ನಗರ ಮಾಧ್ಯಮ ಉಸ್ತುವಾರಿ ಅನಿಲ್ ನಾಚಪ್ಪ ಮಾತನಾಡಿ, 'ಕಾಂಪ್ಲೆಕ್ಸ್‌ಗಳನ್ನು ಶಾಪಿಂಗ್ ಮಾಲ್‌ಗಳನ್ನಾಗಿ ಪರಿವರ್ತಿಸಲು 60 ವರ್ಷಗಳಿಗೆ ಒಪ್ಪಂದ ಮಾಡಿಕೊಳ್ಳ-ಲಾಗಿದೆ. ಪ್ರತಿವರ್ಷ ಬಿಡಿಎಗೆ ₹40 ಕೋಟಿಗೂ ಅಧಿಕ ಆದಾಯ ಬರಲಿದೆ ಎನ್ನಲಾಗಿದೆ. ಕಳೆದ ಸೆಪ್ಟೆಂಬರ್‌ನಲ್ಲಿ ಈ ಯೋಜನೆಯ ಒಪ್ಪಂದಕ್ಕೆ ರಾಜ್ಯ ಸರ್ಕಾರ ಅನುಮತಿ ನೀಡಿದೆ. ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್, ಆರ್‌ಟಿ ನಗರ ಮತ್ತು ಸದಾಶಿವನಗರದಲ್ಲಿ ಇರುವ ಬಿಡಿಎ ಕಾಂಪ್ಲೆಕ್ಸ್‌ಗಳನ್ನು ಸಂಸ್ಥೆಯೊಂದಕ್ಕೆ ಬಿಡಿಎ ಗುತ್ತಿಗೆ ನೀಡಿದೆ' ಎಂದು ಆಪಾದಿಸಿದರು.



ಬಿಡಿಎ ಕಾಂಪ್ಲೆಕ್ಸ್ ತೆರವು ಕ್ರಮ ಖಂಡಿಸಿ ಕೋರಮಂಗಲದಲ್ಲಿ ಸೋಮವಾರ ಎಎಪಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

'ಮ.ರಾಮಮೂರ್ತಿ ದತ್ತಿ ಪ್ರಶಸ್ತಿಗೆ' ಜೆ.ಹುಚ್ಚಪ್ಪ ಆಯ್ಕೆ



ಜೆ. ಹುಚ್ಚಪ್ಪ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ 2024ರ 'ಕನ್ನಡ ಚಳವಳಿ ವೀರ ಸೇನಾನಿ ಮ.ರಾಮಮೂರ್ತಿ ದತ್ತಿ ಪ್ರಶಸ್ತಿ'ಗೆ ಕನ್ನಡ ಹೋರಾಟಗಾರ ಜೆ.ಹುಚ್ಚಪ್ಪ ಆಯ್ಕೆಯಾಗಿದ್ದಾರೆ. ದತ್ತಿ ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ.

ನಗರ ಪಾಲಿಕೆ ಸದಸ್ಯರಾಗಿ, ಮೇಯರ್ ಆಗಿ ಸೇವೆ ಸಲ್ಲಿಸಿರುವ ಜೆ.ಹುಚ್ಚಪ್ಪನವರು ಕನ್ನಡಪರ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದವರು. ಹಲವು ಪ್ರಮುಖ ಕನ್ನಡ ಕಾರ್ಯಕ್ರಮಗಳನ್ನು ಆಯೋಜಿಸಿರುವ ಅವರು ಕನ್ನಡಪರ ಸಾಧಕರನ್ನು ಗುರುತಿಸುವಲ್ಲಿ ಮುಖ್ಯ ಪಾತ್ರವಹಿಸಿದ್ದರು. ನಾಡು-ನುಡಿಯ ವಿಚಾರಗಳ ಹೋರಾಟಗಳಲ್ಲಿ ಸದಾ ಮುಂದಾಳತ್ವ ವಹಿಸುವ ಅವರು ಸಾಮಾಜಿಕ ಚಳವಳಿಗಳಲ್ಲಿ ಕೂಡ ತಮ್ಮನ್ನು ತೊಡಗಿಸಿಕೊಂಡವರು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.



ನಗರದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವೀರಲೋಕ ಪ್ರಕಾಶನ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಏಳು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಪ್ರಕಾಶಕ ವೀರಕಪುತ್ರ ಶ್ರೀನಿವಾಸ್, ಕಥೆಗಾರ ಶಿವಕುಮಾರ್ ಮಾವಲಿ, ಲೇಖಕರಾದ ಸಂಧ್ಯಾ ರಾಣಿ, ಕೌಂಡಿನ್ಯ ನಾಗೇಶ್, ಜೋಗಿ ಮತ್ತು ಕೃಷಿ ವಿಜ್ಞಾನಿ ಕೆ.ಎನ್. ಗಣೇಶಯ್ಯ ಭಾಗವಹಿಸಿದ್ದರು.

ದೇವನಹಳ್ಳಿ ವಿಮಾನ ನಿಲ್ದಾಣ: ಟ್ಯಾಕ್ಸಿ ಚಾಲಕರ ಆಕ್ರೋಶ

ಏರ್‌ಪೋರ್ಟ್ ಪಿಕ್‌ಅಪ್‌ಗೆ ₹150 ಶುಲ್ಕ!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತ-ರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಯಾಣಿಕರನ್ನು ಆಗಮನ ದ್ವಾರದ (ಅರೈವಲ್ ಗೇಟ್) ಬಳಿ ಹತ್ತಿಸಿಕೊಳ್ಳುವ ಟ್ಯಾಕ್ಸಿಗಳ ಚಾಲಕರು ಸೋಮವಾರ ಮಧ್ಯಾಹ್ನದಿಂದ ₹150 ಶುಲ್ಕ ಪಾವತಿಸಬೇಕಿದೆ.

ಇದಕ್ಕಾಗಿಯೇ ಬೆಂಗಳೂರು ಏರ್‌ಪೋರ್ಟ್ ಪ್ರಾಧಿಕಾರವು ಪಿಕ್‌ಅಪ್ ಪಾಯಿಂಟ್‌ನ ನಾಲ್ಕು ಪಥಗಳಲ್ಲಿಯೂ ಶುಲ್ಕ ಸಂಗ್ರಹ ಕೇಂದ್ರಗಳನ್ನು ಆರಂಭಿಸಿದೆ. ಟ್ಯಾಕ್ಸಿ ಹಾಗೂ ಇತರ ಪಿಕ್‌ಅಪ್ ವಾಹನಗಳ ಫಾಸ್ಟ್ಯಾಗ್‌ನಿಂದಲೇ ಪಿಕ್‌ಅಪ್ ಶುಲ್ಕವನ್ನು ನೇರವಾಗಿ ಕಡಿತ ಮಾಡಲಾಗುತ್ತದೆ.

₹150 ಶುಲ್ಕ ಪಾವತಿಸುವ ಟ್ಯಾಕ್ಸಿ ಚಾಲಕರು ಏಳು ನಿಮಿಷ ಮಾತ್ರ ಪಿಕ್ ಅಪ್ ಪಾಯಿಂಟ್‌ನಲ್ಲಿ ಕಾಯಬಹುದು. ಒಂದು ವೇಳೆ ತಡವಾದರೆ ಪ್ರತಿ ಏಳು ನಿಮಿಷಕ್ಕೆ ಹೆಚ್ಚುವರಿಯಾಗಿ ₹150 ಹಣ ಪಾವತಿಸಬೇಕು.

ಈ ನಿಯಮ ಹಳದಿ ಸಂಖ್ಯಾ ಫಲಕ (ಯೆಲ್ಲೊ ಬೋರ್ಡ್) ಇರುವ ಟ್ಯಾಕ್ಸಿಗಳಿಗೆ ಮಾತ್ರ ಅನ್ವಯಿಸಲಿದೆ. ಬಿಳಿ ಸಂಖ್ಯಾ ಫಲಕ (ವೈಟ್ ಬೋರ್ಡ್) ಇರುವ ಸ್ವಂತ ಕಾರುಗಳಿಗೆ ಮೊದಲ ಏಳು ನಿಮಿಷ ಉಚಿತವಾಗಿದ್ದು, ಯಾವುದೇ ಶುಲ್ಕ ಪಾವತಿಸದೇ ಪ್ರಯಾಣಿಕರನ್ನು ಪಿಕ್ ಮಾಡಬಹುದಾಗಿದೆ.

ಹೊಸ ನಿಯಮದಿಂದಾಗಿ ಸೋಮವಾರ ಪ್ರಯಾಣಿಕರನ್ನು ಹತ್ತಿಸಿಕೊಂಡು ಹೋಗಲು ಪಿಕ್ ಅಪ್ ಪಾಯಿಂಟ್‌ಗೆ ಬಂದ ಟ್ಯಾಕ್ಸಿ ಚಾಲಕರು 'ಯಾವುದೇ ಕಾರಣಕ್ಕೂ ₹150 ಶುಲ್ಕ ಪಾವತಿ ಮಾಡುವುದಿಲ್ಲ, ನಮ್ಮನ್ನು ವಾಪಸ್ ಹೋಗಲು ಅನುವು ಮಾಡಿಕೊಡಿ' ಎಂದು ಅಲ್ಲಿದ್ದ ಸಿಬ್ಬಂದಿಯೊಂದಿಗೆ ವಾಗ್ವಾದಕ್ಕಿಳಿದರು.

'ಮುಂಬೈ, ದೆಹಲಿ, ಚೆನ್ನೈ ಸೇರಿದಂತೆ ಎಲ್ಲಾ ಪ್ರಮುಖ ವಿಮಾನ ನಿಲ್ದಾಣಗಳಲ್ಲಿಯೂ ಪಿಕ್ ಅಪ್ ಶುಲ್ಕ ವಿಧಿಸುತ್ತಿದ್ದಾರೆ. ಇಂದಿನಿಂದ ಬೆಂಗ-ಳೂರಿನಲ್ಲಿಯೂ ಪ್ರಾರಂಭಿಸಿದ್ದೇವೆ' ಎಂದು ವಿಮಾನ ನಿಲ್ದಾಣದ ಸಿಬ್ಬಂದಿ ಮನವೊಲಿಸಲು ಯತ್ನಿಸಿದರು.

ಇದರಿಂದ ಮತ್ತಷ್ಟು ಕೆರಳಿದ ಟ್ಯಾಕ್ಸಿ ಚಾಲಕರ ಗುಂಪು, 'ಯಾವುದೇ ಕಾರಣಕ್ಕೂ ಪಿಕ್ ಅಪ್ ಶುಲ್ಕ ಕಟ್ಟುವುದಿಲ್ಲ. ಚಾಲಕರಿಗಾಗಿ ಯಾವುದೇ ರೀತಿಯ ಮೂಲಸೌಲಭ್ಯಗಳನ್ನು ವಿಮಾನ ನಿಲ್ದಾಣ ಮಾಡಿಲ್ಲ. ಯಾವ ಉದ್ದೇಶಕ್ಕೆ ಹಣ ಕಟ್ಟಬೇಕು ತಿಳಿಸಿ' ಎಂದು ಪಟ್ಟುಹಿಡಿದರು.

ಪಿಕ್‌ಅಪ್ ಶುಲ್ಕ ರದ್ದು ಮಾಡುವಂತೆ ಒತ್ತಾಯಿಸಿ ವಿವಿಧ ಟ್ಯಾಕ್ಸಿ ಚಾಲಕರ ಸಂಘಟನೆಗಳ ಸದಸ್ಯರು ಮೇ 22ರಂದು ವಿಮಾನ ನಿಲ್ದಾಣ ಬಳಿಯ ಗಾಳಮ್ಮ ಸರ್ಕಲ್‌ನಿಂದ ವಿಮಾನ ನಿಲ್ದಾಣದವರೆಗೂ ಪ್ರತಿಭಟನಾ ಕಾಲ್ನಡಿಗೆ ಜಾಥಾ ನಡೆಸಲು ತೀರ್ಮಾನಿಸಿದ್ದಾರೆ.

'ಮೊದಲ ಏಳು ನಿಮಿಷ ಉಚಿತ ಇರಲಿ'

ಪ್ರಯಾಣಿಕರನ್ನು ಹತ್ತಿಸಿಕೊಂಡು ಹೋಗಲು ಬರುವ ವೈಟ್ ಬೋರ್ಡ್ ಕಾರುಗಳಿಗೆ ಮೊದಲ ಏಳು ನಿಮಿಷ ಪಿಕ್ ಅಪ್ ಶುಲ್ಕ ಇರುವುದಿಲ್ಲ. ಅದೇ ರೀತಿ ಇತರ ಟ್ಯಾಕ್ಸಿಗಳಿಗೂ ಮೊದಲ ಏಳು ನಿಮಿಷ ಶುಲ್ಕರಹಿತವಾಗಿರಲಿ ಎಂದು ಚಾಲಕರು 'ಪ್ರಜಾವಾಣಿ'ಗೆ ತಿಳಿಸಿದರು.

ಬೆಂಗಳೂರಿನಿಂದ ಏರ್‌ಪೋರ್ಟ್‌ಗೆ ಬರಲು ಹೆದ್ದಾರಿಯಲ್ಲಿ ₹110 ಟೋಲ್ ಶುಲ್ಕ ನೀಡಬೇಕು. ಏರ್ ಪೋರ್ಟ್‌ನಲ್ಲಿ ₹150 ಪಿಕ್ ಅಪ್ ಶುಲ್ಕ ವಿಧಿಸಿದರೇ ಹೇಗೆ? ವರ್ಷಕೊಮ್ಮೆ ರೋಡ್ ಟ್ಯಾಕ್ಸ್, ಎಫ್.ಸಿ ಎಲ್ಲಾ ಕಟ್ಟಿ ದುಬಾರಿ ಡೀಸೆಲ್ ಬೆಲೆಯಲ್ಲಿ ಗ್ರಾಹಕರಿಗೆ ಸೇವೆ ನೀಡುವುದು ಅಸಾಧ್ಯ ಎಂದರು.



ವರ್ಷ ತುಂಬಿದ ಸರ್ಕಾರ: 'ಕೈ'–'ಕಮಲ' ವಾಕ್ಸಮರ

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ಒಂದು ವರ್ಷವಾಗಿದೆ. ಸರ್ಕಾರ ಮಾಡಿರುವ ಕೆಲಸಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥಿಸಿಕೊಂಡಿದ್ದಾರೆ. ಗ್ಯಾರಂಟಿ ಯೋಜನೆಗಳು ನಿಲ್ಲುವುದಿಲ್ಲ ಎಂಬ ಭರವಸೆ ಕೊಟ್ಟಿದ್ದಾರೆ. ಆದರೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. 'ಗ್ಯಾರಂಟಿ' ಹೆಸರಿನಲ್ಲಿ ಸರ್ಕಾರ ಲೂಟಿ ಮಾಡಿದೆ ಎಂದಿದ್ದಾರೆ

ಗ್ಯಾರಂಟಿಗಳು ನಿಲ್ಲುವುದಿಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳು ಸ್ಥಗಿತಗೊಳ್ಳುವುದಿಲ್ಲ. ಯಥಾಸ್ಥಿತಿಯಲ್ಲಿ ಮುಂದುವರಿಯಲಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಒಂದು ವರ್ಷ ಪೂರ್ಣಗೊಳಿಸಿರುವ ಪ್ರಯುಕ್ತ ಬೆಂಗಳೂರು ಪ್ರೆಸ್ ಕ್ಲಬ್ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಅವರು ಸೋಮವಾರ ಮಾತನಾಡಿದರು.

'ಐದು ಗ್ಯಾರಂಟಿ ಯೋಜನೆಗಳ ಲಾಭವನ್ನು ರಾಜ್ಯದ 4.60 ಕೋಟಿ ಜನರು ಪಡೆಯುತ್ತಿದ್ದಾರೆ. ಮೊದಲ ವರ್ಷ ಗ್ಯಾರಂಟಿ ಯೋಜನೆಗಳಿಗಾಗಿ ₹32,000 ಕೋಟಿ ವೆಚ್ಚ ಮಾಡಲಾಗಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಗ್ಯಾರಂಟಿ ಯೋಜನೆಗಳಿಗೆ ₹52,000 ಕೋಟಿ ಮೀಸಲಿಟ್ಟಿದ್ದೇವೆ' ಎಂದು ಅಂಕಿಅಂಶ ನೀಡಿದರು.

'ಲೋಕಸಭಾ ಚುನಾವಣೆ ಬಳಿಕ ಗ್ಯಾರಂಟಿ ಯೋಜನೆಗಳು ಸ್ಥಗಿತಗೊಳ್ಳಲಿವೆ ಎಂದು ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ. ಜನರು ಅವರ ಮಾತನ್ನು ನಂಬಬಾರದು' ಎಂದು ಸಿದ್ದರಾಮಯ್ಯ ಹೇಳಿದರು.

ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಅಭಿವೃದ್ಧಿಗೆ ಹಿನ್ನಡೆ ಆಗಿದೆ ಎಂಬ ಬಿಜೆಪಿಯ ಆರೋಪದಲ್ಲಿ ಹುರುಳಿಲ್ಲ. ಬಿಜೆಪಿ ಸರ್ಕಾರದ ಅವಧಿಗೆ ಹೋಲಿಸಿದರೆ ತಮ್ಮ ಸರ್ಕಾರದ ಅವಧಿಯಲ್ಲಿ ರಾಜ್ಯದ ಬಜೆಟ್ ಮೊತ್ತದಲ್ಲಿ ಅಭಿವೃದ್ಧಿ ವೆಚ್ಚ ಹೆಚ್ಚಳವಾಗಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರಿಗೆ ಆರ್ಥಿಕ ವಿಚಾರ ಅರ್ಥವಾಗುವುದಿಲ್ಲ ಎಂದರು.


ಹೋರಾಟ ಮುಂದುವರಿಯಲಿದೆ: ಕೇಂದ್ರ ಸರ್ಕಾರವು ತೆರಿಗೆ ಪಾಲು ಮತ್ತು ಅನುದಾನದ ಹಂಚಿಕೆಯಲ್ಲಿ ರಾಜ್ಯಕ್ಕೆ ನ್ಯಾಯ ಒದಗಿಸಿಲ್ಲ. ಇದರಿಂದಾಗಿ ಆರ್ಥಿಕವಾಗಿ ರಾಜ್ಯಕ್ಕೆ ತೊಂದರೆಯಾಗಿದೆ. ತೆರಿಗೆ ಪಾಲು ಮತ್ತು ಅನುದಾನ ಹಂಚಿಕೆಯಲ್ಲಿ ನ್ಯಾಯ ಪಡೆಯಲು ರಾಜ್ಯ ಸರ್ಕಾರ ಹೋರಾಟ ಮುಂದುವರಿಸಲಿದೆ ಎಂದು ಮುಖ್ಯಮಂತ್ರಿ ಹೇಳಿದರು.

ಹಿಂದುಳಿದ ವರ್ಗಗಳ ಆಯೋಗವು ನಡೆಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ವರದಿಯನ್ನು ಸರ್ಕಾರ ಸ್ವೀಕರಿಸಿದೆ. ಸಂಪುಟ ಸಭೆಯಲ್ಲಿ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳ-ಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಕಸಿದು ಮುಸ್ಲಿಮರಿಗೆ ನೀಡಲು ಕಾಂಗ್ರೆಸ್ ಹೊರಟಿದೆ ಎಂಬ ಆರೋಪವನ್ನು ಬಿಜೆಪಿ ನಾಯಕರು ಮಾಡಿದ್ದಾರೆ. ಅವರ ಆರೋಪ ಸಂಪೂರ್ಣ ನಿರಾಧಾರ. ಮುಸ್ಲಿಮರಿಗೆ 30 ವರ್ಷಗಳಿಂದ ಮೀಸಲಾತಿ ಇದೆ. ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಕೇಂದ್ರ ಸರ್ಕಾರ ಶೇ 10ರಷ್ಟು ಮೀಸಲಾತಿ ನೀಡಿದೆ. ಆ ಬಳಿಕ ದೇಶದಲ್ಲಿ ಮೀಸಲಾತಿ ಇಲ್ಲದವರು ಯಾರಿದ್ದಾರೆ ಎಂದು ಪ್ರಶ್ನಿಸಿದರು.

'ಕಾನೂನು ಸುವ್ಯವಸ್ಥೆ ಕುಸಿದಿಲ್ಲ'

'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿಲ್ಲ. ಹುಬ್ಬಳ್ಳಿ, ಧಾರವಾಡ ನಗರಗಳಲ್ಲಿ ನಡೆದಿರುವ ಯುವತಿಯರ ಕೊಲೆ ಪ್ರಕರಣಗಳ ಆಧಾರದಲ್ಲಿ ಅಂತಹ ಅಭಿಪ್ರಾಯಕ್ಕೆ ಬರುವುದು ಸರಿಯಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.ಈ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, '2021ರಲ್ಲಿ ಇದೇ ಅವಧಿಯಲ್ಲಿ ರಾಜ್ಯದಲ್ಲಿ 449 ಕೊಲೆಗಳಾಗಿ-ದ್ದವು. 2022ರಲ್ಲಿ 466, 2023ರಲ್ಲಿ 446 ಕೊಲೆಗಳಾಗಿದ್ದರೆ, 2024ರಲ್ಲಿ 430 ಕೊಲೆಗಳಾಗಿವೆ. ಅಂಕಿಅಂಶಗಳ ಪ್ರಕಾರ, ಈ ವರ್ಷ ಕೊಲೆ ಪ್ರಕರಣಗಳ ಸಂಖ್ಯೆ ಕಡಿಮೆ ಇದೆ' ಎಂದರು.



'ಗ್ಯಾರಂಟಿ ಹೆಸರಲ್ಲಿ ಸರ್ಕಾರದಿಂದ ರಾಜ್ಯದ ತೆರಿಗೆದಾರರ ಹಣ ಲೂಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಯಾರಂಟಿ' ಹೆಸರಿನಲ್ಲಿ ರಾಜ್ಯದ ತೆರಿಗೆದಾರರ ಹಣವನ್ನು ಲೂಟಿ ಮಾಡಿದ್ದು, ಒಂದೇ ಒಂದು ಅಭಿವೃದ್ಧಿ ಕೆಲಸ ಮಾಡದೇ ಕಾಲ ಹರಣ ಮಾಡಿದ್ದೇ ಸಿದ್ದರಾಮಯ್ಯ ಸರ್ಕಾರದ ಒಂದು ವರ್ಷದ ಸಾಧನೆ. ಹೆಣ್ಣು ಮಕ್ಕಳ ಸರಣಿ ಕೊಲೆ ಈ ಸರ್ಕಾರದ ಸಾಧನೆಗೆ ಮತ್ತೊಂದು ಕೈಗನ್ನಡಿ ಎಂದು ಬಿಜೆಪಿ ವಾಗ್ದಾಳಿ ನಡೆಸಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಅವರು ಸಿದ್ದರಾಮಯ್ಯ ಸರ್ಕಾರಕ್ಕೆ ಒಂದು ವರ್ಷ ತುಂಬಿದ ಸಂದರ್ಭದಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.

'ಕಾಂಗ್ರೆಸ್ ಸರ್ಕಾರ ಕೇವಲ ಒಂದು ವರ್ಷದಲ್ಲಿ ಖಜಾನೆಯನ್ನು ಸಂಪೂರ್ಣ ಖಾಲಿ ಮಾಡಿದೆ. ರಾಜ್ಯ ಕೊಲೆಗಡುಕರ ಸ್ವರ್ಗವಾಗಿ ಬದಲಾಗಿದೆ. ಶೂನ್ಯ ಸಾಧನೆ ಮಾಡಿರುವ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಬೇಕು; ಇಲ್ಲವೇ ರಾಜ್ಯಪಾಲರು ಈ ಸರ್ಕಾರವನ್ನು ವಜಾ ಮಾಡಬೇಕು' ಎಂದು ಆಗ್ರಹಿಸಿದರು.

ಬಿ.ವೈ.ವಿಜಯೇಂದ್ರ ಮಾತನಾಡಿ, ಆರ್ಥಿಕವಾಗಿ ಸಮೃದ್ಧವಾಗಿದ್ದ ರಾಜ್ಯವನ್ನು ಗ್ಯಾರಂಟಿ ಹೆಸರಿನಲ್ಲಿ ದಿವಾಳಿ ಅಂಚಿಗೆ ತಂದು ನಿಲ್ಲಿಸಿದ್ದಾರೆ. ಕಳೆದ ಒಂದು ವರ್ಷದಲ್ಲಿ ಒಂದೇ ಒಂದು ಅಭಿವೃದ್ಧಿ ಕಾರ್ಯಕ್ಕೂ ಚಾಲನೆ ನೀಡಿಲ್ಲ, ಗುದ್ದಲಿ ಪೂಜೆ ನಡೆಸಿದ ಉದಾಹರಣೆ ಇಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಗ್ಯಾರಂಟಿ ಕೊಡುವುದನ್ನೇ ಅಭಿವೃದ್ಧಿ ಎಂಬಂತೆ ಬಿಂಬಿಸಲಾಗುತ್ತಿದೆ. ಇದಕ್ಕಾಗಿ ಹಣ ಕೊಟ್ಟು ವ್ಯಾಪಕ ಪ್ರಚಾರ ನೀಡಲಾಗುತ್ತಿದೆ. ಆ ಮೂಲಕ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಆಗಿದೆ ಎಂದು ಭ್ರಮೆ ಹುಟ್ಟಿಸುವ ಪ್ರಯತ್ನ ಸರ್ಕಾರ ಮಾಡಿದೆ ಎಂದರು.

ಯಾತಕ್ಕಾಗಿ ಧನ್ಯವಾದ?: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸರ್ಕಾರದ ಅವಧಿ ಮುಗಿಯಿತೆಂಬ ಕಾರಣಕ್ಕೆ ಜನರಿಗೆ ಧನ್ಯವಾದ ತಿಳಿಸಿದ್ದಾರೆಯೋ ಅಥವಾ ಕಾನೂನು ಸುವ್ಯವಸ್ಥೆ ಹಾಳು ಮಾಡಿರುವ ಕೊಲೆಗಡುಕರಿಗೆ ಧನ್ಯವಾದ ಹೇಳಿದ್ದಾರೆಯೋ ಗೊತ್ತಿಲ್ಲ. ನೇಹಾ, ಅಂಜಲಿ ಕೊಲೆಯಾದರು. ಇನ್ನು ಯಾವ ಹೆಣ್ಣು ಮಕ್ಕಳ ಕೊಲೆಯಾಗುತ್ತದೆ ಎಂಬ ಆತಂಕವಿದೆ. ಹೆಣ್ಣು ಮಕ್ಕಳು ಕಾಲೇಜಿಗೆ ಹೋದರೆ ಗ್ಯಾರಂಟಿ ಇಲ್ಲ. ಮನೆಯಿಂದ ಹೊರಬಂದರೆ ಗ್ಯಾರಂಟಿ ಇಲ್ಲ. ಸರ್ಕಾರ ಎಷ್ಟು ಉಚಿತ ನೀಡಿದರೂ ಜನಕ್ಕೆ ಬದುಕುವ ಗ್ಯಾರಂಟಿಯೇ ಇಲ್ಲ ಎಂದು ಅಶೋಕ ಕಿಡಿಕಾರಿದರು.

₹300, ₹500 ಬರ ಪರಿಹಾರವೇ?

ಬರ ಪರಿಹಾರದ ಹೆಸರಿನಲ್ಲಿ ₹300, ₹500, ₹600 ನಂತೆ ಪರಿಹಾರ ಕೊಟ್ಟಿದ್ದಾರೆ. ಈ ಸರ್ಕಾರಕ್ಕೆ ಮಾನ ಮರ್ಯಾದೆ ಬೇಡ್ವಾ? ರೈತರಿಗೆ ಬೆಲೆ ಇಲ್ವಾ? ಇನ್ನೂ 2 ಲಕ್ಷ ರೈತರಿಗೆ ಪರಿಹಾರ ಕೊಟ್ಟಿಲ್ಲ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ, ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಕೇಂದ್ರ ಸರ್ಕಾರ ಹಿಂದೆಂದೂ ಕೊಡದಷ್ಟು ಪ್ರಮಾಣದಲ್ಲಿ ಪರಿಹಾರ ನೀಡಿದೆ. ರಾಜ್ಯ ಸರ್ಕಾರ ತನ್ನ ಪಾಲಿನ ಹಣವನ್ನು ಎಷ್ಟು ನೀಡಿದೆ? ಇಲ್ಲಿರುವವರು ಕರ್ನಾಟಕದ ರೈತರೇ ಹೊರತು ಗುಜರಾತ್, ಪಶ್ಚಿಮ ಬಂಗಾಳದ ರೈತರಲ್ಲ ಎಂದರು.

ಈ ಬಾರಿ ಎಸ್ಎಸ್ಎಲ್‌ಸಿ-ಯಲ್ಲಿ 20 ಕೃಪಾಂಕ ನೀಡಿದ್ದಾರೆ. ಮುಂದಿನ ವರ್ಷ 100 ಕೃಪಾಂಕ ಕೊಟ್ಟರೂ ಅಚ್ಚರಿ ಇಲ್ಲ. 100 ಮಾರ್ಕ್ಸ್ ಕೂಡಾ ಫ್ರೀ ಆಗಿ ನೀಡಬಹುದು. ಕಷ್ಟಪಟ್ಟು ಓದುವ ಮಕ್ಕಳ ಕಥೆ ಏನು? ಸಿಇಟಿ ವ್ಯವಸ್ಥೆಯನ್ನೂ ಹಾಳು ಮಾಡಿದ್ದಾರೆ' ಎಂದರು.



ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಬಿಜೆಪಿ ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ ಅವರು 'ರಾಜ್ಯ ಸರ್ಕಾರದ ಸಾಧನೆ ಶೂನ್ಯ' ಎಂಬ ಭಿತ್ತಿಪತ್ರ ಪ್ರದರ್ಶಿಸಿದರು.

'ಕರ್ನಾಟಕದಿಂದ ಯಾರೂ ಪ್ರಧಾನಿ ಆಗುವುದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಿಂದ ಯಾರೂ ಪ್ರಧಾನಿ ಆಗುವುದಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರು ಪ್ರೆಸ್‌ಕ್ಲಬ್ ಸೋಮವಾರ ಹಮ್ಮಿಕೊಂಡಿದ್ದ ಮಾಧ್ಯಮ ಸಂವಾದದಲ್ಲಿ ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

'ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಗಳ ಮಾದರಿ ಆಧಾರದಲ್ಲಿ ಇಂಡಿಯಾ ಮೈತ್ರಿಕೂಟ ಚುನಾವಣೆ ಎದುರಿಸುತ್ತಿರುವುದರಿಂದ ಬಹುಮತ ಬಂದರೆ ನೀವು ಪ್ರಧಾನಿ ಆಗುತ್ತೀರಾ' ಎಂದ ಪ್ರಶ್ನೆ ಮುಖ್ಯಮಂತ್ರಿಗೆ ಎದುರಾಯಿತು.

'ಬಹುಮತ ದೊರಕಿದರೆ ಇಂಡಿಯಾ ಮೈತ್ರಿಕೂಟ ಪ್ರಧಾನಿಯನ್ನು ನಿರ್ಧರಿಸುತ್ತದೆ. ಕರ್ನಾಟಕದಿಂದ ಯಾರೂ ಆಗುವುದಿಲ್ಲ' ಎಂದಷ್ಟೇ ಹೇಳಿದರು.

'ಸಂಪುಟ ಪುನರ್‌ರಚನೆ ಪ್ರಸ್ತಾವ ಸದ್ಯ ತಮ್ಮ ಮುಂದಿಲ್ಲ. ಆ ರೀತಿ ಯಾವುದೇ ಚರ್ಚೆಯೂ ನಡೆದಿಲ್ಲ. ನಮ್ಮದು ಹೈಕಮಾಂಡ್ ನಿರ್ಧಾರದಂತೆ ನಡೆಯುವ ಪಕ್ಷ. ಹೈಕಮಾಂಡ್ ಯಾವ ಸೂಚನೆ ನೀಡುತ್ತದೆಯೊ ಆ ರೀತಿ ಮಾಡುತ್ತೇವೆ' ಎಂದರು.

'ಸಿಎಸ್‌ಆರ್ ಸಂಕೇತದಡಿ ವರ್ಗಾವಣೆ ದಂಧೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ವರ್ಷ ಕಳೆದರೂ ವರ್ಗಾವಣೆ ದಂಧೆ ನಿಂತಿಲ್ಲ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್ ಫಂಡ್) ಸಂಕೇತ ಬಳಸಿಕೊಂಡು ವರ್ಗಾವಣೆ ದಂಧೆ ನಡೆಯುತ್ತಿದೆ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಸರ್ಕಾರದ ವರ್ಷಾಚರಣೆ ಸಂಭ್ರಮದ ಕುರಿತು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, 'ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ಸ್ಥಗಿತವಾಗಿವೆ. ಸಚಿವರು ಜಿಲ್ಲೆಗಳಿಗೆ ಭೇಟಿನೀಡಿ ಸಭೆ ನಡೆಸುತ್ತಿಲ್ಲ. ಎಲ್ಲರೂ ವರ್ಗಾವಣೆ ದಂಧೆಯಲ್ಲೇ ಮುಳುಗಿದ್ದಾರೆ' ಎಂದರು.

ರಾಜ್ಯ ಸರ್ಕಾರ ವರ್ಷದ ಸಂಭ್ರಮದಲ್ಲಿದೆ. ಆದರೆ, ಕೇಂದ್ರ ಸರ್ಕಾರ ರೈತರಿಗೆ ನೀಡಿರುವ ಬರ ಪರಿಹಾರದ ಹಣವನ್ನೂ ಬ್ಯಾಂಕ್‌ಗಳು ಸಾಲಕ್ಕೆ ಜಮಾ ಮಾಡಿಕೊಳ್ಳುತ್ತಿವೆ. ಸಂಕಷ್ಟ-ದಲ್ಲಿರುವ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅವರನ್ನು ಕೇಳುವವರೇ ಇಲ್ಲ. ಇದು ಈ ಸರ್ಕಾರದ ಕಾರ್ಯವೈಖರಿ ಎಂದು ಟೀಕಿಸಿದರು.

'ಗ್ಯಾರಂಟಿಗಳ ಹೆಸರಿನಲ್ಲಿ ಅಭಿವೃದ್ಧಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಅಧಿಕಾರಿಗಳು ಕಡತ ವಿಲೇವಾರಿಯನ್ನೂ ಮರೆತಿದ್ದಾರೆ. ರಾಜ್ಯದ ನೀರಾವರಿ ಯೋಜನೆಗಳ ಪ್ರಗತಿ ಕ್ಷೀಣಿಸಿದೆ. ಬೆಂಗಳೂರಿನಲ್ಲಿ ಮಳೆ ಬಂದರೆ ಮನೆಗಳಲ್ಲಿ ವಾಸಿಸಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಇದೇ ಈ ಸರ್ಕಾರದ ಸಾಧನೆ' ಎಂದರು.

RNI No KARBIL/2001/47147 POSTAL REGN. NO: RNP/KA/BGS/2202/2017-19 Licensed to Post without Prepayment WPP No.297

ಪ್ರಥಮ ಚಿಕಿತ್ಸೆಯ ಮೊದಲ ಪಾಠ

ಡಾ. ಕಿರಣ್ ವಿ. ಎಸ್.



ಮನೆಯಲ್ಲಿ ಏನಾದರೂ ಅಪಘಾತ, ಅವಘಡಗಳಾದಾಗ ಮೊದಲು ಗಾಬರಿಯಾಗುತ್ತದೆ; ದಿಕ್ಕು ತೋಚದಂತಾಗುತ್ತದೆ. ಆ ಸಮಯದಲ್ಲಿ ಪ್ರತಿಯೊಂದು ನಿಮಿಷವೂ ಅಮೂಲ್ಯ. ಕಣ್ಮುಂದೆ ಸಂಭವಿಸುವ ಅಪಘಾತಗಳನ್ನು ನಿಭಾಯಿಸಲು ಪೂರ್ವಸಿದ್ಧತೆ ಇಲ್ಲದಿದ್ದರೆ ಕೆಲವೊಮ್ಮೆ ಪರಿಣಾಮ ತೀವ್ರವಾಗಬಹುದು. ಆಪತ್ತಿನ ಸಮಯದಲ್ಲಿ ಮೊದಲು ಏನು ಮಾಡಬೇಕು ಎಂಬ ವಿವೇಚನೆಯನ್ನು ನೀಡುವುದು ಪ್ರಥಮ ಚಿಕಿತ್ಸೆ. ಕಾಯಿಲೆಯಾಗಲಿ, ಪೆಟ್ಟಾಗಲಿ – ಸಣ್ಣದೋ ಅಥವಾ ಗಂಭೀರವೋ, ನಿರ್ದಿಷ್ಟ ಚಿಕಿತ್ಸೆ ದೊರೆಯುವ ಮುನ್ನ ಪ್ರಥಮ ಚಿಕಿತ್ಸೆ ಎಂಬುದನ್ನು ಜೀವರಕ್ಷಕವಾಗಿ, ಸಮಸ್ಯೆಯ ಪ್ರಮಾಣವನ್ನು ಮಿತಗೊಳಿಸುವುದಕ್ಕಾಗಿ, ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಳ್ಳುವುದನ್ನು ತಡೆಯುವುದಕ್ಕಾಗಿ, ಕಾಯಿಲೆಯನ್ನು ಸುಧಾರಿಸುವ ಆರಂಭದ ಮಜಲುಗಳಾಗಿ ಬಳಸಬಹುದು.

ಪ್ರಥಮ ಚಿಕಿತ್ಸೆಯಲ್ಲಿ ಐದು ಅಂಶಗಳಿವೆ

1 ಅವಘಡ ನಡೆದ ಸುತ್ತಮುತ್ತಲ ಸ್ಥಳವನ್ನು ಪರಿಶೀಲಿಸಬೇಕು. ಪ್ರಥಮ ಚಿಕಿತ್ಸೆ ನೀಡುವವರು ಮೊದಲು ತಮ್ಮ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಬೇಕು. ಅಪಘಾತ ನಡೆದ ಸ್ಥಳದಲ್ಲಿ ಬೆಂಕಿ, ಅಪಾಯಕಾರಿ ರಾಸಾಯನಿಕಗಳು, ತುಂಡಾದ ವಿದ್ಯುತ್ ತಂತಿಗಳು, ಜಾರಿ ಬೀಳುವ ಸಾಧ್ಯತೆ ಇರುವ ನೆಲ ಮೊದಲಾದುವುಗಳು ಇವೆಯೇ ಎಂದು ಗಮನಿಸಬೇಕು. ಅಂತಹ ಯಾವುದೇ ಅಪಾಯಗಳು ಇದ್ದರೆ ಮೊದಲು ತಮ್ಮನ್ನು ಮತ್ತು ಅಪಾಯಕ್ಕೆ ಒಳಗಾದವರನ್ನು ಹೇಗೆ ಸುರಕ್ಷಿತವಾಗಿ ಇರಿಸಬಹುದು ಎಂದು ಆಲೋಚಿಸಬೇಕು. ಇತರರ ಸಹಾಯ ದೊರೆಯುವಂತಿದ್ದರೆ ಮೊದಲು ಅದನ್ನು ಪಡೆಯುವ ಕೆಲಸ ಮಾಡಬೇಕು.

2 ಗಾಯಗೊಂಡ ವ್ಯಕ್ತಿಯನ್ನು ಗಮನಿಸಬೇಕು. ಪ್ರಜ್ಞೆ ತಪ್ಪಿದೆಯೇ, ಉಸಿರಾಡುತ್ತಿದ್ದಾರೆಯೇ, ಶರೀರದ ಯಾವುದಾದರೂ ಭಾಗ ಅಲುಗಾಡದೆ ನಿಶ್ಚೇಷ್ಟಿತವಾಗಿದೆಯೇ, ರಕ್ತಸ್ರಾವ ಆಗುತ್ತಿದೆಯೇ ಎಂದು ಅಂದಾಜಿಸಬೇಕು. ರಕ್ತಸ್ರಾವವನ್ನು ಸಾಧ್ಯವಾದಷ್ಟೂ ಮಿತಗೊಳಿಸಬೇಕು. ಉಸಿರು ನಿಂತಿದ್ದರೆ ಶ್ವಾಸ-ಹೃದಯಗಳ ಪುನಶ್ಚೇತನವನ್ನು ನೀಡಬೇಕು. ಪ್ರಥಮ ಚಿಕಿತ್ಸೆಯ ತರಬೇತಿಯಲ್ಲಿ ಇದನ್ನು ಕಲಿಸಲಾಗುತ್ತದೆ. ಗಾಯಗೊಂಡವರ ಸುತ್ತಮುತ್ತಲ ಪ್ರದೇಶ ಸುರಕ್ಷಿತವಾಗಿದ್ದರೆ ಅವರನ್ನು ಅನಗತ್ಯ ಕದಲಿಸಬಾರದು. ಮೂಳೆಮುರಿತದಂತಹ ಸಂದರ್ಭಗಳಲ್ಲಿ ಒಂದು ಸ್ಥಳದಿಂದ ಮತ್ತೊಂದೆಡೆಗೆ ವ್ಯಕ್ತಿಯನ್ನು ವರ್ಗಾಯಿಸುವುದು ಅಪಾಯಕಾರಿಯಾಗಬಹುದು. ಇದನ್ನು ಚೆನ್ನಾಗಿ ತರಬೇತಿ ಉಳ್ಳವರು ಸೂಕ್ತ ಸಲಕರಣೆಗಳ ನೆರವಿನಿಂದ ಮಾತ್ರ ಮಾಡಬೇಕು.

3 ಸಹಾಯ ಪಡೆಯಬೇಕು. ಮನೆಯ ಇತರ ಸದಸ್ಯರು, ನೆರೆಹೊರೆಯ ಮಂದಿ, ಶೀಘ್ರವಾಗಿ ಅವಘಡದ ಸ್ಥಳ ತಲುಪಬಲ್ಲ ಪರಿಚಿತರು, ಹತ್ತಿರದ ಆಸ್ಪತ್ರೆಯ ಸಿಬ್ಬಂದಿ – ಹೀಗೆ ಯಾರದ್ದೇ ಸಹಾಯ ದೊರೆತರೂ ಅನುಕೂಲ. ಆದರೆ, ಪ್ರಥಮ ಚಿಕಿತ್ಸೆಯ ಮೂಲತತ್ತ್ವಗಳನ್ನು ಅರಿಯದ ಜನರಿಗೆ ಪರಿಸ್ಥಿತಿ ನಿಭಾಯಿಸುವ ಹೊಣೆಗಾರಿಕೆಯನ್ನು ನೀಡಬಾರದು. ಅಂತಹವರು ಸಹಾಯಕರ ಮಟ್ಟದಲ್ಲಿ ಹೇಳಿದ ಕೆಲಸ ಸರಿಯಾಗಿ ಮಾಡಬಲ್ಲಂತೆ ಇರಬೇಕೇ ಹೊರತು, ನಿರ್ಧಾರವನ್ನು ಕೈಗೊಳ್ಳುವ ವ್ಯಕ್ತಿಯಾಗಿ ಅಲ್ಲ. ಪರಿಸ್ಥಿತಿ ಸಾಮಾನ್ಯ ನಿರ್ವಹಣೆಯ ಕೈಮೀರಿದೆ ಎಂದು ಅನಿಸಿದರೆ ಆದಷ್ಟು ಬೇಗ ಆಂಬುಲೆನ್ಸ್ ವ್ಯವಸ್ಥೆಯನ್ನು ಮಾಡಬೇಕು.

4 ನಮ್ಮಲ್ಲಿ ಅಪಘಾತಕ್ಕೆ ಒಳಗಾದ ವ್ಯಕ್ತಿಗೆ ಬಲವಂತವಾಗಿ ನೀರು ಕುಡಿಸುವ ಜನರಿದ್ದಾರೆ. ಯಾವ ಕಾರಣಕ್ಕೂ ತೀವ್ರವಾಗಿ ಗಾಯಗೊಂಡ, ಉಸಿರಾಡಲು ಕಷ್ಟ ಪಡುತ್ತಿರುವ, ವಾಂತಿ ಮಾಡುತ್ತಿರುವ, ಅಥವಾ ಪ್ರಜ್ಞೆ ಇಲ್ಲದ ವ್ಯಕ್ತಿಗಳಿಗೆ ನೀರು ಕುಡಿಸುವ ಪ್ರಯತ್ನವನ್ನು ಮಾಡಬಾರದು. ಗಾಯಗೊಂಡ ವ್ಯಕ್ತಿಗೆ ಪ್ರಜ್ಞೆ ಇದ್ದರೆ, ಅವರಿಗೆ ಧೈರ್ಯ ತುಂಬುವ ಮಾತುಗಳನ್ನು ಹೇಳಬೇಕು; ಏನಾಗಿದೆ ಎಂದು ಸ್ಥೂಲವಾಗಿ ವಿವರಿಸಬೇಕು.

5 ಗಾಯಗೊಂಡ ವ್ಯಕ್ತಿಯ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವಷ್ಟು ಕಾಲ ಪ್ರಥಮ ಚಿಕಿತ್ಸೆಯನ್ನು ನೀಡಬಹುದು. ಚಿಕಿತ್ಸೆಯಲ್ಲಿ ಹೆಚ್ಚು ಪರಿಣತರು ದೊರಕಿದಾಗ ಸಂದರ್ಭದ ನಿರ್ವಹಣೆಯನ್ನು ಅಂತಹವರಿಗೆ ವರ್ಗಾಯಿಸಬಹುದು. ಅಪಘಾತಕ್ಕೆ ಒಳಗಾದ ವ್ಯಕ್ತಿಯ ಸುರಕ್ಷತೆಯಷ್ಟೇ ಪ್ರಥಮ ಚಿಕಿತ್ಸೆ ನೀಡುವವರ ಕ್ಷೇಮವೂ ಮುಖ್ಯ ಎಂಬುದು ಗಮನದಲ್ಲಿರಬೇಕು.

ಪ್ರಥಮ ಚಿಕಿತ್ಸೆ ನೀಡುವುದು ಯಾವುದೋ ನಿರ್ದಿಷ್ಟ ಸಂದರ್ಭಕ್ಕಷ್ಟೇ ಸೀಮಿತ ಎಂಬುದಿಲ್ಲ. ಅವಘಡಗಳಿಗೆ ಒಳಗಾದ ಯಾರದ್ದೇ ಸುರಕ್ಷತೆ ಅಪಾಯದಲ್ಲಿದೆ ಎಂದಾಗ ಪ್ರಥಮ ಚಿಕಿತ್ಸೆಯನ್ನು ನೀಡಬಹುದು. ಗಂಟಲಿನಲ್ಲಿ ಬಾಹ್ಯವಸ್ತು ಸಿಕ್ಕಿಹಾಕಿಕೊಂಡವರು, ಜಂತುಗಳ ಕಡಿತ, ರಕ್ತಸ್ರಾವ, ಮೂಳೆಮುರಿತ, ಬೆಂಕಿ ಅಪಘಾತ, ವಿದ್ಯುತ್ ಶಾಕ್, ವಿಷಪ್ರಾಶನ, ಅಪಸ್ಮಾರ – ಹೀಗೆ ಯಾವುದೇ ಪರಿಸ್ಥಿತಿಯಲ್ಲೂ ಪ್ರಥಮ ಚಿಕಿತ್ಸೆ ಸೂಕ್ತ.

ಪ್ರತಿಯೊಂದು ಮನೆಯಲ್ಲೂ ಪ್ರಥಮ ಚಿಕಿತ್ಸೆಗೆ ಅಗತ್ಯವಾದ ವಸ್ತುಗಳ ಪೆಟ್ಟಿಗೆಯೊಂದು ಎಲ್ಲರಿಗೂ ಕಾಣುವ, ಸುಲಭವಾಗಿ ದೊರೆಯುವ ಸ್ಥಳದಲ್ಲಿ ಇರಬೇಕು. ಅದರ ಮೇಲೆ ಎದ್ದು ಕಾಣುವಂತೆ 'ಪ್ರಥಮ ಚಿಕಿತ್ಸೆಯ ಪೆಟ್ಟಿಗೆ' ಎಂದು ನಮೂದಾಗಿರಬೇಕು. ಪ್ರಥಮ ಚಿಕಿತ್ಸೆಯ ಮೂಲತತ್ತ್ವಗಳನ್ನು ವಿವರಿಸುವ ಕಿರುಮಾಹಿತಿ, ಗಾಯಗಳ ಮೇಲೆ ಲೇಪಿಸುವ ಮುಲಾಮು, ಗಾಯವನ್ನು ಮುಚ್ಚಬಲ್ಲ ಡ್ರೆಸ್ಸಿಂಗ್ ಪರಿಕರಗಳು, ಚರ್ಮಸ್ನೇಹಿ ಅಂಟಿನ ಪಟ್ಟಿ, ಕೈಗವಸು, ಮುಖಗವಸು, ಸೇಫ್ಟಿಪಿನ್ನುಗಳು, ಹೀರುಗುಣವಿರುವ ಹತ್ತಿ, ಕತ್ತರಿ, ಸಣ್ಣ ಮುಳ್ಳುಗಳನ್ನು ಕೀಳಬಲ್ಲ ಟ್ವೀಜರ್ ಸಲಕರಣೆ, ಬ್ಯಾಂಡ್-ಏಡ್ ಅಂಟಿನ ಪಟ್ಟಿಗಳು, ಮರದ ಐಸ್-ಕ್ರೀಂ ಚಮಚೆಗಳು, ನೋವುನಿವಾರಕ ಪ್ಯಾರಾಸಿಟಮಾಲ್ ಗುಳಿಗೆಗಳು, ಓ.ಆರ್.ಎಸ್. ಪುಡಿಯ ಸ್ಯಾಷೆ, ಶುಭ್ರವಾದ ಬಟ್ಟೆಯ ತುಂಡುಗಳು, ಪೆನ್ನು-ಕಾಗದ ಇತ್ಯಾದಿಗಳು ಈ ಪೆಟ್ಟಿಗೆಯಲ್ಲಿ ಇರಬೇಕು. ಇದನ್ನು ಕಾಲಕಾಲಕ್ಕೆ ಪರಿಶೀಲಿಸಿ, ಔಷಧಗಳ ಪ್ರಸ್ತುತತೆಯನ್ನು ಖಚಿತಪಡಿಸಬೇಕು. ಯಾವುದೇ ಅವಘಡದ ನಿರ್ವಹಣೆಗೆ ಸದಾ ಸನ್ನದ್ಧರಾಗಿರುವುದು ಪ್ರಥಮ ಚಿಕಿತ್ಸೆಯ ಮೂಲ ಆಶಯ.

ಪ್ರಥಮ ಚಿಕಿತ್ಸೆಯ ಮೂಲತತ್ತ್ವಗಳನ್ನು ಯಾರು ಬೇಕಾದರೂ ಕಲಿಯಬಹುದು. ಇದಕ್ಕೆ ಇಂತಿಷ್ಟು ಶಾಲಾ ಶಿಕ್ಷಣ ಇರಬೇಕೆಂದೇನೂ ಇಲ್ಲ. ವಾಸ್ತವದಲ್ಲಿ, ಪ್ರತಿಯೊಬ್ಬರೂ ಪ್ರಥಮ ಚಿಕಿತ್ಸೆಯ ತರಬೇತಿಯನ್ನು ಪಡೆಯುವುದು ಒಳಿತು. ಶಾಲೆಯ ಪಠ್ಯಕ್ರಮದಲ್ಲಿ ಪ್ರಥಮ ಚಿಕಿತ್ಸೆಯ ಪಾಠಗಳು ಮತ್ತು ತರಬೇತಿ ಕಡ್ಡಾಯವಾಗಿರುವ ದೇಶಗಳಿವೆ. ಆರೋಗ್ಯ ವ್ಯವಸ್ಥೆ ಅಸಮರ್ಪಕ ಮಟ್ಟದಲ್ಲಿರುವ ಅಭಿವೃದ್ಧಿಶೀಲ ಮತ್ತು ಹಿಂದುಳಿದ ದೇಶಗಳು ಈ ನಿಟ್ಟಿನಲ್ಲಿ ಹೆಚ್ಚು ಆಸ್ಥೆ ವಹಿಸುವ ಅಗತ್ಯವಿದೆ.

❖

ಮುಂದೂಡುವ ಚಕ್ರವನ್ನು ಮುರಿಯಿರಿ

ಡಾ. ಕೆ. ಎಸ್. ಪವಿತ್ರ

ಸಂಜೆ 5 ಗಂಟೆಯಾಗಿ ಹೋಗಿದೆ. ನಿಮಗೆ ಗೊತ್ತು ನೀವು ಆ ಕೆಲಸ ಇಷ್ಟು ಹೊತ್ತಿಗೆ ಮಾಡಿ ಮುಗಿಸಬೇಕಾಗಿತ್ತು. ಆದರೆ ಯಾಕೋ ಮುಂದೂಡುತ್ತಲೇ ಇದ್ದೀರಿ. ಇನ್ನೇನು ಪಟ್ಟಾಗಿ ಕುಳಿತು ಮುಗಿಸೇಬಿಡಬೇಕು ಅನ್ನುವ ಹೊತ್ತಿಗೆ ಮನಸ್ಸು ಮತ್ತೇನನ್ನೋ ಹುಡುಕಿಕೊಳ್ಳುತ್ತದೆ. ಊಟ ಮಾಡಿಬಿಡೋಣ ಅನಿಸುತ್ತದೆ. ಇನ್ನೊಂದು ರೀಲ್ ನೋಡಿಯೇ ಶುರು ಮಾಡೋಣ ಅನ್ನಿಸುತ್ತದೆ.

ಇದನ್ನು ಮನೋವೈಜ್ಞಾನಿಕವಾಗಿ ಮುಂದೂಡುವ ಚಕ್ರ - 'Cycle of procrastination' ಎಂದು ಕರೆಯಲಾಗುತ್ತದೆ. 'ನಾಳೆ ಮಾಡಬೇಕಾದ್ದನ್ನು ಇಂದೇ ಮಾಡು' ಎಂದು ಬೇರೆಯವರಿಗೆ ಹೇಳಿದಷ್ಟು ಸುಲಭವಲ್ಲ, ಈ ಚಕ್ರವನ್ನು ಮುರಿಯುವುದು. ನಮ್ಮೆಲ್ಲರಿಗೂ ಈ ಸಮಸ್ಯೆ ಆಗಾಗ್ಗೆ ಎದುರಾಗುತ್ತದೆ. ಮುಂದೂಡುವ ಚಕ್ರವನ್ನು ಮುರಿಯುವುದು ಹೇಗೆ?

ಕೆಲಸವನ್ನು ಮುಂದೂಡುವುದು ಯಾವಾಗಲೂ ಸಮಸ್ಯೆಯೇ ಆಗಬೇಕಿಲ್ಲ. ಆದ್ಯತೆಯ ಮೇಲೆ ಕೆಲವನ್ನು ನಾವು ತಕ್ಷಣ ಮಾಡಬಹುದು, ಮತ್ತೆ ಕೆಲವನ್ನು ನಂತರ ಮಾಡಬಹುದು. ಇದು ಮುಂದೂಡುವ ಸಮಸ್ಯೆಯಲ್ಲ. ಸರಿಯಾದ ಕಾರಣವಿಲ್ಲದೆ, ನಾವು ಮಾಡದಿರುವುದು, ತೊಂದರೆಗಳನ್ನು ತಂದೊಡ್ಡಬಹುದು ಎಂಬ ಅರಿವಿನ ಮಧ್ಯೆಯೂ ನಾವು ಕೆಲಸವನ್ನು ಮುಂದೂಡುವುದು 'ಮುಂದೂಡುವ ಸಮಸ್ಯೆ' ಎನಿಸಿಕೊಳ್ಳುತ್ತದೆ.


ಒಂದು ಕೆಲಸವನ್ನು ಮಾಡಲು ಬೇಕಾಗುವ ಪ್ರೇರಣೆ ಎಂಬುದು ಮಿದುಳು-ಮನಸ್ಸುಗಳ ಕಾರ್ಯವಷ್ಟೆ. ಅದರ ಹಿಂದಿರುವ ವೈಜ್ಞಾನಿಕತೆಯನ್ನು ಮೊದಲು ಗಮನಿಸುವುದು ಅತ್ಯಗತ್ಯ. 'ಮುಂದೂಡುವಿಕೆ' ಮಿದುಳಿನ ರಕ್ಷಣಾತ್ಮಕ ವ್ಯವಸ್ಥೆಗಳಲ್ಲಿ ಒಂದು. ನಾವು ಮುಂದೂಡುತ್ತಿರುವ ಕೆಲಸವನ್ನು ನಾವು ಮಾಡಬೇಕೆಂದಾಗ ಮಿದುಳು ಅದೊಂದು 'ಎದುರಾಗುತ್ತಿರುವ ಅಪಾಯ' ಎಂಬಂತೆ ಗ್ರಹಿಸುತ್ತದೆ. ಓಡು-ಹೋರಾಡು ಇಲ್ಲವೆ ತಟಸ್ಥನಾಗು – ಎಂಬಂತಹ ಈ ಪರಿಸ್ಥಿತಿಯಲ್ಲಿ ಸಹಜವಾಗಿ ನಾವು ಕಡಿಮೆ ಒತ್ತಡದ ಮತ್ತೊಂದು ಕೆಲಸಕ್ಕೆ ಮನಸ್ಸನ್ನು ವರ್ಗಾಯಿಸುತ್ತೇವೆ.

ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಓದುವ ವಿದ್ಯಾರ್ಥಿಗಳಲ್ಲಿ ಮುಂದೂಡುವ ಚಕ್ರ ಕಂಡುಬರುವ ಪ್ರಮಾಣ ಶೇ 50. ಸುಮಾರು ಶೇ 95 ಜನ ಆಗಾಗ್ಗೆ ಈ ಸಮಸ್ಯೆಗೆ ಒಳಗಾಗುತ್ತಾರೆ ಎನ್ನುತ್ತವೆ, ಅಧ್ಯಯನಗಳು. ಸ್ವಲ್ಪ ತಡವಾಗಿ ಮಾಡಿದರೆ ತಲೆ ಹೋಗುವಂತದ್ದೇನಾದೀತು ಎಂದು ಕೆಲವರೆನ್ನಬಹುದು. ಆದರೆ ಆರ್ಥಿಕತೆಗೆ ಸಂಬಂಧಿಸಿದಂತೆ, ಕೌಟುಂಬಿಕ ಸಂಬಂಧಗಳಲ್ಲಿ-ಆರೋಗ್ಯದ ವಿಷಯಗಳಲ್ಲಿ ಮುಂದೂಡುವ ಚಕ್ರ ಹರಿದಾಡಿ, ಜೀವನವನ್ನೇ ಹದಗೆಡಿಸಬಹುದು.

ಮುಂದೂಡುವ ಚಕ್ರಕ್ಕೆ ಮತ್ತೊಂದು ಹೆಸರು 'ಸೋಮಾರಿತನ'ವೆ?! ಖಂಡಿತ ಅಲ್ಲ. ಮುಂದೂಡುವ ಚಕ್ರದ ಸಮಸ್ಯೆಯಿಂದ ನರಳುವ ಜನರಲ್ಲಿ ಹೆಚ್ಚಿನವರು ಕ್ರಿಯಾಶೀಲರು; ಪರಿಪೂರ್ಣತೆಯ ಕಡೆಗೆ ತುಡಿಯುವವರು. ತಾವೇ ಹಾಕಿಕೊಂಡ ಗುಣಮಟ್ಟ -ನಿರೀಕ್ಷೆಗಳಂತೆ ತಮ್ಮ ಕೆಲಸ ಸಾಗದಿದ್ದರೆ – ಎಂಬ ಆತಂಕವೇ ಮುಖ್ಯವಾಗಿ ಹಿನ್ನೆಲೆಯಲ್ಲಿ ನಿಂತು ಅವರ ಮುಂದೂಡುವುದನ್ನು ಪ್ರಚೋದಿಸುತ್ತದೆ. ಸೋಮಾರಿತನವನ್ನು ನಾವು ಅನುಭವಿಸುವಾಗ, ನಮಗೆ ಏನೂ ಮಾಡಲಾಗುವುದಿಲ್ಲ; ಶಕ್ತಿಯೇ ಇಲ್ಲ ಎಂಬಂತೆ ಭಾಸವಾಗುತ್ತದೆ. ಮುಂದೂಡುವ ಚಕ್ರದಲ್ಲಿ ಸಿಲುಕಿರುವಾಗ ಹಾಗಲ್ಲ, ಬಿಡುವಿಲ್ಲದೆ, ಮಾಡಬೇಕಾದ ಕೆಲಸವನ್ನು ಬದಿಗಿರಿಸಿ, ಆ ಕ್ಷಣಕ್ಕೆ ಬೇಡವಾದ ಬೇರೆ ಬೇರೆ ಕೆಲಸಗಳನ್ನು ಮನಸ್ಸು ಹುಡುಕಿಕೊಳ್ಳುತ್ತದೆ. ಅವರಿಗೆ 'ಸೋಮಾರಿ' ಎಂಬ ತಪ್ಪಿತಸ್ಥ ಭಾವದಿಂದ, ಆ ಕೆಲಸ ಮಾಡದಿರುವುದರ ಬಗೆಗಿನ ಅಪರಾಧಿಪ್ರಜ್ಞೆಯಿಂದ ಬಿಡುಗಡೆ ಬೇಕು! ಹಾಗಾಗಿ ಒತ್ತಡ ಕಡಿಮೆ ಮಾಡಲು ಮತ್ತಷ್ಟು, ಕೆಲವೊಮ್ಮೆ ಇಷ್ಟವೂ ಆಗದ (ಪುಸ್ತಕ ಜೋಡಿಸುವ/ಅಡುಗೆ ಮನೆ ಸ್ವಚ್ಛಗೊಳಿಸುವ) ಕೆಲಸಗಳನ್ನು ಮನಸ್ಸು ಹುಡುಕಿಕೊಳ್ಳುತ್ತದೆ.

ಮುಂದೂಡುವ ಚಕ್ರದಲ್ಲಿ ಸಿಲುಕಿಕೊಳ್ಳುವ ಕಾರಣಗಳು ಏನೇ ಇರಲಿ, ಅದರ ಫಲಿತಾಂಶ ಮಾತ್ರ ಒಂದೇ. ಮತ್ತೆ ಮತ್ತೆ ಮುಂದೂಡುವುದರಿಂದ ನಾಚಿಕೆ-ಕೀಳರಿಮೆ-ಹತಾಶೆ-ಆತಂಕಗಳು ಕಾಡುತ್ತವೆ. ಮೊದಲು ತಾತ್ಕಾಲಿಕವಾಗಿ ಮುಂದೂಡುವುದು ಒತ್ತಡವನ್ನು ಆ ಕ್ಷಣಕ್ಕೆ ಕಡಿಮೆ ಮಾಡಿದರೂ, ಕ್ರಮೇಣ ಅದು ಒಂದು ಅನಾರೋಗ್ಯಕರ ರಕ್ಷಣಾ ತಂತ್ರವಾಗಿಬಿಡಬಹುದು. ಅದರ ಪರಿಣಾಮವಾಗಿ ನಾವು ಸುಲಭವಾಗಿ ಮಾಡುತ್ತಿದ್ದ ಕೆಲಸಗಳೂ ಸಾಧ್ಯವಾಗದಿರಬಹುದು.

ಮುಂದೂಡುವ ಚಕ್ರವನ್ನು ಮುರಿಯಲು ಸಾಧ್ಯವಿದೆ! ನಾವು ಒಂದು ಕೆಲಸವನ್ನು ಮುಂದೂಡುವುದು ಅದರೊಂದಿಗೆ ನಾವು ಜೋಡಿಸಿಕೊಂಡಿರರುವ ಅತಂಕ-ಅತಿ ನಿರೀಕ್ಷೆ ಮೊದಲಾದ ಋಣಾತ್ಮಕ ಭಾವನೆಗಳಿಂದ ತಾನೆ? ಅವುಗಳನ್ನು ಎದುರಿಸಲು, ಅವು ನಾವಂದುಕೊಂಡಷ್ಟು ಅಪಾಯವಲ್ಲ ಎಂಬುದನ್ನು ಅರಿಯಲು, ಕೆಲಸ ಮಾಡಿ ಮುಗಿಸಿ ಅವುಗಳಿಂದ ಹಗುರಾಗುವುದೇ ದಾರಿ. ನಿಮ್ಮ ಹಿಂದಿನ ಅನುಭವಗಳನ್ನು ನೆನೆಸಿಕೊಳ್ಳಿ. ನೀವು ಆ ಕೆಲಸಕ್ಕೆ ಅನಿವಾರ್ಯವಾಗಿ ಕೊನೆಯ ಗಳಿಗೆಯಲ್ಲಿ ತೊಡಗಿದಾಗಲೂ, ನೀವಂದುಕೊಂಡಷ್ಟು ಸಮಯ ಬೇಕಾಗಲಿಲ್ಲ; ಮೊದಲು ಎಣಿಸಿದಷ್ಟು ಕಷ್ಟಕರವಾಗಿರಲಿಲ್ಲ; ಮಾಡುವಾಗ ಸಂತೋಷವೇ ಆಗಿತ್ತು, ಇತ್ಯಾದಿ. ನೀವು ಮುಂದೂಡುವ ಚಕ್ರದಲ್ಲಿ ಸಿಲುಕಿರುವುದರ ಕಾರಣ ಮುಂದಿರುವ ಕೆಲಸ ಕಷ್ಟಕರವಾದದ್ದು, ಎನ್ನುವುದಕ್ಕಿಂತ ನಿಮ್ಮ ಭಾವನೆಗಳನ್ನು ನಿಭಾಯಿಸಲು ಕಷ್ಟವಾಗಿರುವುದು ಎಂಬುದು ಮನಗಾಣಬೇಕಾದ ಮಹತ್ವದ ಅಂಶ. ಮುಂದೂಡುವುದರಿಂದ ತಾತ್ಕಾಲಿಕವಾಗಿ ಸಿಕ್ಕುವ ಹಗುರವಾದ ಭಾವ, ಕೆಲಸ ಮುಗಿಸುವುದರಿಂದ ನಿಜವಾಗಿ ಸಿಕ್ಕುವ ಸಂತಸ-ಹೊರೆ ಇಳಿದ ಭಾವಗಳಾಗಲು ಸಾಧ್ಯವಿದೆ.



❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಇತಿಹಾಸ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

10) ಜಲಮಾರ್ಗದ ಮೂಲಕ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಮೊಟ್ಟಮೊದಲ ಯುರೋಪಿಯನ್ನರು ಪೋರ್ಚುಗೀಸರಾದರೆ ಭಾರತವನ್ನು ತೊರೆದ ಕೊನೆಯ ಯುರೋಪಿಯನ್ನರು ಯಾರು?

ಉತ್ತರ:– ಪೋರ್ಚುಗೀಸರು

11) ಪೋರ್ಚುಗೀಸರ ಮೊಟ್ಟಮೊದಲ ವೈಸರಾಯ್ ಆಗಿ ಯಾರು ಭಾರತಕ್ಕೆ ಬಂದನು.?

ಉತ್ತರ:– ಫ್ರಾನ್ಸಿಸ್ಕೊ ಡಿ ಆಲ್ಮೇಡ

12) ಭೂಮಿಯ ಮೇಲಿನ ಅಧಿಪತ್ಯಕ್ಕೆ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ 'ನೀಲಿ ನೀರಿನ ನೀತಿ' (Blue Water Policy)ಯನ್ನು ಜಾರಿಗೆ ತಂದವನು ಯಾರು?

ಉತ್ತರ:– ಫ್ರಾನ್ಸಿಸ್ಕೊ ಡಿ ಆಲ್ಮೇಡ

13) ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕನೆಂದು ಪ್ರಸಿದ್ಧನಾಗಿದ್ಧನಾವ ಯಾರು?

ಉತ್ತರ:– ಆಲ್ಫೋನ್ಸೊ–ಡಿ–ಅಲ್ಬುಕರ್ಕ್

14) 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು ಯಾರು?

ಉತ್ತರ:– ಆಲ್ಫೋನ್ಸೊ–ಡಿ–ಅಲ್ಬುಕರ್ಕ್

15) ಭಾರತದಲ್ಲಿ ಪೋರ್ಚುಗೀಸರ ಏಕಸ್ವಾಮ್ಯತೆಯು ಯಾವಾಗ ಶಿಥಿಲಗೊಂಡಿತು?

ಉತ್ತರ:– 17ನೇ ಶತಮಾನದವರೆಗೂ ಪೋರ್ಚುಗೀಸರು ವ್ಯಾಪಾರಿ ಏಕಸ್ವಾಮ್ಯತೆಯನ್ನು ಹೊಂದಿದ್ದರು. ಭಾರತದೊಳಗೆ ಡಚ್ ಮತ್ತು ಇಂಗ್ಲಿಷರ ಪ್ರವೇಶದೊಂದಿಗೆ ಪೋರ್ಚುಗೀಸರ ಏಕಸ್ವಾಮ್ಯತೆಯು ಶಿಥಿಲಗೊಂಡಿತು.

16) ಡಚ್ ಈಸ್ಟ್ ಇಂಡಿಯಾ ಕಂಪನಿ ಯಾವಾಗ ವ್ಯಾಪಾರಕ್ಕಾಗಿ ಭಾರತಕ್ಕೆ ಬಂತು?

ಉತ್ತರ:– 1602ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪೆನಿಯು ಭಾರತಕ್ಕೆ ವ್ಯಾಪಾರಕ್ಕಾಗಿ ಬಂತು.

17) ಡಚ್ಚರ ವ್ಯಾಪಾರಿ ಕೇಂದ್ರಗಳು ಯಾವುವು?

ಉತ್ತರ:– ಸೂರತ್, ಬ್ರೋಚ್, ಕಾಂಬೆ, ಕೊಚ್ಚಿನ್, ನಾಗಪಟ್ಟಣ, ಮಚಲೀಪಟ್ಟಣ ಹಾಗೂ ಚಿನ್ಸೂರ

18) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ಯಾರು?

ಉತ್ತರ:– ಮಾರ್ತಾಂಡ ವರ್ಮ

19) ರಾಜಧಾನಿಯನ್ನು ಪದ್ಮನಾಭಪುರದಿಂದ ತಿರುವನಂತಪುರಕ್ಕೆ ಸ್ಥಳಾಂತರಿಸಿ ತನ್ನ ಸಂಸ್ಥಾನವನ್ನು ವಿಶ್ವ ತಿರುವಾಂಕೂರು ಸಂಸ್ಥಾನ ಎಂದು ಹೆಸರಾಗುವಂತೆ ಮಾಡಿದವ ಯಾರು?

ಉತ್ತರ:– ಮಾರ್ತಾಂಡ ವರ್ಮ

20) 'ಡಚ್ಚರ ವಿರುದ್ಧ ರಣತಂತ್ರ ರೂಪಿಸಿದ ಮಹಾರಾಜ, ಡಚ್ಚರ ಏಕಸ್ವಾಮ್ಯ ಮುರಿದು ಅವರ ಏಕಸ್ವಾಮ್ಯಕ್ಕೆ ಕೊಳ್ಳಿ ಇಟ್ಟ ಮಾರ್ತಾಂಡ ವರ್ಮ' ಈ ಹೇಳಿಕೆಯನ್ನು ಹೇಗೆ ಸಮರ್ಥಿಸುವಿರಿ?

ಉತ್ತರ:– ರಾಮವರ್ಮನ ನಂತರ ತನ್ನ 24ನೇ ವಯಸ್ಸಿನಲ್ಲಿ ಮಾರ್ತಾಂಡ ವರ್ಮ ಪಟ್ಟಕ್ಕೆ ಬಂದನು. ವೈನಾಡ್ ಸಂಸ್ಥಾನದ ಗಡಿಯನ್ನು ವಿಸ್ತರಿಸಲು 50 ಸಾವಿರ ಸೈನಿಕರ ಸೈನ್ಯವನ್ನು ಕಟ್ಟಿದನು. ಮೆಣಸು ಬೆಳೆಯುವ ಪ್ರದೇಶಗಳನ್ನು ತನ್ನ ಕೈವಶ ಮಾಡಿಕೊಂಡನು. ಅದಾಗಲೇ ಕರಿಮೆಣಸಿನ ವ್ಯಾಪಾರದಲ್ಲಿ ಹಿಡಿತ ಸಾಧಿಸುತ್ತಿದ್ದ ಡಚ್ಚರನ್ನು ಸದೆಬಡಿಯಲು ಅನೇಕ ರಣತಂತ್ರಗಳನ್ನು ಮಾರ್ತಾಂಡ ವರ್ಮನು ಹೆಣೆದನು. ಸುತ್ತಮುತ್ತಲಿನ ಪಾಳೆಗಾರರು ಮತ್ತು ಸಂಸ್ಥಾನಿಕರನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಅವರನ್ನು ಡಚ್ಚರ ವಿರುದ್ಧ ನಿಲ್ಲಿಸಿದನು. ಕಾಯಂಕುಳಂ, ಕೊಚ್ಚಿ, ಪುರಕ್ಕಾಡ್ ಮತ್ತು ವಡಕ್ಕುಂಕೂರ್ ಸಂಸ್ಥಾನಗಳ ಜೊತೆಗೂಡಿ ಡಚ್ ಸೇನೆಯು ತಿರುವಾಂಕೂರಿನ ಮೇಲೆ ಆಕ್ರಮಣ ಮಾಡಿದಾಗ ಮಾರ್ತಾಂಡ ವರ್ಮನ ಪಡೆ ಡಚ್ ಕೂಟವನ್ನು ಸೋಲಿಸಿ ನೆಡುಮಂಗಡ ಮತ್ತು ಕೊಟ್ಟಾರಕರ ಎಂಬ ವ್ಯಾಪಾರಿ ಕೇಂದ್ರವನ್ನು ವಶಪಡಿಸಿಕೊಂಡಿತು. ಅಲ್ಲದೆ ಮಾರ್ತಾಂಡ ವರ್ಮನು "ನಾವೆಂದೂ ಮೆಣಸಿನ ವ್ಯಾಪಾರದ ಹಕ್ಕನ್ನು ಪರಕೀಯರಿಗೆ ಬಿಟ್ಟು ಕೊಡೆವು" ಎಂದು ಡಚ್ಚರಿಗೆ ಖಾರವಾಗಿ ಪತ್ರ ಬರೆದನು. 1741ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪನಿ ಕೊಟ್ಟಾರಕರ ಸಂಸ್ಥಾನವನ್ನು ಮುಂದಿಟ್ಟುಕೊಂಡು ತಿರುವಾಂಕೂರಿನ ಮೇಲೆ ಯುದ್ಧವನ್ನು ಸಾರಿತು. ಡಚ್ಚರ ಜೊತೆಗೆ ಸ್ಥಳೀಯ ಸಂಸ್ಥಾನಗಳೂ ಸೇರಿಕೊಂಡಿದ್ದರು. ಆದರೆ ಮಾರ್ತಾಂಡ ವರ್ಮನ ಸೈನ್ಯ ಆ ದಾಳಿಯನ್ನು ಸಮರ್ಥವಾಗಿ ಹಿಮ್ಮೆಟ್ಟಿಸಿತು. ಡಚ್ ಪಡೆಗಳು ಕೊಚ್ಚಿನ್‌ಗೆ ಹಿಂತಿರುಗಿದವು. ಆದರೆ ಡಚ್ಚರು ಸಿಲೋನಿನಿಂದ ಮತ್ತಷ್ಟು ಪಡೆಗಳನ್ನು ಕರೆಸಿಕೊಂಡು ಮಾರ್ತಾಂಡ ವರ್ಮನ ಮೇಲೆ ದಂಡೆತ್ತಿ ಬಂದರು.

1741ರ ಆಗಸ್ಟ್ 10ರಂದು ಕೊಳಚ್ಚಲ್ ಎಂಬಲ್ಲಿ ಮಾರ್ತಾಂಡ ವರ್ಮ ಮತ್ತು ಡಚ್ಚರ ನಡುವೆ ನಾಲ್ಕು ದಿನಗಳ ಕಾಲ ಭೀಕರ ಕದನ ನಡೆಯಿತು. ಅಂತಿಮವಾಗಿ ತಿರುವಾಂಕೂರು ಸೈನ್ಯ ಯುದ್ಧದಲ್ಲಿ ಮೇಲುಗೈ ಸಾಧಿಸಿತು. 24 ಪ್ರಮುಖ ಡಚ್ ಅಧಿಕಾರಿಗಳು ಯುದ್ಧ ಖೈದಿಗಳಾದರು. ಡಚ್ಚರು ಅಪಾರ ಪ್ರಮಾಣದಲ್ಲಿ ನಷ್ಟವನ್ನು ಅನುಭವಿಸಿದರು. ಈ ಯುದ್ಧದ ನಂತರ ಮಾರ್ತಾಂಡ ವರ್ಮ ಸುಮ್ಮನೆ ಕೂರಲಿಲ್ಲ. ಇಡೀ ದಕ್ಷಿಣ ಭಾರತದಿಂದ ಡಚ್ಚರನ್ನು ಕಿತ್ತೊಗೆಯಬೇಕೆಂದು ಪಣತೊಟ್ಟ, ಕೇರಳ ಮತ್ತು ತಮಿಳುನಾಡಿನಲ್ಲಿ ಮೆಣಸಿನ ವ್ಯಾಪಾರದಲ್ಲಿ ಹಕ್ಕನ್ನು ಸ್ಥಾಪಿಸಿದ. ಡಚ್ಚರ ಹಿಡಿತದಲ್ಲಿದ್ದ ಬಂದರುಗಳನ್ನು ಮರಳಿ ಪಡೆದ.

ಅಂತಿಮವಾಗಿ 1753ರ ಆಗಸ್ಟ್ 15ರಂದು ನಡೆದ ಒಪ್ಪಂದದಲ್ಲಿ ಡಚ್ ಪಡೆಗಳು ತಮ್ಮ ಸಂಪೂರ್ಣ ಅಧಿಕಾರವನ್ನು ತಿರುವಾಂಕೂರಿಗೆ ಒಪ್ಪಿಸಿ ಶರಣಾದವು. ಈ ರೀತಿ ಡಚ್ಚರ ವಿರುದ್ಧ ರಣತಂತ್ರ ರೂಪಿಸಿದ ಮಹಾರಾಜ, ಡಚ್ಚರ ಏಕಸ್ವಾಮ್ಯ ಮುರಿದು ಅವರ ಏಕಸ್ವಾಮ್ಯಕ್ಕೆ ಕೊಳ್ಳಿ ಇಟ್ಟ ಮಾರ್ತಾಂಡ ವರ್ಮ ಎಂದು ಪ್ರಸಿದ್ಧನಾದ

21) ಯಾವ ವರ್ಷ ಬ್ರಿಟನ್ ರಾಣಿ ಈಸ್ಟ್ ಇಂಡಿಯಾ ಕಂಪನಿಗೆ ವ್ಯಾಪಾರ ನಡೆಸಲು ಪರವಾನಿಗೆ ನೀಡಿದಳು? ಈ ಪರವಾನಿಗೆ ಎಷ್ಟು ವರ್ಷಗಳಿಗಾಗಿ ನೀಡಲಾಗಿತ್ತು?

ಉತ್ತರ:– ಇಂಗ್ಲೆಂಡಿನ ಎಲಿಜಬೆತ್ ರಾಣಿಯು ಸಾ. ಶ. 1600 ಡಿಸೆಂಬರ್ 31ರಂದು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಪೂರ್ವ ದೇಶಗಳೊಂದಿಗೆ ವ್ಯಾಪಾರ ನಡೆಸಲು 15 ವರ್ಷಗಳ ಪರವಾನಗಿ ನೀಡಿದಳು.

22) ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಭಾರತದಲ್ಲಿ ವ್ಯಾಪಾರಿ ದಾಸ್ತಾನು ಮಳಿಗೆ ಆರಂಭಿಸಲು ಅನುಮತಿ ಕೊಟ್ಟವರು ಯಾರು?

ಉತ್ತರ:– ಮೊಘಲ್ ಸಾಮ್ರಾಟ ಜಹಾಂಗೀರ

23) ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ಮೊದಲ ವ್ಯಾಪಾರಿ ದಾಸ್ತಾನು ಮಳಿಗೆ ಎಲ್ಲಿ ಆರಂಭಿಸಿತು?

ಉತ್ತರ:– ಸೂರತ್

24) 1617ರಲ್ಲಿ ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಯಾರು ಬಂದನು?

ಉತ್ತರ:– ಸರ್. ಥಾಮಸ್ ರೋ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ


II PUC MATHS

DIFFERENTIABILITY

Logarithmic Function (Natural)

Note: (......Contd)

2. $\log_a x$ decreases if $0 < a < 1$ and increases if $a > 1$
3. $\log_a x$ is not defined if $x \leq 0$
4. $\log_a a = 1$
5. $\log_a 1 = 0$
6. $a^{\log_a x} = x$, where $a \neq 0$ and $a \neq \pm 1$
7. $\log_a a^x = x$
8. $e^{\log_e f(x)} = f(x)$
9. $\log_e e^{f(x)} = f(x)$
10. $x^{\log_a y} = y^{\log_a x}$; where $x > 0, y > 0, a > 0, a \neq 1$.
11. $\log_a x = \frac{1}{\log_x a}; a>0, a\neq 1, x>0, x\neq 1.$
12. The function $\log_a x$ and a^x are inverse of each other. So their graphs are *mirror images* of each other in the line mirror $y = x$.
13. The functions $\log_e x$ and e^x are inverse of each other and so their graphs are mirror images of each other in the line *mirror* $y = x$.



Use of Chain Rule

1. Prove that $\frac{d}{dx}|f(x)| = \frac{f(x)}{|f(x)|}.f'(x)$

Soln :– Let $y = |f(x)| = \left[(f(x))^2\right]^{\frac{1}{2}}$

$$\therefore \frac{dy}{dx} = \frac{1}{2}\left[(f(x))^2\right]^{\frac{1}{2}-1} \frac{d}{dx}(f(x))^2$$

$$[\therefore |f(x)|^2 = (f(x))^2]$$

$$\Rightarrow \frac{1}{2\left[(f(x))^2\right]^{\frac{1}{2}}}.2f(x)f'(x) = \frac{f(x)}{|f(x)|}.f'(x)$$

Hence $\frac{d}{dx}|f(x)| = \frac{f(x)}{|f(x)|}.f'(x)$

Cor. $\frac{d}{dx}|(x)| = \frac{x}{|x|}.\frac{d}{dx}(x) = \frac{x}{|x|}.1 = \frac{x}{|x|}, x \neq 0$

Cor. $\frac{d}{dx}\log_e|x| = \frac{1}{|x|}.\frac{d}{dx}|x| = \frac{1}{|x|}.\frac{x}{|x|}$

$$= \frac{x}{|x|^2} = \frac{x}{x^2} = \frac{1}{x} \quad (\text{where } x \neq 0)$$

Cor. $\frac{d}{dx}\log_e f(x) = \frac{1}{f(x)}.\frac{d}{dx}f(x) = \frac{f'(x)}{f(x)}$

Cor. $\frac{d}{dx}a^{f(x)} = \{a^{f(x)}.\log_e a\}.\frac{d}{dx}f(x)$

$$= \{a^{f(x)}.\log_e a\}.f'(x)$$

Cor. $\frac{d}{dx}e^{f(x)} = e^{f(x)}.\frac{d}{dx}f(x) = e^{f(x)}.f'(x)$

Cor. $\frac{d}{dx}\{f(x)\}^n = n\{f(x)\}^{n-1}..\frac{d}{dx}f(x)$

$$= n\{f(x)\}^{n-1}.f'(x)$$

2. Differentiate the following w. r. t. x:

i) $4e^x$ **ii)** $5(3^x)$ **iii)** e^{2x} **iv)** $\log_3 x$

v) $= \frac{1}{\log_x 4}$ **vi)** $\log_e x^4$ **vii)** $\log x^2$

viii) $\sin(\cos x^2)$

Soln :– (i) $\frac{d}{dx}4e^x = 4\frac{d}{dx}e^x = 4e^x \quad \left[\because \frac{d}{dx}e^x = e^x\right]$

(ii) $\frac{d}{dx}5(3^x) = 5\frac{d}{dx}3^x = 5(3^x \log_e 3)$

$$\left[\because \frac{d}{dx}a^x = a^x \log_e a\right]$$

(iii) $\frac{d}{dx}e^{2x} = \frac{d}{dx}(e^2)^x = (e^2)^x \log_e e^2$

$$= e^{2x}(2\log_e e) = e^{2x}(2)(1) = 2e^{2x}$$

$$\left[\because \frac{d}{dx}a^x = a^x \log_e a \text{ and } \log_e e = 1\right]$$

Second Method (by Chain Rule)

$$\frac{d}{dx}e^{2x} = e^{2x}\frac{d}{dx}(2x)$$

$$= (e^{2x})2\frac{d}{dx}x = e^{2x}(2)(1)$$

$$= 2e^{2x}.$$

iv) $\frac{d}{dx}\log_3 x = \frac{1}{x}\log_3 e$

$$\left[\because \frac{d}{dx}\log_a x = \frac{1}{x}\log_a e\right]$$

v) $\frac{d}{dx}\left(\frac{1}{\log_x 4}\right) = \frac{d}{dx}\log_4 x$

$$= \frac{1}{x}\log_4 e \quad \left[\because \frac{1}{\log_b a}\log_a b\right]$$

vi) $\frac{d}{dx}\log_e x^4 = \frac{d}{dx}4\log_e x$

$$= 4\frac{d}{dx}\log_e x = 4\left(\frac{1}{x}\right) = \frac{4}{x}.$$

vii) $\frac{d}{dx}\log x^2 = \frac{d}{dx}2\log x$

$$= 2\frac{d}{dx}\log x = 2\left(\frac{1}{x}\right) = \frac{2}{x}$$

viii) $\frac{d}{dx}\sin(\cos x^2) = \cos(\cos x^2)\frac{d}{dx}\cos x^2$

$$= \cos(\cos x^2)\left\{(-\sin x^2)\frac{d}{dx}x^2\right\}$$

$$= -\cos(\cos x^2)(\sin x^2)(2x)$$

ರಾಜ್ಯದ ವಿವಿಧೆಡೆ ವರುಣನ ಆರ್ಭಟ • ಒಣಗಲಾರಂಭಿಸಿದ್ದ ಅಡಿಕೆ ತೋಟಗಳಿಗೆ ಜೀವಕಳೆ

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಅತ್ಯಧಿಕ ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು/ಮಂಗಳೂರು: ಮೈಸೂರು ಭಾಗದಲ್ಲಿ ಸೋಮವಾರವೂ ಉತ್ತಮ ಮಳೆ ಸುರಿದಿದ್ದು, ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಭಾನುವಾರ ರಾತ್ರಿ ರಾಜ್ಯದಲ್ಲೇ ಅತ್ಯಧಿಕ ಮಳೆ ಪ್ರಮಾಣ ದಾಖಲಾಗಿದೆ. ಸೋಮವಾರ ಮುಂಜಾನೆ 8.30ಕ್ಕೆ ಕೊನೆಗೊಂಡಂತೆ ಪಿರಿಯಾಪಟ್ಟಣ ತಾಲ್ಲೂಕಿನ ಚನ್ನಕಲ್‌ಕಾವಲ್‌ನಲ್ಲಿ 12 ಸೆಂ.ಮೀ. ಹಾಗೂ ಚಿಕ್ಕನೇರಳೆ ವ್ಯಾಪ್ತಿಯಲ್ಲಿ 10 ಸೆಂ.ಮೀ ಹಾಗೂ ಮೈಸೂರು ತಾಲ್ಲೂಕಿನ ಅಲನಹಳ್ಳಿ ಸುತ್ತಮುತ್ತ 10 ಸೆಂ.ಮೀ.ನಷ್ಟು ಮಳೆಯಾಗಿದೆ.

ದಕ್ಷಿಣ ಕನ್ನಡ, ಚಿಕ್ಕಮಗಳೂರು, ಉಡುಪಿ ಜಿಲ್ಲೆಯ ಕೆಲವೆಡೆಯೂ ಮಳೆಯಾಗಿದೆ.

ಕೊಡಗು ಜಿಲ್ಲೆಯ ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಭಾರಿ ಮಳೆಯಾಗಿದೆ. ಮೈಸೂರು, ಹುಣಸೂರು, ತಿ. ನರಸೀಪುರ ತಾಲ್ಲೂಕುಗಳಲ್ಲೂ ವರುಣ ಅಬ್ಬರಿಸಿದ್ದು, ಸೋಮವಾರ ಮಧ್ಯಾಹ್ನವೂ ಉತ್ತಮ ಮಳೆ ಸುರಿಯಿತು. ಹಳ್ಳಗಳು ತುಂಬಿ ಹರಿದಿದ್ದು, ಕೆರೆ-ಕಟ್ಟೆಗಳಿಗೆ ನೀರಿನ ಸಂಗ್ರಹವಾಗತೊಡಗಿದೆ. ಕೆಲವೆಡೆ ಹೊಲಗಳಲ್ಲಿ ನೀರು ನಿಂತಿದೆ.

ಚಾಮರಾಜನಗರ ಜಿಲ್ಲೆಯಾದ್ಯಂತ ಇಡೀ ದಿನ ಬಿರುಸಿನ ಮಳೆಯಾಗಿದೆ. ಕೊಳ್ಳೇಗಾಲ ನಗರ ಹಾಗೂ ತಾಲ್ಲೂಕು ವ್ಯಾಪ್ತಿಯಲ್ಲಿ, ಗುಂಡ್ಲುಪೇಟೆ ತಾಲ್ಲೂಕಿನ ಹಿಮವದ್‌ ಗೋಪಾಲಸ್ವಾಮಿ ಬೆಟ್ಟದ ಸುತ್ತಮುತ್ತ ಧಾರಾಕಾರ ಮಳೆಯಾಗಿದ್ದು, ಬೆಟ್ಟದ ತಪ್ಪಲಿನಲ್ಲಿರುವ ಗೇಟ್ ಪ್ರದೇಶದ ರಸ್ತೆಯಲ್ಲಿ ಭಾರಿ ಪ್ರಮಾಣದಲ್ಲಿ ನೀರು ಹರಿದಿದೆ.

ಹಾಸನ ಜಿಲ್ಲೆಯ ಹಾಸನ, ಹೊಳೆನರಸೀಪುರ ಅರಕಲಗೂಡು, ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಧಾರಾಕಾರ ಮಳೆಯಾಗಿದೆ. ಅರಕಲಗೂಡು ತಾಲ್ಲೂಕಿನ ಕೊಣನೂರು ಸುತ್ತಲಿನ ಪ್ರದೇಶಗಳಲ್ಲಿ ಭಾನುವಾರ ರಾತ್ರಿ ಮತ್ತು ಸೋಮವಾರ ಬೆಳಿಗ್ಗೆಯಿಂದ ಸಂಜೆಯವರೆಗೆ ಮಳೆ ಸುರಿಯಿತು.

ಮಡಿಕೇರಿ ತಾಲ್ಲೂಕಿನ ಬಲ್ಲಮಾವಟಿ, ಚೆಂಬು, ಪೆರಾಜೆ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾಗಿದೆ. ಮಡಿಕೇರಿ ನಗರದಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿದೆ. ಸೋಮವಾರಪೇಟೆಯಲ್ಲೂ ಉತ್ತಮ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆ ಅಜ್ಜಂಪುರ ತಾಲ್ಲೂಕಿನ ಶಿವನಿ ಹೋಬಳಿ ಧಾರಾಕಾರ ಮಳೆ ಸುರಿದಿದೆ. ಹಳ್ಳ-ಕೊಳ್ಳಗಳು ತುಂಬಿ ಹರಿದಿವೆ. ಒಣಗಲಾರಂಭಿಸಿದ್ದ ಅಡಿಕೆ ತೋಟಗಳಿಗೆ ಮಳೆನೀರು ಜೀವಕಳೆ ತಂದಿದೆ. ಚಿಕ್ಕಮಗಳೂರು, ಚೌಳಹಿರಿಯೂರು, ಅಮೃತಾಪುರ, ಹಿರೇಗೌಜ, ಪಂಚನಹಳ್ಳಿ ಸುತ್ತಮುತ್ತ ಜೋರು ಮಳೆಯಾಗಿದೆ.



ಸೋಮವಾರ ಮಳೆ ನೀರಿನಿಂದ ಆವೃತವಾಗಿದ್ದ ಮೈಸೂರಿನ ಆದಿಚುಂಚನಗಿರಿ ರಸ್ತೆಯಲ್ಲಿ ವಾಹನ ಸವಾರರು ಸಾಗಿದ ರೀತಿ.
–ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಹೊಸಪೇಟೆ/ ಬಳ್ಳಾರಿ ವರದಿ: ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆ ಕೆಲವೆಡೆ ಭಾನುವಾರ ರಾತ್ರಿ ಉತ್ತಮ ಮಳೆಯಾಗಿದ್ದು, ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ ಹೋಬಳಿಯ ಹೊಸಹಳ್ಳಿ ಸೇತುವೆಯ ಒಂದು ಬದಿ ಭಾಗಶಃ ಕುಸಿದಿದೆ.

ತುಮಕೂರು ವರದಿ: ಜಿಲ್ಲೆಯಲ್ಲಿ ಸೋಮವಾರ ಸಹ ನಗರದಲ್ಲಿ ಒಂದು ತಾಸಿಗೂ ಹೆಚ್ಚು ಮಳೆ ಸುರಿಯಿತು. ನಗರದಲ್ಲಿ ಸಂಜೆ 4 ಗಂಟೆಗೆ ಆರಂಭವಾದ ಮಳೆ ಒಂದು ತಾಸು ಸುರಿಯಿತು. ನಂತರ ಜಿಟಿಜಿಟಿ ಮಳೆ ಮುಂದುವರಿದಿತ್ತು.

ಶಿರಾ ನಗರದಲ್ಲಿ ಭಾನುವಾರ ರಾತ್ರಿ ಉತ್ತಮ ಮಳೆಯಾಗಿದ್ದು, 18ನೇ ವಾರ್ಡ್‌ನ ಬೇಗಂ ಮೊಹಲ್ಲಾದಲ್ಲಿ ಮನೆಗಳಿಗೆ ನೀರು ನುಗ್ಗಿತ್ತು.

ಬಿತ್ತನೆಗೆ ಅಡ್ಡಿ: ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ ಹೋಬಳಿಯಲ್ಲಿ ಕಳೆದ ಮೂರು ದಿನಗಳಿಂದ ಸತತ ಮಳೆ ಬೀಳುತ್ತಿರುವ ಕಾರಣ ಕೆಲ ಭಾಗಗಳಲ್ಲಿನ ತೋಟ, ಹೊಲ ಮತ್ತು ಕಟ್ಟೆಗಳಲ್ಲಿ ನೀರು ಸಂಗ್ರಹವಾಗಿದೆ. ರೈತರು ಹೆಜ್ಜೆ ಇಡದಷ್ಟು ಕೆಸರು ಗದ್ದೆಗಳಾಗಿ ಮಾರ್ಪಟ್ಟಿವೆ.

ಗುರುಮಠಕಲ್ ವರದಿ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ರಾಮಪುರ (ಜಿ) ಗ್ರಾಮದಲ್ಲಿ ಸೋಮವಾರ ಸಿಡಿಲು ಬಡಿದು ರೈತರೊಬ್ಬರು ಸ್ಥಳದಲ್ಲೇ ಮೃತಪಟ್ಟರು. ದ್ವಾರ. ರಾಮಪುರ (ಜಿ) ಗ್ರಾಮದ ಚಂದಪ್ಪ ನಾಗಪ್ಪ ಕಪನೋರ (52) ಮೃತ ರೈತರು.

ರಾಜ್ಯದಲ್ಲಿ ಧಾರಾಕಾರ ಮಳೆ ಮುಂದುವರಿಕೆ

ಬೆಂಗಳೂರು: ರಾಜ್ಯದ ಮಲೆನಾಡು, ಉತ್ತರ ಹಾಗೂ ದಕ್ಷಿಣ ಒಳನಾಡಿನಲ್ಲಿ ಇನ್ನೂ ನಾಲ್ಕು ದಿನಗಳು ಗುಡುಗು ಸಹಿತ ಧಾರಾಕಾರ ಮಳೆ ಮುಂದುವರಿಯುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

'ಇದೇ 21 ಹಾಗೂ 22ರಂದು ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಯಲ್ಲಿ ಧಾರಾಕಾರ ಮಳೆ ಮುಂದುವರಿಯುವ ಸಾಧ್ಯತೆಯಿದ್ದು 'ಯೆಲ್ಲೊ ಅಲರ್ಟ್' ಸೂಚನೆ ನೀಡಲಾಗಿದೆ.

23ರಂದು ದಕ್ಷಿಣ ಕನ್ನಡ, ಕೋಲಾರ, ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ನಗರ, ಚಿಕ್ಕಮಗಳೂರು, ರಾಮನಗರ, ಚಾಮರಾಜನಗರ ಹಾಗೂ 24ರಂದು ಉಡುಪಿ, ದಕ್ಷಿಣ ಕನ್ನಡ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಸೂಚನೆ ಕೊಡಲಾಗಿದೆ.


ಹಾವೇರಿ, ವಿಜಯಪುರ, ಧಾರವಾಡ, ಗದಗ, ದಾವಣಗೆರೆ, ವಿಜಯನಗರ ಜಿಲ್ಲೆಗಳಲ್ಲಿ ಬಿರುಗಾಳಿಯು ಪ್ರತಿ ಗಂಟೆಗೆ 40ರಿಂದ 50 ಕಿ.ಮೀ ವೇಗದಲ್ಲಿ ಬೀಸಲಿದೆ ಎಂದು ಸೂಚನೆ ನೀಡಲಾಗಿದೆ.

ಮಳೆ ಪ್ರಮಾಣ (ಸೆಂ.ಮೀಗಳಲ್ಲಿ)

ಯಲ್ಲಾಪುರ (ಉತ್ತರ ಕನ್ನಡ);10
ಮಹದೇಶ್ವರ ಬೆಟ್ಟ (ಚಾಮರಾಜನಗರ);8
ಎಚ್.ಡಿ.ಕೋಟೆ (ಮೈಸೂರು), ಕೊಳ್ಳೇಗಾಲ (ಚಾಮರಾಜನಗರ), ಶಿರಾ (ತುಮಕೂರು); ಯಗಟಿ (ಚಿಕ್ಕಮಗಳೂರು);7
ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ), ಶ್ರವಣಬೆಳಗೊಳ (ಹಾಸನ), ಭಾಗಮಂಡಲ (ಕೊಡಗು);6
ಕಿರವತ್ತಿ (ಉತ್ತರ ಕನ್ನಡ), ಮಂಗಳೂರು (ದಕ್ಷಿಣ ಕನ್ನಡ);5

ಯಮ ಸಲ್ಲೇಖನ ವ್ರತ ಸಮಾಧಿಸೇನ ಮುನಿ ಜಿನೈಕ್ಯ

ಪ್ರಜಾವಾಣಿ ವಾರ್ತೆ



ಸಮಾಧಿಸೇನ ಮುನಿ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಕೋಥಳಿಯ ದೇಶಭೂಷಣ ಮುನಿಗಳ ಜೈನ ಆಶ್ರಮದಲ್ಲಿ ನಾಲ್ಕು ದಿನಗಳಿಂದ ಯಮ ಸಲ್ಲೇಖನ ವ್ರತ ಕೈಗೊಂಡಿದ್ದ ಸಮಾಧಿಸೇನ ಮುನಿ (79) ಸೋಮವಾರ ರಾತ್ರಿ 9.30ಕ್ಕೆ ಜಿನೈಕ್ಯರಾದರು.

ಆಶ್ರಮದ ಆವರಣದಲ್ಲೇ ಮಂಗಳವಾರ (ಮೇ 21) ಬೆಳಿಗ್ಗೆ 9.30ಕ್ಕೆ ಸಮಾಧಿಸೇನ ಮುನಿ ಅವರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಆಶ್ರಮದ ಮೂಲಗಳು ತಿಳಿಸಿವೆ.

ಮೇ 17ರಿಂದ ಅವರು ನಾಲ್ಕು ಪ್ರಕಾರದ ಆಹಾರ (ಲೇಹ, ಪೇಯ, ಸ್ವಾದ್ಯ ಮತ್ತು ಖಾದ್ಯ) ತ್ಯಾಗ ಮಾಡಿದ್ದರು. ಚಿಕ್ಕೋಡಿ, ನಿಪ್ಪಾಣಿ, ಕಾಗವಾಡ, ಅಥಣಿ ತಾಲ್ಲೂಕು, ಪಕ್ಕದ ಮಹಾರಾಷ್ಟ್ರದ ಕೊಲ್ಹಾಪುರ ಮತ್ತು ಸಾಂಗ್ಲಿ ಜಿಲ್ಲೆಯಿಂದ ಅಪಾರ ಸಂಖ್ಯೆಯಲ್ಲಿ ಜನರು ಆಶ್ರಮಕ್ಕೆ ಬಂದು, ಮುನಿಗಳ ದರ್ಶನ ಪಡೆದರು.

ಗದಗ ಜಿಲ್ಲೆಯ ಗಜೇಂದ್ರಗಡದವರಾದ ಸಮಾಧಿಸೇನ ಮುನಿ ಅವರು ಗುಲಾಬಭೂಷಣ ಮುನಿ ಅವರ ಶಿಷ್ಯರಾಗಿದ್ದರು. ಸಂಸಾರಿಯಾಗಿದ್ದ ಅವರು, 2004ರಲ್ಲಿ ಮನೆ ತೊರೆದು ತ್ಯಾಗಿಯಾಗಿ ದೀಕ್ಷೆ ಪಡೆದು ಜೈನಧರ್ಮದ ಪ್ರಸಾರ ಕಾರ್ಯದಲ್ಲಿ ತೊಡಗಿದ್ದರು. 2014ರಲ್ಲಿ ಮಹಾರಾಷ್ಟ್ರದ ಚಿವರಿ ಆಶ್ರಮದ ಧರ್ಮಸೇನ ಮುನಿ ಅವರಿಂದ ಕ್ಷುಲ್ಲಕ ದೀಕ್ಷೆ ಪಡೆದರು. 2021ರಲ್ಲಿ ಗುಲಾಬಭೂಷಣ ಮುನಿ ಅವರಿಂದ ಮುನಿ ದೀಕ್ಷೆ ಪಡೆದಿದ್ದರು.

ಕೋಥಳಿಯ ಆಶ್ರಮದಲ್ಲಿ ದೇಶಭೂಷಣ ಮುನಿಗಳು ಸೇರಿ 40ಕ್ಕೂ ಅಧಿಕ ಜೈನ ಮುನಿಗಳು ಈವರೆಗೆ ಯಮ ಸಲ್ಲೇಖನ ವ್ರತ ಕೈಗೊಂಡು ದೇಹತ್ಯಾಗ ಮಾಡಿದ್ದಾರೆ. ಈ ಕಾರಣ ದೇಶದಲ್ಲೇ ಈ ಆಶ್ರಮಕ್ಕೆ ದೊಡ್ಡ ಹೆಸರು ಇದೆ.

ಅತ್ಯಾಚಾರ ಆರೋಪ: ಶಾಸಕ ರೇವಣ್ಣಗೆ ಷರತ್ತುಬದ್ಧ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಮನೆಯಲ್ಲಿ ಅಡುಗೆ ಕೆಲಸ ಮಾಡುತ್ತಿದ್ದ ಮಧ್ಯ ವಯಸ್ಸಿನ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಶಾಸಕ ಎಚ್.ಡಿ. ರೇವಣ್ಣ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ಕಾಯ್ದಿರಿಸಲಾಗಿದ್ದ ಆದೇಶವನ್ನು 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ (42ನೇ ಎಸಿಎಂಎಂ ಕೋರ್ಟ್) ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಜೆ. ಪ್ರೀತ್ ಸೋಮವಾರ ಪ್ರಕಟಿಸಿದರು.



ಎಚ್.ಡಿ. ರೇವಣ್ಣ

₹5 ಲಕ್ಷ ಮೊತ್ತದ ಬಾಂಡ್ ಹಾಗೂ ಇಷ್ಟೇ ಮೊತ್ತಕ್ಕೆ ಒಬ್ಬರ ಭದ್ರತೆ ನೀಡಬೇಕು ಎಂಬುದೂ ಸೇರಿ ವಿವಿಧ ಷರತ್ತುಗಳನ್ನು ವಿಧಿಸಲಾಗಿದೆ.

ಈ ಮೊದಲು ಇದೇ ನ್ಯಾಯಾಲಯ ನೀಡಿದ್ದ ಮಧ್ಯಂತರ ಜಾಮೀನಿಗೆ ಪ್ರಾಸಿಕ್ಯೂಷನ್ ತೀವ್ರ ವಿರೋಧ ವ್ಯಕ್ತಪಡಿಸಿತ್ತು. ಈ ಅರ್ಜಿಯು 'ಪರಿಶೀಲನೆಗೆ ಅರ್ಹವೊ ಅಲ್ಲವೋ' (ಮೇಂಟೇನೆಬಿಲಿಟಿ) ಎಂಬ ಆಕ್ಷೇಪದ ಮೇಲಿನ ವಾದ-ಪ್ರತಿವಾದ ಆಲಿಸಿ ಆದೇಶವನ್ನು ನ್ಯಾಯಾಲಯ ಕಾಯ್ದಿರಿಸಿತ್ತು.

ಜಿ.ಆರ್. ಫಾರ್ಮ್ ಹೌಸ್ ಮೇಲೆ ಸಿಸಿಬಿ ದಾಳಿ • ಆಂಧ್ರ ಪ್ರದೇಶ ಸಚಿವರ ಪಾಸ್ ಪತ್ತೆ

ಆನೇಕಲ್‌ನಲ್ಲಿ ರೇವ್ ಪಾರ್ಟಿ: ಐವರ ಸೆರೆ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯ ಹುಸ್ಕೂರು ಬಳಿಯ ಜಿ.ಆರ್. ಫಾರ್ಮ್ ಹೌಸ್‌ನಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಪಾರ್ಟಿ ಆಯೋಜಕ ವಾಸು ಸೇರಿದಂತೆ ಐವರನ್ನು ಬಂಧಿಸಿದ್ದಾರೆ.

'ಸನ್‌ಸೆಟ್ ಟು ಸನ್‌ರೈಸ್ ವಿಕ್ಟರಿ' ಹೆಸರಿನಲ್ಲಿ ಭಾನುವಾರ ರಾತ್ರಿ ರೇವ್ ಪಾರ್ಟಿ ಆಯೋಜಿಸಲಾಗಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಲಾಯಿತು' ಎಂದು ಸಿಸಿಬಿ ಹೆಚ್ಚುವರಿ ಪೊಲೀಸ್ ಕಮಿಷನರ್ ಚಂದ್ರಗುಪ್ತ ತಿಳಿಸಿದರು.

'ರೇವ್ ಪಾರ್ಟಿಯಲ್ಲಿ ಸುಮಾರು 100 ಮಂದಿ ಭಾಗಿಯಾಗಿದ್ದು ಕಂಡುಬಂತು. ಪಾರ್ಟಿ ಸಂಬಂಧ ಐವರನ್ನು ಬಂಧಿಸಲಾಯಿತು. ಇವರಿಂದ 15.56 ಗ್ರಾಂ ಎಂಡಿಎಂಎ, 6.2 ಗ್ರಾಂ ಕೊಕೇನ್, 6 ಗ್ರಾಂ ಹೈಡ್ರೊ ಗಾಂಜಾ, 5 ಮೊಬೈಲ್ ಹಾಗೂ 2 ಕಾರುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

ರಿಯಲ್ ಎಸ್ಟೇಟ್ ಉದ್ಯಮಿ ಫಾರ್ಮ್ ಹೌಸ್: 'ಕಾನ್‌ಕಾರ್ಡ್ ರಿಯಲ್ ಎಸ್ಟೇಟ್ ಕಂಪನಿ ಸಂಸ್ಥಾಪಕ ಆರ್. ಗೋಪಾಲ್ ರೆಡ್ಡಿ ಅವರಿಗೆ ಸೇರಿದ್ದ ಜಿ.ಆರ್. ಫಾರ್ಮ್ ಹೌಸ್‌ನಲ್ಲಿ ಭಾನುವಾರ ರಾತ್ರಿಯಿಂದ ಸೋಮವಾರ ನಸುಕಿನವರೆಗೆ ಪಾರ್ಟಿ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ರಾತ್ರಿಯೇ ಸಿಸಿಬಿ ದಾಳಿ ಮಾಡಿದೆ' ಎಂದು ಮೂಲಗಳು ತಿಳಿಸಿವೆ.

'ಕಾರ್ಯಕ್ರಮ ಸಂಘಟನೆ ಕಂಪನಿ ನಿರ್ವಹಣೆ ಮಾಡುತ್ತಿರುವ ಹೈದರಾಬಾದ್‌ನ ವಾಸು ಎಂಬಾತ ಈ ಪಾರ್ಟಿ ಆಯೋಜಿಸಿದ್ದ. ತನ್ನ ಹುಟ್ಟುಹಬ್ಬವೆಂದು ಹೇಳಿ, ಫಾರ್ಮ್ ಹೌಸ್‌ನಲ್ಲಿ ಪಾರ್ಟಿಗೆ ಸಿದ್ಧತೆ ಮಾಡಿಕೊಂಡಿದ್ದ. ಇದಕ್ಕಾಗಿ ಸುಮಾರು ₹30 ಲಕ್ಷ ಖರ್ಚು ಮಾಡಿದ್ದ. ತೆಲುಗು ಸಿನಿಮಾ ಕ್ಷೇತ್ರದ ನಟ–ನಟಿಯರು, ಸಹ ನಟ–ನಟಿಯರು, ಉದ್ಯಮಿಗಳು, ರಾಜಕಾರಣಿಗಳು, ಸಾಫ್ಟ್‌ವೇರ್ ಎಂಜಿನಿಯರ್‌ಗಳು ಹಾಗೂ ಪ್ರಭಾವಿಗಳ ಮಕ್ಕಳನ್ನು ಪಾರ್ಟಿಗೆ ಆಹ್ವಾನಿಸಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳ ಹೇಳಿವೆ.

'ಶ್ವಾನ ದಳದ ಸಿಬ್ಬಂದಿ ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು, 6 ಗಂಟೆಗೂ ಹೆಚ್ಚು ಹೊತ್ತು ಫಾರ್ಮ್‌ಹೌಸ್‌ನಲ್ಲಿ ಶೋಧ ನಡೆಸಿದರು. ಕೆಲವರು, ಮಾದಕ ವಸ್ತುವನ್ನು ಫಾರ್ಮ್ ಹೌಸ್‌ನಿಂದ ಹೊರಗಡೆ ಬಿಸಾಕಿದ್ದರು' ಎಂದು ತಿಳಿಸಿವೆ.

ಯುವತಿಯರೂ ಭಾಗಿ: 'ಪಾರ್ಟಿಯಲ್ಲಿ ಪಾಲ್ಗೊಂಡಿದ್ದ 100 ಮಂದಿಯನ್ನು ವಶಕ್ಕೆ ಪಡೆದು, 1ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಈ ಪೈಕಿ 30ಕ್ಕೂ ಹೆಚ್ಚು ಯುವತಿಯರು ಇದ್ದಾರೆ. ಅವರಲ್ಲಿ ಯಾರೆಲ್ಲ ಮಾದಕ ವಸ್ತು ತೆಗೆದುಕೊಂಡಿದ್ದಾರೆ ಎಂಬುದು ಪರೀಕ್ಷೆ ವರದಿಯಿಂದ ಗೊತ್ತಾಗಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸಿಸಿಬಿ ಡಿಸಿಪಿ ಶ್ರೀನಿವಾಸ್ ಗೌಡ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಂಧ್ರ ಸಚಿವರ ಪಾಸ್ ಪತ್ತೆ: 'ಫಾರ್ಮ್‌ಹೌಸ್‌ನಲ್ಲಿದ್ದ ಕಾರ್‌ವೊಂದರ ಮೇಲೆ, ಆಂಧ್ರಪ್ರದೇಶದ ಸಚಿವ ಕಾಕನಿ ಗೋವರ್ಧನ್ ರೆಡ್ಡಿ ಹೆಸರಿನ ಪಾಸ್ ಅಂಟಿಸಲಾಗಿದೆ. ಈ ಕಾರನ್ನು ಜಪ್ತಿ ಮಾಡಿ, ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ಬಹುತೇಕರು, ಆಂಧ್ರಪ್ರದೇಶದವರೆಂಬುದು ಗೊತ್ತಾಗಿದೆ. ಪಾರ್ಟಿಗೆ ಮಾದಕ ವಸ್ತು ಪೂರೈಕೆ ಮಾಡಿದ್ದವರನ್ನು ಬಂಧಿಸಲಾಗಿದೆ' ಎಂದು ಹೇಳಿವೆ. 'ತೆಲುಗಿನ ಕೆಲ ನಟರು ಹಾಗೂ ನಟಿಯರು ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು ಎಂಬ ಬಗ್ಗೆ ಮಾಹಿತಿ ಇದೆ. ಈಗಾಗಲೇ ವಶಕ್ಕೆ ಪಡೆದಿರುವ 100 ಮಂದಿಯಿಂದ ಹೇಳಿಕೆ ಪಡೆಯಲಾಗುತ್ತಿದೆ. ಹೇಳಿಕೆ ಪರಿಶೀಲನೆ ನಡೆಸಿದ ಬಳಿಕವೇ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದು ಮೂಲಗಳು ತಿಳಿಸಿವೆ.



ಆನೇಕಲ್ ತಾಲ್ಲೂಕಿನ ಹುಸ್ಕೂರು ಬಳಿಯ ಜಿ.ಆರ್. ಫಾರ್ಮ್ ಹೌಸ್

'ಹೆಬ್ಬಗೋಡಿ ಠಾಣೆಗೆ ಪ್ರಕರಣ ವರ್ಗ'

'ರೇವ್ ಪಾರ್ಟಿಗೆ ಸಂಬಂಧಪಟ್ಟಂತೆ ಸಿಸಿಬಿ ಪೊಲೀಸರು, ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಎನ್‌ಡಿಪಿಎಸ್ ಕಾಯ್ದೆಯಡಿ ಎಫ್‌ಐಆರ್ ದಾಖಲಾಗಿದೆ. ಪಾರ್ಟಿ ನಡೆದಿದ್ದ ಸ್ಥಳದ ಆಧಾರದಲ್ಲಿ ಪ್ರಕರಣವನ್ನು ಹೆಬ್ಬಗೋಡಿ ಠಾಣೆಗೆ ವರ್ಗಾಯಿಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಜಿ.ಆರ್. ಫಾರ್ಮ್ ಹೌಸ್‌ನಲ್ಲಿ ಪಾರ್ಟಿ ನಡೆಯುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಎಲೆಕ್ಟ್ರಾನಿಕ್ ಸಿಟಿ ಠಾಣೆ ವ್ಯಾಪ್ತಿಯಲ್ಲಿ ಫಾರ್ಮ್ ಹೌಸ್ ಇರಬಹುದೆಂದು ತಿಳಿದಿದ್ದ ಸಿಸಿಬಿ ಅಧಿಕಾರಿಗಳು, ದಾಳಿ ಮಾಡಿದರು. ಪರಿಶೀಲನೆ ನಡೆಸಿದಾಗ, ಠಾಣೆ ವ್ಯಾಪ್ತಿ ಬೇರೆಯದ್ದೆಂದು ಗೊತ್ತಾಗಿದೆ. ಅಕ್ರಮ ತಡೆಯಲು ಸಿಸಿಬಿ ಕಾರ್ಯಾಚರಣೆ ನಡೆಸಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸರಿಗೆ ಎಲ್ಲ ಪುರಾವೆ ಹಾಗೂ ಕಡತಗಳನ್ನು ಹಸ್ತಾಂತರಿಸಲಾಗುವುದು' ಎಂದು ತಿಳಿಸಿದರು.

'ಪಾರ್ಟಿಯಲ್ಲಿ ತೆಲುಗು ನಟಿ ಹೇಮಾ ಭಾಗಿ'

'ತೆಲುಗು ಸಿನಿಮಾ ನಟಿ ಹೇಮಾ ಸಹ ರೇವ್ ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು. ಅವರನ್ನೂ ವಿಚಾರಣೆ ನಡೆಸಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಭಾನುವಾರ ಬೆಂಗಳೂರಿಗೆ ಬಂದಿದ್ದ ಹೇಮಾ, ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು. ಸಿಸಿಬಿ ದಾಳಿ ವೇಳೆಯೂ ಅವರು ಸ್ಥಳದಲ್ಲಿದ್ದರು. ವಿಚಾರಣೆ ಮಾಡಿ, ಅವರನ್ನು ಬಿಟ್ಟು ಕಳುಹಿಸಲಾಗಿತ್ತು. ಬಳಿಕ, ಫಾರ್ಮ್ ಹೌಸ್ ಆವರಣದಲ್ಲಿಯೇ ನಿಂತು ವಿಡಿಯೊ ಮಾಡಿರುವ ಹೇಮಾ, 'ನಾನು ಪಾರ್ಟಿಯಲ್ಲಿ ಪಾಲ್ಗೊಂಡಿಲ್ಲ' ಎಂಬುದಾಗಿ ಹೇಳಿದ್ದರು. ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದರು. ವಿಡಿಯೊ ಪರಿಶೀಲನೆ ನಡೆಸಿದಾಗ, ಅವರು ಸುಳ್ಳು ಹೇಳಿ ವಿಡಿಯೊ ಮಾಡಿದ್ದರೆಂಬುದು ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

'ರೇವ್ ಪಾರ್ಟಿಗೆ ಸಂಬಂಧಪಟ್ಟಂತೆ ಆರೋಪಿಗಳಾದ ವಾಸು, ಅರುಣ್, ಸಿದ್ಧಿಕಿ, ರಣಧೀರ್ ಹಾಗೂ ಬಾಬು ಎಂಬುವವರನ್ನು ಬಂಧಿಸಲಾಗಿದೆ.

ಹಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಮರಣ ದಂಡನೆ

ಜೈಪುರ (ಪಿಟಿಐ): 14 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿ ಆಕೆಯನ್ನು ಕಲ್ಲಿದ್ದಲು ಕುಲುಮೆಯಲ್ಲಿ ಜೀವಂತ ಸುಟ್ಟುಹಾಕಿದ ಇಬ್ಬರು ಅಪರಾಧಿಗಳಿಗೆ ರಾಜಸ್ಥಾನದ ಭಿಲ್ವಾಡದ ಪೋಕ್ಸೊ ನ್ಯಾಯಾಲಯ ಸೋಮವಾರ ಮರಣ ದಂಡನೆ ವಿಧಿಸಿದೆ.


ನಾವ್ಯಾಕೆ ದೇವೇಗೌಡರ ಸಾವು ಬಯಸುತ್ತೇವೆ; ವೆಂಕಟೇಶ್

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ನಾವ್ಯಾಕೆ ದೇವೇಗೌಡರ ಸಾವು ಬಯಸುತ್ತೇವೆ? ಅವರ ಮನೆಯಲ್ಲಿ ನಡೆದಿರುವ ಅನಾಹುತಕ್ಕೆ ನಾವು ಕಾರಣವೇ? ಅವು ಅವರ ಮನೆಯವರೇ ಮಾಡಿಕೊಂಡ ಅನಾಹುತಗಳು' ಎಂದು ಪಶುಸಂಗೋಪನೆ, ರೇಷ್ಮೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೋಮವಾರ ಪ್ರತಿಪಾದಿಸಿದರು.

'ಕಾಂಗ್ರೆಸ್ ದೇವೇಗೌಡರ ಸಾವು ಬಯಸುತ್ತಿದೆ' ಎಂಬ ಜೆಡಿಎಸ್ ಆರೋಪದ ಬಗ್ಗೆ ನಗರದಲ್ಲಿ ಪ್ರತಿಕ್ರಿಯಿಸಿದ ಅವರು, 'ಅವರು ಮೂರ್ಖರಂತೆ ಮಾತನಾಡುತ್ತಿದ್ದಾರೆ. ಘಟನೆಯಿಂದ ದೇವೇಗೌಡರ ಮನಸ್ಸಿಗೆ ನೋವಾಗಿರುತ್ತದೆ. ಅವರು ಇನ್ನೂ ಹತ್ತಾರು ವರ್ಷ ಬದುಕಲಿ. ನಮಗೆ ತೊಂದರೆಯಿಲ್ಲ' ಎಂದರು.

'ದೇವರಾಜೇ ಗೌಡ ಜೈಲಿನಿಂದ ಹೊರಬಂದರೆ ಸರ್ಕಾರ ಬಿದ್ದು ಹೋಗುತ್ತದೆ' ಎಂಬ ಹೇಳಿಕೆ ಕುರಿತ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ದೇವರಾಜೇಗೌಡರಂತಹ ನೂರು ಜನ ಜೈಲಿಂದ ಹೊರಬಂದರೂ ಸರ್ಕಾರ ಬೀಳುವುದಿಲ್ಲ. ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಪೆನ್‌ಡ್ರೈವ್ ಹಂಚಿರುವುದು ಬಿಜೆಪಿಯ ಕುತಂತ್ರ. ಪೆನ್‌ಡ್ರೈವ್ ಇದೆ ಎಂದು ಹೇಳುತ್ತಿದ್ದವರು ದೇವರಾಜೇಗೌಡ. ಅವರೇ ಅದನ್ನು ಹೊರಗಡೆ ಬಿಟ್ಟಿರಬೇಕು. ಅವರ ಬಳಿ ಏನೇ ಸಾಕ್ಷಿ ಇದ್ದರೂ ಎಸ್‌ಐಟಿಗೆ ಕೊಡಲಿ. ಯಾರಾದರೂ ಕುತಂತ್ರ ಮಾಡಿರುವ ಸಾಕ್ಷಿ ಇದ್ದರೂ ಕೊಡಲಿ. ಪ್ರಜ್ವಲ್ ನಮ್ಮ ದೇಶದಲ್ಲಿ ಇಲ್ಲದಿರುವುದರಿಂದ ಬಂಧನ ಸಾಧ್ಯವಾಗಿಲ್ಲ' ಎಂದರು.



ಕೆ.ವೆಂಕಟೇಶ್

'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೇವೇಗೌಡರ ಕುಟುಂಬವನ್ನು ಗುರಿಯಾಗಿಸಿಕೊಂಡಿದ್ದಾರೆ' ಎಂಬ ಆರೋಪದ ಕುರಿತು ಪ್ರತಿಕ್ರಿಯಿಸಿ, 'ಕೆಟ್ಟದ್ದಕ್ಕೆ ಮಾತ್ರ ಡಿಕೆಶಿ ಹೆಸರು ಸೇರಿಸಲಾಗುತ್ತಿದೆ. ಅವರು ಮಾಡಿರುವ ಒಳ್ಳೆಯದ್ದರ ಬಗ್ಗೆ ಯಾರಾದರೂ ಮಾತನಾಡುತ್ತಾರಾ? ಅವರು ಮಾಡಿರುವ ಒಳ್ಳೆಯದ್ದಕ್ಕೂ ಅವರ ಹೆಸರು ಸೇರಿಸಬೇಕಲ್ಲಾ' ಎಂದು ಪ್ರಶ್ನಿಸಿದರು.

27ರಿಂದ 'ನಲಿ ಕಲಿ' ಆರಂಭ: ಮಧು ಬಂಗಾರಪ್ಪ

ಉಡುಪಿ: ಶಾಲೆಗಳ ಆರಂಭಕ್ಕೆ ಸಿದ್ಧತೆಗಳು ನಡೆಯುತ್ತಿದ್ದು ಪುಸ್ತಕ, ಸಮವಸ್ತ್ರ ಪೂರೈಕೆಯಾಗಲಿವೆ. ಇದೇ 27ರಿಂದ 'ನಲಿ ಕಲಿ' ಕಾರ್ಯಕ್ರಮ ಆರಂಭವಾಗಲಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

'ಕೆಪಿಎಸ್ ಶಾಲೆಗಳಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ಮುಂದಿನ ವರ್ಷ 500 ಕೆಪಿಎಸ್ ಶಾಲೆಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ. ಮುಂದಿನ ಮೂರು ವರ್ಷಗಳಲ್ಲಿ 3,000 ಸರ್ಕಾರಿ ಶಾಲೆಗಳನ್ನು ತೆರೆಯಲಾಗುವುದು. ಕಾರ್ಪೊರೇಟ್ ಸಂಸ್ಥೆಗಳ ಸಿಎಸ್‌ಆರ್ ನಿಧಿ ಬಳಸಿಕೊಂಡು ಪ್ರಸಕ್ತ ವರ್ಷ 500 ಸರ್ಕಾರಿ ಶಾಲೆ ಗಳನ್ನು ಮೇಲ್ದರ್ಜೆ ಗೇರಿಸಲಾಗುವುದು. ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಕನಿಷ್ಠ 3 ರಿಂದ ಗರಿಷ್ಠ 6 ಶಾಲೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ' ಎಂದು ಸಚಿವರು ತಿಳಿಸಿದರು. ಪರೀಕ್ಷಾ ಪಾವಿತ್ರ್ಯತೆ ಕಾಪಾಡುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಗ್ರೇಸ್ ಮಾರ್ಕ್ಸ್ ಪದ್ಧತಿ ಮುಂಬರುವ ವರ್ಷಗಳಲ್ಲಿ ಇರು ವುದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ನಮ್ಮ ದೂರವಾಣಿ ಕದ್ದಾಲಿಕೆ : ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಮತ್ತು ನಮ್ಮ ಕುಟುಂಬದವರ ದೂರವಾಣಿ ಕದ್ದಾಲಿಕೆ ನಡೆಯುತ್ತಿದೆ. ಕುಟುಂಬದ ಎಲ್ಲ ಸದಸ್ಯರ ಮೊಬೈಲ್ ಫೋನ್‌ಗಳನ್ನು ಕದ್ದಾಲಿಸಲಾಗುತ್ತಿದೆ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನನ್ನ ಸುತ್ತ ಇರುವ 40 ಜನರ ಮೊಬೈಲ್ ಫೋನ್‌ಗಳನ್ನೂ ಕದ್ದಾಲಿಸಲಾಗುತ್ತಿದೆ' ಎಂದರು.

'ಎಲ್.ಆರ್. ಶಿವರಾಮೇಗೌಡ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿಕೊಂಡು ದೇವೇಗೌಡರ ಕುಟುಂಬದ ವಿರುದ್ಧ ಷಡ್ಯಂತ್ರ ನಡೆಸಿರುವ ಆಡಿಯೊ ತುಣುಕು ಬಹಿರಂಗವಾಗಿದೆ. ಶಿವಕುಮಾರ್ ಪಾತ್ರ ಇರುವುದು ಸ್ಪಷ್ಟವಾಗಿದೆ. ಇಬ್ಬರ ವಿರುದ್ಧವೂ ಪ್ರಕರಣ ದಾಖಲಿಸಬೇಕು. ಆ ಆಡಿಯೊ ಮತ್ತು ವಿಡಿಯೊ ಅಸಲಿಯತ್ತು ಹೊರ ಬರಬೇಕು' ಎಂದು ಆಗ್ರಹಿಸಿದರು.

'ಶಿವರಾಮೇಗೌಡ ದೇವರಾಜೇಗೌಡರನ್ನು ಸದಾಶಿವ ನಗರಕ್ಕೆ ಏಕೆ ಕರೆದರು? ಅಲ್ಲಿ ನಮ್ಮ ಮನೆ ಇಲ್ಲ. ಅಲ್ಲಿರುವುದು ಸಿ.ಡಿ ಶಿವು ಮನೆ. ನಾನು ರೇವಣ್ಣ ಕುಟುಂಬ ಹಾಳು ಮಾಡಲು ಹೊರಟಿದ್ದೇನೆ ಎಂದು ಹೇಳಿಸಲು ಹೊರಟಿದ್ದೀರಿ. ನೀವು ಇನ್ನೂ ಯಾರ್‍ಯಾರ ಮನೆ ಹಾಳು ಮಾಡಿದ್ದೀರಿ' ಎಂದು ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು.

'ಏಪ್ರಿಲ್ 1ಕ್ಕೆ ಹೆಣ್ಣು ಮಗಳೊಬ್ಬಳು ದೂರು ಕೊಟ್ಟಿದ್ದರು. ಆದರೆ, ದೇವರಾಜೇಗೌಡರನ್ನು ಬಂಧಿಸಿದ್ದು ಯಾವಾಗ? ಪೆನ್ ಡ್ರೈವ್ ಬಹಿರಂಗ ಆದ ಬಳಿಕ ಹೆಣ್ಣುಮಗಳ ಮೂಲಕ ದೂರು ಕೊಡಿಸಿದರು. ಆ ಹೆಣ್ಣು ಮಗಳನ್ನು ಕರೆದುಕೊಂಡು ಬಂದವರು ಯಾರು? ಅವರಿಗೆ ಎಷ್ಟು ಹಣ ಕೊಟ್ಟರು' ಎಂದು ಕೇಳಿದರು.

ಡಿಜಿಪಿ ಕಚೇರಿಯಲ್ಲೇ ದೂರಿನ ಪ್ರತಿ ಟೈಪ್: 'ಇಡೀ ಪ್ರಕರಣದ ಮೂಲ ಯಾರು? ಅವರು ತಪ್ಪು ಮಾಡಿದ್ದರೆ ನೇಣಿಗೆ ಹಾಕಿ. ನಿಮ್ಮ ಪರ ನಾವಿದ್ದೇವೆ. ಆದರೆ, ರೇವಣ್ಣ ವಿರುದ್ಧ ಪೊಲೀಸರಿಗೆ ನೀಡಿದ ದೂರು ಡಿಜಿಪಿ ಕಚೇರಿಯಲ್ಲೇ ಟೈಪ್ ಆಗಿದೆ ಎಂದರೆ ಅದಕ್ಕೆ ಏನು ಹೇಳಬೇಕು? ರೇವಣ್ಣ ಮೇಲೆ ಹಾಕಿರುವ ಪ್ರಕರಣವನ್ನೇ ದೇವರಾಜೇಗೌಡ ಮೇಲೆಯೂ ಹಾಕಿ ಎಸ್‌ಐಟಿಯಿಂದ ಬಂಧನ ಮಾಡಿಸಿದ್ದಾರೆ. ಮುಖ್ಯಮಂತ್ರಿಯವರೇ ಇದೇನಾ ನಿಮ್ಮ ತನಿಖೆ? ನಿಮ್ಮ ತನಿಖೆ ಯಾವ ದಿಕ್ಕಿನಲ್ಲಿ ಹೋಗುತ್ತಿದೆ' ಎಂದು ಪ್ರಶ್ನಿಸಿದರು.

'ಮೊಬೈಲ್ ಸಂಭಾಷಣೆಯ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಮೇಲೆ, ಕಾಂಗ್ರೆಸ್ ನಾಯಕರ ಉಸಿರೇ ಇಲ್ಲ. ದಿನವೂ ಬಂದು ಪತ್ರಿಕಾಗೋಷ್ಠಿ ನಡೆಸಿದವರು ಈಗ ಯಾಕೆ ಯಾರೂ ಬಂದು ಮಾತನಾಡುತ್ತಿಲ್ಲ' ಎಂದು ಕುಮಾರಸ್ವಾಮಿ ಕೇಳಿದರು.

ಬೇಸಿಗೆ ರಜೆ ಕಡಿತ ಸಲ್ಲದು: ಇಲಾಖೆ

ಬೆಂಗಳೂರು: ರಾಜ್ಯದ ಕೆಲವು ಖಾಸಗಿ ಶಾಲೆಗಳು ಬೇಸಿಗೆ ರಜೆ ಅವಧಿಯನ್ನು ಕಡಿತಗೊಳಿಸಿ ಶಾಲೆ ಆರಂಭಿಸಿರುವ ಕ್ರಮ ಸರಿಯಲ್ಲ ಎಂದು ಶಿಕ್ಷಣ ಇಲಾಖೆ ಹೇಳಿದೆ.

ಪ್ರಸಕ್ತ ಶೈಕ್ಷಣಿಕ ಸಾಲಿನ ಶಾಲೆಗಳನ್ನು ನಿಗದಿಯಂತೆಯೇ ಮೇ 29ರಿಂದಲೇ ಆರಂಭಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದೆ.

ರಾಜ್ಯ ಪಠ್ಯಕ್ರಮದ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಏಪ್ರಿಲ್ 11ರಿಂದ ಮೇ 28ರ ವರೆಗೆ ಬೇಸಿಗೆ ರಜೆ ಘೋಷಿಸಲಾಗಿತ್ತು. ಆದರೆ, ಕೆಲವು ಶಾಲೆಗಳು ರಜೆ ಕಡಿತಗೊಳಿಸಿದ್ದವು. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ನಿಗದಿಯಂತೆಯೇ ಶೈಕ್ಷಣಿಕ ರಜೆ ಮುಂದುವರಿಸುವಂತೆ ಕೋರಿತ್ತು. ಹೀಗಾಗಿ, ಈ ಹಿಂದೆ ನಿಗದಿ ಮಾಡಿದಂತೆಯೇ ಶಾಲೆಗಳನ್ನು ಆರಂಭಿಸಲು ಎಲ್ಲ ಉಪ ನಿರ್ದೇಶಕರು ಕ್ರಮ ಕೈಗೊಳ್ಳಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ.ಕಾವೇರಿ ಸೂಚಿಸಿದ್ದಾರೆ.

ಪ್ರಜ್ವಲ್ ಪಾಸ್‌ಪೋರ್ಟ್ ರದ್ದತಿಗೆ ಎಸ್‌ಐಟಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಪ್ರಕರಣದ ಆರೋಪಿಯಾಗಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರ ಪಾಸ್‌ಪೋರ್ಟ್ ರದ್ದುಪಡಿಸುವಂತೆ ಕೋರಿ ಎಸ್‌ಐಟಿ (ವಿಶೇಷ ತನಿಖಾ ತಂಡ), ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ.

ಲೋಕಸಭಾ ಚುನಾವಣೆಯ ಮತದಾನ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಪ್ರಜ್ವಲ್ ರೇವಣ್ಣ ದೇಶ ತೊರೆದಿದ್ದು, ಅವರನ್ನು ಪತ್ತೆ ಮಾಡಲು ಎಸ್‌ಐಟಿ ತನಿಖೆ ಮುಂದುವರಿಸಿದೆ.

'ಪ್ರಜ್ವಲ್ ವಿರುದ್ಧ ಹೊಳೆನರಸೀಪುರ ಹಾಗೂ ಸಿಐಡಿ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ. ನೋಟಿಸ್ ನೀಡಿದರೂ ಪ್ರಜ್ವಲ್ ವಿಚಾರಣೆಗೆ ಹಾಜರಾಗಿಲ್ಲ. ಪ್ರಜ್ವಲ್ ಬಂಧನಕ್ಕೆ ನ್ಯಾಯಾಲಯದಿಂದ ವಾರಂಟ್ ಸಹ ಜಾರಿ ಆಗಿದೆ. ಪ್ರಜ್ವಲ್ ಎಲ್ಲಿದ್ದಾರೆ ಎಂಬ ಸುಳಿವು ಇದುವರೆಗೂ ಸಿಕ್ಕಿಲ್ಲ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ರಾಜತಾಂತ್ರಿಕ ಪಾಸ್‌ಪೋರ್ಟ್ ಬಳಸಿಕೊಂಡು ಪ್ರಜ್ವಲ್, ವಿದೇಶಕ್ಕೆ ಹೋಗಿದ್ದಾರೆ. ಈ ಪಾಸ್‌ಪೋರ್ಟ್ ರದ್ದುಪಡಿಸುವಂತೆ ಕೋರಿ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಮೂಲಕ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಬ್ಲೂ ಕಾರ್ನರ್ ನೋಟಿಸ್, ನ್ಯಾಯಾಲಯದ ವಾರಂಟ್ ಪ್ರತಿ ಹಾಗೂ ಇತರ ದಾಖಲೆಗಳನ್ನು ಪತ್ರದೊಂದಿಗೆ ಲಗತ್ತಿಸಲಾಗಿದೆ' ಎಂದು ತಿಳಿಸಿವೆ.

ದೇವರಾಜೇಗೌಡ ಆರೋಪ ಶುದ್ಧ ಸುಳ್ಳು: ಗೋಪಾಲಸ್ವಾಮಿ

ಬೌರಿಂಗ್ ಕ್ಲಬ್‌ನಲ್ಲಿ 110ನೇ ಕೊಠಡಿಯೇ ಇಲ್ಲ

ಪ್ರಜಾವಾಣಿ ವಾರ್ತೆ

ಹಾಸನ: 'ಬಿಜೆಪಿ ಮುಖಂಡ, ವಕೀಲ ಜಿ.ದೇವರಾಜೇಗೌಡರ ಜೊತೆಗೆ ಹಣದ ವಿಚಾರ ಮಾತನಾಡಿದ್ದರೆ ರಾಜಕೀಯ ಬಿಡುವೆ' ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ ಸವಾಲು ಹಾಕಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ದೇವರಾಜೇಗೌಡರೊಂದಿಗೆ ರಾಜಕೀಯ ಮಾತನಾಡಿದ್ದೇನೆ. ಆದರೆ, ₹ 100 ಕೋಟಿ ಆಫರ್ ಹಾಗೂ ₹ 5 ಕೋಟಿ ಮುಂಗಡ ಕೊಡಲು ಬೌರಿಂಗ್ ಕ್ಲಬ್‌ನ 110ನೇ ಕೊಠಡಿಯಲ್ಲಿ ಭೇಟಿ ಮಾಡಿದ್ದೆ ಎಂಬುದು ಶುದ್ಧ ಸುಳ್ಳು. ಅಲ್ಲಿ 110ನೇ ಕೊಠಡಿಯೇ ಇಲ್ಲ' ಎಂದು ಪ್ರತಿಪಾದಿಸಿದರು.

'₹ 100 ಕೋಟಿ ಅಥವಾ ₹ 5 ಕೋಟಿ ತುಂಬಲು ಎಷ್ಟು ಚೀಲ ಬೇಕೆಂಬುದನ್ನು ಯಾರಾದರೂ ಅಂದಾಜಿಸಬಹುದು. ಅವರು ನಕಲಿ ವಕೀಲರೋ ಅಥವಾ ಅಸಲಿಯೋ ಗೊತ್ತಿಲ್ಲ. ಯಾವಾಗಲೂ ಕೋಟ್ ಹಾಕಿಕೊಂಡು ಪತ್ರಿಕಾಗೋಷ್ಠಿ ಮಾಡುತ್ತಾರೆ. ರಾಜ್ಯಮಟ್ಟದ ನಾಯಕರ ಕುರಿತು ಅಪಪ್ರಚಾರ ಮಾಡುತ್ತಿದ್ದಾರೆ. ಅವರು ಆಚೆಗೆ ಬರಲಿ, ಬಹಿರಂಗ ಚರ್ಚೆಗೆ ಸಿದ್ಧನಿದ್ದೇನೆ' ಎಂದು ಸವಾಲು ಹಾಕಿದರು.

'₹ 5 ಕೋಟಿಯೊಂದಿಗೆ ಸಂಧಾನಕ್ಕೆ ಬಂದಿದ್ದರೆ, ಕೇಂದ್ರ ಸರ್ಕಾರಕ್ಕೆ ಹೇಳಿ ನನ್ನನ್ನು ಬಂಧಿಸಬಹುದಾಗಿತ್ತು. ಇ.ಡಿ ಅವರ ಬಳಿಯೇ ಇದೆ. ಎಚ್.ಡಿ.ದೇವೇಗೌಡರಿಂದ ಪತ್ರ ಬರೆಸಿ ಹಿಡಿಸಬಹುದಿತ್ತಲ್ಲವೇ' ಎಂದರು.

'ಸಚಿವರಾದ ಎನ್.ಚಲುವರಾಯಸ್ವಾಮಿ, ಕೃಷ್ಣ ಬೈರೇಗೌಡರ ವಿರುದ್ಧ ಆರೋಪ ಮಾಡಿರುವ ದೇವರಾಜೇಗೌಡರಿಗೆ, ಅವರು ಚಪ್ಪಲಿ ಬಿಡುವ ಜಾಗದಲ್ಲಿ ನಿಲ್ಲುವ ಅರ್ಹತೆಯೂ ಇಲ್ಲ. ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಸುಳ್ಳು ಅಫಿಡವಿಟ್ ಪ್ರಕರಣದಲ್ಲಿ, ಐದು ವರ್ಷದ ಹಿಂದೆ ನನ್ನನ್ನು ಭೇಟಿ ಮಾಡಿದ್ದ ದೇವರಾಜೇಗೌಡರಿಗೆ ಸಲಹೆಗಳನ್ನು ಕೊಟ್ಟಿದ್ದೆ. ಅವರು ಕಾಂಗ್ರೆಸ್‌ನಲ್ಲಿದ್ದಾಗ, ಕೆಡಿಪಿ ಸದಸ್ಯರನ್ನಾಗಿ ಮಾಡಿದ್ದೆ. ಕಿಸಾನ್ ಘಟಕದ ಅಧ್ಯಕ್ಷರನ್ನಾಗಿ ಮಾಡಿದ್ದೆವು' ಎಂದರು.

'ಎಚ್.ಡಿ ಕುಮಾರಸ್ವಾಮಿ, ದೇವರಾಜೇಗೌಡರ ಜೊತೆಗಿದ್ದು, ಇಬ್ಬರೂ ಪರಸ್ಪರರನ್ನು ಬಿಟ್ಟು ಕೊಡುತ್ತಿಲ್ಲ, ಕುಮಾರಸ್ವಾಮಿಯವರು, ಎಚ್.ಡಿ.ರೇವಣ್ಣ ಹೆಗಲ ಮೇಲೆ ಗನ್ ಇಟ್ಟು, ಡಿ.ಕೆ. ಶಿವಕುಮಾರ್ ಅವರನ್ನು ಮುಗಿಸಲು ಹೊರಟಿದ್ದಾರೆ ಎಂಬ ಅನುಮಾನ ಮೂಡುತ್ತಿದೆ' ಎಂದರು.

ಎಸ್ಪಿಗೆ ಮನವಿ: 'ಪೊಲೀಸ್ ಕಸ್ಟಡಿಯಲ್ಲಿದ್ದಾಗ, ನ್ಯಾಯಾಲಯದ ಅನುಮತಿ ಇಲ್ಲದೇ, ದೇವರಾಜೇಗೌಡ ಮಾಧ್ಯಮಗಳಿಗೆ ಹೇಳಿಕೆ ನೀಡಿರುವ ಬಗ್ಗೆ ಸೂಕ್ತ ತನಿಖೆ ನಡೆಸಬೇಕು'ಎಂದು ಆಗ್ರಹಿಸಿ ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಮುಖರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು.

ದೇವರಾಜೇಗೌಡ ನ್ಯಾಯಾಂಗ ಬಂಧನಕ್ಕೆ

ಹಾಸನ: ಪೆನ್‌ಡ್ರೈವ್ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿ, ವಕೀಲ ದೇವರಾಜೇಗೌಡರ ಎಸ್‌ಐಟಿ ಕಸ್ಟಡಿ ಸೋಮವಾರ ಅಂತ್ಯವಾಗಿದ್ದು, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ ಎರಡು ದಿನ ವಶಕ್ಕೆ ಪಡೆದಿದ್ದ ಎಸ್‌ಐಟಿ ಅಧಿಕಾರಿಗಳು, ಸೋಮವಾರ ಅವರನ್ನು ಇಲ್ಲಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಮತ್ತೆ ಕಸ್ಟಡಿಗೆ ನೀಡುವಂತೆ ಕೇಳಲಿಲ್ಲ.

ಅತ್ಯಾಚಾರ ಪ್ರಕರಣದಲ್ಲಿ ಬಂಧಿತರಾಗಿರುವ ದೇವರಾಜೇಗೌಡರಿಗೆ ಮೇ 24ರವರೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿದ್ದು, ನ್ಯಾಯಾಲಯದಿಂದ ನೇರವಾಗಿ ಜಿಲ್ಲಾ ಕಾರಾಗೃಹಕ್ಕೆ ಸ್ಥಳಾಂತರಿಸಲಾಯಿತು.

ಎಸ್‌ಐಟಿ ವಶಕ್ಕೆ ಪಡೆಯುವಾಗ ಸುದ್ದಿಗಾರರೊಂದಿಗೆ ಮಾತನಾಡಿ ಸಂಚಲನ ಸೃಷ್ಟಿಸಿದ್ದ ಅವರನ್ನು ಸೋಮವಾರ ನ್ಯಾಯಾಲಯಕ್ಕೆ ಕರೆತಂದಾಗ ಬಿಗಿ ಭದ್ರತೆ ಮಾಡಲಾಗಿತ್ತು. ಅವರು ನ್ಯಾಯಾಲಯದೊಳಗೆ ಹೋಗುವಾಗ, ವೈದ್ಯಕೀಯ ಪರೀಕ್ಷೆಗೆ ಒಳಪಟ್ಟಾಗ ಹಾಗೂ ಜೈಲಿಗೆ ಹೋಗುವಾಗ ಮಾಧ್ಯಮದವರ ಸಂಪರ್ಕಕ್ಕೆ ಬಾರದಂತೆ ಪೊಲೀಸ್ ತಂಡ ಸುತ್ತುವರಿದಿತ್ತು.

ಐವರ ಅಮಾನತು: ಮೇ 17 ರಂದು ಪೊಲೀಸ್ ಕಸ್ಟಡಿಯಲ್ಲಿದ್ದಾಗ ಮಾಧ್ಯಮದವರ ಜೊತೆಗೆ ದೇವರಾಜೇಗೌಡರು ಮಾತನಾಡಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ವಾಹನದ ಚಾಲಕ ಸೇರಿದಂತೆ ಐವರು ಪೊಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಆದರೆ, ಈ ಬಗ್ಗೆ ಪ್ರತಿಕ್ರಿಯಿಸಲು ಎಸ್ಪಿ ಮೊಹಮ್ಮದ್ ಸುಜೀತಾ ನಿರಾಕರಿಸಿದ್ದಾರೆ.

ಕದ್ದಾಲಿಸಲು ಅವರೇನು ಭಯೋತ್ಪಾದಕರೇ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫೋನ್ ಕದ್ದಾಲಿಕೆ ಮಾಡಲು ಕುಮಾರಸ್ವಾಮಿ, ರೇವಣ್ಣ ಅವರೇನು ಭಯೋತ್ಪಾದಕರೇ? ಅಂತಹ ಮುಠ್ಠಾಳತನದ ಕೆಲಸವನ್ನು ನಮ್ಮ ಸರ್ಕಾರ ಮಾಡುವುದಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕುಮಾರಸ್ವಾಮಿ ಆರೋಪದ ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಸಂಬಂಧ ಪಟ್ಟ ಇಲಾಖೆ ಅನುಮತಿ ಪಡೆದು ಭಯೋತ್ಪಾದಕರ ಫೋನ್ ಕರೆಗಳನ್ನು ಕದ್ದಾಲಿಕೆ ಮಾಡಲಾಗುತ್ತದೆ. ಕುಮಾರಸ್ವಾಮಿ, ರೇವಣ್ಣ ನಮ್ಮ ರಾಜ್ಯದ ನಾಯಕರು. ಅವರ ಕರೆ ಕದ್ದಾಲಿಸುವ ಅವಶ್ಯ ನಮ್ಮ ಸರ್ಕಾರಕ್ಕೆ ಇಲ್ಲ. ಪ್ರಚಾರ ಪಡೆಯಲು ಇಂತಹ ಸುಳ್ಳು ಆರೋಪ ಮಾಡುತ್ತಿದ್ದಾರೆ' ಎಂದರು.

ಪೆನ್ ಡ್ರೈವ್ ಪ್ರಕರಣದಲ್ಲಿ ಕುಮಾರಸ್ವಾಮಿ ಮಾಡಿರುವ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನನಗೂ ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ. ಮಾಧ್ಯಮಗಳು ಸಹ ಈ ವಿಚಾರದಲ್ಲಿ ನೈತಿಕತೆಯ ಗಡಿ ಮೀರಬಾರದು. ಉಪ್ಪು ತಿಂದವನು ನೀರು ಕುಡಿಯಬೇಕು ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಪ್ರಕರಣದಲ್ಲಿ ಕಾನೂನು ತನ್ನ ಕ್ರಮ ತೆಗೆದುಕೊಳ್ಳುತ್ತದೆ. ಈ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ' ಎಂದು ಹೇಳಿದರು. ದೇವರಾಜೇಗೌಡ ಮತ್ತು ಶಿವರಾಮೇಗೌಡ ಅವರ ನಡುವಿನ ಸಂಭಾಷಣೆ ಆಡಿಯೊ ಬಗೆಗಿನ ಪ್ರಶ್ನೆಗೆ, 'ನಾನು ಯಾರ ಜೊತೆಯೂ ಮಾತನಾಡಬಾರದ್ದು ಮಾತನಾಡಿಲ್ಲ. ಯಾರಿಗೂ ನಾನು ಜಿಪಿಎ ಕೊಟ್ಟಿಲ್ಲ. ನಾನೊಬ್ಬ ರಾಜಕಾರಣಿ; ನನ್ನನ್ನು ಭೇಟಿ ಮಾಡಲು ಎಲ್ಲ ಪಕ್ಷದ ಕಾರ್ಯಕರ್ತರೂ ಬರುತ್ತಾರೆ. ಬಿಜೆಪಿಯವರಾದ ಅವರು, ನನ್ನ ಭೇಟಿಗೆ ಸಮಯ ಕೇಳಿದ್ದರು. ನಾನು ಕೊಡಲಿಲ್ಲ. ಅರ್ಧ ನಿಮಿಷವೂ ನಾನು ಯಾರ ಬಳಿಯೂ ಮಾತನಾಡಿಲ್ಲ. ನನಗೂ ರಾಜಕೀಯ, ವ್ಯವಹಾರ ಪ್ರಜ್ಞೆ ಇದೆ. ಈ ವಿಚಾರದ ಗಾಂಭೀರ್ಯವೂ ನನಗೆ ಅರ್ಥವಾಗುತ್ತದೆ' ಎಂದರು.

ಸರ್ಕಾರ ಒಂದು ವರ್ಷ ಐಸಿಯುನಲ್ಲಿ ಇತ್ತು ಎಂದು ಕುಮಾರಸ್ವಾಮಿ ಟೀಕಿಸಿದ್ದಾರಲ್ಲ ಎಂಬ ಪ್ರಶ್ನೆಗೆ, 'ಪಾಪ ಅವರು ಇನ್ನೇನು ಹೇಳಲು ಸಾಧ್ಯ. ಅಧಿಕಾರದಲ್ಲಿ ಇದ್ದಾಗ ಏನೂ ಮಾಡಲಿಲ್ಲ. ಸರ್ಕಾರ ಐಸಿಯುನಲ್ಲಿ ಇತ್ತೋ ಇರಲಿಲ್ಲವೋ ಎಂದು ಜನ ಹೇಳಬೇಕೇ ವಿನಃ ನಾಯಕರಲ್ಲ' ಎಂದರು.



❦ ಸುಭಾಷಿತ ❦

ತಮ್ಮಲ್ಲಿರುವ ಸ್ವಾರ್ಥ ಮನೋಭಾವದಿಂದಾಗಿಯೇ ಜನ ದುಃಖಕ್ಕೆ ಈಡಾಗುತ್ತಾರೆ.

–ಗೌತಮ ಬುದ್ಧ

ಎನ್‌ಎಚ್‌ಆರ್‌ಸಿಗೆ ಮಾನ್ಯತೆ ಪಡೆಯಲು ಮಾನವ ಹಕ್ಕು ಸ್ಥಿತಿ ಸುಧಾರಿಸಲಿ

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ರಾಷ್ಟ್ರೀಯ ಸಂಸ್ಥೆಗಳ ಮೈತ್ರಿಕೂಟದ (ಜಿಎಎನ್‌ಎಚ್‌ಆರ್‌ಐ) ಮಾನ್ಯತೆಯು ಸತತ ಎರಡನೇ ವರ್ಷವೂ ಭಾರತದ ಮಾನವ ಹಕ್ಕುಗಳ ರಾಷ್ಟ್ರೀಯ ಆಯೋಗಕ್ಕೆ (ಎನ್‌ಎಚ್‌ಆರ್‌ಸಿ) ಕೈತಪ್ಪಿದೆ. ಎನ್‌ಎಚ್‌ಆರ್‌ಸಿಯ ಕಾರ್ಯನಿರ್ವಹಣೆ ಮತ್ತು ದೇಶದಲ್ಲಿನ ಮಾನವ ಹಕ್ಕುಗಳ ಸ್ಥಿತಿಗತಿಯ ಕುರಿತು ಜಿಎಎನ್‌ಎಚ್‌ಆರ್‌ಐ ತೃಪ್ತಿ ಹೊಂದಿಲ್ಲ ಎಂಬುದರ ಸೂಚನೆ ಇದು. ಜಿಎಎನ್‌ಎಚ್‌ಆರ್‌ಐಯಲ್ಲಿರುವ ಮಾನ್ಯತೆ ನೀಡಿಕೆ ಉಪಸಮಿತಿಯು (ಎಸ್‌ಸಿಎ) ಪರಿಶೀಲನೆ ಬಳಿಕ ಮಾನ್ಯತೆ ನೀಡುವುದನ್ನು ಮುಂದೂಡಿದೆ. ಎನ್‌ಎಚ್‌ಆರ್‌ಸಿಯನ್ನು 'ಬಿ' ವರ್ಗಕ್ಕೆ ಸೇರಿಸಿ ಕೆಳದರ್ಜೆಗೆ ಇಳಿಸಬೇಕು ಎಂದು ಅಂತರರಾಷ್ಟ್ರೀಯ ಮಟ್ಟದ ಕೆಲವು ಸಂಸ್ಥೆಗಳು ಕೇಳಿದ್ದರೂ ಅದಕ್ಕೆ ಜಿಎಎನ್‌ಎಚ್‌ಆರ್‌ಐ ಒಪ್ಪಿಗೆ ಕೊಟ್ಟಿಲ್ಲ. 1999ರಲ್ಲಿ ಮಾನ್ಯತೆ ನೀಡಿಕೆ ಪ್ರಕ್ರಿಯೆ ಆರಂಭಗೊಂಡ ಬಳಿಕ 2016ರವರೆಗೆ ಎನ್‌ಎಚ್‌ಆರ್‌ಸಿ 'ಎ' ವರ್ಗದ ಸ್ಥಾನವನ್ನೇ ಹೊಂದಿತ್ತು. 2016ರಲ್ಲಿ ಮಾನ್ಯತೆ ನೀಡಿಕೆಯನ್ನು ಮುಂದೂಡಲಾಯಿತಾದರೂ 2017ರಲ್ಲಿ ಮಾನ್ಯತೆ ನೀಡಲಾಯಿತು. ಈಗ ಸತತ ಎರಡು ವರ್ಷ ಮಾನ್ಯತೆಯನ್ನು ಅಮಾನತಿನಲ್ಲಿ ಇಡಲಾಗಿದೆ. ಮುಂದಿನ ಪರಾಮರ್ಶೆಯು ಈ ವರ್ಷದ ಕೊನೆಯಲ್ಲಿ ಅಥವಾ ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿದೆ.



ದೇಶದಲ್ಲಿ ಮಾನವ ಹಕ್ಕುಗಳ ಸ್ಥಿತಿಗತಿಯನ್ನು ಸುಧಾರಿಸಬೇಕಾದ ಅಗತ್ಯವನ್ನು ಈ ಬೆಳವಣಿಗೆ ಒತ್ತಿ ಹೇಳುತ್ತದೆ

ಈ ಬಾರಿ ಮಾನ್ಯತೆ ನೀಡಿಕೆಯನ್ನು ಮುಂದೂಡಲು ಕಾರಣವೇನು ಎಂಬುದನ್ನು ಬಹಿರಂಗಪಡಿಸಲಾಗಿಲ್ಲ. ಆದರೆ ಕಳೆದ ವರ್ಷ ಎಸ್‌ಸಿಎ ಕೊಟ್ಟ ಕಾರಣದಿಂದ ಈ ಬಾರಿಯೂ ಮುಂದೂಡಿಕೆ ಏಕೆ ಆಯಿತು ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. 'ಸರ್ಕಾರದ ಹಸ್ತಕ್ಷೇಪ ಇಲ್ಲದೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ' ಪಡೆದುಕೊಳ್ಳಲು ಬೇಕಾದ ಪರಿಸ್ಥಿತಿಯನ್ನು ಸೃಷ್ಟಿಮಾಡಿಕೊಳ್ಳುವಲ್ಲಿ ಎನ್‌ಎಚ್‌ಆರ್‌ಸಿ ವಿಫಲವಾಗಿದೆ ಎಂದು ಕಳೆದ ವರ್ಷ ಎಸ್‌ಸಿಎ ಹೇಳಿತ್ತು. ಎನ್‌ಎಚ್‌ಆರ್‌ಸಿ ನಡೆಸುವ ತನಿಖೆಗಳಲ್ಲಿ ಪೊಲೀಸ್ ಅಧಿಕಾರಿಗಳು ಭಾಗಿಯಾಗುವುದನ್ನು ಹಿತಾಸಕ್ತಿ ಸಂಘರ್ಷ ಎಂದು ಅದು ಹೇಳಿದೆ. ಸಿಬ್ಬಂದಿ ಮತ್ತು ನಾಯಕತ್ವದಲ್ಲಿ ವೈವಿಧ್ಯ ಇಲ್ಲ, ಶೋಷಣೆಗೆ ಒಳಗಾದ ಗುಂಪುಗಳನ್ನು ರಕ್ಷಿಸಲು ಬೇಕಾದಷ್ಟು ಕೆಲಸವನ್ನು ಮಾಡಿಲ್ಲ ಎಂದು ಹೇಳಲಾಗಿದೆ. ಅತಿ ದೊಡ್ಡ ಅಲ್ಪಸಂಖ್ಯಾತ ಸಮುದಾಯದ ಪ್ರತಿನಿಧಿ ಆಯೋಗದಲ್ಲಿ ಇಲ್ಲದಿರುವುದನ್ನು ಉಲ್ಲೇಖಿಸಿ ಹೀಗೆ ಹೇಳಿರಬಹುದು. ಸದಸ್ಯರಲ್ಲಿ ಒಬ್ಬರಾದ ರಾಜೀವ್ ಜೈನ್ ಅವರು ಅಲ್ಪಸಂಖ್ಯಾತ ಜೈನ ಸಮುದಾಯಕ್ಕೆ ಸೇರಿದವರು. ಆದರೆ, ಗುಪ್ತಚರ ವಿಭಾಗದ (ಐಬಿ) ನಿರ್ದೇಶಕ ಹುದ್ದೆಯಲ್ಲಿದ್ದ ಅವರು ಸರ್ಕಾರದ ಜೊತೆ ಗುರುತಿಸಿಕೊಂಡವರು. ತನಿಖಾ ವಿಭಾಗದ ಮಹಾ ನಿರ್ದೇಶಕ ಅಜಯ್ ಭಟ್ನಾಗರ್ ಅವರು ಸಿಬಿಐಯ ವಿಶೇಷ ನಿರ್ದೇಶಕ ಹುದ್ದೆಯಲ್ಲಿ ಇದ್ದವರು. ಇಂತಹ ವ್ಯಕ್ತಿಗಳು ಇರುವುದರಿಂದ ಆಯೋಗದ ಕಾರ್ಯನಿರ್ವಹಣೆಗೆ ತೊಡಕಾಗುತ್ತದೆ. ಆಯೋಗದ ವಿಶ್ವಾಸಾರ್ಹತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಹಾಗೆಯೇ, ನ್ಯಾಯಮೂರ್ತಿ (ನಿವೃತ್ತ) ಅರುಣ್ ಮಿಶ್ರಾ ಅವರನ್ನು ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿರುವುದು ಜಿಎಎನ್‌ಎಚ್‌ಆರ್‌ಐಗೆ ಸಮರ್ಥನೀಯ ಅನಿಸಿಲ್ಲ. ಮನುಸ್ಮೃತಿಯು ನ್ಯಾಯದ ತತ್ವವನ್ನು ಪ್ರತಿಪಾದಿಸುತ್ತದೆ, ಅದರಲ್ಲಿರುವ ಅಪರಾಧದ ತೀವ್ರತೆಗೆ ಅನುಗುಣವಾದ ಶಿಕ್ಷೆ ನೀಡಿಕೆಯು ಸಮರ್ಪಕವಾಗಿದೆ ಎಂದು ಎನ್‌ಎಚ್‌ಆರ್‌ಸಿ ಇತ್ತೀಚೆಗೆ ಪ್ರಕಟಿಸಿದ ಕರಪತ್ರದಲ್ಲಿ ಹೇಳಲಾಗಿತ್ತು. ಮನುಸ್ಮೃತಿಯನ್ನು ಸಮರ್ಥಿಸಿಕೊಳ್ಳುವ ಸಂಸ್ಥೆಯೊಂದು ಮಾನವ ಹಕ್ಕುಗಳ ಕುರಿತು ಸಮರ್ಪಕ ದೃಷ್ಟಿಕೋನ ಹೊಂದುವುದು ಕಷ್ಟವೇ.

ಮಾನ್ಯತೆ ಮುಂದೂಡಿಕೆಯಿಂದಾಗಿ, ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಮಿತಿ ಮತ್ತು ಇತರ ಕೆಲವು ಸಮಿತಿಗಳಲ್ಲಿ ಮತ ಹಾಕುವ ಭಾರತದ ಹಕ್ಕು ಮೊಟಕಾಗಬಹುದು. ದೇಶದ ಮಾನವ ಹಕ್ಕುಗಳ ಸ್ಥಿತಿಗತಿಯತ್ತ ಅಂತರರಾಷ್ಟ್ರೀಯ ಸಮುದಾಯದ ದೃಷ್ಟಿ ಹರಿಯಬಹುದು. ಅಲ್ಪಸಂಖ್ಯಾತರನ್ನು ನಡೆಸಿಕೊಳ್ಳುವ ರೀತಿ, ಮಣಿಪುರದ ಪರಿಸ್ಥಿತಿ, ಟೀಕಾಕಾರರು ಮತ್ತು ಭಿನ್ನಮತೀಯರ ಹತ್ತಿಕ್ಕುವಿಕೆ, ರಾಷ್ಟ್ರೀಯ ಮಹಿಳಾ ಆಯೋಗದಂತಹ ಸಂಸ್ಥೆಗಳ ಪಕ್ಷಪಾತಿ ಧೋರಣೆಯು ದೇಶದಲ್ಲಿ ಮಾನವ ಹಕ್ಕುಗಳ ಸ್ಥಿತಿ ಹೇಗಿದೆ ಎಂಬುದಕ್ಕೆ ಕನ್ನಡಿ ಹಿಡಿಯುತ್ತದೆ. ಈ ಎಲ್ಲವುಗಳನ್ನು ಸರಿಪಡಿಸುವ ಮೂಲಕ ಎನ್‌ಎಚ್‌ಆರ್‌ಸಿಗೆ ಜಿಎಎನ್‌ಎಚ್‌ಆರ್‌ಐ ಮಾನ್ಯತೆಯನ್ನು ಪಡೆಯಬೇಕೇ ವಿನಾ ರಾಜತಾಂತ್ರಿಕ ಪ್ರಯತ್ನದ ಮೂಲಕ ಅಲ್ಲ.

ದಿನದ ಟ್ವೀಟ್

ರೈಲುಗಳ ಸಂಖ್ಯೆ ಹೆಚ್ಚಿಸಿ



ನಮಗೆ ಇನ್ನೂ ಹೆಚ್ಚು ಹೆಚ್ಚು ರೈಲುಗಳು ಬೇಕಾಗಿವೆ. ಆದರೆ, ಕೋವಿಡ್ ಉಲ್ಬಣಿಸಿದ ಸಂದರ್ಭದಲ್ಲಿ ಏನಾಯಿತು ಎಂಬುದು ನಮಗೆಲ್ಲ ಗೊತ್ತೇ ಇದೆ. ಆಗ, ಎಷ್ಟೋ ರೈಲುಗಳ ಸಂಚಾರವನ್ನು ಸ್ಥಗಿತಗೊಳಿಸಲಾಯಿತು. ನನಗೆ ಗೊತ್ತಿರುವಂತೆ, ಅವುಗಳಲ್ಲಿ ಬಹಳಷ್ಟು ರೈಲುಗಳು ಇನ್ನೂ ಸಂಚಾರ ಪುನರಾರಂಭಿಸಿಲ್ಲ ಮತ್ತು ಅವುಗಳ ಎಷ್ಟೋ ಬೋಗಿಗಳನ್ನು ಬದಲಾಯಿಸಿ ವಂದೇ ಭಾರತ್ ರೈಲುಗಳಿಗೆ ಬಳಸಲಾಗಿದೆ. ರೈಲುಗಳಲ್ಲಿನ ಸಾಮಾನ್ಯ ದರ್ಜೆಯ ಬೋಗಿಗಳು ಮತ್ತು ಸ್ಲೀಪರ್ ದರ್ಜೆಯ ಬೋಗಿಗಳ ಸಂಖ್ಯೆಯನ್ನು ಹೆಚ್ಚಿಸಬೇಕಾಗಿದೆ.

ಪವನ್ ಯಾದವ್

ಕಿಡಿನುಡಿ



ಸನ್ಯಾಸಿಗಳು ರಾಜಕೀಯ ಚಿಹ್ನೆಗಳನ್ನು ಧಾರ್ಮಿಕ ಉದ್ದೇಶಗಳಿಗಾಗಿ ಬಳಸುವುದನ್ನು ತಡೆಯಬೇಕು!

ಚಂದ್ರಕುಮಾರ್ ಬೋಸ್, ಸಾಮಾಜಿಕ ಕಾರ್ಯಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 21-5-1999

● **ಕಾಂಗ್ರೆಸ್‌ನಿಂದ ಪವಾರ್, ಸಂಗ್ಮಾ, ತಾರಿಖ್ ಉಚ್ಚಾಟನೆ**

ನವದೆಹಲಿ, ಮೇ 20– ಸೋನಿಯಾ ಗಾಂಧಿ ವಿರುದ್ಧ ಬಂಡಾಯ ಎದ್ದಿರುವ ಮೂವರು ಹಿರಿಯ ನಾಯಕರಾದ ಶರದ್ ಪವಾರ್, ಪಿ.ಎ. ಸಂಗ್ಮಾ ಹಾಗೂ ತಾರಿಖ್ ಅನ್ವರ್ ಅವರನ್ನು ಇಂದು ರಾತ್ರಿ ಕಾಂಗ್ರೆಸ್ ಪಕ್ಷದಿಂದ ಆರು ವರ್ಷಗಳ ಕಾಲ ಉಚ್ಚಾಟನೆ ಮಾಡಲಾಗಿದೆ.

ಇಂದು ಸಂಜೆ 7.30ಕ್ಕೆ ಆರಂಭವಾದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ವಿದೇಶಿ ಪ್ರಜೆ ಎಂಬ ಕಾರಣಕ್ಕೆ ಪ್ರಧಾನಿ ಸ್ಥಾನಕ್ಕೆ ಅಭ್ಯರ್ಥಿಯನ್ನಾಗಿ ಮಾಡಬಾರದು ಎಂದು ಬಹಿರಂಗವಾಗಿ ಹೇಳುವ ಮೂಲಕ ಕಾಂಗ್ರೆಸ್ ಪಕ್ಷವೇ ಅಲ್ಲದೆ ದೇಶದಲ್ಲಿ ಕೋಲಾಹಲಕಾರಿ ಚರ್ಚೆಗೆ ಈ ಮೂವರು ನಾಯಕರು ಕಾರಣರಾಗಿದ್ದರು.

● **ಬಿಜೆಪಿ ಪ್ರಣಾಳಿಕೆಯಲ್ಲಿ ವಿದೇಶಿ ಪ್ರಜೆ ವಿವಾದ: ಪ್ರಧಾನಿ**

ನವದೆಹಲಿ, ಮೇ 20– ತನ್ನ ಮೊದಲ ನಿಲುವಿಗೆ ವಿರುದ್ಧವಾಗಿ ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟವು (ಎನ್‌ಡಿಎ) ವಿದೇಶಿ ಮೂಲದ ಭಾರತದ ನಾಗರಿಕರು ಪ್ರಧಾನಿ, ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿ ಹುದ್ದೆಗಳನ್ನು ಅಲಂಕರಿಸುವುದನ್ನು ನಿಷೇಧಿಸುವ ಸಲಹೆಯನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಲು ಆಲೋಚಿಸುತ್ತಿದೆ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಹೇಳಿದ್ದಾರೆ.

ಈ ಮುನ್ನ ವಾಜಪೇಯಿ ಅವರು, ಆ ರೀತಿಯ ವಿಚಾರವನ್ನು ನಿರಾಕರಿಸಿ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಭಾರತದ ನಾಗರಿಕರಾಗಿದ್ದು, ಚುನಾವಣೆಗೆ ಸ್ಪರ್ಧಿಸುವ ಹಾಗೂ ಪ್ರಧಾನಿಯಾಗುವ ಹಕ್ಕು ಆಕೆಗೆ ಇದೆ ಎಂದು ಅಭಿಪ್ರಾಯಪಟ್ಟಿದ್ದರು.

50 ವರ್ಷಗಳ ಹಿಂದೆ

ಮಂಗಳವಾರ, 21-5-1974

● **ಪ್ರಚಾರ ನಿಲ್ಲಿಸಿ ವಾಪಸಾಗಲು ಮಂತ್ರಿಗಳಿಗೆ ಸರ್ಕಾರದ ತಂತಿ**

ಬೆಂಗಳೂರು, ಮೇ 20– ಪ್ರವಾಸ ರದ್ದು ಮಾಡಿ ತತ್‌ಕ್ಷಣ ರಾಜಧಾನಿಗೆ ಹಿಂದಿರುಗಿ ವಿಧಾನ-ಪರಿಷತ್ತಿನ ಅಧಿವೇಶನದಲ್ಲಿ ಭಾಗವಹಿಸಲು ಬನ್ನಿ ಎಂದು ಪ್ರವಾಸದಲ್ಲಿರುವ ಸಚಿವರುಗಳಿಗೆ ತಂತಿಯ ಮೂಲಕ ಕೋರಲು ಸರ್ಕಾರ ಇಂದು ಒಪ್ಪಿಕೊಂಡಿತು.

ಇನ್ನು ಮುಂದೆ, ಅಧಿವೇಶನ ನಡೆಯುತ್ತಿದ್ದಾಗ ಪ್ರವಾಸ ಕಾರ್ಯಕ್ರಮ ಹಾಕಿಕೊಳ್ಳದಂತೆ ಸೂಚನೆ ನೀಡುವ ಭರವಸೆಯನ್ನು ವಿಧಾನ ಪರಿಷತ್ತಿಗೆ ನೀಡಿದ ಮೇಲೆ, ಸಭೆಯಲ್ಲಿ ಸಚಿವರ ಪ್ರವಾಸದಿಂದ ಉಂಟಾಗಿದ್ದ ಗೊಂದಲ ತಿಳಿಯಾಗಿ, ಸ್ಥಗಿತವಾಗಿದ್ದ ಕಲಾಪ ಮುಂದುವರಿಯಲು ಅವಕಾಶ ನೀಡಿತು. ಹಂಗಾಮಿ ಸಭಾಪತಿ ಟಿ.ಎನ್. ನರಸಿಂಹಮೂರ್ತಿ ಅವರ ಕೊಠಡಿಯಲ್ಲಿ ಸಂಸದೀಯ ವ್ಯವಹಾರ ಖಾತೆಯ ಸಚಿವ ಎಸ್.ಎಂ.ಕೃಷ್ಣ, ವಿರೋಧ ಪಕ್ಷದ ನಾಯಕ ರಾಮಕೃಷ್ಣ ಹೆಗಡೆ ಹಾಗೂ ವಿರೋಧ ಪಕ್ಷದ ಹಲವು ಸದಸ್ಯರು ಕಲೆತು ಚರ್ಚಿಸಿದ ಮೇಲೆ ಸಭೆಗೆ ಬಂದ ಉಪಸಭಾಪತಿಗಳು ಅವರ ನಿರ್ಧಾರವನ್ನು ಪ್ರಕಟಿಸಿದರು.

● **ವಾತಾವರಣ ಕಲುಷಿತಗೊಳಿಸಿದ ಹೊಸ ವಿಧಾನ**

ನವದೆಹಲಿ, ಮೇ 20– ಭೂಗರ್ಭದಲ್ಲಿ ಭಾರತ ನಡೆಸಿದ ಅಣುಸ್ಫೋಟವನ್ನು ತಾನು ಶನಿವಾರ ಬೆಳಿಗ್ಗೆ 8.06ರಲ್ಲಿ ಗುರುತಿಸಿರುವುದಾಗಿ ಪವನ ವಿಜ್ಞಾನ ಶಾಖೆ ಭಾನುವಾರ ಇಲ್ಲಿ ಪ್ರಕಟಿಸಿತು.

ಅಣುಸ್ಫೋಟವನ್ನು ಪಶ್ಚಿಮ ಭಾರತದಲ್ಲಿ ನಡೆಸಲಾಯಿತು ಎಂದು ಅಣುಶಕ್ತಿ ಆಯೋಗ ಹೇಳಿತ್ತು. ಪಶ್ಚಿಮ ಭಾರತದಲ್ಲಿ ಶನಿವಾರ ಗಾಳಿ ಬೀಸಿದ ವಿಧಾನ ಮತ್ತು ಭೂಕಂಪನದ ಸುದ್ದಿ ಗಮನಿಸಿದರೆ, ಅಣು ಸಾಧನವನ್ನು ದೆಹಲಿಗೆ ಸುಮಾರು 500 ಕಿ.ಮೀ ದೂರದಲ್ಲಿ ರಾಜಸ್ಥಾನದ ಬಾರ್ಮೇರ್ ಜಿಲ್ಲೆಯಲ್ಲಿ ನಡೆಸಲಾಗಿದೆ ಎಂದು ಗೊತ್ತಾಗುತ್ತದೆ ಎಂದು ಹೇಳಿತು.

ಅಶಾಂತಿ ಹೆಚ್ಚಾಗಿ ಹಿಂಸೆಗೆ ಅಡಿಯಿಡುವ ಸಮಾಜದಲ್ಲಿ ಆರ್ಥಿಕ ಅಭಿವೃದ್ಧಿ ಸಾಧ್ಯವಿಲ್ಲ

ಪ್ರಧಾನಿ ಮಾತು ಮತ್ತು ರಾಜಧರ್ಮ



ವಿಶ್ಲೇಷಣೆ

ಎಸ್.ಆರ್.ವಿಜಯಶಂಕರ

ಬ್ಯಾಂಕ್ ನೌಕರಿಯಲ್ಲಿದ್ದು, ಇದೀಗ ನಿವೃತ್ತರಾಗಿರುವ ನನ್ನೊಬ್ಬ ಸಜ್ಜನ ಸ್ನೇಹಿತರಿದ್ದಾರೆ. ಹಲವು ದೃಷ್ಟಿಕೋನಗಳನ್ನು ಗ್ರಹಿಸುವ ಜಾಗೃತ ಮತದಾರರಾದ ಅವರು, ಈಚೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಕೆಲವು ಚುನಾವಣಾ ಭಾಷಣಗಳಿಂದ ವಿಚಲಿತರಾಗಿದ್ದರು. ದೇಶದ ಪ್ರಧಾನಿಯು ರಾಷ್ಟ್ರದ ಏಕೀಕರಣದ ಪರವಾಗಿರಬೇಕು, ಮುಸ್ಲಿಮರನ್ನು ಕಡೆಗಣಿಸುವ ಮೋದಿಯವರ ನೇರ ಮಾತುಗಳು ವಿಭಜನಕಾರಿ, ಇದು ಪ್ರಧಾನಿಯ ಘನತೆಗೆ ತಕ್ಕುದಲ್ಲ ಎಂದು ಅವರು ಆತಂಕಿತರಾಗಿದ್ದರು.

ಅವರ ಪ್ರಕಾರ, ನಮ್ಮ ಹಿರಿಯರು, ಅನೇಕ ಸಮಕಾಲೀನರು ಧಾರ್ಮಿಕರಾಗಿದ್ದರೂ ಕೋಮುವಾದಿಗಳಾಗಿರಲಿಲ್ಲ. ಇಂದಿನ ಸಮಾಜಕ್ಕೆ, ಮುಖ್ಯವಾಗಿ ಅನೇಕಾನೇಕ ಬಿಜೆಪಿ ಅನುಯಾಯಿಗಳಿಗೆ ಧಾರ್ಮಿಕತೆಗೂ ಕೋಮುವಾದಕ್ಕೂ ಇರುವ ಅಂತರವೇ ತಿಳಿದಿಲ್ಲ. ನಿರ್ಮಲ ಧಾರ್ಮಿಕತೆಯಿಂದ, ಆಧ್ಯಾತ್ಮಿಕತೆಯಿಂದ ಸಮಾಜಕ್ಕೆ ಅಪಾಯವಿಲ್ಲ. ಆದರೆ ಕೋಮುವಾದದ ಬೆಳವಣಿಗೆ ಮನುಷ್ಯರ ಮನಸ್ಸುಗಳನ್ನು ಒಡೆಯುತ್ತದೆ, ಸಮಾಜದ ಭದ್ರತೆ ಕೆಡಿಸಿ ಅಶಾಂತಿ ಉಂಟು ಮಾಡುತ್ತದೆ.

ಮಾಸ್ತಿಯವರ 'ರಾಮನವಮಿ' ಕವನದ ಕುರಿತಾಗಿ ಬರೆಯುತ್ತಾ ಕವಿ ಗೋಪಾಲಕೃಷ್ಣ ಅಡಿಗರು, ಮಾಸ್ತಿಯವರ ದೃಷ್ಟಿ ಧಾರ್ಮಿಕವಾದದ್ದು, ಆಧ್ಯಾತ್ಮಿಕವಾದದ್ದಲ್ಲ ಎನ್ನುತ್ತಾರೆ. ಆಧ್ಯಾತ್ಮಿಕವೆಂದರೆ, ತನ್ನನ್ನು ಮೀರಿ ವಿಶ್ವದೊಡನೆ ಬೆರೆಯುವ ಆಸೆ. ಮಾಸ್ತಿಯವರು ಪ್ರಭಾವಗೊಂಡಿದ್ದ ಇಂಗ್ಲಿಷ್ ರೊಮ್ಯಾಂಟಿಕ್ ಸಾಹಿತ್ಯವೂ ಆ ದೃಷ್ಟಿಕೋನವನ್ನು ಪ್ರತಿಪಾದಿಸಿತ್ತು. ನವೋದಯದ ಕುವೆಂಪು, ಬೇಂದ್ರೆ, ಪುತಿನ ಅವರಿಗೆಲ್ಲಾ ಪ್ರಕೃತಿಯಿಂದ ಪಡೆವ ಆನಂದ ಹೀಗೆ ವಿಶ್ವದೊಡನೆ ಬೆರೆಯುವ ಆಸೆಯ ಒಂದು ಮುಖ. ಅಡಿಗರು ಹೇಳುವಂತೆ, ಮಾಸ್ತಿಯವರಲ್ಲಿ ಕಾಣುವುದು ಹಿಂದೂ ಧರ್ಮದ 'ಸಹಿಷ್ಣುತೆ' ಎಂಬ ಮೌಲ್ಯದಲ್ಲಿ ಅಡಕವಾಗಿರುವ ಪ್ರಜಾಪ್ರಭುತ್ವ ತತ್ವಗಳ ಅರಿವಿನಿಂದ ಸ್ಪಷ್ಟವಾದ 'ಲಿಬರಲ್' ಎನ್ನುವ ಉದಾರವಾದಿ ದೃಷ್ಟಿ. ಆದುದರಿಂದಲೇ ಅವರಿಗೆ ತಮ್ಮ ಸ್ವಂತ ಅಥವಾ ಧಾರ್ಮಿಕವಾದ ನಂಬಿಕೆಗಳಲ್ಲಿ ನಿಷ್ಠೆ ದೃಢವಾಗಿದ್ದರೂ ಅದೇ ಪರಮ ಎಂಬ 'ಮತಚ್ಛಲ' ಮಾಸ್ತಿಯವರ ಕಾವ್ಯದಲ್ಲಿ ಕಾಣಿಸುವುದಿಲ್ಲ.

ಆರ್ಷ ದೃಷ್ಟಿಕೋನದ ಕವಿ ಎಂದು ವಿವರಿಸಲ್ಪಟ್ಟ, ಇಂದಿನ ಬಿಜೆಪಿಯ ಹಿಂದಿನ ರೂಪವಾದ ಜನಸಂಘದಿಂದ ಚುನಾವಣೆಗೆ ಸ್ಪರ್ಧಿಸಿದ್ದ ಗೋಪಾಲಕೃಷ್ಣ ಅಡಿಗರು, 'ರಾಮನವಮಿ' ಎಂಬ ಮಾಸ್ತಿಯವರ ಕವನದ ಬಗ್ಗೆ ಬರೆಯುತ್ತಾ ಅವರಿಗೆ 'ಮತಚ್ಛಲ' ಇಲ್ಲ ಎಂದು ಹೇಳುವುದನ್ನು ಗಮನಿಸಬೇಕು. ತನ್ನ ಮತವೇ ಸರಿ ಎಂಬ ಹಟವೇ ಮತದ ಬಗೆಗಿನ ಛಲ. ಕೋಮುವಾದದ ಮನಃಸ್ಥಿತಿಗೆ ಸಮೀಪವಾದ ಇನ್ನೊಂದು ಮನಃಸ್ಥಿತಿ ಮತಚ್ಛಲ. ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಮತಗಳ ನಡುವಿನ ಚರ್ಚೆಗಳಲ್ಲಂತೂ ತಂತಮ್ಮ ಮತವೇ ಪರಮಶ್ರೇಷ್ಠ ಎಂಬ ಛಲವು ಸಹಿಷ್ಣುತೆಗೆ ಸಂಪೂರ್ಣ ವಿರೋಧವಾದ ನೆಲೆ. ಹಿಂದೂ ಮತದೊಳಗಿನ ಅದೇ ಮನೋಭಾವದ ಇನ್ನೊಂದು ಮುಖವಾದ ಜಾತಿವಾದಕ್ಕೂ ಈ 'ಮತಚ್ಛಲ'ಕ್ಕೂ ಸಂಬಂಧವಿದೆ. ಕೆಲವೊಮ್ಮೆ ಈ ಛಲದಲ್ಲಿ ತಮ್ಮ ಜಾತಿಯೇ ಶ್ರೇಷ್ಠ, ತಮ್ಮ ಜಾತಿಗೆ ಅನ್ಯಾಯವಾಗಿದೆ ಎನ್ನುವಂತಹ ಹಲವು ಅಂಶಗಳು ಸೇರಿಕೊಂಡಿರಲೂಬಹುದು. ಹಿಂದೂ ಧಾರ್ಮಿಕ ಸ್ಥಿತಿಯ 'ಸಹಿಷ್ಣು' ಶಕ್ತಿಗಿಂತ ಭಿನ್ನವಾದ ನೆಗೆಟಿವ್ ನಿಲುವನ್ನು ಸೂಚಿಸಲು ಅಡಿಗರು 'ಮತಚ್ಛಲ' ಎಂಬ ನುಡಿಗಟ್ಟನ್ನು ಠಂಕಿಸಿದರು.

ನನ್ನ ಗೆಳೆಯ 'ನಮ್ಮ ಹಿರಿಯರು ಧಾರ್ಮಿಕರಾಗಿದ್ದರು. ಆದರೆ ಕೋಮುವಾದಿಗಳಾಗಿರಲಿಲ್ಲ' ಎಂದಾಗಲೂ ಸೂಚಿಸುತ್ತಿದ್ದುದು ಹಿಂದೂ ಧರ್ಮದ ಒಳಗಿರುವ ಈ ಸಹಿಷ್ಣುತೆಯನ್ನೇ, ಈ ಸಹಿಷ್ಣುತೆಯನ್ನು ಪ್ರತಿಪಾದಿಸಿದ ಬುದ್ಧ, ಕಬೀರ ಹಾಗೂ ಮಹಾತ್ಮ ಫುಲೆ ತಮ್ಮ ಮೂವರು ಗುರುಗಳೆಂದು ಅಂಬೇಡ್ಕರ್ ಹೇಳಿದ್ದಾರೆ.

ಹಿಂದೂಗಳ 'ಸಹಿಷ್ಣುತೆ' ಮತ್ತು ಅದಕ್ಕೆ ವಿರುದ್ಧವಾದ ಕೋಮುವಾದಕ್ಕೆ ಪೂರಕವಾದ 'ಹಿಂದುತ್ವ' ಒಂದೂವರೆ ಶತಮಾನದಿಂದ ಪರಸ್ಪರ ಗುದ್ದಾಡಿವೆ. ಗಾಂಧೀಜಿ ಹಾಗೂ ಸಾವರ್ಕರ್ ನಡುವಿನ ಅಭಿಪ್ರಾಯಭೇದದಲ್ಲಿ ದೇಶವು ಗಾಂಧಿಯವರನ್ನು ಒಪ್ಪಿಕೊಂಡಿತು. ಗಾಂಧೀಜಿ ಜೊತೆ ಸಹಮತ ಹೊಂದಿದ ಅನೇಕ ಸಮಾಜ ಸುಧಾರಕರಿದ್ದರು. ಅವರಲ್ಲೊಬ್ಬರು, ಇಂದಿನ ಉದ್ಧವ್ ಠಾಕ್ರೆ ಅವರ ಅಜ್ಜ ಕೇಶವ್ ಸೀತಾರಾಮ್ ಠಾಕ್ರೆ. ಆರ್ಯ ಸಮಾಜದಿಂದ ಪ್ರಭಾವಿತರಾಗಿದ್ದ ಅವರು ಪ್ರಾರಂಭಿಸಿದ 'ಪ್ರಬೋದನ್' (ಜ್ಞಾನೋದಯ) ಪತ್ರಿಕೆಯು ಮತಾಂತರಗೊಂಡ ಹಿಂದೂಗಳು ಹಿಂದೂ ಮತಕ್ಕೆ ಹಿಂತಿರುಗಬಹುದು, ವಿಧವಾ ವಿವಾಹ ಬೇಕು ಎಂಬಂಥ ವಿಚಾರಗಳನ್ನು ಪ್ರತಿಪಾದಿಸಿತು. ಅದನ್ನು ಒಪ್ಪದ ಹಿಂದೂ ಮೂಲಭೂತವಾದಿಗಳು, ಹಾಗೆ ಬಂದವರು ಯಾವ ಜಾತಿಯ ಹಿಂದೂಗಳಾಗಬೇಕು ಎಂಬಂತಹ ವಿಚಾರಗಳನ್ನು ಮುಂದಿಡುತ್ತಿದ್ದರು.

ಇಂದು ಕೂಡ ಭಾರತವು ಹಿಂದೂ ರಾಷ್ಟ್ರ ಆಗಬೇಕು ಎಂದು ವಾದಿಸುವ ಶೇ 99ರಷ್ಟು ಜನರೂ ತಮ್ಮ ಮಕ್ಕಳು ತಮ್ಮ ಜಾತಿಯವರನ್ನೇ ಮದುವೆಯಾಗಬೇಕೆಂದು ಬಯಸುತ್ತಾರೆ. ಬೇರೆ ಧರ್ಮದ ಬಗೆಗಿನ ದ್ವೇಷವನ್ನೇ ಅನೇಕರು ತಪ್ಪಾಗಿ ತಮ್ಮ ಹಿಂದುತ್ವ ಎಂದು ತಿಳಿದಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ. ತಮ್ಮ ಮಗಳು ಬೇರೆ ದೇಶದವನನ್ನು- ಅನ್ಯ ಧರ್ಮೀಯನನ್ನು ಮದುವೆಯಾಗುವುದಾಗಿ ಹೇಳಿದಾಗ ಅದನ್ನು ಒಪ್ಪಿಕೊಳ್ಳುವುದು, ಮನೆಯಲ್ಲಿ ನಿತ್ಯಪೂಜೆ, ಪಾರಾಯಣ ಎಲ್ಲವನ್ನೂ ಮಾಡುತ್ತಿದ್ದ ಮಾಸ್ತಿಯವರಿಗೆ ಸಾಧ್ಯವಾಯಿತು



ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು.


ಪುತಿನ ಅವರು 'ಪ್ರಪಂಚದೊಂದಿಗೆ ಸ್ವಾರ್ಥದೂರ ಸಂಬಂಧದಿಂದ ಆಧ್ಯಾತ್ಮಿಕತೆ ಹುಟ್ಟುತ್ತದೆ' ಎನ್ನುತ್ತಾರೆ. ಈ ಆಧ್ಯಾತ್ಮಿಕತೆ ಲೋಕಶಾಂತಿಗೆ ಇಂಬಾಗುತ್ತದೆ. ಸಮಾಜದ ಈ ಶಾಂತಿಯೇ ಜಗತ್ತಿನ ಚೆಲುವನ್ನು ಹೆಚ್ಚು ಮಾಡುವುದು. ನಿಜವಾದ ಧರ್ಮದ ಮೂಲ ಸ್ವರೂಪ ಖಾಸಗಿಯಾಗಿರುವುದು. ಆದ್ದರಿಂದಲೇ ದೇವರು ಮತ್ತು ಭಕ್ತನ ಸಂಬಂಧ ವೈಯಕ್ತಿಕವಾದದ್ದು. ರಾಜಕೀಯದ ಉದ್ದೇಶವೇ ಸಾರ್ವಜನಿಕವಾದುದು. ಆದುದರಿಂದ ಲೋಕದ ಶಾಂತಿಗಾಗಿ, ಸಮಾಜದಲ್ಲಿ ಸಮಾನತೆಯ ಮೌಲ್ಯವೃದ್ಧಿಗಾಗಿ ಧರ್ಮ ಹಾಗೂ ರಾಜಕೀಯ ಪ್ರತ್ಯೇಕವಾಗಿರುವುದು ಮುಖ್ಯವಾಗುತ್ತದೆ.

ತಮ್ಮ ಧರ್ಮ, ಶ್ರದ್ಧಾಕೇಂದ್ರ ಅಪಾಯದಲ್ಲಿವೆ ಎಂಬುದನ್ನು ತಲೆಗೆ ತುಂಬಿದ ಕೂಡಲೇ ತಮ್ಮ ಧರ್ಮ ಎಲ್ಲಿ ನಶಿಸಿಹೋಗುತ್ತದೋ ಎಂಬ ಅಭದ್ರತೆ ಕಾಡುತ್ತದೆ. ಆಗ ಅದನ್ನು ರಕ್ಷಿಸಲು ಆಕ್ರಮಣಕಾರಿ ಮನೋಭಾವ ಹುಟ್ಟುತ್ತದೆ. ಆ ಮನೋಭಾವ ಹುಟ್ಟಿದವರಿಗೆ ಇನ್ನೊಂದು ಧರ್ಮವನ್ನು ವೈರಿಗಳಂತೆ ಎದುರು ಪಕ್ಷವಾಗಿ ಸೂಚಿಸಿದಾಗ ದ್ವೇಷ ಹೆಚ್ಚಾಗುತ್ತದೆ. ಅಮೂರ್ತವಾದ ಎದುರುಪಕ್ಷದ ಧರ್ಮವೊಂದು ಅಪಾಯಕಾರಿಯಾಗಿ ಗೋಚರಿಸತೊಡಗುತ್ತದೆ. ಆಗ ಸಮಾಜದಲ್ಲಿ ಶಾಂತಿ ಹಾಳಾಗುತ್ತದೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ರಾಮಮಂದಿರಕ್ಕೆ ಬಾಬರಿ ಮಸೀದಿಯ ಬೀಗ ಹಾಕುತ್ತಾರೆ, ಅವರು ಬುಲ್ಡೋಜರ್ ಕಳಿಸಿ ರಾಮ ಮಂದಿರವನ್ನು ನೆಲಸಮ ಮಾಡುತ್ತಾರೆ ಎಂದು ಹೇಳಿ ಸ್ವತಃ ಪ್ರಧಾನಿಯೇ ಅಶಾಂತಿ ಹರಡುವುದು ರಾಜಧರ್ಮ ತತ್ವಕ್ಕೆ ಕೂಡಾ ವಿರುದ್ಧವಾದುದು. ಕಾಳಿದಾಸನು 'ರಘುವಂಶ'ದಲ್ಲಿ, ರಾಜಧರ್ಮ ಎಂದರೆ ಯಾವ ಭೇದವೂ ಇಲ್ಲದೆ, ಪ್ರತಿಯೊಬ್ಬ ಪ್ರಜೆಗೂ ರಾಜ ನೀಡಬೇಕಾದ ರಕ್ಷಣೆ ಎನ್ನುತ್ತಾನೆ. ನಮಗೆ ಸ್ವಾತಂತ್ರ್ಯ ಬಂದಾಗ ನಮ್ಮ ಹಿರಿಯರು ಸ್ವತಂತ್ರ ಭಾರತ ಸಾಧಿಸಬೇಕಾದ ಮೂರು ಗುರಿಗಳನ್ನು ಹಾಕಿಕೊಂಡರು. 1. ಕಾನೂನಿನ ಆಡಳಿತ, 2. ರಾಷ್ಟ್ರದ ಭೌಗೋಳಿಕ ಮತ್ತು ಭಾವನಾತ್ಮಕ ಸಮಗ್ರೀಕರಣ, 3. ಬಡತನದ ನಿರ್ಮೂಲನೆ.

ಸರ್ವಧರ್ಮ ಸಮಾನತೆ ಮತ್ತು ಎಲ್ಲ ಪ್ರಜೆಗಳಿಗೂ ಇರುವ ಸಮಾನತೆಯನ್ನು ಸಂವಿಧಾನ ತನ್ನ ಪೀಠಿಕೆಯಲ್ಲೇ ಪ್ರಸ್ತಾಪಿಸಿದೆ. ನಾವು ಸಂವಿಧಾನವನ್ನು ರಕ್ಷಿಸಿದರೆ ಸಂವಿಧಾನ ನಮ್ಮನ್ನೂ ನಮ್ಮ ನಮ್ಮ ಧರ್ಮಗಳನ್ನೂ ರಕ್ಷಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ಧರ್ಮೋ ರಕ್ಷತಿ ರಕ್ಷಿತಃ ಎಂದರೆ ಸಂವಿಧಾನವನ್ನು ರಕ್ಷಿಸುವವರನ್ನು ಸಂವಿಧಾನವು ರಕ್ಷಿಸುತ್ತದೆ ಎಂಬುದೇ ಆಗಿದೆ. ಅದುವೇ ಕಾನೂನಿನ ಆಡಳಿತದ ಮೂಲತತ್ವ. ಸಮಾನತೆಯ ಮೂಲಸೂತ್ರ. ಇಂತಹ ಕಾನೂನಿನ ಆಡಳಿತದ ಭಾಗವಾಗಿ ಸಂವಿಧಾನದ ಮೂಲಕ ಅಧಿಕಾರಕ್ಕೆ ಬಂದ ಪ್ರಧಾನಿ, ಜನರ ರಕ್ಷಣೆಯನ್ನು ಅಪಾಯಕ್ಕೆ ಒಡ್ಡುವ ಧಾರ್ಮಿಕ ದ್ವೇಷವನ್ನು ಹಬ್ಬಿಸುವ ಕೋಮುವಾದದ ವಕ್ತಾರರಂತೆ ಮಾತನಾಡುವುದು ಸಂವಿಧಾನದ ರಕ್ಷಣೆಯನ್ನು ಧಿಕ್ಕರಿಸುವ ಮಾತಾಗುತ್ತದೆ. ಅದು ರಾಜಧರ್ಮಕ್ಕೂ ವಿರೋಧವಾದ ಮಾತು.

ಪ್ರಧಾನಿಯವರ ಧರ್ಮದ್ವೇಷದ ಮಾತುಗಳನ್ನು ಒಪ್ಪುವುದಿಲ್ಲ ಎಂದು ಸಾರ್ವಜನಿಕವಾಗಿ ಹೇಳಿ ಪ್ರತಿಭಟಿಸುವುದು ಮತ್ತು ಅವರು ಬಿತ್ತುವ ಭಯವನ್ನು ಶಾಂತಿಯುತವಾಗಿ ತಿರಸ್ಕರಿಸುವುದು ಮಾತ್ರ ಈಗ ಪ್ರಜೆಗಳಿಗೆ ಉಳಿದಿರುವ ದಾರಿ.

ಚುರುಮುರಿ



ಮಳೆ ಬಂತು ಮಳೆ!

● ಡಿ.ಎಸ್.ಲಿಂಗರಾಜು

'ವಿಜ್ಞಾನಿಗಳು ಅದೆಂತದ್ದೋ ಲಾ ನಿನಾ ಅಂತ ಕೂಲಿಂಗ್-ಹೀಟಿಂಗ್ ಎಫೆಕ್ಟು ಸುರುವಾಯ್ತಾ ಅದೆ ಅಂದವ್ರೆ. ಅದುಕ್ಕೇ ಅಂತೆ ಈ ಪಾಟಿ ಮಳೆ ಹುಯ್ಯತಿರದು' ವಿಷಯ ಲೀಕು ಮಾಡಿದೆ.

'ಅಯ್ಯೋ ನನ್ನಪ್ಪನೆ, ಕುಮಾರಣ್ಣ, ಡಿ.ಕೆ, ಅಸೋಕ ಇವರ ಮಾತಿನ ಹೀಟಿಂಗು-ಕೂಲಿಂಗು ತಡೆಯಕಾಯ್ತಿಲ್ಲ ಕಪ್ಪ. ಇವರೆಲ್ಲರೂ ದೇವರಿಗೆ ಹರಕೆ ಹೊತ್ಕಂದು ಬಾಯಿಬೀಗ ಹಾಕಿಸ್ಕಂದು ಕೈಲಿ ಹೊಂಬಾಳೆ ಹಿಡಕಂದು ನೇಮದಲ್ಲಿದ್ರೆ ನಮಗೆ ನೆಮ್ಮದಿ!' ಅಂದ ಚಂದ್ರು.

'ಮ್ಯಾಗಲಮನೆ ಎಲೆಕ್ಷನ್ನಲ್ಲಿ ಟಿಕೇಟಿಗೆ ಹೊಡೆದಾಟ, ಬಂಡಾಯದ ಗುಡುಗು-ಸಿಡಿಲು ಎಲ್ಲಾ ಅದವಂತೆ' ಅಂತು ಯಂಟಪ್ಪಣ್ಣ.

'ಅವೆಲ್ಲಾ ರಾಜಕೀಯದ ವಾತಾವರಣ ಕೆಟ್ಟಾಗ ನಡೆಯೋ ಹೀಟಿಂಗ್-ಕೂಲಿಂಗ್ ಜಡಿಮಳೆ ಸೂಚನೆ ಕನಣೈ!' ಅಂತಂದೆ.

'ಅಲ್ಲ ಕನ್ರೋ, ಬ್ಯಾರೆ ಟೈಮಲ್ಲಿ ಇಲ್ಲುದ್ದು ಐಪಿಎಲ್ ಮ್ಯಾಚ್ ನಡೀವಾಗ ಮಾತ್ರ ಮಳೆ ಹೂದು ಕೆಡಗತದಲ್ಲಾ ಯಾಕೆ ಗೊತ್ತಾ? ನಮ್ಮ ಇ.ಡಿ-ಐ.ಟಿಗೆ ಇದ್ದಂಗೆ ಮಳೆಗೂ ಅದರದ್ದೇ ಆದ ಒಂದು ಸಂ-ವಿಧಾನ ಇರತದೆ' ಅಂದ್ರು ತುರೇಮಣೆ ಮುಗುಂ ಆಗಿ.

'ಅದೇನು ಸಂ-ವಿಧಾನ ಅಂತ ಬುಡಸೇಳಿ ಸಾ!' ಅಂತ ತುರೇಮಣೆಗೆ ಗೋಗರೆದೆ.

'ಒಂದು ಮ್ಯಾಚು ನೋಡಕ್ಕೆ ಐವತ್ತು ಸಾವಿರ ಜನ ಬಂದು ಕುಕಂದಿರತರಾ! ಮ್ಯಾಚು ಗೆದ್ದಾಗ ಕೂಲಾಗಿ ಅರ್ಧ ಜನ, ಸೋತಾಗ ಹೀಟಲ್ಲಿ ಇನ್ನರ್ಧ ಜನ ನಿಟ್ಟುಸಿರು ಬುಡ್ತರಲ್ಲ ಈ ಫ್ಯಾನುಗಳ ಬಿಸಿ-ಥಂಡಿ ಗಾಳಿ ಮ್ಯಾಕ್ಕೋಗಿ ಮೋಡವ ಹಿಚುಕಿ ಮಳೆ ಹುಯ್ಯಸತದೆ ಕಲಾ' ಅಂದು ತಮ್ಮ ಸಂ-ಶೋಧನೆಯನ್ನು ಹೊರಗೆಡವಿದರು.

'ಈಗ ಅದಕ್ಕೆ ತಮ್ಮ ನೀರಾ-ವರಿ ಬಲಸಂಪನ್ಮೂಲ ಏನನ್ನುತ್ತೆ?' ಅಂತಂದೆ.

'ನೋಡ್ಲಾ, ನನ್ನ ಪ್ರಕಾರ ಯಾವ್ಯಾವ ಜಿಲ್ಲೇಲಿ ಮಳೆ ಹೂದಿಲ್ಲ ಅಲ್ಲೆಲ್ಲಾ 20-20 ಕ್ರಿಕೆಟ್ ಮ್ಯಾಚ್ ಆಡಿಸಿದರೆ ಮಾಮೇರಿ ಮಳೆಯಾಯ್ತದೆ' ಅಂತ ಅಪ್ಪಣೆ ಕೊಡಿಸಿದರು.

ಸದ್ಯ ಈ ಮಹಾಶಯನ ಐಡಿಯಾಗಳನ್ನು ಸಿಲ್ಲೀ ಪಾಯಿಂಟಲ್ಲಿ ಯಾರೂ ಕ್ಯಾಚು ಹಿಡಿಯಲಿಲ್ಲ.

ಸಂಗತ

ಕೃಪಾಂಕ ಮತ್ತು ಶೈಕ್ಷಣಿಕ ಸ್ಥಿತಿಗತಿ

ಶೈಕ್ಷಣಿಕ ಸ್ಥಿತಿಗತಿಯನ್ನು ಅರ್ಥಮಾಡಿಕೊಳ್ಳದೆ ಕೃಪಾಂಕಗಳ ಬಗ್ಗೆ ಚರ್ಚೆ ನಡೆಸಿದ್ದೇ ಆದರೆ ಮೂಲ ಸಮಸ್ಯೆ ಮರೆಗೆ ಸರಿಯುತ್ತದೆ

● ಉದಯ್ ಗಾಂವಕರ್

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ವಿದ್ಯಾರ್ಥಿಗಳನ್ನು ಕೃಪಾಂಕಗಳ ಮೂಲಕ ಉತ್ತೀರ್ಣ ಮಾಡುವ ಪದ್ಧತಿಯನ್ನು ಮುಂದಿನ ಬಾರಿಯಿಂದ ರದ್ದುಪಡಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ 1.70 ಲಕ್ಷ ವಿದ್ಯಾರ್ಥಿಗಳಿಗೆ ಕೃಪಾಂಕಗಳನ್ನು ನೀಡಲಾಗಿತ್ತು. ಹೀಗೆ ಕೃಪಾಂಕಗಳನ್ನು ನೀಡದೇ ಇದ್ದಿದ್ದರೆ ಈ ಬಾರಿಯ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಉತ್ತೀರ್ಣತೆಯ ಪ್ರಮಾಣ ಶೇಕಡ 53ರಷ್ಟು ಆಗಿರುತ್ತಿತ್ತು; ಇದು ಹಿಂದಿನ ಬಾರಿಗೆ ಹೋಲಿಸಿದರೆ ಶೇ 30ರಷ್ಟು ಕಡಿಮೆ.

ಇದೇ ಮೊದಲ ಬಾರಿಗೆ ಪರೀಕ್ಷಾ ಕೇಂದ್ರಗಳಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾ ಮೂಲಕ ವೆಬ್‌ಕಾಸ್ಟಿಂಗ್ ಅಳವಡಿಸಲಾಗಿತ್ತು. ಅದರಂತೆ, ಪರೀಕ್ಷಾ ಕೊಠಡಿಗಳ ದೃಶ್ಯಾವಳಿಗಳನ್ನು ಪರಿವೀಕ್ಷಿಸುವ ವ್ಯವಸ್ಥೆ ಮಾಡಲಾಗಿತ್ತು. ಇದರಿಂದ ನಕಲು ಮಾಡುವ ಸಾಧ್ಯತೆಗೆ ದೊಡ್ಡ ಪ್ರಮಾಣದಲ್ಲಿ ತಡೆಯೊಡ್ಡಲಾಗಿತ್ತು.

ಪರೀಕ್ಷಾ ಅಕ್ರಮಗಳಿಗೆ ಸಂಪೂರ್ಣ ಕಡಿವಾಣ ಬಿದ್ದಿರುವುದರಿಂದ ತೇರ್ಗಡೆಯ ಪ್ರಮಾಣ ಕಡಿಮೆ ಆಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಸಮರ್ಥಿಸಿಕೊಂಡಿದೆ. ಅಕ್ರಮಗಳಿಗೆ ಕಡಿವಾಣ ಹಾಕಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಅಕ್ರಮಗಳಿಗೆ ತಡೆಯೊಡ್ಡಿದರೆ ತೇರ್ಗಡೆ ಪ್ರಮಾಣ ಕುಸಿಯುತ್ತದೆ ಎಂಬುದು ಯಾರಿಗಾದರೂ ಗೊತ್ತಾಗುವಂಥ ಸಂಗತಿ. ಹಾಗಿದ್ದ ಮೇಲೆ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಿ ಫಲಿತಾಂಶದ ಪ್ರಮಾಣವನ್ನು ಹೆಚ್ಚಿಸಿದ್ದೇಕೆ? ಅದರಿಂದ ಏನು ಸಾಧಿಸಿದಂತೆ ಆಯಿತು ಎಂಬುದು ಅನೇಕರು ಕೇಳುವ ಪ್ರಶ್ನೆ. ವಿದ್ಯಾರ್ಥಿಗಳು ಅವರ ಅರ್ಹತೆಯ ಆಧಾರದಲ್ಲಿ ಪ್ರಗತಿ ಸಾಧಿಸಬೇಕೇ ವಿನಾ ಕೃಪಾಂಕಗಳನ್ನು ಪಡೆದು ಉತ್ತೀರ್ಣರಾಗುವುದಲ್ಲ ಎನ್ನುವುದು ಅವರ ವಾದ.

ಈ ವಾದ ಮೇಲ್ನೋಟಕ್ಕೆ ಆದರ್ಶದ್ದು ಎನಿಸುತ್ತದೆ. ಸಮಸ್ಯೆಯ ಆಳಕ್ಕೆ ಇಳಿದು ನೋಡಿದರೆ, ಇದರಿಂದ ಶೈಕ್ಷಣಿಕ ಹಿನ್ನಡೆಯ ಹೊಣೆಯನ್ನು ವಿದ್ಯಾರ್ಥಿಗಳ ಮೇಲೆ ಹೊರಿಸಿದಂತೆ ಆಗುತ್ತದೆ. ಹಾಗಾದರೆ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ನಕಲು ಮಾಡುವುದನ್ನು ಪ್ರೋತ್ಸಾಹಿಸಬೇಕೆ? ಕೃಪಾಂಕ ನೀಡಿ ತೇರ್ಗಡೆ ಮಾಡುವುದಾದರೆ ಕಲಿಕೆಯ ಗುಣಮಟ್ಟ ಕಡಿಮೆ ಆಗುವುದಿಲ್ಲವೇ? ಇಂತಹ ಅನೇಕ ಪ್ರಶ್ನೆಗಳು ಈಗ ಮುನ್ನೆಲೆಗೆ ಬರುತ್ತವೆ. ಈ ಪ್ರಶ್ನೆಗಳನ್ನು ಇನ್ನೊಂದು ನೆಲೆಯಲ್ಲಿ ಅರ್ಥಮಾಡಿಕೊಳ್ಳೋಣ.

ಈ ಬಾರಿ ಇಷ್ಟು ಕೃಪಾಂಕಗಳನ್ನು ನೀಡಿದ ನಂತರವೂ 2.28 ಲಕ್ಷದಷ್ಟು ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಉಡುಪಿ ಜಿಲ್ಲೆಯ ಫಲಿತಾಂಶ ಶೇ 94ರಷ್ಟಿದ್ದರೆ ಯಾದಗಿರಿ ಜಿಲ್ಲೆಯ ಫಲಿತಾಂಶ ಶೇ 50ರಷ್ಟಿದೆ. ಕೃಪಾಂಕ ನೀಡದೇ ಹೋಗಿದ್ದರೆ ಕಲ್ಯಾಣ ಕರ್ನಾಟಕದ ಹಲವು ಜಿಲ್ಲೆಗಳ ಫಲಿತಾಂಶದ ಪ್ರಮಾಣ ತೀರಾ ಕಡಿಮೆಯಾಗುತ್ತಿತ್ತು. ಈ ಮೂಲಕ ಮುಂದಿನ ವಿದ್ಯಾಭ್ಯಾಸಕ್ಕೆ ಮುನ್ನಡೆಯುವವರ ಸಂಖ್ಯೆಯಲ್ಲಿ ಭಾರಿ ಇಳಿಕೆ ಉಂಟಾಗುತ್ತಿತ್ತು. ಇಂತಹ ಅನಾಹುತವನ್ನು ತಾತ್ಕಾಲಿಕವಾಗಿ ತಡೆಯಲು ಮಂಡಳಿಯು ಕೃಪಾಂಕ ನೀಡಿಕೆಗೆ ಮುಂದಾಗಿರಬಹುದು.

ನಾಡಿನ ಒಂದು ಭಾಗದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಲಿಕೆಯ ಕೊರತೆ ಏಕೆ ಸಂಭವಿಸುತ್ತದೆ ಎಂಬ ದಿಸೆಯಲ್ಲಿ ವಿಶ್ಲೇಷಣೆ ನಡೆದಿದ್ದರೆ, ಆಗ ಕೊರತೆಯ ದೊಡ್ಡ ಹೊಣೆಯನ್ನು ಸರ್ಕಾರ ಹೊರಬೇಕಾಗುತ್ತಿತ್ತು. ಹಲವು ಬಗೆಯ ಪ್ರಾದೇಶಿಕ ಅಸಮಾನತೆಯನ್ನು ಬಗೆಹರಿಸಲು ಸರ್ಕಾರಕ್ಕೆ ಸಾಧ್ಯವಾಗದೇ ಹೋದಾಗ ವ್ಯವಸ್ಥೆಯು ಈ ದಿಸೆಯಲ್ಲಿ ಒಳದಾರಿಗಳನ್ನು ಹುಡುಕಿಕೊಳ್ಳುತ್ತದೆ. ಪರೀಕ್ಷೆಯಲ್ಲಿ ನಕಲು ಮಾಡಿಸುವುದು ಅನೇಕ ಕಡೆಗಳಲ್ಲಿ ಅನಿವಾರ್ಯ ಎಂಬಂತೆ ಆಗಿತ್ತು. ಶೈಕ್ಷಣಿಕ ಸ್ಥಿತಿಗತಿಗಳ ಈ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳದೆ ಕೃಪಾಂಕಗಳು ಮತ್ತು ನಕಲು ಮಾಡುವುದರ ಬಗ್ಗೆ ಚರ್ಚೆ ನಡೆಸಿದ್ದೇ ಆದರೆ ಮೂಲ ಸಮಸ್ಯೆ ಮತ್ತೆ ಮರೆಗೆ ಸರಿಯುತ್ತದೆ.



ಕಲಬುರಗಿಯಲ್ಲಿ ನಡೆದ ಒಂದು ಪ್ರಕರಣವನ್ನು ಇಲ್ಲಿ ಉಲ್ಲೇಖಿಸಬೇಕು. ಸರ್ಕಾರಿ ಶಾಲಾ ಅಭಿವೃದ್ಧಿ ವೇದಿಕೆ ಎಂಬ ಸಂಘಟನೆಯ ನೆರಳಿನಲ್ಲಿ ಇದೇ ವರ್ಷದ ಜನವರಿ 25ರಂದು ಎರಡು ಸಾವಿರಕ್ಕೂ ಹೆಚ್ಚು ಕೃಷಿ ಮಹಿಳೆಯರು ಜಿಲ್ಲಾಧಿಕಾರಿ ಕಚೇರಿಯೆದುರು ಅಹೋರಾತ್ರಿ ಧರಣಿ ಕುಳಿತಿದ್ದರು. ಶಾಲೆಗಳಿಗೆ ಶಿಕ್ಷಕರನ್ನು ನೇಮಕ ಮಾಡಬೇಕೆಂಬುದು ಅವರ ಆಗ್ರಹವಾಗಿತ್ತು. ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ 17,796 ಶಿಕ್ಷಕರ ಕೊರತೆ ಇದೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕೊಂದರಲ್ಲೇ ನೂರಕ್ಕೂ ಹೆಚ್ಚು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. ಏಕೋಪಾಧ್ಯಾಯ ಶಾಲೆಗಳ ಸಂಖ್ಯೆಯಂತೂ ಇದರ ಎರಡು ಪಟ್ಟು ಆಗಬಹುದು.

ಹಿಂದಿನ ಬಾರಿ ವರ್ಗಾವಣೆಯಾದ ನಂತರ ಸುಮಾರು 6,000 ಶಿಕ್ಷಕರು ಕಲ್ಯಾಣ ಕರ್ನಾಟಕವನ್ನು ತೊರೆದುಹೋದರು. ಇದು ಸಮಸ್ಯೆಯ ಒಂದು ಪದರು ಮಾತ್ರ. ಅಲ್ಲಿನ ಸಮಾಜೋ ಆರ್ಥಿಕ ಸ್ಥಿತಿಗತಿಗಳು, ಕುಟುಂಬಗಳ ವಲಸೆ, ಮಕ್ಕಳನ್ನು ಕೆಲಸಕ್ಕೆ ಕಳುಹಿಸುವಂತಹ ಕಾರಣಗಳಿಗಾಗಿ ಶಿಕ್ಷಣವನ್ನು ನಿರಾಕರಿಸಲಾಗುತ್ತದೆ. ಇಂತಹ ಹಲವು ಸಮಸ್ಯೆಗಳು ಅಲ್ಲಿವೆ. ಈ ಬಗೆಯ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ತಡೆಯದೇ ಇರುವುದರಿಂದ ಶಾಲಾ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ. ಕೃಪಾಂಕ ಅಥವಾ ನಕಲು ಮಾಡುವುದು ಸಮಸ್ಯೆಗಳಿಗೆ ತಕ್ಷಣದ ಪರಿಹಾರಗಳಾಗಿ ತಾವಾಗಿಯೇ ವಿಕಾಸಗೊಂಡವು.

ಆದರೆ, ತಮ್ಮದಲ್ಲದ ತಪ್ಪಿಗೆ ಬೆಲೆ ತೆರುತ್ತಿರುವ ಮಕ್ಕಳೇ ಈಗ ಈ ಎಲ್ಲ ವೈಫಲ್ಯಗಳ ಹೊಣೆಯನ್ನು ಹೊರಬೇಕಾಗಿ ಬಂದಿದೆ.

ವಾಚಕರ ವಾಣಿ

ಎಲ್ಲಕ್ಕೂ ಶಿಕ್ಷಕರೇ ಹೊಣೆಯಲ್ಲ

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು ಎರಡನೇ ಬಾರಿ ಪರೀಕ್ಷೆ ಬರೆಯುವುದಕ್ಕೆ ಪೂರಕವಾಗಿ ವಿಶೇಷ ತರಗತಿಗಳನ್ನು ತೆಗೆದುಕೊಳ್ಳಬೇಕೆಂಬ ರಾಜ್ಯ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ಆದೇಶಕ್ಕೆ, ಕೆಲವು ಶಿಕ್ಷಕರು ತಮ್ಮ ಬೇಸಿಗೆ ರಜೆ ಅವಧಿ ಕಡಿತವಾಯಿತು ಎಂದು ಆಕ್ಷೇಪಿಸಿರುವುದಾಗಿ ಸುರೇಂದ್ರ ಪೈ ಎಂಬುವರು ಹೇಳಿದ್ದಾರೆ (ವಾ.ವಾ., ಮೇ 18). ಈ ಸಂಬಂಧ ಕೆಲವು ಅಂಶಗಳನ್ನು ಚರ್ಚಿಸುವ ಅಗತ್ಯವಿದೆ ಅನ್ನಿಸುತ್ತದೆ. ಯಾರೇ ಆಗಲಿ ಪ್ರೌಢಶಾಲೆಗಳಿಗೆ ಭೇಟಿ ನೀಡಿದರೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಮಕ್ಕಳನ್ನು ಸಿದ್ಧಗೊಳಿಸುವುದರಲ್ಲಿ ಶಿಕ್ಷಕರು ಎಡೆಬಿಡದೆ ತೊಡಗಿರುವುದು ಕಾಣಸಿಗುತ್ತದೆ. ಶಿಕ್ಷಕರಿಗೆ ಬೇಸಿಗೆ ರಜೆ ಕೊಡುತ್ತಾರೆ ಎಂಬುದು ಮೇಲ್ನೋಟಕ್ಕೆ ಕಾಣುತ್ತದಾದರೂ ಪರೀಕ್ಷಾ ಕರ್ತವ್ಯ, ಮೌಲ್ಯಮಾಪನ, ಚುನಾವಣಾ ಕೆಲಸದಂತಹವುಗಳ ನಡುವೆ ಅವರಿಗೆ ಬಿಡುವೆಂಬುದು ದೊರಕಿದೆಯೇ ಎಂಬುದನ್ನು ಪರಾಮರ್ಶಿಸಿ ನೋಡಬೇಕಾಗಿದೆ.

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಕುಸಿದಿರುವುದರ ಹಿಂದೆ ಬಹಳಷ್ಟು ಕಾರಣಗಳಿವೆ. ಮಕ್ಕಳ ಮೊಬೈಲ್ ಗೀಳು, ಕ್ರಿಕೆಟ್ ಪ್ರಭಾವ, ಪೋಷಕರ ಅನಾಸಕ್ತಿ, ವಿದ್ಯಾರ್ಥಿಗಳಲ್ಲಿ ಓದಿನ ಆಸಕ್ತಿ ಕ್ಷೀಣಿಸಿರುವುದು ಎಲ್ಲವೂ ಇದರ ಹಿಂದೆ ಇವೆ. ಮಕ್ಕಳನ್ನು ಶೈಕ್ಷಣಿಕವಾಗಿ ಮನವೊಲಿಸುವುದು ಅಷ್ಟು ಸುಲಭದ ಕೆಲಸವಲ್ಲ. ಶೈಕ್ಷಣಿಕ ಬುನಾದಿ ಬಲಪಡಿಸುವ ಅಗತ್ಯವನ್ನು ಮನಗಂಡ ಶಿಕ್ಷಣ ಇಲಾಖೆಯು ಮಗುಸ್ನೇಹಿ ಶಿಕ್ಷಣ ವ್ಯವಸ್ಥೆಯತ್ತ ಗಮನ ಹರಿಸುತ್ತಿದೆ. ಪ್ರಾಥಮಿಕ ಶಿಕ್ಷಣದಿಂದ ಎಂಟನೆಯ ತರಗತಿಯವರೆಗೆ ಅನುತ್ತೀರ್ಣಗೊಳಿಸಬಾರದೆಂಬ ನಿಯಮವಿದೆ. ಐದು ಮತ್ತು ಎಂಟನೆಯ ತರಗತಿಗಳಲ್ಲಿಯೂ ಪಬ್ಲಿಕ್ ಪರೀಕ್ಷೆಗಳು ನಡೆಯುವುದರಿಂದ, ಅಲ್ಲಿಯೂ ಕಠಿಣ ನಿಯಮಗಳನ್ನು ಅನುಸರಿಸುವ ಸಮಯ ಬಂದರೆ, ಶಿಕ್ಷಣದ ಗುಣಮಟ್ಟ ನಿಧಾನವಾಗಿ ಹೆಚ್ಚುತ್ತದೆ.

ಫಲಿತಾಂಶ ಹೆಚ್ಚಿಸಲು ಸಹಜವಾಗಿ ಜಿಲ್ಲೆ ಜಿಲ್ಲೆಗಳಲ್ಲಿ ಪರೋಕ್ಷ ಸ್ಪರ್ಧೆ ಏರ್ಪಡುತ್ತದೆ. ಉನ್ನತ ಅಧಿಕಾರಿಗಳು ತಾಲ್ಲೂಕು ಅಧಿಕಾರಿಗಳ ಮೇಲೆ, ಅವರು ಮುಖ್ಯ ಶಿಕ್ಷಕರ ಮೇಲೆ ತೀವ್ರ ಒತ್ತಡ ಹೇರುವುದು ಕಂಡುಬರುತ್ತದೆ. ಕೊನೆಗೆ ಅದು ಆತ್ಯಂತಿಕವಾಗಿ ವಿಷಯ ಶಿಕ್ಷಕರು ಮಕ್ಕಳ ಮೇಲೆ ನಿತ್ಯ ಒತ್ತಡ ಹೇರುವಂತೆ ಆಗುತ್ತದೆ. ಈ ಸ್ಥಿತಿಯು ಮಕ್ಕಳ ಮಾನಸಿಕ ತಲ್ಲಣಗಳಿಗೆ ಕಾರಣವಾಗುತ್ತದೆ. ಮಗು ಕಲಿತದ್ದನ್ನೂ ಮರೆಯುವ ಹಂತಕ್ಕೆ ಹೋಗುತ್ತದೆ. ಎಷ್ಟೋ ಮಕ್ಕಳು ಅರ್ಧಕ್ಕೇ ಶಾಲೆ ಬಿಡುವ ಪ್ರಮಾಣ ಹೆಚ್ಚಾಗುತ್ತದೆ. ಓದುವ ಹವ್ಯಾಸ, ನಿರಂತರ ಅಧ್ಯಯನ, ಶಿಕ್ಷಕರ ಮಾರ್ಗದರ್ಶನ ಅನುಸರಿಸುವ ಮಕ್ಕಳು ಖಂಡಿತವಾಗಿ ಯಶಸ್ಸನ್ನು ಪಡೆಯುತ್ತಾರೆ. ಅನುತ್ತೀರ್ಣವಾಗುವುದೇ ಮಗುವಿನ ಗುಣಮಟ್ಟ ಅಳೆಯುವ ಸಾಧನವಲ್ಲ. ಎಲ್ಲದಕ್ಕೂ ಶಿಕ್ಷಕರನ್ನೇ ಹೊಣೆಗಾರರನ್ನಾಗಿ ಮಾಡಿ ಕೈತೊಳೆದುಕೊಳ್ಳುವುದಕ್ಕಿಂತ, ಇಂತಹ ಪರಿಸ್ಥಿತಿಗೆ ಕಾರಣವಾದ ಇತರ ಅಂಶಗಳ ಬಗ್ಗೆ ಅಧ್ಯಯನ ನಡೆಯಲಿ.

ತಿರುಪತಿ ನಾಯಕ್, ಹೊಸನಗರ

ಹೊಸ ಬಡಾವಣೆಗಳಿಗೆ ಕಡಿವಾಣ ಅಗತ್ಯ

ಈಗ ಅಪಾರ್ಟ್‌ಮೆಂಟ್‌ಗಳು, ಗಗನಚುಂಬಿ ಕಟ್ಟಡಗಳು, ಒಂದು ನಿವೇಶನದಲ್ಲಿ ಆರರಿಂದ ಹತ್ತು ಮನೆಗಳು ನಿರ್ಮಾಣ ಆಗುತ್ತಿವೆ. ಹಾಗಾಗಿ, ಹೊಸ ಬಡಾವಣೆಗಳ ಅಗತ್ಯವೇ ಇಲ್ಲ ಎನಿಸುತ್ತದೆ. ಆದರೂ ಬಡಾವಣೆಗಳ ನಿರ್ಮಾಣವನ್ನೇ ದಂಧೆ ಮಾಡಿಕೊಂಡಿರುವ ಕೆಲವರು, ಮಾರಿದ ನಂತರ ಕೊಂಡವರ ಪಾಡು ಎನ್ನುವಂತೆ ಗಾಳಿ ಬಂದಾಗ ತೂರಿಕೊಂಡು ಹೋಗುತ್ತಾರೆ. ಕಂದಾಯ ಇಲಾಖೆಯು ಬೊಕ್ಕಸಕ್ಕೆ ಒಂದಷ್ಟು ವರಮಾನ ಬರಲಿ ಎಂಬ ಕಾರಣಕ್ಕೆ ಜಾಣ ಕುರುಡುತನ ಪ್ರದರ್ಶಿಸುತ್ತದೆ. ಹೀಗೆ ಅವಿರತವಾಗಿ ಹಸಿರು ಭೂಮಿಯನ್ನೆಲ್ಲ ಬಡಾವಣೆ ಮಾಡುತ್ತಾ ಹೋದರೆ ಉಸಿರಿಗೆ ಏನು ಮಾಡುವುದು?

ಅಗತ್ಯ ಇದ್ದವರಿಂದ ಮೊದಲೇ ಅರ್ಜಿ ಹಾಕಿಸಿಕೊಂಡು ನಂತರ ನಿವೇಶನಗಳನ್ನು ನೀಡುವ ನಿಯಮ ಜಾರಿಗೆ ಬರಬೇಕು. ತಪ್ಪಿದಲ್ಲಿ ಹಣ ಉಳ್ಳವರು ದುಡ್ಡು ಮಾಡುವ ದಂಧೆ ಮಾಡಿಕೊಂಡು ಎಗ್ಗಿಲ್ಲದೆ ನಿವೇಶನಗಳನ್ನು ರೂಪಿಸುತ್ತಾ ಹೋಗುತ್ತಾರೆ. ಬೆಂಗಳೂರಿನಂಥ ನಗರಗಳು ಈಗಾಗಲೇ ವಿಪರೀತ ಬೆಳೆದಿವೆ. ನೀರು ಪೂರೈಕೆ, ಮೂಲ ಸೌಕರ್ಯ ಕಲ್ಪಿಸುವುದು ಕಷ್ಟದ ಕೆಲಸವಾಗಿದೆ. ಆದಕಾರಣ, ಹೊಸ ಬಡಾವಣೆಗಳಿಗೆ ಕಡಿವಾಣ ಹಾಕುವುದು ಅಗತ್ಯ.

ಮಲ್ಲಿಕಾರ್ಜುನ, ಸುರಧೇನುಪುರ

'ಕಮಿಷನ್ ದಂಧೆ' ಯಥಾವಿಧಿ ಎನ್ನುವುದಾದರೆ...

'ಕೈ ಸರ್ಕಾರಕ್ಕೆ ವರ್ಷದ ಸಂಭ್ರಮ' ಎಂಬ ವರದಿ (ಪ್ರ.ವಾ., ಮೇ 20) ಓದಿ ಇದೆಂಥಾ ವ್ಯಂಗ್ಯ ಅನ್ನಿಸಿತು. ಒಂದಲ್ಲ ಒಂದು ಕಾರಣಕ್ಕೆ ನಡೆದ ರಾಜಕೀಯ ಗುದ್ದಾಟಗಳ ಸದ್ದಿನಲ್ಲಿ, ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಆಗಲೇ ಒಂದು ವರ್ಷ ಪೂರೈಸಿದ್ದು ಗೊತ್ತೇ ಆಗಲಿಲ್ಲ. ಹೋದ ವರ್ಷ ಸದ್ದಿಲ್ಲದೇ ಅಧಿಕಾರ ಹಸ್ತಾಂತರಿಸಿದ ಕರ್ನಾಟಕ ಜನರ ಆ ನಡೆ ರಾಷ್ಟ್ರವೇ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿದ್ದು ದಿಟ. ಸರಿಯಾಗಿ ಐವತ್ತು ವರ್ಷಗಳ ಹಿಂದೆ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾದುದರ ಬೆನ್ನ ಹಿಂದೆಯೇ ಸಾಮಾಜಿಕ ಹರಿಕಾರ, ದೂರದೃಷ್ಟಿಯ ರಾಜಕಾರಣಿ ಎಂದೇ ಹೆಸರಾಗಿದ್ದ ಡಿ.ದೇವರಾಜ ಅರಸು ಅವರು ತಂದ ಬದಲಾವಣೆಗಳಿಂದಾದ ಸಾಮಾಜಿಕ ನ್ಯಾಯದ ಕೂಸುಗಳು ನಾವು. ಈಗ ಅದೇ ಮೈಸೂರು ಭಾಗದಿಂದ ಎದ್ದು ಬಂದ ಸಿದ್ದರಾಮಯ್ಯ ಅವರಲ್ಲಿ ಅರಸು ಅವರ ವ್ಯಕ್ತಿತ್ವವನ್ನು ನಾವು ನಿರೀಕ್ಷಿಸಿದ್ದು ತಪ್ಪಲ್ಲ. ಆಗಿನದಕ್ಕಿಂತ ಈಗ ಪರಿಸ್ಥಿತಿ ಭಿನ್ನವಾಗಿದೆ, ಸವಾಲುಗಳೂ ಬಹಳಷ್ಟು. ಭ್ರಷ್ಟತೆಯನ್ನೇ ಮೈಗೂಡಿಸಿಕೊಂಡಿರುವ ರಾಜಕಾರಣಿಗಳ ಪಡೆಯೂ ಈಗ ದೊಡ್ಡದಾಗಿದೆ.

ಹಾಗಿದ್ದಾಗಲೂ ಪ್ರಜಾಪ್ರಭುತ್ವದ ಯಶಸ್ಸಿಗೆ ರಚನಾತ್ಮಕ ಸಲಹೆ ನೀಡಬಲ್ಲ ಪ್ರಬುದ್ಧ ರಾಜಕಾರಣಿಗಳನ್ನು ಒಳಗೊಂಡ ಸಮರ್ಥ ವಿರೋಧ ಪಕ್ಷವೂ ಒಂದು ಇರಬೇಕು. ಯಾವ ತರಬೇತಿಯಿಲ್ಲದೆ ವಿಧಾನಸೌಧ ಪ್ರವೇಶಿಸಿ ಅಪ್ರಬುದ್ಧತೆ ಮೆರೆಯುವವರನ್ನು ಚರ್ಚೆಯಲ್ಲಿ ತೊಡಗುವಂತೆ ಮಾಡುವುದರಲ್ಲೇ ಅಧಿವೇಶನದ ಅಮೂಲ್ಯ ಸಮಯ ವ್ಯರ್ಥವಾಗುತ್ತಿದೆ. ಇದನ್ನು ತಪ್ಪಿಸುವುದು ಹೇಗೆ? ರಾಜಕಾರಣ ಅನ್ನುವುದು ನಮ್ಮ ದೇಶದಲ್ಲಿ ಯಾವ ಅರ್ಹತೆಯನ್ನೂ ಬೇಡದ ಸಲೀಸಾದ ದಂಧೆಯಾಯಿತೇ ಎಂಬುದು ನಮ್ಮ ಮುಂದಿರುವ ಪ್ರಶ್ನೆ.

ಒಟ್ಟಾರೆ, ಹಿಂತಿರುಗಿ ನೋಡಿದಾಗ, ರಾಜ್ಯದ ಜನ ನಿರೀಕ್ಷಿಸಿದ ಮಟ್ಟದಲ್ಲಿ ಕೆಲಸಗಳು ಆಗುತ್ತಿಲ್ಲ. ಸರ್ಕಾರಿ ಯಂತ್ರ ನಿಯಂತ್ರಣಕ್ಕೆ ಸಿಗುತ್ತಿಲ್ಲ. ಲೋಕಾಯುಕ್ತದ ಬಲೆಗೆ ಬೀಳುವವರ ಸುದ್ದಿ ಓದಿ ಈಗ ಯಾರೂ ಬೆಚ್ಚಿಬೀಳುವುದಿಲ್ಲ. ಹಿಂದಿನ ಸರ್ಕಾರದ ಅವಧಿಯ 'ಕಮಿಷನ್ ದಂಧೆ' ಈಗಲೂ ಯಥಾವಿಧಿ ಎನ್ನುವುದಾದರೆ ಮುಂದೇನು? 'ಗ್ಯಾರಂಟಿ'ಗಳನ್ನೇ ನೆಚ್ಚಿಕೊಂಡು ಹೋಗುವುದು ಎಲ್ಲಿಯವರೆಗೆ? ಒಟ್ಟಾರೆ, ನೆಚ್ಚಿದ ಎಮ್ಮೆ ಕೋಣವನ್ನು ಈಯಿತು ಎನ್ನುವಂತೆ ಆಗಬಾರದಷ್ಟೆ!

ಈರಪ್ಪ ಎಂ. ಕಂಬಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಇರಾನ್ ಅಧ್ಯಕ್ಷ ರೈಸಿ ಸಾವಿನ ಸುತ್ತ...



ಇರಾನ್‌ನಲ್ಲಿ ಪರಮೋಚ್ಚ ನಾಯಕ ಅಯಾತ್–ಉಲ್ಲಾ–ಅಲ್–ಖಮೇನಿ ನಂತರ ಅತಿಹೆಚ್ಚು ಅಧಿಕಾರ ಇರುವುದು ಅಧ್ಯಕ್ಷರಿಗೆ. ಇರಾನ್‌ನ ರಾಜಕಾರಣದ ಬಗ್ಗೆ ಒಂದು ಮಾತಿದೆ: 'ಎಲ್ಲಾ ವಿಚಾರದಲ್ಲೂ ಪರಮೋಚ್ಚ ನಾಯಕನದ್ದೇ ಅಂತಿಮ ನಿರ್ಧಾರ. ಆತ ಹೇಳಿದ್ದನ್ನು ಅಥವಾ ಆದೇಶಿಸಿದ್ದನ್ನು ಕಾರ್ಯರೂಪಕ್ಕೆ ತರುವ ಕೆಲಸ ಅಧ್ಯಕ್ಷನದು. ಅಧ್ಯಕ್ಷ ಹುದ್ದೆಯಲ್ಲಿ ಕೂತ ವ್ಯಕ್ತಿಯ ಇಚ್ಛಾಶಕ್ತಿ ಮತ್ತು ಸಾಮರ್ಥ್ಯ ಎಷ್ಟಿದೆ ಎಂಬುದರ ಆಧಾರದ ಮೇಲೆ ಆತ ಪರಮೋಚ್ಚ ನಾಯಕನ ನೀತಿರೂಪಣೆಯನ್ನು ಪ್ರಭಾವಿಸಬಹುದು'. ಹಾಗೆ ಪ್ರಭಾವಿಸುವ ಶಕ್ತಿ ಹೊಂದಿದ್ದ ಅಧ್ಯಕ್ಷ ಅಯಾತ್–ಉಲ್ಲಾ ಇಬ್ರಾಹಿಂ ರೈಸಿ ಭಾನುವಾರದ ಹೆಲಿಕಾಪ್ಟರ್ ಅವಘಡದಲ್ಲಿ ಮೃತಪಟ್ಟಿದ್ದಾರೆ. ಮಧ್ಯಪ್ರಾಚ್ಯ ದೇಶಗಳಲ್ಲಿನ ಮೈತ್ರಿಕೂಟಗಳು ಮತ್ತು ಬಂಡುಕೋರರ ಆಗುಹೋಗುಗಳನ್ನು ನಿಯಂತ್ರಿಸುತ್ತಿದ್ದ ರೈಸಿ ಅವರು ಇಲ್ಲವಾಗಿರುವುದು ಈಗ ಅಲ್ಲಿನ ಭೌಗೋಳಿಕ ರಾಜಕಾರಣದ ದಿಕ್ಕನ್ನು ಬದಲಿಸುತ್ತದೆ ಎಂದು ವಿಶ್ಲೇಷಿಸಲಾಗುತ್ತಿದೆ

ಪ್ರಜಾವಾಣಿ ವಾರ್ತೆ

ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಜನರ ಸಂಘರ್ಷ ಹಾಗೂ ಯುದ್ಧದಲ್ಲಿ ಇರಾನ್ ಸದಾ ಪ್ಯಾಲೆಸ್ಟೀನ್ ಜನರ ಪರವಾಗಿ ನಿಂತಿದೆ. ಪ್ಯಾಲೆಸ್ಟೀನ್ ಜನರ ಪರವಾಗಿ ಶಸ್ತ್ರಾಸ್ತ್ರ ಸಂಘರ್ಷ ನಡೆಸುತ್ತಿರುವ ಹಮಾಸ್ ಬಂಡುಕೋರರಿಗೆ ಶಸ್ತ್ರಾಸ್ತ್ರ, ಮದ್ದುಗುಂಡುಗಳು ಮತ್ತು ಹಣಕಾಸು ನೆರವು ನೀಡುತ್ತಿರುವುದು ಇರಾನ್ ಎಂಬುದು ಇಸ್ರೇಲ್‌ನ ಆರೋಪ. ಇರಾನ್ ಮೇಲೆ ಇರುವ ಆರ್ಥಿಕ ದಿಗ್ಬಂಧನದ ಹೊರತಾಗಿಯೂ ಹಮಾಸ್, ಶಿಯಾ ಹೂಥಿ ಬಂಡುಕೋರರಿಗೆ ಇಂತಹ ನೆರವು ಒದಗಿಸಲು ಸಾಧ್ಯವಾಗಿದ್ದದ್ದು ಇಬ್ರಾಹಿಂ ರೈಸಿ ಕಾರಣಕ್ಕೆ ಎಂಬುದನ್ನು ಜಾಗತಿಕ ರಾಜಕೀಯ ತಜ್ಞರು ಒಪ್ಪಿಕೊಳ್ಳುತ್ತಾರೆ. ಮಧ್ಯಪ್ರಾಚ್ಯ ದೇಶಗಳಲ್ಲಿ ಶಿಯಾ ಮುಸ್ಲಿಮರ ಹಕ್ಕುಗಳ ರಕ್ಷಣೆಯಲ್ಲಿ ಇರಾನ್ ಸದಾ ಮುಂದಿರುತ್ತದೆ. ಇದು ಇರಾನ್‌ನ ಪರಮೋಚ್ಚ ನಾಯಕ ಖಮೇನಿಯ ನಿಲುವಾದರೂ, ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದಿದ್ದು ರೈಸಿ.

ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ದಾಳಿ ಮುಂದುವರಿಸಿದಂತೆ, ಇಸ್ರೇಲ್ ಮತ್ತು ಅದರ ಮಿತ್ರ ರಾಷ್ಟ್ರಗಳ ಹಡಗುಗಳ ಮೇಲೆ ಯೆಮನ್‌ನ ಶಿಯಾ ಹೂಥಿ ಬಂಡುಕೋರರು ದಾಳಿ ನಡೆಸುತ್ತಲೇ ಇದ್ದರು. ಜಗತ್ತಿನ ಅತಿಹೆಚ್ಚು ವಾಣಿಜ್ಯ ಹಡಗುಗಳು ಸಂಚರಿಸುವ ಕೆಂಪು ಸಮುದ್ರ ಮಾರ್ಗದ ಹೊರ್ಮುಜ್ ಕೊಲ್ಲಿಯಲ್ಲಿ ನಿಂತು ನಡೆಸುತ್ತಿದ್ದ ಈ ದಾಳಿಯಿಂದ ಜಾಗತಿಕ ವಾಣಿಜ್ಯ ವಹಿವಾಟಿಗೆ ಭಾರಿ ಹೊಡೆತ ಬಿದ್ದಿತ್ತು. ಹೂಥಿ ಬಂಡುಕೋರರು ದಾಳಿ ನಡೆಸಲು ಅಗತ್ಯವಿದ್ದ ಶಸ್ತ್ರಾಸ್ತ್ರ ಮತ್ತು ಹಣಕಾಸು ನೆರವು ಒದಗಿಸುತ್ತಿದ್ದದ್ದು ಇರಾನ್. ಹಮಾಸ್ ಮತ್ತು ಹೂಥಿ ಮಾತ್ರವಲ್ಲ, ಮಧ್ಯಪ್ರಾಚ್ಯದ ಇತರ ಮುಸ್ಲಿಂ ರಾಷ್ಟ್ರಗಳಾದ ಸಿರಿಯಾ ಮತ್ತು ಲೆಬನಾನ್‌ನಲ್ಲಿ ಕ್ರಮವಾಗಿ ಶಿಯಾ ಬಂಡುಕೋರರು ಮತ್ತು ಹಿಜ್ಬುಲ್ಲಾ ಬಂಡುಕೋರರಿಗೂ ಇರಾನ್ ನೆರವು ನೀಡುತ್ತಿದೆ ಎಂದು ಅಮೆರಿಕ ಮತ್ತು ಇಸ್ರೇಲ್‌ನ ಗೂಢಚಾರ ಸಂಸ್ಥೆಗಳು ಹೇಳಿದ್ದವು.

ಒಂದೆಡೆ ಸುನ್ನಿ ಮುಸ್ಲಿಮರ ಪ್ರಾಬಲ್ಯವನ್ನು ತೊಡೆದುಹಾಕುವುದು ಇನ್ನೊಂದೆಡೆ, ಇಸ್ರೇಲ್ ಪ್ರಬಲವಾಗುವುದನ್ನು ತಡೆಯುವ ತಂತ್ರದ ಭಾಗವಾಗಿ ಇರಾನ್ ಇಂತಹ ನೆರವು ನೀಡುತ್ತಿತ್ತು. ಹೀಗಾಗಿಯೇ ಇಸ್ರೇಲ್ ಸುತ್ತಲಿನ ಮುಸ್ಲಿಂ ದೇಶಗಳಲ್ಲಿ ಶಿಯಾ ಬಂಡುಕೋರರನ್ನು ಇರಾನ್ ಸಲಹುತ್ತಿತ್ತು. ಆ ಎಲ್ಲಾ ಕಾರ್ಯತಂತ್ರಗಳನ್ನು ಇರಾನ್‌ನ ರೆವಲ್ಯೂಷನರಿ ಗಾರ್ಡ್ ಫೋರ್ಸ್ (ಆರ್‌ಜಿಎಫ್) ಮೂಲಕ ನಿರ್ವಹಿಸಲಾಗುತ್ತಿತ್ತು. ಆ ಎಲ್ಲದರ ಅಂತಿಮ ಹೊಣೆ ರೈಸಿಯದ್ದಾಗಿತ್ತು. ಇವಲ್ಲದೇ ಮಧ್ಯಪ್ರಾಚ್ಯದ ಮುಸ್ಲಿಂ ದೇಶಗಳನ್ನು ಪ್ಯಾಲೆಸ್ಟೀನ್ ಜನರ ಪರವಾಗಿ ಒಗ್ಗೂಡಿಸುವಲ್ಲಿ ಇರಾನ್ ಅರ್ಥಾತ್ ರೈಸಿ ಮಹತ್ವದ ಪಾತ್ರ ವಹಿಸಿದ್ದರು. ಈ ದೇಶಗಳ ಒತ್ತಡದ ನಂತರವೇ ಇಸ್ರೇಲ್‌ನ ದಾಳಿಯ ಬಗ್ಗೆ ಐರೋಪ್ಯ ದೇಶಗಳು ಮತ್ತು ಅಮೆರಿಕ ಆಕ್ಷೇಪ ವ್ಯಕ್ತಪಡಿಸಿದ್ದು. ಈಗ ರೈಸಿಯ ಸಾವಿನ ನಂತರ ಇರಾನ್‌ನ ಈ ಎಲ್ಲಾ ಕಾರ್ಯತಂತ್ರಕ್ಕೆ ಭಾರಿ ಹಿನ್ನಡೆಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಪ್ರತಿಕೂಲ ವಾತಾವರಣದ ಕಾರಣದಿಂದ ಹೆಲಿಕಾಪ್ಟರ್ ಪತನವಾಗಿದೆ ಎಂದು ಇರಾನ್ ಸರ್ಕಾರ ಹೇಳಿದೆ. ಆದರೆ ಹೆಲಿಕಾಪ್ಟರ್ ಹೊಡೆದುರುಳಿಸಿರುವ ಸಾಧ್ಯತೆಯೂ ಇದೆ ಮತ್ತು ಇದರ ಹಿಂದೆ ಇಸ್ರೇಲ್ ಇರಬಹುದು ಎಂದೂ ಚರ್ಚೆಯಾಗುತ್ತಿದೆ.

ಪ್ಯಾಲೆಸ್ಟೀನ್‌ನ ಜನರ ಮೇಲೆ ಇಸ್ರೇಲ್‌ನ ದಾಳಿಗೆ ಇರಾನ್ ನೇರವಾಗಿ ಪ್ರತಿದಾಳಿ ನಡೆಸಿರಲಿಲ್ಲ. ಬಂಡುಕೋರ ಗುಂಪುಗಳ ಮೂಲಕವೇ ದಾಳಿ ನಡೆಸುತ್ತಿತ್ತು. ಈ ಎರಡೂ ದೇಶಗಳ ಮಧ್ಯೆ ಸಂಘರ್ಷವು ತೆರೆಮರೆಯಲ್ಲೇ ನಡೆಯುತ್ತಿತ್ತು. ಆದರೆ ಇದೇ ಏಪ್ರಿಲ್ 1ರಂದು ಇಸ್ರೇಲ್‌ನ ಪಡೆ, ಸಿರಿಯಾದ ಡಮಾಸ್ಕಸ್‌ನ ದಕ್ಷಿಣದಲ್ಲಿದ್ದ ಇರಾನ್ ರಾಯಭಾರ ಕಚೇರಿಯ ಮೇಲೆ ದಾಳಿ ನಡೆಸಿತ್ತು. ಆ ದಾಳಿಯಲ್ಲಿ ಇರಾನ್ ಸೇನಾ ಕಮಾಂಡರ್, ಪ್ರಮುಖ ಸೇನಾಧಿಕಾರಿಗಳು ಸೇರಿ ಏಳು ಜನರು ಮೃತಪಟ್ಟಿದ್ದರು. ಆ ದಾಳಿಗೆ ಪ್ರತೀಕಾರ ತೆಗೆದುಕೊಳ್ಳುವುದಾಗಿ ಖಮೇನಿ ಅಂದೇ ಘೋಷಿಸಿದ್ದರು. ಅದರ ಭಾಗವಾಗಿಯೇ ಏಪ್ರಿಲ್ 6ರಂದು ಇರಾನ್, ಇಸ್ರೇಲ್ ಮೇಲೆ ದಾಳಿ ನಡೆಸಿತ್ತು. ಆ ದಾಳಿಯನ್ನು ಇಸ್ರೇಲ್ ವಿಫಲಗೊಳಿಸಿದ್ದರೂ, ಪ್ರತಿದಾಳಿಯ ಎಚ್ಚರಿಕೆ ನೀಡಿತ್ತು. ಅನಂತರದ ತಿಂಗಳೊಪ್ಪತ್ತಿನಲ್ಲಿ ಇರಾನ್‌ನ ಅಧ್ಯಕ್ಷ ರೈಸಿ ಪಯಣಿಸುತ್ತಿದ್ದ ಹೆಲಿಕಾಪ್ಟರ್ ಪತನವಾಗಿ ಅವರು ಮೃತಪಟ್ಟಿದ್ದಾರೆ. 'ನಾವು ಏನನ್ನೂ ಮಾಡಿಲ್ಲ' ಎಂದು ಹೇಳಿರುವ ಇಸ್ರೇಲ್ ವಾತಾವರಣವನ್ನು ತಿಳಿಗೊಳಿಸಲು ಯತ್ನಿಸುತ್ತಿದೆ. ಇರಾನ್ ಸಹ ಈ ಬಗ್ಗೆ ಯಾವುದೇ ಚಕಾರ ಎತ್ತಿಲ್ಲ.

ಇಸ್ರೇಲ್‌ನತ್ತಲೇ ಬೊಟ್ಟು

ಇದು ಒಂದು ಅಪಘಾತವಷ್ಟೇ ಎಂದು ಇರಾನ್ ಹೇಳಿದರೂ, ಇದರಲ್ಲಿ ತನ್ನದೇನೂ ಪಾತ್ರವಿಲ್ಲ ಎಂದು ಇಸ್ರೇಲ್ ಹೇಳುತ್ತಿದ್ದರೂ ಜಾಗತಿಕ ಸುದ್ದಿ ಮಾಧ್ಯಮಗಳು ಇಸ್ರೇಲ್‌ನತ್ತಲೇ ಬೊಟ್ಟು ಮಾಡಿ ವಿಶ್ಲೇಷಣೆ ಪ್ರಕಟಿಸುತ್ತಿವೆ. ಅಂತಹ ವಿಶ್ಲೇಷಣೆ ಮಾಡಲು ಕಾರಣಗಳನ್ನೂ ಅವು ಪಟ್ಟಿ ಮಾಡುತ್ತಿವೆ.

ರೈಸಿ ಅವರು ಭಾನುವಾರ ಇರಾನ್‌ನ ಉತ್ತರ ದಿಕ್ಕಿನಲ್ಲಿರುವ ಅಜರ್‌ಬೈಜಾನ್‌ನ ಗಡಿಗೆ ಹೋಗಿದ್ದರು. ಅಲ್ಲಿ ಎರಡೂ ದೇಶಗಳ ಗಡಿಯಲ್ಲಿ ನಿರ್ಮಿಸಲಾಗಿರುವ ಅಣೆಕಟ್ಟೆಯನ್ನು ಉದ್ಘಾಟಿಸಿ ಅವರು ವಾಪಸಾಗುತ್ತಿದ್ದರು. ಹೀಗೆ ವಾಪಸಾಗುವ ವೇಳೆ ಅವಘಡ ಸಂಭವಿಸಿದೆ. ಆದರೆ ಎಲ್ಲರೂ ಬೊಟ್ಟು ಮಾಡಿ ಹೇಳುತ್ತಿರುವುದು ಅಜರ್‌ಬೈಜಾನ್‌ನಲ್ಲಿ ಇರುವ ಇಸ್ರೇಲ್‌ನ ರಹಸ್ಯ ವಾಯುನೆಲೆಯ ಬಗ್ಗೆ. ಅಜರ್‌ಬೈಜಾನ್‌ನಲ್ಲಿ ಇರುವ ಸೇನಾನೆಲೆಯ ನಿರ್ವಹಣೆಯ ಹೊಣೆಯನ್ನು ಇಸ್ರೇಲ್ ಹೊತ್ತುಕೊಂಡಿದೆ. ಇಸ್ರೇಲ್‌ನ ರಹಸ್ಯ ಕಾರ್ಯಾಚರಣಾ ಪಡೆ 'ಮೊಸಾದ್'ನ ಒಂದು ನೆಲೆಯಾಗಿ ಇದು ಬಳಕೆಯಾಗುತ್ತಿದೆ. ಈ ಬೆಳವಣಿಗೆ ಸರಿಯಲ್ಲ ಎಂದು 2012ರಲ್ಲಿ ಅಮೆರಿಕದ ವಿದೇಶಾಂಗ ಸಚಿವಾಲಯ ಇಸ್ರೇಲ್‌ಗೆ ಎಚ್ಚರಿಕೆ ನೀಡಿತ್ತು.

ಈ ವಾಯುನೆಲೆ ಈಗಲೂ ಕಾರ್ಯಾಚರಣೆಯಲ್ಲಿದೆ ಎನ್ನಲಾಗಿದೆ. ಭಾನುವಾರ ರೈಸಿ ಅವರ ಹೆಲಿಕಾಪ್ಟರ್ ಪತನವಾದ ಸ್ಥಳದಿಂದ ಈ ವಾಯುನೆಲೆಗೆ ಇರುವ ಅಂತರ 330 ಕಿ.ಮೀ. ಮಾತ್ರ. ಹೀಗಾಗಿ ಈ ಘಟನೆಯಲ್ಲಿ ಇಸ್ರೇಲ್‌ನ ಕೈವಾಡವನ್ನು ತಳ್ಳಿಹಾಕಲಾಗದು ಎಂದು ವಿಶ್ಲೇಷಿಸಲಾಗುತ್ತಿದೆ.

ಭಾನುವಾರದ ಘಟನೆಯ ಸಲುವಾಗಿ ಇಸ್ರೇಲ್‌ನತ್ತ ಬೊಟ್ಟು ಮಾಡಲು ಇದೊಂದೇ ಕಾರಣವಲ್ಲ. ಇಸ್ರೇಲ್‌ನ ಮೊಸ್ಸಾದ್ ರಹಸ್ಯ ಪಡೆ ಈ ಹಿಂದೆ ಇರಾನ್‌ನ ನೆಲದಲ್ಲೇ ಕಾರ್ಯಾಚರಣೆ ನಡೆಸಿ ಸೇನಾಧಿಕಾರಿಗಳನ್ನು, ಪರಮಾಣು ವಿಜ್ಞಾನಿಗಳನ್ನು ಹತ್ಯೆ ಮಾಡಿದೆ. 2020ರಲ್ಲಿ ಇರಾನ್ ನೆಲದಲ್ಲೇ ಅಂತಹ ಕಾರ್ಯಾಚರಣೆ ನಡೆಸಿದ್ದ ಇಸ್ರೇಲ್, ಇರಾನ್‌ನ ಪರಮಾಣು ವಿಜ್ಞಾನಿ ಮೊಹಸೀನ್ ಫಕ್ರಿಝಡೇಃ ಅವರನ್ನು ಕೊಂದಿತ್ತು. 1,300 ಕಿ.ಮೀ. ದೂರದಲ್ಲಿ ಕೂತು ರೋಬೊ ಮೂಲಕ ದಾಳಿ ನಡೆಸಿ ವಿಜ್ಞಾನಿಯನ್ನು ಕೊಲ್ಲಲಾಗಿತ್ತು. 2007ರಿಂದ ಈವರೆಗೆ ಈ ರೀತಿ ಐವರು ವಿಜ್ಞಾನಿಗಳನ್ನು ಕೊಲ್ಲಲಾಗಿದೆ ಎಂದು 2021ರಲ್ಲಿ ನ್ಯೂಯಾರ್ಕ್ ಟೈಮ್ಸ್ ವಿಸ್ತೃತ ವರದಿ ಪ್ರಕಟಿಸಿತ್ತು.



ಅಜರ್‌ಬೈಜಾನ್‌ನ ವಾಯುನೆಲೆ: ಇದನ್ನು ಇಸ್ರೇಲ್ ನಿರ್ವಹಿಸುತ್ತಿದೆ ಎಂದು ಅಮೆರಿಕವು ಹೇಳಿತ್ತು. ಇಬ್ರಾಹಿಂ ರೈಸಿ ಅವರ ಹೆಲಿಕಾಪ್ಟರ್ ಪತನವಾದ ಸ್ಥಳದಿಂದ ಈ ವಾಯುನೆಲೆ 330 ಕಿ.ಮೀ.ನಷ್ಟು ದೂರವಿದೆ

ಆಧಾರ: ಎಎಫ್‌ಪಿ, ರಾಯಿಟರ್ಸ್, ನ್ಯೂಯಾರ್ಕ್ ಟೈಮ್ಸ್ ವರದಿಗಳು, ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆಯ ವರದಿ

'ಟೆಹ್ರಾನ್‌ನ ಕಟುಕ'

ಇಬ್ರಾಹಿಂ ರೈಸಿ ಒಬ್ಬ ಕಡು ಮೂಲಭೂತವಾದಿ. 'ಟೆಹ್ರಾನ್‌ನ ಕಟುಕ' ಹಾಗೂ 'ಕಠಿಣ ವ್ಯಕ್ತಿ' ಎಂಬವು ಅವರಿಗಿದ್ದ ಬಿರುದುಗಳು. 1988ರಲ್ಲಿ ಅಂದಿನ ಪರಮೋಚ್ಚ ನಾಯಕ ಅಯಾತ್–ಉಲ್ಲಾ ರೋಹ್–ಉಲ್ಲಾ ಖಮೇನಿ ಅವರು ರಚಿಸಿದ್ದ, 'ಮರಣದಂಡನಾ ಜಾರಿ ಸಮಿತಿ'ಯ ಸದಸ್ಯರಾಗಿದ್ದರು. ಆಗ ಅವರಿಗೆ 28 ವಯಸ್ಸು. ಐದನೇ ವಯಸ್ಸಿಗೇ ತಂದೆಯನ್ನು ಕಳೆದುಕೊಂಡ ರೈಸಿ, ಹಂತ ಹಂತವಾಗಿ ಇರಾನ್‌ನ ಅಧ್ಯಕ್ಷ ಗಾದಿಗೆ ಏರಿದ್ದವರು. ಇರಾನ್‌ನ ಈಗಿನ ಪರಮೋಚ್ಚ ನಾಯಕ ಖಮೇನಿ ಅವರ ನಂತರ, ಆ ಸ್ಥಾನಕ್ಕೇರುವ ಎಲ್ಲ 'ಅರ್ಹತೆ'ಯನ್ನು ರೈಸಿ ಹೊಂದಿದ್ದರು. ದೇಶದ ಅಧ್ಯಕ್ಷನನ್ನು 'ಕಟುಕ' ಎಂದು ಕರೆದರೂ, ಈ ಬಗ್ಗೆ ರೈಸಿ ಅವರು ತಲೆಕೆಡಿಸಿಕೊಂಡಿರಲಿಲ್ಲ. ಅವರ ಕಾರ್ಯದ ಬಗ್ಗೆ ಅವರಿಗೆ ಹೆಮ್ಮೆಯೇ ಇದ್ದಿತ್ತು.

ರೈಸಿ ಅವರು ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್ ಅಪಘಾತಕ್ಕೀಡಾಗಿದೆ, ಅವರು ಬದುಕುಳಿದಿರುವುದು ಅನುಮಾನ ಎಂಬ ಸುದ್ದಿಯು ಹರಿದಾಡ ತೊಡಗಿದ್ದಾಗ, ಇರಾನ್‌ನ ದೊಡ್ಡ ಸಂಖ್ಯೆಯ ಜನರು ಸಂಭ್ರಮಾಚರಣೆ ನಡೆಸಿದ್ದರು. ಇದರ ದೃಶ್ಯಗಳು, ಮೀಮ್ಸ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ರೈಸಿ ಅವರ ಸಾವಿನ ಸುದ್ದಿ ಹೊರಬಂದಾಗ, ಜನರು ಸಂಭ್ರಮಾಚರಣೆ ಮಾಡಬಾರದು ಎನ್ನುವ ಕಾರಣಕ್ಕೆ ರೈಸಿ ಅವರೇ ಪೋಷಿಸಿದ್ದ ರೆವಲ್ಯೂಷನರಿ ಗಾರ್ಡ್ಸ್ ಸಿಬ್ಬಂದಿಯನ್ನು ಬೀದಿ ಬೀದಿಗಳಲ್ಲಿ ನಿಯೋಜಿಸಲಾಗಿದೆ ಎಂಬಂಥ ವಿಡಿಯೊಗಳು ಹರಿದಾಡುತ್ತಿವೆ. ಜನರ ಈ ಎಲ್ಲ ಪ್ರತಿಕ್ರಿಯೆಗಳಿಗೆ ರೈಸಿ ಅವರು ಅನುಸರಿಸಿದ, ಬದುಕಿದ ರೀತಿಯೇ ಕಾರಣ.

1979ರ ನಂತರ ಇರಾನ್‌ನಲ್ಲಿ ಇಸ್ಲಾಮಿಕ್ ಕ್ರಾಂತಿ ನಡೆಯುತ್ತದೆ. ಒಂದು ಕಾಲಕ್ಕೆ ಆಧುನಿಕ ಆಲೋಚನೆಗಳೊಂದಿಗೆ ಮುನ್ನಡೆಯುತ್ತಿದ್ದ ದೇಶವು, ಇಸ್ಲಾಮಿಕ್ ಕ್ರಾಂತಿಯ ನಂತರ ಕಟ್ಟಾ ಸಂಪ್ರದಾಯವಾದಕ್ಕೆ ಹೊರಳಿತು. 1960ರಲ್ಲಿ ರೈಸಿ ಅವರು ಜನಿಸಿದರು. ಇಸ್ಲಾಮಿಕ್ ಕ್ರಾಂತಿಯ ಪ್ರಭಾವದಲ್ಲಿ ಬೆಳೆದ ರೈಸಿ ಅವರು ಮೂಲಭೂತವಾದಕ್ಕೆ ವಾಲಿಕೊಂಡರು. ತಮ್ಮ 20ನೇ ವಯಸ್ಸಿನಲ್ಲಿ ಅವರು ಸರ್ಕಾರಿ ವಕೀಲರಾದರು. ಮುಂದೆ 2019ರಲ್ಲಿ ಅವರನ್ನು ಸರ್ವೋಚ್ಚ ನ್ಯಾಯಾಲಯದ ಮುಖ್ಯಸ್ಥರನ್ನಾಗಿಯೂ ಮಾಡಲಾಗುತ್ತದೆ.

ಇರಾನ್ ಹಾಗೂ ಇರಾಕ್ ನಡುವಿನ ಎಂಟು ವರ್ಷಗಳ ಸುದೀರ್ಘ ಯುದ್ಧವು ಇನ್ನೇನು ಮುಗಿಯುವ ಹಂತದಲ್ಲಿತ್ತು. ಅಷ್ಟು ವರ್ಷಗಳಲ್ಲಾಗಲೇ ಸಾವಿರಾರು ರಾಜಕೀಯ ಎದುರಾಳಿಗಳನ್ನು ಬಂಧಿಸಲಾಗಿತ್ತು ಮತ್ತು ಮರಣದಂಡನೆಯನ್ನು ನೀಡಲಾಗಿತ್ತು. ಆದರೆ, 1988ರಲ್ಲಿ ದೊಡ್ಡ ಸಂಖ್ಯೆಯ ರಾಜಕೀಯ ಕೈದಿಗಳನ್ನು ಹತ್ಯೆ ಮಾಡಲಾಯಿತು. ಇದಕ್ಕಾಗಿಯೇ ಖಮೇನಿ ಅವರು 'ಮರಣದಂಡನೆ ಜಾರಿ ಸಮಿತಿ'ಯನ್ನು ರಚಿಸಿದ್ದು ಮತ್ತು ರೈಸಿ ಅವರನ್ನು ಇದರ ಸದಸ್ಯರನ್ನಾಗಿಸಿದ್ದು. ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆಯ ಪ್ರಕಾರ, ಇರಾನ್‌ನಲ್ಲಿ ಸುಮಾರು 5,000 ರಾಜಕೀಯ ಕೈದಿಗಳನ್ನು ಹತ್ಯೆ ಮಾಡಲಾಗಿದೆ. ಐದು ನಿಮಿಷ ವಿಚಾರಣೆ ನಡೆಸಿ ಮರಣದಂಡನೆಯ ಶಿಕ್ಷೆ ನೀಡಲಾಗುತ್ತಿತ್ತು. ರೈಸಿ ಅವರು ಸರ್ಕಾರಿ ವಕೀಲರಾಗಿದ್ದರು. ಮರಣದಂಡನೆ ಜಾರಿಯ ಮೇಲ್ವಿಚಾರಣೆಯನ್ನೂ ನಡೆಸುತ್ತಿದ್ದರು. ಇದೇ ಕಾರಣಕ್ಕೆ, ರೈಸಿ ಅವರ ಮೇಲೆ ಅಮೆರಿಕವು ದಿಗ್ಬಂಧನ ಹೇರಿತ್ತು.

ಸ್ಪರ್ಧೆಯೇ ಇಲ್ಲದೆ ಗೆದ್ದರು: 2021ರಲ್ಲಿ ಅಧ್ಯಕ್ಷ ಸ್ಥಾನಕ್ಕಾಗಿ ಎರಡನೇ ಬಾರಿಗೆ ಚುನಾವಣೆಯಲ್ಲಿ ಸ್ಪರ್ಧಿಸಿದರು. ವಿರೋಧಿಗಳ ನಾಮಪತ್ರಗಳನ್ನೇ ರದ್ದು ಮಾಡಿಸಿದರು. ದೇಶದ ಇತಿಹಾಸದಲ್ಲೇ ಕಡಿಮೆ ಮತದಾನ ಆ ವರ್ಷ ನಡೆದಿತ್ತು. ಒಟ್ಟು ಮತದಾರರಲ್ಲಿ ಮತದಾನ ಮಾಡಿದ್ದು ಶೇ 48ರಷ್ಟು ಮಂದಿ ಮಾತ್ರ. ಅಧ್ಯಕ್ಷರಾದ ಬಳಿಕ ಪತ್ರಕರ್ತರು ರೈಸಿ ಅವರಲ್ಲಿ 1988ರ ಹತ್ಯಾಕಾಂಡದ ಕುರಿತು ಪ್ರಶ್ನೆ ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಅವರು, 'ಒಬ್ಬ ನ್ಯಾಯಾಧೀಶ, ಒಬ್ಬ ವಕೀಲನು ದೇಶದ ಜನರ ಭದ್ರತೆಯ ಪರ ವಾದಿಸಿದರೆ, ಆತನನ್ನು ಹೊಗಳಬೇಕು. ಯಾವೆಲ್ಲಾ ಸ್ಥಾನಗಳನ್ನು ನಾನು ನಿಭಾಯಿಸಿದ್ದೇನೊ ಎಲ್ಲದರಲ್ಲಿಯೂ ನಾನು ಮಾನವಹಕ್ಕುಗಳ ಕುರಿತು ವಾದಿಸಿದ್ದೇನೆ ಎಂಬ ಹೆಮ್ಮೆ ಇದೆ' ಎಂದಿದ್ದರು.

ಹಿಜಾಬ್ ಹೋರಾಟ: ಹಿಜಾಬ್ ಧರಿಸುವುದು ಕಡ್ಡಾಯ ಮಾಡಿ, 2022ರಲ್ಲಿ ರೈಸಿ ಅವರು ಕಾನೂನು ಮಾಡುತ್ತಾರೆ. ಇದು ದೇಶದಲ್ಲಿ ದೊಡ್ಡ ಹೋರಾಟವನ್ನೇ ಹುಟ್ಟು ಹಾಕಿತು. ಮಾಸಾ ಅಮೀನಿ ಎಂಬ ಯುವತಿಯು ಪೊಲೀಸರ ಕಸ್ಟಡಿಯಲ್ಲಿ ಮೃತಪಟ್ಟರು. ಸುಮಾರು ಒಂದು ವರ್ಷ ನಡೆದ ಹೋರಾಟದಲ್ಲಿ ಸುಮಾರು 500 ಜನರು ಮೃತಪಟ್ಟಿದ್ದಾರೆ ಎನ್ನಲಾಗುತ್ತಿದೆ. ಹೋರಾಟದಲ್ಲಿ ಮುಖ್ಯಪಾತ್ರ ವಹಿಸಿದ್ದವರು, ಹೋರಾಟದಲ್ಲಿ ತೊಡಗಿಕೊಂಡವರನ್ನು ಇರಾನ್‌ನಲ್ಲಿ ಗಲ್ಲಿಗೇರಿಸಲಾಗಿದೆ ಎನ್ನುತ್ತವೆ ಹಲವು ಮಾನವಹಕ್ಕು ಹೋರಾಟ ಸಂಸ್ಥೆಗಳು. 'ರೈಸಿ ಅವರು, ಸರ್ಕಾರದ ನೀತಿಗಳನ್ನು ವಿಮರ್ಶಿಸುವವರನ್ನು ಜೈಲಿಗೆ ತಳ್ಳುವುದು, ಚಿತ್ರಹಿಂಸೆ ನೀಡುವುದು ಮತ್ತು ಜನರನ್ನು ಕೊಲ್ಲುವುದರ ವ್ಯವಸ್ಥೆಯ ದೊಡ್ಡ ಸ್ತಂಭವಾಗಿದ್ದರು' ಎನ್ನುತ್ತಾರೆ ಇರಾನ್ ಮಾನವ ಹಕ್ಕುಗಳ ಎನ್‌ಜಿಒವೊಂದರ ಕಾರ್ಯನಿರ್ವಹಣಾ ನಿರ್ದೇಶಕ ಹಾದಿ ಘಮೇನಿ. ಇಸ್ರೇಲ್–ಹಮಾಸ್ ಯುದ್ಧ ನಡೆಯುತ್ತಿದೆ. ಇಸ್ರೇಲ್ ಯುದ್ಧ ನಿಲ್ಲಿಸುತ್ತಿಲ್ಲ. ಇರಾನ್‌ನ ರಾಯಭಾರ ಕಚೇರಿಯ ಮೇಲೂ ಇಸ್ರೇಲ್ ದಾಳಿ ನಡೆಸುತ್ತದೆ. ಇದಕ್ಕೆ ಪ್ರತಿಯಾಗಿ ಇರಾನ್ ಕಳೆದ ಏಪ್ರಿಲ್‌ನಲ್ಲಿ ಇಸ್ರೇಲ್ ಮೇಲೆ ದಾಳಿ ನಡೆಸಿತ್ತು. ಈ ಸಂದರ್ಭದಲ್ಲಿ ಮಾತನಾಡಿದ್ದ ರೈಸಿ, 'ಇಸ್ರೇಲ್ ಏನಾದರೂ ಪ್ರತೀಕಾರಕ್ಕೆ ಮುಂದಾದರೆ, ಯಹೂದಿಗಳು ನಾಶವಾಗುವಂತೆ ಮಾಡಬೇಕಾಗುತ್ತದೆ' ಎಂದಿದ್ದರು. ಈಗ ಅವರು ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಭಾರತವು ಒಂದು ದಿನದ ಶೋಕಾಚರಣೆ ನಡೆಸಲು ನಿರ್ಧರಿಸಿದೆ.



ಮೇ 24ಕ್ಕೆ ಬರಲಿದೆ ದ ಜಡ್ಜ್‌ಮೆಂಟ್

ಗುರುರಾಜ ಕುಲಕರ್ಣಿ ಆ್ಯಕ್ಷನ್ ಕಟ್ ಹೇಳಿರುವ ರವಿಚಂದ್ರನ್ ಪ್ರಮುಖವಾದ ಪಾತ್ರದಲ್ಲಿ ನಟಿಸಿರುವ 'ದ ಜಡ್ಜ್‌ಮೆಂಟ್' ಸಿನಿಮಾ ಮೇ 24ರಂದು ಬಿಡುಗಡೆಯಾಗಲಿದೆ.

ಜಿ9 ಕಮ್ಯುನಿಕೇಷನ್ ಮೀಡಿಯಾ ಆ್ಯಂಡ್ ಎಂಟರ್‌ಟೈನ್ಮೆಂಟ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. 'ಇದು ರವಿಚಂದ್ರನ್ ಅವರಿಗಾಗಿಯೇ ಮಾಡಿರುವ ಕಥೆ. ಲೀಗಲ್ ಥ್ರಿಲ್ಲರ್ ಜಾನರ್‌ನ ಚಿತ್ರವಿದು. 'ಯದ್ಧಕಾಂಡ' ಚಿತ್ರದಲ್ಲಿ ವಕೀಲರಾಗಿ ರವಿಚಂದ್ರನ್ ಅಭಿನಯ ಇಂದಿಗೂ ಜನಪ್ರಿಯ. ಬಹಳ ವರ್ಷಗಳ ನಂತರ ಈ ಚಿತ್ರದಲ್ಲಿ ವಕೀಲರ ಪಾತ್ರದಲ್ಲಿ ಅವರು ಕಾಣಿಸಿಕೊಂಡಿದ್ದಾರೆ. ಲಕ್ಷ್ಮೀ ಗೋಪಾಲಸ್ವಾಮಿ, ದಿಗಂತ್, ಧನ್ಯಾ, ಮೇಘನಾ ಗಾಂವ್ಕರ್, ರಂಗಾಯಣ ರಘು, ಪ್ರಕಾಶ್ ಬೆಳವಾಡಿ ಅವರನ್ನು ಒಳಗೊಂಡ ದೊಡ್ಡ ತಾರಾಗಣವೇ ಚಿತ್ರದಲ್ಲಿದೆ. ಕರ್ನಾಟಕ ಮಾತ್ರವಲ್ಲದೆ, ದೆಹಲಿ, ಮುಂಬೈ, ಗೋವಾ, ಆಂಧ್ರಪ್ರದೇಶ ಸೇರಿದಂತೆ ದೇಶದ ವಿವಿಧ ಕಡೆ ರಿಲಯನ್ಸ್ ಎಂಟರ್‌ಟೈನ್ಮೆಂಟ್ ಸಂಸ್ಥೆ ಮೂಲಕ ಸಿನಿಮಾ ಬಿಡುಗಡೆಯಾಗಲಿದೆ' ಎಂದರು ಗುರುರಾಜ ಕುಲಕರ್ಣಿ.

'ಸಾಮಾನ್ಯವಾಗಿ ನನ್ನ ಸಿನಿಮಾ ಹಾಡುಗಳ ಮೂಲಕ ಜನಪ್ರಿಯ. ಆದರೆ ನನಗೆ ಈ ಚಿತ್ರದಲ್ಲಿ ಒಂದು ಹಾಡೂ ಇಲ್ಲ' ಎಂದು ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ನಗೆಚಟಾಕಿ ಹಾರಿಸಿದರು ರವಿಚಂದ್ರನ್. ವಾಸುದೇವ ಮೂರ್ತಿ ಸಿನಿಮಾಗೆ ಚಿತ್ರಕಥೆ ಬರೆದಿದ್ದು, ಅನೂಪ್ ಸೀಲಿನ್ ಸಂಗೀತ ನೀಡಿದ್ದಾರೆ. ಪ್ರಮೋದ್ ಮರವಂತೆ ಸಾಹಿತ್ಯ, ಎಂ.ಎಸ್ ರಮೇಶ್ ಸಂಭಾಷಣೆ ಚಿತ್ರಕ್ಕಿದೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ — 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿ ಅತಿ ಶೀಘ್ರದಲ್ಲಿ

'ಪೌಡರ್' ಪರೀಕ್ಷಿಸಿದ ದಿಗಂತ್!



ದಿಗಂತ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ಪೌಡರ್' ಸಿನಿಮಾದ ಟೀಸರ್ ಬಿಡುಗಡೆಯಾಗಿದ್ದು, ಸಿನಿಮಾ ಜುಲೈ 12ರಂದುತೆರೆಕಾಣಲಿದೆ.

ಜನಾರ್ದನ್ ಚಿಕ್ಕಣ್ಣ ನಿರ್ದೇಶಿಸಿರುವ ಈ ಚಿತ್ರದ ಚಿತ್ರೀಕರಣ ಕಳೆದ ಸೆಪ್ಟೆಂಬರ್‌ನಲ್ಲಿ ಆರಂಭವಾಗಿತ್ತು. ಕೆ. ಆರ್.ಜಿ ಮತ್ತು ಟಿ.ವಿ. ಎಫ್ ಜಂಟಿಯಾಗಿ ಈ ಸಿನಿಮಾವನ್ನು ನಿರ್ಮಾಣ ಮಾಡಿದೆ. ಇಬ್ಬರು ಯುವಕರು ಒಂದು ನಿಗೂಢವಾದ 'ಪೌಡರ್' ಪ್ರಭಾವದಿಂದಾಗಿ ದಿಢೀರನೇ ಸಿರಿವಂತರಾಗಲು ಮಾಡುವ ಪ್ರಯತ್ನಗಳು, ಅವರಿಗೆ ಎದುರಾಗುವ ಸಮಸ್ಯೆಗಳೇ ಈ ಸಿನಿಮಾದ ಕಥೆ ಎಂದಿದೆ ಚಿತ್ರತಂಡ.

ಕಾಮಿಡಿ ಜಾನರ್‌ನ ಈ ಸಿನಿಮಾದಲ್ಲಿ ದಿಗಂತ್ ನಾಯಕನಾಗಿ ನಟಿಸಿದ್ದು, ಶರ್ಮಿಳಾ ಮಾಂಡ್ರೆ, ಧನ್ಯಾ ರಾಮ್‌ಕುಮಾರ್ ಜೋಡಿಯಾಗಿದ್ದಾರೆ. ರಂಗಾಯಣ ರಘು, ನಾಗಭೂಷಣ್, ಗೋಪಾಲಕೃಷ್ಣ ದೇಶಪಾಂಡೆ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮೇ 21, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ತ್ರಯೋದಶಿ ಗಂ. 17-40 ನಕ್ಷತ್ರ: ಚಿತ್ತಾ ಗಂ. 5-46 ಯೋಗ: ವ್ಯತೀಪಾತ ಗಂ. 12-35 ಕರಣ: ತೈತಿಲ ಗಂ. 17-40, ವೃಷಭ ಮಾಸದ ನೇ 08 ದಿನ, ಮಳೆನಕ್ಷತ್ರ: ಕೃತ್ತಿಕಾ 4.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-07 ಸೂರ್ಯಾಸ್ತ : 06-47
ಮುಸ್ಲಿಂ ದಿನಾಂಕ : 12 ಜುಲ್ಖಾಯದ್
ಅದೃಷ್ಟ ಸಂಖ್ಯೆ : 2, 9

ಮೇಷ: ಜೀವನದ ಬಗ್ಗೆ ಉತ್ಸಾಹ ತಾಳುವಿರಿ. ಸಂಗೀತಗಾರರಿಗೆ ಹಾಗೂ ನೃತ್ಯ ಕಲೆಗಳಿಗೆ ಪ್ರಾಧಾನ್ಯ ದೊರಕುವುದು. ಸ್ವಸಾಮರ್ಥ್ಯದಿಂದ ಆಗುವ ಕೆಲಸಗಳಿಗೆ ಇತರರ ಸಹಾಯವನ್ನು ಅಪೇಕ್ಷಿಸ ಬೇಡಿ.

ವೃಷಭ: ರಾಜಕೀಯ ಕ್ಷೇತ್ರದಲ್ಲಿ ನಡೆಯುತ್ತಿರುವ ಕೆಲವು ಘಟನೆಗಳು ಪರಿಣಾಮ ಬೀರುವ ಸಾಧ್ಯತೆ ಇದೆ. ದಿನಚರಿಯಲ್ಲಿ ಕೋಪ ಹಾಗೂ ಆಕ್ರಮಣ-ಶೀಲತೆ ಗೋಚರವಾಗಬಹುದು.

ಮಿಥುನ: ತಮ್ಮನ ಕೆಲಸಕ್ಕಾಗಿ ಉನ್ನತ ಅಧಿಕಾರಿಗಳನ್ನು ಕಾಣಲು, ಅವರಿಂದ ಸಹಾಯ ಪಡೆಯಲು ದಿನವಿಡೀ ಓಡಾಟ ನಡೆಸುವಿರಿ. ವಿದ್ಯಾಭ್ಯಾಸದಲ್ಲಿ ಏಕಾಗ್ರತೆ ಬೆಳೆಸಿಕೊಳ್ಳಿ. ನೆರೆಯವರ ಸಂಬಂಧಗಳು ಸುಧಾರಿಸುವುದು.

ಕರ್ಕಾಟಕ: ಜೀವನದಲ್ಲಿ ನಡೆದ ಕಹಿ ಘಟನೆಗಳನ್ನು ಪಾಠದ ರೂಪದಲ್ಲಿ ಮಗನಿಗೆ ಹೇಳುವ ಅನಿವಾರ್ಯತೆಯ ಸನ್ನಿವೇಶ ಎದುರಾಗುವುದು. ಉದ್ಯೋಗದ ಗೌಪ್ಯತೆಯನ್ನು ಬಿಟ್ಟುಕೊಡುವುದು ಸರಿಯಲ್ಲ.

ಸಿಂಹ: ಕುಟುಂಬದ ವ್ಯಕ್ತಿಗಳ ನಿರೀಕ್ಷೆಗಳನ್ನು ಸೂಕ್ಷ್ಮವಾಗಿ ತಿಳಿದು ಅದರಂತೆ ಬದುಕುವುದು ಸರ್ವಕ್ಷೇಮ. ಮಾಡುವ ಕೆಲಸದಿಂದಾಗಿ ಗುಂಪಿನಲ್ಲಿ ಗುರುತಿಸುವಂಥ ವ್ಯಕ್ತಿಯಾಗುವ ಲಕ್ಷಣ ಕಾಣುತ್ತಿದೆ.

ಕನ್ಯಾ: ಹವಾಮಾನದಲ್ಲಿ ಆಗುವ ಬದಲಾವಣೆ ಆರೋಗ್ಯದ ಮೇಲೆ ಸಂಪೂರ್ಣ ಪ್ರಭಾವ ಬೀರಲಿದೆ. ನಿರ್ದಿಷ್ಟ ಕೆಲಸಗಳನ್ನು ನಿರ್ದಿಷ್ಟವಾದ ಸಮಯದಲ್ಲಿ ಮಾಡಿ ಮುಗಿಸಿಕೊಳ್ಳುವಿರಿ. ಕೈತಪ್ಪಿ ಹೋದ ಹಣ ಪುನಃ ಕೈ ಸೇರುವುದು.

ತುಲಾ: ಎರಡನೇ ದರ್ಜೆಯ ನೌಕರರಿಗೆ ವರ್ಗಾವಣೆಯಿಂದ ಆರ್ಥಿಕವಾಗಿ ಅನುಕೂಲವಾಗುವುದು. ಲಾಭದಾಯಕವೆನಿಸುವ ವ್ಯಕ್ತಿಗಳೊಂದಿಗೆ ಮಾತ್ರ ಮಾತನಾಡುವುದು ಸರಿಯಲ್ಲ. ಶತ್ರುಗಳು ಮಿತ್ರರಾಗಲು ಬಯಸಿ ಬರುತ್ತಾರೆ.

ವೃಶ್ಚಿಕ: ತತ್ವ ಆದರ್ಶಗಳ ಜತೆಗೆ ಹಿರಿಯರ ಅನುಭವ ಸಲಹೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿರಿ. ಒಡನಾಡಿಗಳ ಪ್ರೀತಿ, ವಿಶ್ವಾಸ, ಸಹಕಾರದಿಂದ ಕಾರ್ಯವನ್ನು ಸುಲಭದಲ್ಲಿ ಸಾಧಿಸುವಿರಿ. ರಾಜಕಾರಣಿಗಳಿಗೆ ಶುಭ ಸುದ್ದಿ.

ಧನು: ಆರೋಗ್ಯದ ವಿಷಯದಲ್ಲಿ ಗೋಚರಕ್ಕೆ ಬಂದ ಸಮಸ್ಯೆಗಳನ್ನು ಗುರುತಿಸಿಕೊಂಡು ಅದನ್ನು ಪರಿಹರಿಸುವ ಬಗೆಯನ್ನು ಕಂಡುಹಿಡಿದರೆ ಉತ್ತಮ. ಹನುಮ ಸಮೇತನಾದ ಶ್ರೀರಾಮನ ಪರಿವಾರವನ್ನು ಆರಾಧಿಸಿ.

ಮಕರ: ವೈದ್ಯಕೀಯ ವೃತ್ತಿಯನ್ನು ಅನುಸರಿಸುವವರಿಗೆ ಆಯ-ವ್ಯಯ ಸಮತೋಲನದಲ್ಲಿದ್ದರೂ ಅಪವಾದ ಭೀತಿ ಎದುರಾಗುವುದು. ದಿನಸಿ ವ್ಯಾಪಾರಿಗಳು ಮಾರಾಟದ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳಬಹುದು.


ಕುಂಭ: ಆರಂಭಿಸಿದ ಕಾರ್ಯಗಳು ವಿಳಂಬಗತಿಯಲ್ಲಿ ಸಾಗಿದರೂ ದಿನಾಂತ್ಯದಲ್ಲಿ ಪೂರ್ಣಗೊಳ್ಳಲಿವೆ. ರಾಜಕೀಯ ವ್ಯಕ್ತಿಗಳು ಆತ್ಮವಂಚನೆಯ ಬಗ್ಗೆ ವಿಮರ್ಶಿಸಿಕೊಳ್ಳಿರಿ. ಕೈಗಾರಿಕೆ ನಡೆಸುವವರಿಗೆ ಖರ್ಚು ಸಂಭವಿಸಲಿದೆ.

ಮೀನ: ಶಿಕ್ಷಕ ವೃತ್ತಿಯನ್ನು ಮಾಡುವವರಿಗೆ ಬೋಧನಾ ಕೆಲಸಕ್ಕಿಂತ ಮುಖ್ಯವಾಗಿ ದಾಖಲೆಯ ನಿರ್ವಹಣೆ ತಲೆಬಿಸಿ ಎನಿಸಲಿದೆ. ಮನೆಯ ಆಗು-ಹೋಗುಗಳನ್ನು ಪೂರ್ಣಗೊಳಿಸಲು ಹಣಕಾಸಿನ ಕೊರತೆ ಅಷ್ಟಾಗಿ ಕಾಡದು.

ನುಡಿ ಬೆಳಗು

ಆತ್ಮಜ್ಞಾನ





ಪಿ. ಚಂದ್ರಿಕಾ

ಅವನೊಬ್ಬ ಆತ್ಮಜ್ಞಾನಿ. ಅವನು ಏನು ಮಾತಾಡಿದರೂ ಅದರೊಳಗೊಂದು ಗೂಢಾರ್ಥ, ಜಗತ್ತನ್ನು ದಾಟಿಕೊಳ್ಳುವ ಶಕ್ತವಾದ ಮಾತುಗಳಿರುತ್ತವೆ. ಅವನಿಗೆ ಎಲ್ಲಿ ಹೋದರೂ ಆದರ, ಸನ್ಮಾನ. ಆ ಆತ್ಮಜ್ಞಾನಿಗೆ ಎಲ್ಲಿಲ್ಲದ ಹೆಮ್ಮೆ, ತಾನು ಎಲ್ಲರಿಗಿಂತ ಎತ್ತರದಲ್ಲಿರುವವನು ಎಂದು.

ಅವನ ಮನೆಯಲ್ಲಿ ತುಂಬಾ ಮಕ್ಕಳು- ಜೊತೆಗೆ ಬಡತನ ಕೂಡ. ಹೊಟ್ಟೆಯ ಪಾಡು ಹೆಂಡತಿಗೆ ದುಡಿಯುವುದನ್ನು ಬಿಟ್ಟರೆ ಬೇರೆ ದಾರಿ ಇಲ್ಲ. ಹೊರಗೆ ಗಂಡ ಜಗುಲಿಯಲ್ಲಿ ಕುಳಿತು ಜಗತ್ತನ್ನು ಗೆಲ್ಲುವುದರ ಬಗ್ಗೆ ಮಾತಾಡುತ್ತಿದ್ದರೆ ನಾಲ್ಕು ಮನೆಗಳಲ್ಲಿ ಕೆಲಸ ಮಾಡಿ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳ ಹಸಿವನ್ನು ನೀಗಿಸುವುದರ ಬಗ್ಗೆ ಹೆಂಡತಿ ಯೋಚಿಸುತ್ತಿರುತ್ತಿದ್ದಳು. ಅವಳಿಗೆ ಸುಖದ ಕಲ್ಪನೆಯೂ ಇಲ್ಲ. ಅವಳ ಯೋಚನೆ ಒಂದೇ ತನ್ನ ಗಂಡನಿಗೆ ಇವತ್ತಾದರೂ ಜ್ಞಾನೋದಯ ಆಗಬಹುದೇ ಎಂದು. ಆದರೆ ಹೊರಜಗತ್ತಿನ ಮೆರವಣಿಗೆಯ ವ್ಯಸನಕ್ಕೆ ಬಿದ್ದ ಗಂಡನಿಗೆ ಇದ್ಯಾವುದರ ಕಡೆಗೂ ಗಮನವೇ ಇಲ್ಲ.

ಇದನ್ನೆಲ್ಲಾ ಗಂಡನ ಜೊತೆ ತಿಳಿಸಿ ಹೇಳಲು ಪ್ರಯತ್ನ ಪಟ್ಟ ಹೆಂಡತಿಯ ಕಡೆಗೆ ಗಮನವನ್ನೇ ಕೊಡದೆ ತನ್ನ ಪಾಡಿಗೆ ತಾನಿರುತ್ತಿದ್ದ. ಆತ್ಮಜ್ಞಾನದ ಸಂಗತಿಗಳನ್ನು ತಿಳಿಸುತ್ತಿದ್ದ. ಒಮ್ಮೆ ಬಂದವರೆದುರು ತನ್ನ ಮನೆಯಲ್ಲಿ ಕಷ್ಟವಿದೆ, ಹಸಿದ ಹೊಟ್ಟೆಯ ಮಕ್ಕಳಿದ್ದಾರೆ ದಯವಿಟ್ಟು ಏನನ್ನಾದರೂ ತಂದುಕೊಡಿ ಎಂದು ವಿಧಿಯಿಲ್ಲದೆ ಕೇಳಿದಳು. ಇದನ್ನು ಕೇಳಿಸಿಕೊಂಡ ಗಂಡ ಹೆಂಡತಿಗೆ, 'ಎಲ್ಲವನ್ನು ಬಿಡಿಸಿಕೊಳ್ಳುವುದರ ಬಗ್ಗೆ ನಾನು ಮಾತಾಡುತ್ತಿದ್ದರೆ ನೀನು ಅವರಿಂದ ಪ್ರಾಪಂಚಿಕವಾದ ಬೇಡಿಕೆಗಳನ್ನು ಇದುತ್ತಿದ್ದೀಯಲ್ಲಾ?' ಎಂದು ಜಗಳವಾಡಿದ. ಗಂಡನ ಜೊತೆ ವಾದ ಮಾಡುತ್ತಾ, 'ನಿಮ್ಮ ಆತ್ಮಜ್ಞಾನದಿಂದ ನಮ್ಮ ಹೊಟ್ಟೆ ತುಂಬುತ್ತಿಲ್ಲ. ಹೊಟ್ಟೆ ತುಂಬದ ಆತ್ಮಜ್ಞಾನವನ್ನು ತೆಗೆದುಕೊಂಡು ಏನು ಮಾಡುತ್ತೀರಿ? ಕಾಡುಹರಟೆಯನ್ನು ಬಿಟ್ಟು ನಾನು ದುಡಿಯುವ ಹಾಗೆ ನೀವೂ ದುಡಿಯಬಾರದಾ? ಮನೆಯಲ್ಲಿ ಸಮಸ್ಯೆಯಾದರೂ ಕಡಿಮೆಯಾದೀತು' ಎಂದಳು.

ಅವನಿಗೆ ಇದರಿಂದ ಕೋಪ ಬಂತು, 'ಜಗತ್ತೆಲ್ಲಾ ನನ್ನ ಮಾತನ್ನು ಕೇಳಲು ಕಾಯುತ್ತಿದ್ದರೆ ನೀನು ಮಾತ್ರ ನನ್ನನ್ನು ಅವಮಾನ ಮಾಡುತ್ತಿದ್ದೀಯಲ್ಲಾ? ನನ್ನ ಜೊತೆಯಲ್ಲಿದ್ದೂ ಆತ್ಮಜ್ಞಾನವನ್ನು ಕಲಿಯಲಿಲ್ಲವಲಾ? ಇನ್ನಾದರೂ ಕಲಿತುಕೋ' ಎಂದ. ಈ ಮಾತುಗಳನ್ನು ಕೇಳಿದ ಹೆಂಡತಿಗೆ ಇನ್ನಿಲ್ಲದ ಕೋಪ ಬಂತು. ವರ್ಷಗಟ್ಟಲೆ ಅನುಭವಿಸಿದ ಸಂಕಟ ಇನ್ನು ತಡೆಯಲಾರೆ ಎನ್ನುವಂತೆ ತೊಳೆಯುತ್ತಿದ್ದ ಪಾತ್ರೆಯನ್ನು ನೆಲಕ್ಕೆ ಕುಕ್ಕಿ, 'ಜಗತ್ತಿನ ಜೊತೆ ಏನು ಬೇಕಾದರೂ ಹೇಳು, ಆದರೆ ಹೆಂಡತಿಯ ಜೊತೆ ಆಡುವ ಮಾತೇ ಇದು? ಸಾಮಾನ್ಯ ಜ್ಞಾನವೇ ಇಲ್ಲದಿರುವ ನೀನು ಸರಿಯಾಗುವುದು ಸಾಧ್ಯವೇ ಇಲ್ಲ' ಎಂದು ಕೋಪದಿಂದ ಅವನನ್ನು ಬಿಟ್ಟು ಹೊರಟು ಹೋದಳು.

ಆತ್ಮಜ್ಞಾನಿಗೆ ನಿಜಕ್ಕೂ ತಾನೇನು ಮಾತಾಡಿದೆ? ಹೆಂಡತಿ ತನ್ನನ್ನು ಯಾಕೆ ಬೈದಳು? ತನ್ನನ್ನು ಬಿಟ್ಟು ಹೋಗುವ ಹಾಗೆ ಯಾಕಾಯಿತು? ಎನ್ನುವುದು ಅರ್ಥವೇ ಆಗಲಿಲ್ಲ. ಅವನಿಗೆ ಕೊನೆಗೂ ಅರ್ಥವಾಗದ ಸಂಗತಿ ಎಂದರೆ ತಾನೊಬ್ಬ ಆತ್ಮಜ್ಞಾನಿ ಮಾತ್ರವಲ್ಲ ತಾನೊಬ್ಬ ಗಂಡ ಮತ್ತು ಮಕ್ಕಳ ತಂದೆ ಎಂಬುದು. ಹೊರಜಗತ್ತಿನ ಗೀಳಿಗೆ ಬಿದ್ದು ಜವಾಬ್ದಾರಿ ಮರೆತರೆ ಹೇಗೆ? ಒಳ ಹೊರಗನ್ನು ನಿಭಾಯಿಸುವವ ಮಾತ್ರ ನಿಜವಾದ ಜ್ಞಾನಿ. ಇಲ್ಲದಿದ್ದ ಯಾವ ಆತ್ಮಜ್ಞಾನವೂ ನಮ್ಮನ್ನು ಪಾರುಮಾಡಲಾರದು.

ಪದಬಂಧ 5687

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಡಗಿನ ಚುಕ್ಕಾಣಿ ಹಿಡಿದವನು (4)
2.ಹಿಮದ ಹತ್ತಿರ ಕಾಣಿಸಿರುವ ಕೋಣ (3)
4.ಶ್ರೀಕೃಷ್ಣನ ಸ್ನೇಹಿತ (3)
6.ಹುಯಿಲಿಡುತ್ತಾ ಓದಿದ ಮರಣಪತ್ರ (3)
7.ಪ್ರೇಮಿಗಳ ಅಗಲಿಕೆಯ ಬೇನೆ (5)
10.ನೆಲವನ್ನು ಗೋಮಯದಿಂದ ಸಾರಿಸುವುದು (3)
11.ಸೊಕ್ಕು ಹೀಗೆ ಬಂದಿದೆ (3)
13.ನರನು ನೋಡುತ್ತಿರುವ ಷಹರು (3)
14.ಇತರರಿಗೆ ವಹಿಸಿಕೊಡುವುದು (4)

ಮೇಲಿಂದ ಕೆಳಕ್ಕೆ
1.ಇನ್ನೂ ಕರು ಹಾಕದ ಹಸು (3)
2.ಮಡಿವಂತೆಯ ಉಡಿ (3)
3.ಬರ ಬಂದಾಗ ನೀಡಿದ ಪಾನಕ (4)
5.ಮನದಿಂದ ಸಲ್ಲಿಸಿದ ಅರ್ಜಿ (3)
6.ದೃಷ್ಟಾಂತವನ್ನು ಹೀಗೆ ನೀಡಿ (5)
8.ಈ ಪರಿ ಕಾಣಿಸುತ್ತಿರುವ ಆವರಣ (3)
9.ಇದು ಹಾಸ್ಯ ನಾಟಕ (4)
10.ಹತ್ತು ನೂರಿದು (3)
12.ಅಶ್ವ ಇಲ್ಲಿಗೆ ಬಂದಿದೆ (3)

1				■	■	2		3
	■	■	■	■	■		■	
4		5	■	6			■	
■	■		■		■	■	■	
■	■	7				8		■
9	■	■	■		■		■	■
	■	10			■	11		12
	■		■	■	■	■	■	
13			■	■	14			

5686ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಂದಹಾಸ 3.ಅವಸಾನ
5.ಗರುಡ 6. ಲಡಿ
7.ಒಣಹರಟೆ 10.ಶಾಪ
12.ನೆನಪು 14.ನತದೃಷ್ಟ
15.ವರ್ಧಮಾನ

ಮೇಲಿಂದ ಕೆಳಕ್ಕೆ:
1.ಮಂದಾನಿಲ 2.ಸಮೀಕರಣ
3.ಅಣು 4.ನಟ್ಟಡವಿ
5.ಗಲಾಟೆ 7.ಒನಪು
8.ರಜತೋತ್ಸವ 9.ಮನೆತನ
11.ಪರಿಜ್ಞಾನ 13.ಇಷ್ಟ

ಸುಡೊಕು 6072

2		9			7	1		4
	6							
5		7	4		6	2		3
					5		3	1
	5	1		8			2	
3			9					8
		2		1		8		5
9			7		8		1	2
	8			2		4		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6071 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ವಿನಿಮಯ ದರ

$ ಡಾಲರ್	83.30
£ ಪೌಂಡ್	105.81
€ ಯುರೊ	90.51
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹625
12 ಕ್ಕೆ	₹82
ಮೈಸೂರು	
100ಕ್ಕೆ	₹625

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಶನಿವಾರದ ದರ)



ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹935 (935)
ಸೂರ್ಯಕಾಂತಿ (ರಿಫೈನ್ಡ್)	₹925 (925)
ಪಾಮೋಲಿನ್	₹898 (897)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)



ಅರಸೀಕೆರೆ	₹8000-8800
ದಾವಣಗೆರೆ	₹6900-6900
ಕೆ.ಆರ್.ಪೇಟೆ	₹9450-9450
ಮಳವಳ್ಳಿ	₹8900-8900
ತಿಪಟೂರು	₹8500-9250

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹178.50
ಆರ್‌ಎಸ್‌ಎಸ್-5	₹171.50
ಗುಡ್ ಲಾಟ್	₹161.50

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಕೆ.ಜಿ)	₹180-479
ದ್ವಿತಳಿ (ಕೆ.ಜಿ)	₹266-609

ಭಾರತ ಮೂಲದ ವಿದ್ಯಾರ್ಥಿಗಳ ಮೇಲಿನ ದಾಳಿ ಕುರಿತು ಅಮೆರಿಕದ ರಾಯಭಾರಿ ಗಾರ್ಸೆಟ್ಟಿ ಸ್ಪಷ್ಟನೆ

‘ವಿದ್ಯಾರ್ಥಿಗಳನ್ನೇ ಗುರಿಯಾಗಿಸಿ ದಾಳಿ ನಡೆದಿಲ್ಲ’

ಎರಿಕ್ ಗಾರ್ಸೆಟ್ಟಿ ಅವರು ಭಾರತದಲ್ಲಿನ ಅಮೆರಿಕದ ರಾಯಭಾರಿ ಆಗಿ ಅಧಿಕಾರ ವಹಿಸಿಕೊಂಡು ಒಂದು ವರ್ಷ ಸಂದಿದೆ. ಈ ಹೊತ್ತಿನಲ್ಲಿ ಅವರು ‘ಪ್ರಜಾವಾಣಿ’ಗೆ ನೀಡಿರುವ ಇ-ಮೇಲ್ ಸಂದರ್ಶನದಲ್ಲಿ ಭಾರತ-ಅಮೆರಿಕ ನಡುವಿನ ಸಂಬಂಧದ ಬಗ್ಗೆ ಮಾತನಾಡಿದ್ದಾರೆ. ಅಮೆರಿಕದಲ್ಲಿ ಭಾರತದ ವಿದ್ಯಾರ್ಥಿಗಳು ಸುರಕ್ಷಿತ ಎನ್ನುವ ಭರವಸೆ ನೀಡಿದ್ದಾರೆ. ಸಂದರ್ಶನದ ಆಯ್ದ ಭಾಗ ಇಲ್ಲಿದೆ

• ವಿಜಯ್ ಜೋಷಿ

ಪ್ರಜಾವಾಣಿ ಸಂದರ್ಶನ



ಎರಿಕ್ ಗಾರ್ಸೆಟ್ಟಿ, ಅಮೆರಿಕದ ರಾಯಭಾರಿ

• ಭಾರತದಲ್ಲಿನ ಒಂದು ವರ್ಷದ ವಾಸ್ತವ್ಯದಲ್ಲಿನ ಅತ್ಯಂತ ಸ್ಮರಣೀಯ ಅನುಭವ ಯಾವುದು?

ನಮ್ಮ ದೇಶಗಳ ನಡುವಿನ ಸಂಬಂಧದಲ್ಲಿ ಈ ವರ್ಷವು ಐತಿಹಾಸಿಕವಾದುದು. ಭಾರತದ ದಕ್ಷಿಣದ ತುದಿ ಕನ್ಯಾಕುಮಾರಿಯಲ್ಲಿನ ಸೂರ್ಯೋದಯವು ಇಲ್ಲಿನ ಬಹುತ್ವವನ್ನು, ಸೌಂದರ್ಯವನ್ನು ಬಿಂಬಿಸುವಂತಿದೆ. ಇದು ನನ್ನ ಭಾರತ ವಾಸದಲ್ಲಿ ಪ್ರಮುಖವಾದುದು. ಈಗ ಅಮೆರಿಕ ಮತ್ತು ಭಾರತದ ನಡುವಿನ ಪಾಲುದಾರಿಕೆಯು ಹಿಂದೆಂದಿಗಿಂತಲೂ ಹೆಚ್ಚು ಗಾಢವಾಗಿದೆ, ವಿಸ್ತಾರವಾಗಿದೆ.

• ಈಚಿನ ದಿನಗಳಲ್ಲಿ ಅಮೆರಿಕದಲ್ಲಿ ಭಾರತ ಮೂಲದ ವಿದ್ಯಾರ್ಥಿಗಳ ಮೇಲೆ ದಾಳಿಗಳು ನಡೆದಿವೆ. ದಾಳಿಗಳು ಜನಾಂಗೀಯ ಅಥವಾ ಇತರ ಕಾರಣಗಳಿಗೆ ನಡೆದಿರಬಹುದು. ವಿದ್ಯಾರ್ಥಿಗಳ ರಕ್ಷಣೆ ವಿಚಾರವಾಗಿ ಯಾವ ಭರವಸೆ ನೀಡುತ್ತೀರಿ?

ಅಮೆರಿಕದಲ್ಲಿನ ಭಾರತೀಯ ವಿದ್ಯಾರ್ಥಿಗಳ ಯೋಗಕ್ಷೇಮದ ಬಗ್ಗೆ ನಾವು ಕಾಳಜಿ ಹೊಂದಿದ್ದೇವೆ. ಇದು ನಮಗೆ ಅತ್ಯಂತ ಆದ್ಯತೆಯ ವಿಚಾರ. ಅಮೆರಿಕಕ್ಕೆ ಅಧ್ಯಯನಕ್ಕೆ ಬರುವ ಮಕ್ಕಳು ನಮ್ಮ ಮಕ್ಕಳಂತೆಯೇ ಎಂಬ ಮಾತನ್ನು ಪಾಲಕರಿಗೆ ಹೇಳುತ್ತೇನೆ. ನಮ್ಮ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳಲ್ಲಿ ಭದ್ರತಾ ವ್ಯವಸ್ಥೆ ಇದೆ, ಸುರಕ್ಷತೆಗೆ ಸ್ಥಳೀಯ ಕಾನೂನು ಜಾರಿ ವ್ಯವಸ್ಥೆ ಇದೆ.

ಅಮೆರಿಕದಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ದಾಖಲೆ ಮಟ್ಟದಲ್ಲಿದೆ. ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿರುವಂತೆ, ಈಚಿನ ತಿಂಗಳುಗಳಲ್ಲಿನ (ದಾಳಿ) ಘಟನೆಗಳ ನಡುವೆ ಸಂಬಂಧ ಇರುವ ಸೂಚನೆಗಳು ಇಲ್ಲ. ಭಾರತೀಯ ವಿದ್ಯಾರ್ಥಿಗಳನ್ನೇ ಗುರಿಯಾಗಿಸಿಕೊಂಡು ದಾಳಿ ನಡೆಯುತ್ತಿದೆ ಎನ್ನಲು ಆಧಾರಗಳಿಲ್ಲ.

• ಭಾರತ ಮತ್ತು ಅಮೆರಿಕ ಹಲವು ಸಮಾನ ಧ್ಯೇಯಗಳನ್ನು ಹೊಂದಿವೆ. ಎಲ್ಲ ಭಿನ್ನಾಭಿಪ್ರಾಯಗಳ ನಡುವೆಯೂ, ಅಮೆರಿಕವು ಭಾರತದ ಜೊತೆಗಿನ ಸಂಬಂಧವನ್ನು ಹೇಗೆ ಕಾಣುತ್ತದೆ?

ಭಾರತವು ಜಾಗತಿಕ ಶಕ್ತಿಯಾಗಿ ಪ್ರವರ್ಧಮಾನಕ್ಕೆ ಬರುವುದನ್ನು, 'ಇಂಡೊ-ಪೆಸಿಫಿಕ್' ಪ್ರದೇಶವು ಮುಕ್ತವಾಗಿ ಇರುವಂತೆ ನೋಡಿಕೊಳ್ಳುವಲ್ಲಿ ಪ್ರಮುಖ ಪಾಲುದಾರ ಆಗಿರುವುದನ್ನು ನಾವು ಪೂರ್ತಿಯಾಗಿ ಬೆಂಬಲಿಸುತ್ತೇವೆ. ಜನರ ರಕ್ಷಣೆ, ಅತ್ಯಂತ ಹೆಚ್ಚಿನ ಆದ್ಯತೆ ಪಡೆದಿರುವ ಹವಾಮಾನ ಬದಲಾವಣೆಯಂತಹ ವಿಷಯಗಳಲ್ಲಿ ನಾವು ಒಟ್ಟಾಗಿ ಕೆಲಸ ಮಾಡುತ್ತೇವೆ. ಯಾವುದೇ ಸ್ನೇಹಿತರ ರೀತಿಯಲ್ಲೇ, ನಾವು ಎಲ್ಲ ವಿಷಯಗಳ ಬಗ್ಗೆಯೂ ಸದಾಕಾಲ ಸಮ್ಮತಿ ಹೊಂದಿರಲು ಸಾಧ್ಯವಿಲ್ಲ. ಆದರೆ ನಮ್ಮ ದೇಶಗಳನ್ನು ಒಟ್ಟಾಗಿರಿಸುವ ಸಂಗತಿಗಳು ನಮ್ಮ ನಡುವೆ ಕಂದಕ ಸೃಷ್ಟಿಸುವ ಸಂಗತಿಗಳಿಗಿಂತ ಹೆಚ್ಚು ಗಟ್ಟಿಯಾಗಿವೆ ಎಂಬ ವಿಚಾರದಲ್ಲಿ ಎರಡೂ ದೇಶಗಳ ನಡುವೆ ಈಗ ಸ್ಪಷ್ಟತೆ ಇದೆ. ಭಾರತ ಮತ್ತು ಅಮೆರಿಕ ಒಟ್ಟಾಗಿ ಕೆಲಸ ಮಾಡಿದಾಗ, ಎರಡೂ ದೇಶಗಳಿಗೆ ಮಾತ್ರವೇ ಅಲ್ಲ ಜಗತ್ತಿಗೂ ಗಣನೀಯ ಲಾಭ ಆಗುತ್ತದೆ.

• ಬೆಂಗಳೂರಿನಲ್ಲಿ ಅಮೆರಿಕದ ಕಾನ್ಸುಲೇಟ್ ಕಚೇರಿ ಆರಂಭಿಸುವ ಘೋಷಣೆ ಆಗಿ ಎರಡು ವರ್ಷಗಳು ಕಳೆದಿದ್ದರೂ ಕಚೇರಿ ಆರಂಭವಾಗಿಲ್ಲ. ಈ ಕಚೇರಿ ಬೆಂಗಳೂರಿನಲ್ಲಿ ಯಾವಾಗ ಆರಂಭವಾಗುತ್ತದೆ?

ಈ ನಿಟ್ಟಿನಲ್ಲಿ ನಾವು ಕಠಿಣ ಶ್ರಮವಹಿಸಿ ಕೆಲಸ ಮಾಡುತ್ತಿದ್ದೇವೆ. ಬೆಂಗಳೂರು ಮತ್ತು ಅಹಮದಾಬಾದ್‌ನಲ್ಲಿ ಹೊಸ ಕಾನ್ಸುಲೇಟ್ ಕಚೇರಿಗಳನ್ನು ಆರಂಭಿಸುವ ವಿಚಾರವಾಗಿ ನಾವು ಭಾರತದ ಸರ್ಕಾರದ ಜೊತೆ ಸಮನ್ವಯದಿಂದ ಮುಂದಡಿ ಇರಿಸಿದ್ದೇವೆ.

• ಭಾರತ ಮತ್ತು ಅಮೆರಿಕದ ನಡುವಿನ ಪಾಲುದಾರಿಕೆ ಇನ್ನಷ್ಟು ಬಲಿಷ್ಠಗೊಳ್ಳಲು ಮುಂದಿನ ದಿನಗಳಲ್ಲಿ ಯಾವ ಕ್ಷೇತ್ರಗಳು ನೆರವಾಗಲಿವೆ?

ನಮ್ಮ ಪಾಲುದಾರಿಕೆಯನ್ನು ಮುಂದಕ್ಕೆ ಒಯ್ಯಲು ನಾವು ಹಲವು ಕ್ಷೇತ್ರಗಳಲ್ಲಿ ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ಸೆಮಿಕಂಡಕ್ಟರ್ ಪೂರೈಕೆ ವ್ಯವಸ್ಥೆಯ ಬಲಪಡಿಸುವಿಕೆ, ಉನ್ನತ ತಂತ್ರಜ್ಞಾನದ ರಕ್ಷಣಾ ಬಿಡಿಭಾಗಗಳ ಹಾಗೂ ಉಪಕರಣಗಳನ್ನು ಒಟ್ಟಾಗಿ ಉತ್ಪಾದಿಸುವುದು, ಭಾರತದ ಗಗನಯಾತ್ರಿಗಳಿಗೆ ನಾಸಾದಿಂದ ತರಬೇತಿ, ಜಂಟಿಯಾಗಿ ಉಪಗ್ರಹಗಳ ಉಡಾವಣೆ, ಸಂಶೋಧನೆ ಹಾಗೂ ಶಿಕ್ಷಣದಲ್ಲಿ ಪಾಲುದಾರಿಕೆಯ ವಿಸ್ತರಣೆ ಮುಖ್ಯವಾದವು.

ಮುಂಬೈ ಧಾರಣೆ

ಶೇಂಗಾ

20-5-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	890 (885)
ಪಾಮ್ ವಾರದ ಡೆಲಿವರಿ	896 (895)
ಸೂರ್ಯಕಾಂತಿ ಎಣ್ಣೆ ಕಚ್ಚಾ	865 (865)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹**74,500** (73,800)

ಬೆಳ್ಳಿ ಕೆ.ಜಿ ₹**91,300** (90,800)

ಆವರಣದಲ್ಲಿ ಶನಿವಾರದ ಧಾರಣೆ

ಮಸಾಲೆ ಪದಾರ್ಥ ಗುಣಮಟ್ಟ ಪರೀಕ್ಷೆಗೆ ಮಾನದಂಡ

ರಫ್ತಾಗುವ ಪದಾರ್ಥಗಳಲ್ಲಿ ಇಟಿಒ ಅಂಶ ಕುರಿತ ಆರೋಪ– ಕೇಂದ್ರದ ಕ್ರಮ

ನವದೆಹಲಿ (ಪಿಟಿಐ): ರಫ್ತು ಮಾಡಲಾಗುವ ಮಸಾಲೆ ಪದಾರ್ಥಗಳಲ್ಲಿ ಇಥೈಲೀನ್ ಆಮ್ಲದ (ಇಟಿಒ) ಅಂಶವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ವಿಸ್ತೃತ ಮಾರ್ಗಸೂಚಿಯನ್ನು ಸಿದ್ಧಪಡಿಸಿದೆ ಎಂದು ಅಧಿಕಾರಿಗಳು ಸೋಮವಾರ ಹೇಳಿದ್ದಾರೆ.

ಭಾರತದ ಎಂಡಿಎಚ್ ಮತ್ತು ಎವರೆಸ್ಟ್ ಸಂಸ್ಥೆಗಳ ಉತ್ಪನ್ನಗಳಲ್ಲಿ ಕ್ಯಾನ್ಸರ್‌ಕಾರಕ ಇಟಿಒ ಅಂಶ ಹೆಚ್ಚಾಗಿ ಇರುವ ಕಾರಣ ಉತ್ಪನ್ನಗಳನ್ನು ಹಿಂಪಡೆಯುವಂತೆ ಸಿಂಗಪುರ ಮತ್ತು ಹಾಂಗ್‌ಕಾಂಗ್ ಈ ಸಂಸ್ಥೆಗಳಿಗೆ ಹೇಳಿತ್ತು ಎಂದು ಈಚೆಗಷ್ಟೇ ವರದಿಯಾಗಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರದ ಈ ಕ್ರಮವು ಮಹತ್ವ ಪಡೆದಿದೆ. ಇದೇ ವೇಳೆ, ಸಿಂಗಪುರ, ಹಾಂಗ್‌ಕಾಂಗ್‌ಗಳಿಗೆ ರಫ್ತು ಮಾಡಲಾಗುವ ಮಸಾಲೆ ಪದಾರ್ಥಗಳನ್ನು ಕಡ್ಡಾಯವಾಗಿ ಪರೀಕ್ಷೆಗೆ ಒಳಪಡಿಸುವಂಥ ಕ್ರಮವನ್ನೂ ಕೇಂದ್ರ ಕೈಗೆತ್ತಿಕೊಂಡಿದೆ.

‘ಸಿಂಗಪುರ ಮತ್ತು ಹಾಂಗ್‌ಕಾಂಗ್‌ಗೆ ರಫ್ತು ಮಾಡಲಾಗುವ ಮಸಾಲೆ ಪದಾರ್ಥಗಳನ್ನು ಹಡಗಿನಲ್ಲಿ ಇರಿಸುವ ಮೊದಲೇ ಪರೀಕ್ಷೆಗೊಳಪಡಿಸುವುದನ್ನು ಈಗಾಗಲೇ ಆರಂಭಿಸಲಾಗಿದೆ. ಇಟಿಒ ಅಂಶವು ಮಸಾಲೆ ಪದಾರ್ಥದಲ್ಲಿ ಇರದಂತೆ ನೋಡಿಕೊಳ್ಳಲು ಎಲ್ಲಾ ರಫ್ತುದಾರರಿಗೂ ಹೇಳಲಾಗಿದೆ. ನಿರಂತರ ಪರೀಕ್ಷಾ ಪ್ರಕ್ರಿಯೆಯನ್ನೂ ರಫ್ತುದಾರರು ಕೈಗೊಡಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಟಿಒಗೆ ಸಂಬಂಧಿಸಿದ ಗರಿಷ್ಠ ರಾಸಾಯನಿಕ ಉಳಿಕೆ ಮಟ್ಟ (ಎಂಆರ್‌ಎಲ್) ಮಾನದಂಡವು ದೇಶದಿಂದ ದೇಶಕ್ಕೆ ಬದಲಾಗುತ್ತದೆ. ಉದಾಹರಣೆಗೆ ಯುರೋಪ್ ಒಕ್ಕೂಟವು ಇಟಿಒ ಮಾನದಂಡವನ್ನು 1 ಕೆ.ಜಿ. ಗೆ 0.02 ಇಂದ 0.1 ಎಂಜಿ ಇರಿಸಿದೆ. ಸಿಂಗಪುರ ಮತ್ತು ಜಪಾನ್ ಕ್ರಮವಾಗಿ 1 ಕೆ.ಜಿ.ಗೆ 50 ಎಂಜಿ ಮತ್ತು 0.01 ಎಂಜಿ ಹೊಂದಿವೆ. ಹೀಗಾಗಿ ಇಟಿಒ ಬಳಕೆಗೆ ಅಂತರರಾಷ್ಟ್ರೀಯ ಮಾನದಂಡ ಎಂಬುದಿಲ್ಲ.

ಆಹಾರ ಪದಾರ್ಥ ಪರೀಕ್ಷೆ ಕುರಿತು ಮಾಹಿತಿ ನೀಡಿದ ಮತ್ತೊಬ್ಬ ಅಧಿಕಾರಿ, ಆಹಾರ ಪದಾರ್ಥಗಳು ಪರೀಕ್ಷೆಯಲ್ಲಿ ವಿಫಲ ಎಂದು ಪರಿಗಣಿಸುವುದಕ್ಕೆ ನಿರ್ದಿಷ್ಟ ಮಾನದಂಡ ಇರುತ್ತದೆ. ಭಾರತದ ಆಹಾರ ಪದಾರ್ಥ ಮಾದರಿಗಳು ಪರೀಕ್ಷೆಯಲ್ಲಿ ವಿಫಲವಾಗುವ ದರವು ಶೇ 1ಕ್ಕಿಂತ ಕಡಿಮೆ ಎಂದರು. 2023– 24ನೇ ಸಾಲಿನಲ್ಲಿ 14 ಲಕ್ಷ ಟನ್ ಮಸಾಲೆ ಪದಾರ್ಥಗಳನ್ನು ವಿವಿಧ ದೇಶಕ್ಕೆ ರಫ್ತು ಮಾಡಲಾಯಿತು. ಅದರಲ್ಲಿ ಶೇ 99.8ರಷ್ಟು ಪದಾರ್ಥವು ಗುಣಮಟ್ಟ ಪರೀಕ್ಷೆ ಗಳನ್ನು ತೇರ್ಗಡೆಯಾಗಿವೆ. ಇದೇ ವೇಳೆ, ಭಾರತಕ್ಕೆ ಆಮದಾಗುವ ಶೇ 0.73ರಷ್ಟು ಆಹಾರ ಪದಾರ್ಥಗಳು ಗುಣಮಟ್ಟ ಮಾನದಂಡವನ್ನು ತೇರ್ಗಡೆಯಾಗಿಲ್ಲ ಎಂದು ಅಧಿಕಾರಿ ಹೇಳಿದ್ದಾರೆ.

ದ್ವಿತೀಯ ಪಿಯು ಪರೀಕ್ಷೆ–2ರ ಫಲಿತಾಂಶ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ–2ರ ಫಲಿತಾಂಶ ಮೇ 21ರಂದು ಮಧ್ಯಾಹ್ನ 3ಕ್ಕೆ ಪ್ರಕಟವಾಗಲಿದೆ.

ಫಲಿತಾಂಶವನ್ನು ಎನ್‌ಐಸಿ ವೆಬ್‌ಸೈಟ್: https://karresults.nic.inನಲ್ಲಿ ಪ್ರಕಟಿಸಲಾಗುವುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ ತಿಳಿಸಿದೆ.

ಏಪ್ರಿಲ್ 29ರಿಂದ ಮೇ 16ರ ವರೆಗೆ ಪರೀಕ್ಷೆ ನಡೆದಿತ್ತು.

ಸುದ್ದಿ 2 ನಿಮಿಷ

ಆಫ್ರಿಕಾಕ್ಕೆ ಮಲೇರಿಯಾ ಲಸಿಕೆ ರಫ್ತು

ನವದೆಹಲಿ (ಪಿಟಿಐ): ಲಸಿಕೆ ತಯಾರಿಕಾ ಸಂಸ್ಥೆ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ತನ್ನ ಮಲೇರಿಯಾ ಲಸಿಕೆ ‘ಆರ್‌21/ಮ್ಯಾಟ್ರಿಕ್ಸ್–ಎಂ’ ಅನ್ನು ಆಫ್ರಿಕಾಕ್ಕೆ ರಫ್ತು ಮಾಡಲು ಆರಂಭಿಸಿದೆ.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮತ್ತು ನೊವಾವ್ಯಾಕ್ಸ್‌ನ ಮ್ಯಾಟ್ರಿಕ್ಸ್-ಎಂ ಸಹಯೋಗದೊಂದಿಗೆ ಲಸಿಕೆಯನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಎಸ್‌ಐಐ ತಿಳಿಸಿದೆ.

ಆರಂಭಿಕ ಹಂತವಾಗಿ ಸೆಂಟ್ರಲ್ ಆಫ್ರಿಕನ್ ರಿಪಬ್ಲಿಕ್‌ಗೆ (ಸಿಎಆರ್) ಸಾಗಣೆ ಮಾಡಲಾಗಿದೆ. ಇತರೆ ಆಫ್ರಿಕಾದ ದೇಶಗಳಾದ ದಕ್ಷಿಣ ಸುಡಾನ್ ಮತ್ತು ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋಗೆ ಮುಂದಿನ ದಿನಗಳಲ್ಲಿ ರಫ್ತು ಮಾಡಲಾಗುವುದು ಎಂದು ತಿಳಿಸಿದೆ. ಒಟ್ಟು 1.63 ಲಕ್ಷ ಡೋಸ್‌ಗಳಲ್ಲಿ 43,200 ಡೋಸ್‌ಗಳನ್ನು ಮಾತ್ರ ಎಸ್‌ಐಐನ ಪುಣೆಯ ಘಟಕದಿಂದ ಸಾಗಣೆ ಮಾಡಲಾಗಿದೆ.

ಆಫ್ರಿಕಾಕ್ಕೆ ಆರ್‌21/ಮ್ಯಾಟ್ರಿಕ್ಸ್–ಎಂ ಮಲೇರಿಯಾ ಲಸಿಕೆ ರವಾನೆಯು ಈ ಮಾರಣಾಂತಿಕ ಕಾಯಿಲೆಯ ವಿರುದ್ಧದ ನಮ್ಮ ಸಾಮೂಹಿಕ ಹೋರಾಟದಲ್ಲಿ ಒಂದು ಮಹತ್ವದ ಮೈಲಿಗಲ್ಲನ್ನು ಸೂಚಿಸುತ್ತದೆ ಎಂದು ಎಸ್‌ಐಐನ ಸಂಶೋಧನೆ ಮತ್ತು ಅಭಿವೃದ್ಧಿಯ ಕಾರ್ಯನಿರ್ವಾಹಕ ನಿರ್ದೇಶಕ ಉಮೇಶ್ ಸಾಲಿಗ್ರಾಮ್ ತಿಳಿಸಿದ್ದಾರೆ.

ಕಳೆದ ಅಕ್ಟೋಬರ್‌ನಲ್ಲಿ ಲಸಿಕೆಯು ವಿಶ್ವ ಆರೋಗ್ಯ ಸಂಸ್ಥೆಯಿಂದ ಮಕ್ಕಳಿಗೆ ಬಳಸಲು ಅನುಮತಿ ಪಡೆದಿದೆ. ಲಸಿಕೆ ಕೈಗೆಟುಕುವ ಬೆಲೆಯಲ್ಲಿದೆ ಎಂದು ಎಸ್‌ಐಐ ತಿಳಿಸಿದೆ.



ಒಐಎಲ್ ಲಾಭ ಶೇ 18ರಷ್ಟು ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಆಯಿಲ್ ಇಂಡಿಯಾ ಲಿಮಿಟೆಡ್ (ಒಐಎಲ್) 2023–24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹2,332 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ರ ಇದೇ ಅವಧಿಯಲ್ಲಿ ನಿಗಮವು ₹1,979 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 18ರಷ್ಟು ಏರಿಕೆಯಾಗಿದೆ. ಕಚ್ಚಾ ತೈಲದ ದರ ಹೆಚ್ಚಳದಿಂದ ಲಾಭದಲ್ಲಿ ಏರಿಕೆಯಾಗಿದೆ ಎಂದು ಕಂಪನಿ ಷೇರುಪೇಟೆಗೆ ಸೋಮವಾರ ತಿಳಿಸಿದೆ.

ತೈಲ ದರ ಹೆಚ್ಚಳದಿಂದ ವಹಿವಾಟಿನಲ್ಲಿ ಶೇ 16ರಷ್ಟು ಏರಿಕೆಯಾಗಿದ್ದು, ₹10,375 ಕೋಟಿ ಮೌಲ್ಯದ ವಹಿವಾಟು ನಡೆದಿದೆ.

ಕಚ್ಚಾ ತೈಲ ಉತ್ಪಾದನೆ ಮತ್ತು ಮಾರಾಟದಿಂದ ಶೇ 18ರಷ್ಟು ಗಳಿಕೆ ಕಂಡಿದೆ. ಆದರೆ, ದರ ಇಳಿಕೆಯಿಂದ ಅನಿಲ ಮಾರಾಟದ ವರಮಾನವು ಶೇ 16.5ರಷ್ಟು ಇಳಿದಿದೆ. 2023–24ರ ಪೂರ್ಣ ಹಣಕಾಸು ವರ್ಷದಲ್ಲಿ ನಿವ್ವಳ ಲಾಭವು ಶೇ 29ರಷ್ಟು ಕುಸಿತ ಕಂಡಿದ್ದು, ₹6,980 ಕೋಟಿಗೆ ಇಳಿದಿದೆ. ಮಂಡಳಿಯು 1:2 ಬೋನಸ್ ನೀಡಲು ಅನುಮೋದನೆ ನೀಡಿದೆ ಎಂದು ಕಂಪನಿ ತಿಳಿಸಿದೆ.

ಮಾರುಕಟ್ಟೆ ಧಾರಣೆ

(ಅಡಿಕೆ)

ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಕುಮಟ	
ಚಿಪ್ಪು	26569-30509
ಕೋಕ	13089-26689
ಫ್ಯಾಕ್ಟರಿ	11509-20829
ಹಳೆಚಾಲಿ	36099-40509
ಹೊಸಚಾಲಿ	33999-37599
ಸಾಗರ	
ಬಿಳಿಗೋಟು	12077-31077
ಚಾಲಿ	27989-36529
ಕೋಕ	14499-32199
ಕೆಂಪುಗೋಟು	20569-37099
ರಾಶಿ	32599-52699
ಸಿಪ್ಪೆಗೋಟು	10569-20277
ಶಿವಮೊಗ್ಗ	
ಬೆಟ್ಟೆ	32065-55200
ಗೊರಬಲು	18189-36899
ರಾಶಿ	32811-53699
ಸರಕು	55009-83896
ಸಿದ್ದಾಪುರ	
ಬಿಳಿಗೋಟು	28000-31209
ಚಾಲಿ	35109-38099
ಕೋಕ	26099-30509
ಹಳೆಚಾಲಿ	37319-37139
ಕೆಂಪುಗೋಟು	30000-30889
ರಾಶಿ	43099-49399
ತಟ್ಟಿಬೆಟ್ಟೆ	37819-46099
ಶಿರಸಿ	
ಬೆಟ್ಟೆ	35021-43699
ಬಿಳಿಗೋಟು	23011-32072
ಚಾಲಿ	34099-39098
ಕೆಂಪುಗೋಟು	24850-29231
ರಾಶಿ	45899-49339
ಯಲ್ಲಾಪುರ	
ಬಿಳಿಗೋಟು	23109-32505
ಕೋಕ	12899-28899
ಹಳೆಚಾಲಿ	38861-39530
ಹೊಸಚಾಲಿ	33299-38570
ಕೆಂಪುಗೋಟು	24899-33525
ರಾಶಿ	44169-54899
ತಟ್ಟಿಬೆಟ್ಟೆ	34899-43500

ಬೆನ್ನೇರಿದ ಭಯ: ದೂರಿನಿಂದ ದೂರ!

ಒಂದನೇ ಪುಟದಿಂದ...

ಘಟನೆ–1: ದೌರ್ಜನ್ಯಕ್ಕೆ ಒಳಗಾದ ಮಹಿಳೆಗೆ 55ರ ಆಸುಪಾಸಿನ ವಯಸ್ಸು. ಮಗಳ ಮದುವೆಯಾಗಿದೆ. ಅವಳಿಗೊಂದು ಮಗುವಿದೆ. ಅಜ್ಜಿಯ ಸ್ಥಾನಕ್ಕೆ ಏರಿರುವ ಸಂತ್ರಸ್ತ ಮಹಿಳೆಗೆ ತನ್ನ ಬದುಕಿಗಿಂತ ಮಗಳ ಕುಟುಂಬದ ಬಗ್ಗೆ ಆತಂಕ ಕಾಡುತ್ತಿದೆ. ಒಂದು ದೂರು, ಪ್ರೀತಿಯಿಂದ ಇರುವ ಮಗಳು– ಅಳಿಯನ ನಡುವೆ ವಿರಸಕ್ಕೆ ಕಾರಣವಾಗಿ, ಅಳಿಯನ ಕುಟುಂಬದವರು ಮಗಳನ್ನು ದೂಷಿಸಬಹುದೆಂಬ ಅಂಜಿಕೆಯಲ್ಲಿ ಅವರು ದೂರು ನೀಡುವುದು ಬೇಡವೆಂಬ ನಿರ್ಧಾರಕ್ಕೆ ಬಂದಿದ್ದಾರೆ.

ಘಟನೆ–2: ಪತಿಯನ್ನು ಕಳೆದುಕೊಂಡಿರುವ ಮಹಿಳೆಗೆ ಹರೆಯದ ಮಗನಿದ್ದಾನೆ. ಪೆನ್‌ಡ್ರೈವ್ ಹಂಚಿಕೆಯಿಂದ ನೊಂದುಕೊಂಡಿರುವ ಅವರು ದೂರು ನೀಡಲು ಮುಂದಾಗಿದ್ದರು. ಆ ಕ್ಷಣಕ್ಕೆ ಅವರನ್ನು ಎಚ್ಚರಿಸಿದ್ದು ತಾಯ್ತನ. ಅಧಿಕೃತವಾಗಿ ದಾಖಲಾಗುವ ದೂರು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಅವುಗಳ ಪ್ರತಿಗಳ ಮೂಲಕ ಜಗಜ್ಜಾಹೀರಾಗುವ ವಿಳಾಸ, ವಿಚಾರಣೆ, ಕೋರ್ಟ್ ಅಲೆದಾಟ, ಎಲ್ಲಕ್ಕಿಂತ ಮುಖ್ಯವಾಗಿ ಕಾಮಕ್ಕೆ ಬಲಿಪಶು ಆದವಳು ಅಮ್ಮ ಎಂಬ ಮಗನ ಮನದ ಶಾಶ್ವತ ನೋಟ, ಇವನ್ನೆಲ್ಲ ಕಲ್ಪಿಸಿಕೊಂಡಿರುವ ಅವರು, ಅಂತಿಮವಾಗಿ ದೂರು ನೀಡಿ ಆತ್ಮಹತ್ಯೆಗೆ ಶರಣಾಗುವುದೆಂಬ ನಿರ್ಧಾರಕ್ಕೆ ಬಂದಿದ್ದರು. ಮಗ ಮತ್ತು ಸಾವು ಇವೆರಡು ಕಣ್ಮುಂದೆ ಬಂದಾಗ ಅವರನ್ನು ಅಮ್ಮನ ಅಂತಃಕರಣ ಎಚ್ಚರಿಸಿದೆ. ದೂರು ಕೊಡುವುದು ಬೇಡವೆಂಬ ನಿರ್ಣಯ ಮಾಡಿದ್ದಾರೆ.

ಇದು ಕೌಟುಂಬಿಕ ಕಗ್ಗಂಟಿನಲ್ಲಿ ಸಿಲುಕಿರುವ ಹೆಣ್ಣು ಜೀವಗಳ ಕಥೆಯಾದರೆ, ರಾಜಕೀಯ ವ್ಯೂಹದೊಳಗೆ ಸಿಲುಕಿದವರದ್ದು ಇನ್ನೊಂದು ರೀತಿಯ ಅಸಹಾಯಕತೆ. ಒಂದು ರಾಜಕೀಯ ಪಕ್ಷಕ್ಕೆ ಸೇರಿದ ಹಲವಾರು ಕಾರ್ಯಕರ್ತೆಯರ ಚಿತ್ರ, ವಿಡಿಯೊ ತುಣುಕುಗಳು ಊರ ತುಂಬೆಲ್ಲ ಹರಿದಾಡಿರುವ ಪೆನ್‌ಡ್ರೈವ್‌ನಲ್ಲಿವೆ. ಆದರೆ, ಪಕ್ಷದ ಬಲಾಢ್ಯರ ಆಮಿಷ, ಒತ್ತಡ, ದಬ್ಬಾಳಿಕೆ, ಕೌಟುಂಬಿಕ ಸಂಬಂಧಗಳು ಅವರು ದೂರು ನೀಡದಂತೆ ತಡೆಹಾಕಿವೆ. ಹೀಗಾಗಿ, ಅವರು ಮೌನಕ್ಕೆ ಶರಣಾಗಿದ್ದಾರೆ.

‘ವಿಕೃತಿಗೆ ಬಲಿಯಾದವರ ಬಗ್ಗೆ ಕರುಣೆ ತೋರುವ ಬದಲಾಗಿ ಕುಹಕದ, ಅನುಮಾನದ ಮಾತುಗಳನ್ನಾಡುವವರೇ ಹೆಚ್ಚಾಗಿದ್ದಾರೆ. ಜಾತಿ ಪ್ರಾಬಲ್ಯ ಮೆರೆಯುತ್ತಿದೆ. ಇದರಿಂದಾಗಿ, ಮಹಿಳೆಯರು ಮುಂದೆ ಬಂದು ದೂರು ನೀಡಲು ಹಿಂದೇಟು ಹಾಕುತ್ತಿದ್ದಾರೆ. ಲೋಕಸಭೆ ಚುನಾವಣೆಗೆ ಮೂರು ದಿನ ಮೊದಲು ಹರಿಬಿಟ್ಟ ಅಶ್ಲೀಲ ವಿಡಿಯೊದಲ್ಲಿ ಒಂದು ಪಕ್ಷಕ್ಕೆ ಸೇರಿದ ಸ್ತ್ರೀಯರೇ ಬಲಿಪಶುಗಳಾದ್ದರು. ರಾಜಕೀಯ ದಾಳವಾಗಿ ಇದನ್ನು ಬಳಸಿಕೊಳ್ಳಲಾಯಿತೇ ವಿನಾ ಸ್ತ್ರೀಯ ಮಾನ ಹರಾಜಾಗುವ ಬಗ್ಗೆ ಅರೆಕ್ಷಣವೂ ಯೋಚಿಸದಿರುವುದು ಸಮಾಜದ ನೈತಿಕತೆಯ ಕುಸಿತಕ್ಕೆ ಸಾಕ್ಷಿಯಾಗಿದೆ’ ಎಂದು ಬೇಸರಿಸಿದರು ಹೋರಾಟಗಾರ ಧರ್ಮೇಶ್.

‘ಸೂಕ್ಷ್ಮ ಪ್ರಜ್ಞೆ: ಸಮಾಜದ ಹೊಣೆ’

‘ಪುರುಷ ಪ್ರಧಾನ ಸಮಾಜದಲ್ಲಿ ಅಪರಾಧಿ ಯಾರೆಂದು ಗೊತ್ತಿದ್ದರೂ ವಿಕೃತಿಗೆ ಬಲಿಪಶುಗಳಾದ ಮಹಿಳೆಯರನ್ನು ತಪ್ಪಿತಸ್ಥರನ್ನಾಗಿ ನೋಡಲಾಗುತ್ತಿದೆ. ಹೆಣ್ಣು ಎಷ್ಟೆಲ್ಲ ಸಂಕೋಲೆಗಳಲ್ಲಿ ಸಿಲುಕಿ ನರಳುತ್ತಾಳೆ. ಕುಟುಂಬ, ಸಂಬಂಧಗಳ ಸೂಕ್ಷ್ಮ ಎಳೆ, ರಾಜಕೀಯ, ಸಾಮಾಜಿಕ ಸಂಗತಿಗಳು ಅವಳನ್ನು ಗಾಸಿಗೊಳಿಸುತ್ತಿವೆ. ದಿನಕ್ಕೊಂದು ಅಪಮಾನ ಆಕೆಯನ್ನು ಮೌನವಾಗಿಸಿದೆ. ಸಂತ್ರಸ್ತ ಮಹಿಳೆಯರನ್ನು ಯಾವ ಕಾರ್ಯಕ್ರಮಗಳಿಗೂ ಕರೆಯಬಾರದೆಂಬ ಅಘೋಷಿತ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ. ಯಾರ ತಪ್ಪಿಗೆ ಯಾರಿಗೆ ಶಿಕ್ಷೆ? ಅಪರಾಧಿಗೆ ಕೊಡಬೇಕಾದ ಶಿಕ್ಷೆಯನ್ನು ಸಂತ್ರಸ್ತರಿಗೆ ನೀಡುವುದೇ ಅಪರಾಧ. ಕೆಲವು ರಾಜಕೀಯ ನಾಯಕರೇ ಸಂತ್ರಸ್ತ ಮಹಿಳೆಯರ ಕುರಿತು ವಿಧ ವಿಧದ ದೋಷಾರೋಪಣೆ ಮಾಡುತ್ತ, ಅವರು ಪ್ರಕರಣ ದಾಖಲಿಸದಂತೆ ತಡೆಯುತ್ತಿರುವುದೂ ಅಕ್ಷಮ್ಯ. ಈ ಬಗ್ಗೆಯೂ ಕಾನೂನು ಕ್ರಮ ಜರುಗಿಸಬೇಕು’ ಎನ್ನುತ್ತಾರೆ ಹೋರಾಟಗಾರ್ತಿ ರೂಪ ಹಾಸನ.

ಸಂತ್ರಸ್ತ ಮಹಿಳೆ ದಿಟ್ಟತನದಿಂದ ಮುಂದೆ ಬಂದು ದೂರು ನೀಡುವ ವಾತಾವರಣ ಸೃಷ್ಟಿಸಿ, ನಿಜವಾದ ಅಪರಾಧಿಗೆ ಶಿಕ್ಷೆ ಕೊಡಿಸಬೇಕಾಗಿರುವುದು ಸಮಾಜದ ಹೊಣೆ ಎಂಬ ಸೂಕ್ಷ್ಮ ಪ್ರಜ್ಞೆ ಮೂಡಿಸಬೇಕಾಗಿದೆ ಎಂಬುದು ಅವರ ಆಗ್ರಹ.

ವರದಿ ಓದಿ ಮನಸ್ಸಿಗೆ ಗಾಸಿ

ಇವತ್ತಿನ ‘ಪ್ರಜಾವಾಣಿ’ ಪತ್ರಿಕೆಯ ವರದಿ ನೋಡಿ ಮನಸ್ಸಿಗೆ ಬಹಳ ನೋವಾಯಿತು. ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡುವ ಮಹಿಳಾ ಸಿಬ್ಬಂದಿಯು ದೀರ್ಘ ರಜೆ ತೆಗೆದುಕೊಳ್ಳುವುದಕ್ಕೆ ಹಿಂಜರಿಯುತ್ತಿದ್ದಾರೆ ಎನ್ನುವ ಆ ವರದಿ ನನ್ನ ಮನಸ್ಸನ್ನು ಗಾಸಿಗೊಳಿಸಿದೆ. ಮಾನಸಿಕ ಯಾತನೆ ಅನುಭವಿಸುತ್ತಿರುವ ಮಹಿಳೆಯರಲ್ಲಿ ನಾನು ಸಾರ್ವಜನಿಕವಾಗಿ ಕ್ಷಮೆ ಕೇಳುತ್ತೇನೆ.

ಎಚ್‌.ಡಿ. ಕುಮಾರಸ್ವಾಮಿ

5, 8, 9: ಎಲ್ಲರೂ ತೇರ್ಗಡೆ

ಒಂದನೇ ಪುಟದಿಂದ...

2023–24ನೇ ಸಾಲಿನ ಫಲಿತಾಂಶವನ್ನು ರಾಜ್ಯದ ಎಲ್ಲ ಶಾಲೆಗಳಲ್ಲಿ ಏಪ್ರಿಲ್ 8ರಂದು ಪ್ರಕಟಿಸುವಂತೆ ಈ ಹಿಂದೆ ಸೂಚಿಸಲಾಗಿತ್ತು. ಆದರೆ, ಫಲಿತಾಂಶ ಪ್ರಕಟಿಸದಂತೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದ್ದರಿಂದ ಇನ್ನೂ ಫಲಿತಾಂಶ ಪ್ರಕಟವಾಗಿಲ್ಲ.

‘2024–25ನೇ ಸಾಲಿನ ಶೈಕ್ಷಣಿಕ ವರ್ಷವು ಮೇ 29ರಿಂದ ಆರಂಭಗೊಳ್ಳಲಿದೆ. ಕಳೆದ ಶೈಕ್ಷಣಿಕ ಸಾಲಿನ ಫಲಿತಾಂಶ ಪ್ರಕಟ ಆಗದಿರುವ ಪರಿಣಾಮ 5, 8 ಹಾಗೂ 9ನೇ ತರಗತಿ ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ತರಗತಿಗೆ ಪ್ರವೇಶ, ದಾಖಲಾತಿ, ಪ್ರವೇಶ ಶುಲ್ಕ ಪಾವತಿ ಹಾಗೂ ಬೇರೆ ಸ್ಥಳಗಳಿಗೆ ವರ್ಗಾವಣೆಗೆ ಪ್ರಮಾಣ ಪತ್ರ, ಪ್ರಗತಿ ಪತ್ರ, ವ್ಯಾಸಂಗ ಪ್ರಮಾಣ ಪತ್ರ ವಿತರಿಸಲು ಸಾಧ್ಯವಾಗಿರಲಿಲ್ಲ. ಮಕ್ಕಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ ಈಗಾಗಲೇ ಶಾಲೆಗಳಲ್ಲಿ ನಡೆದಿರುವ ಪರೀಕ್ಷೆಗಳ ಮೌಲ್ಯಾಂಕನ ಆಧರಿಸಿ ಮುಂದಿನ ತರಗತಿಗೆ ಮುಂದುವರಿಸಲು ಅವಕಾಶ ಕಲ್ಪಿಸುವಂತೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ.ಕಾವೇರಿ ಅವರು ಸೂಚಿಸಿದ್ದಾರೆ.



ಹೈದರಾಬಾದ್‌ನ ಲಿಬರ್ಟಿ ಟ್ರಾಫಿಕ್ ಸಿಗ್ನಲ್‌ನಲ್ಲಿ ಬಿಸಿಲಿನ ತಾಪದಿಂದ ರಕ್ಷಣೆ ನೀಡಲು ಗ್ರೇಟರ್ ಹೈದರಾಬಾದ್ ಮುನ್ಸಿಪಲ್ ಕಾರ್ಪೊರೇಷನ್ (ಜಿಎಚ್‌ಎಂಸಿ) ಸೋಮವಾರ ನಿರ್ಮಾಣ ಮಾಡಿದ ತಾತ್ಕಾಲಿಕ ಹಸಿರು ಪರದೆ–ಪಿಟಿಐ ಚಿತ್ರ

ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಕಾಂಗ್ರೆಸ್, ಬಿಜೆಪಿಗೆ ಬಂಡಾಯ

ಪರಿಷತ್ ಚುನಾವಣೆ: ಅಂತಿಮ ಕಣದಲ್ಲಿ 78 ಮಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ಆರು ಕ್ಷೇತ್ರಗಳಲ್ಲಿ ನಾಮಪತ್ರ ಹಿಂಪಡೆಯುವ ಅವಧಿ ಸೋಮವಾರ ಮುಕ್ತಾಯಗೊಂಡಿದ್ದು, ಅಂತಿಮವಾಗಿ 78 ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ. ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಕಾಂಗ್ರೆಸ್, ಬಿಜೆಪಿ ಎರಡೂ ಪಕ್ಷಗಳು ಬಂಡಾಯ ಎದುರಿಸುತ್ತಿವೆ.

ಒಟ್ಟು 12 ಅಭ್ಯರ್ಥಿಗಳು ಸೋಮವಾರ ನಾಮಪತ್ರ ಹಿಂಪಡೆದಿದ್ದಾರೆ. ಒಬ್ಬ ಮಹಿಳೆ ಮತ್ತು 77 ಪುರುಷರು ಕಣದಲ್ಲಿ ಉಳಿದಿದ್ದಾರೆ.

ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ರಮೇಶ್ ಶೆಟ್ಟಿ ಸೋಮವಾರ ನಾಮಪತ್ರ ಹಿಂಪಡೆದರು. ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರ ಮನವೊಲಿಕೆಗೆ ಮಣಿದ ರಮೇಶ್ ಶೆಟ್ಟಿ, ಮೈಸೂರು ಪ್ರಾದೇಶಿಕ ಆಯುಕ್ತರ ಕಚೇರಿಗೆ ತೆರಳಿ ನಾಮಪತ್ರ ಹಿಂಪಡೆದರು.

ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆಯನೂರು ಮಂಜುನಾಥ್ ಅವರಿಗೆ ಟಿಕೆಟ್ ನೀಡಿರುವುದನ್ನು ವಿರೋಧಿಸಿ ನಾಮಪತ್ರ ಸಲ್ಲಿಸಿದ್ದ ಎಸ್‌.ಪಿ. ದಿನೇಶ್ ಕಣದಲ್ಲಿ ಮುಂದುವರಿದಿದ್ದಾರೆ. ಬಿಜೆಪಿ ಡಾ. ಧನಂಜಯ ಸರ್ಜಿ ಅವರಿಗೆ ಟಿಕೆಟ್ ನೀಡಿದ್ದನ್ನು ವಿರೋಧಿಸಿ ಕಣಕ್ಕಿಳಿದಿದ್ದ ಮಾಜಿ ಶಾಸಕ ಕೆ. ರಘುಪತಿ ಭಟ್ ಕೂಡ ಸ್ಪರ್ಧೆಯಲ್ಲಿ ಉಳಿದಿದ್ದಾರೆ.

ಈಶಾನ್ಯ ಪದವೀಧರರ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಸುರೇಶ್ ಸಜ್ಜನ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮನವೊಲಿಕೆ ಫಲಿಸಿದ್ದು, ಸೋಮವಾರ ನಾಮಪತ್ರ ಹಿಂಪಡೆದರು.

ಈಶಾನ್ಯ ಪದವೀಧರರ ಕ್ಷೇತ್ರದಲ್ಲಿ ಅತ್ಯಧಿಕ 19 ಅಭ್ಯರ್ಥಿಗಳಿದ್ದಾರೆ. ಬೆಂಗಳೂರು ಪದವೀಧರರು ಮತ್ತು ಆಗ್ನೇಯ ಶಿಕ್ಷಕರ ಕ್ಷೇತ್ರಗಳಲ್ಲಿ ತಲಾ 15, ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 11, ನೈರುತ್ಯ ಪದವೀಧರರ ಕ್ಷೇತ್ರದಲ್ಲಿ 10, ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ ಎಂಟು ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ.

ಪರಿಷತ್‌ನ 11 ಸ್ಥಾನಗಳಿಗೆ ಜೂನ್ 13 ಕ್ಕೆ ಮತದಾನ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ಆಯ್ಕೆ ಆಗಿದ್ದ 11 ಸದಸ್ಯರ ಅವಧಿ ಜೂನ್ 17ರಂದು ಮುಗಿಯಲಿದ್ದು, ಆ ಕ್ಷೇತ್ರಗಳ ಚುನಾವಣೆಗೆ ಕೇಂದ್ರ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದೆ.

ಇದೇ 27ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಲಿದೆ. ಜೂನ್ 3 ನಾಮಪತ್ರ ಸಲ್ಲಿಕೆಗೆ ಕಡೇ ದಿನ. ಜೂನ್ 13ರಂದು ಮತದಾನ ಹಾಗೂ ಅದೇ ದಿನ ಮತ ಎಣಿಕೆ ನಡೆಯಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಸಣ್ಣ ನೀರಾವರಿ ಸಚಿವರೂ ಆಗಿರುವ ಸದಸ್ಯ ಎನ್‌.ಎಸ್‌. ಬೋಸರಾಜು, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿಯಾಗಿರುವ ಸದಸ್ಯ ಕೆ.ಗೋವಿಂದರಾಜ್, ಮುನಿರಾಜುಗೌಡ, ಬಿ.ಎಂ. ಫಾರೂಕ್, ರಘುನಾಥರಾವ್ ಮಲ್ಕಾಪೂರೆ, ಎನ್‌.ರವಿಕುಮಾರ್, ಎಸ್‌.ರುದ್ರೇಗೌಡ ಮತ್ತು ಕೆ.ಹರೀಶ್ ಕುಮಾರ್ ಅವರ ಅವಧಿ ಪೂರ್ಣಗೊಳ್ಳಲಿದೆ. ಆದರೆ, ತೇಜಸ್ವಿನಿಗೌಡ ಮತ್ತು ಕೆ.ಪಿ.ನಂಜುಂಡಿ ಅವರು ಈಗಾಗಲೇ ತಮ್ಮ ಸದಸ್ಯತ್ವ ಮತ್ತು ಬಿಜೆಪಿಗೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರಿದ್ದಾರೆ.

ಒಂದು ಸ್ಥಾನವನ್ನು ಗೆಲ್ಲಲು 19 ಮತಗಳು ಬೇಕಾಗುತ್ತವೆ. ಈಗಿರುವ ಪಕ್ಷದ ಬಲಾಬಲದ ಪ್ರಕಾರ ಕಾಂಗ್ರೆಸ್‌ಗೆ 7, ಬಿಜೆಪಿಗೆ 3 ಮತ್ತು ಜೆಡಿಎಸ್‌ಗೆ 1 ಸ್ಥಾನ ಸಿಗಲಿದೆ. ಸುರಪುರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಗೆದ್ದಿದ್ದ ರಾಜಾ ವೆಂಕಟಪ್ಪ ನಾಯಕ ಅವರ ನಿಧನದಿಂದ ಒಂದು ಸ್ಥಾನ ತೆರವಾಗಿದ್ದು, ಅದಕ್ಕೆ ಈಗಾಗಲೇ ಉಪಚುನಾವಣೆ ನಡೆದಿದೆ. ಫಲಿತಾಂಶ ಜೂನ್ 4ರಂದು ಪ್ರಕಟವಾಗಲಿದೆ. ಹೀಗಾಗಿ 224ಕ್ಕೆ ಬದಲು 223 ಸ್ಥಾನಗಳಿಗೆ ಲೆಕ್ಕ ತೆಗೆದುಕೊಳ್ಳಲಾಗುವುದು ಎಂದು ವಿಧಾನಸಭೆ ಸಚಿವಾಲಯ ಮೂಲಗಳು ತಿಳಿಸಿವೆ.

ವಿಧಾನಸಭೆಯಲ್ಲಿ ಕಾಂಗ್ರೆಸ್ 134, ಬಿಜೆಪಿ 66, ಜೆಡಿಎಸ್ 19, ಪಕ್ಷೇತರ 2, ಸರ್ವೋದಯ ಕರ್ನಾಟಕ ಪಕ್ಷ 1, ಕಲ್ಯಾಣ ರಾಜ್ಯ ಪ್ರಗತಿಪರ ಪಕ್ಷ 1 ಸ್ಥಾನಗಳನ್ನು ಹೊಂದಿವೆ. ಇಬ್ಬರು ಪಕ್ಷೇತರರು ಕಾಂಗ್ರೆಸ್ ಸಹ ಸದಸ್ಯತ್ವ ಪಡೆದಿದ್ದಾರೆ. ಕಲ್ಯಾಣರಾಜ್ಯ ಪ್ರಗತಿ ಪಕ್ಷದ ಜನಾರ್ದನರೆಡ್ಡಿ ಅವರು ತಮ್ಮ ಪಕ್ಷವನ್ನು ಬಿಜೆಪಿಯಲ್ಲಿ ವಿಲೀನಗೊಳಿಸಿದ್ದಾರೆ.

ಒಳ ರಾಜಕೀಯ ನಡೆಯದೇ ಇದ್ದರೆ ಎಲ್ಲ ಸ್ಥಾನಗಳಿಗೂ ಅವಿರೋಧ ಆಯ್ಕೆ ಆಗಲಿದೆ. ಜೆಡಿಎಸ್‌ನಲ್ಲಿ ಒಂದಿಬ್ಬರು ಶಾಸಕರು ಕೈಕೊಟ್ಟರೆ ಜೆಡಿಎಸ್ ಅಭ್ಯರ್ಥಿಯ ಗೆಲುವಿಗೆ ಕಷ್ಟವಾಗಬಹುದು. ಇಂತಹ ಸಂದರ್ಭದಲ್ಲಿ ಬಿಜೆಪಿ ಬಳಿ ಉಳಿಯುವ ಹೆಚ್ಚುವರಿ ಮತಗಳನ್ನು ಕೇಳಿ ಪಡೆಯುವ ಸಾಧ್ಯತೆ ಇವೆ. ಈ ಚುನಾವಣೆಯಲ್ಲಿ ಗೋಪ್ಯ ಮತದಾನ ನಡೆಯುತ್ತದೆ ಎಂದು ಮೂಲಗಳು ಹೇಳಿವೆ.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ ಉಲ್ಲಂಘಿಸಿದ ಆರೋಪ: ಗೃಹ ಸಚಿವಾಲಯಕ್ಕೆ ಇ.ಡಿ ಪತ್ರ

ಎಎಪಿಗೆ ₹7 ಕೋಟಿ ವಿದೇಶಿ ದೇಣಿಗೆ

ನವದೆಹಲಿ (ಪಿಟಿಐ): ದೆಹಲಿ ಮತ್ತು ಪಂಜಾಬ್‌ನಲ್ಲಿ ಆಡಳಿತ ನಡೆಸುತ್ತಿರುವ ಎಎಪಿಯು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಉಲ್ಲಂಘಿಸಿ ಸುಮಾರು ₹7 ಕೋಟಿ ವಿದೇಶಿ ದೇಣಿಗೆ ಪಡೆದುಕೊಂಡಿದೆ ಎಂದು ಆರೋಪಿಸಿ ಜಾರಿ ನಿರ್ದೇಶನಾಲಯವು ಕೇಂದ್ರ ಗೃಹ ಸಚಿವಾಲಯಕ್ಕೆ ಪತ್ರ ಬರೆದಿದೆ ಎಂದು ಮೂಲಗಳು ಸೋಮವಾರ ಹೇಳಿವೆ.

ಪಂಜಾಬ್‌ನ ಎಎಪಿ ಮಾಜಿ ಶಾಸಕ ಸುಖಪಾಲ್ ಸಿಂಗ್ ಖೈರಾ ಮತ್ತು ಇತರ ಕೆಲವರ ವಿರುದ್ಧದ ಮಾದಕವಸ್ತು ಸಂಬಂಧಿತ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ವೇಳೆ ಕೆಲವು ಮಹತ್ವದ ದಾಖಲೆಗಳು ಮತ್ತು ಇ-ಮೇಲ್‌ಗಳನ್ನು ವಶಪಡಿಸಿಕೊಂಡ ನಂತರ ಕೇಂದ್ರ ತನಿಖಾ ಏಜೆನ್ಸಿಯು ಗೃಹ ಸಚಿವಾಲಯದ ಜತೆಗೆ ಪತ್ರ ವ್ಯವಹಾರ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಈ ಪ್ರಕರಣದ ತನಿಖೆ 2021ರಲ್ಲಿ ಶುರುವಾಗಿದ್ದು, ಅದೇ ವರ್ಷ ಖೈರಾ ಅವರನ್ನು ಇ.ಡಿ ಬಂಧಿಸಿತ್ತು. ಖೈರಾ ಅವರು ಸದ್ಯ ಕಾಂಗ್ರೆಸ್‌ನಲ್ಲಿದ್ದಾರೆ.

'ಎಫ್‌ಸಿಆರ್‌ಎ ಮತ್ತು ಜನತಾ ಪ್ರಾತಿನಿಧ್ಯ ಕಾಯ್ದೆಯನ್ನು ಎಎಪಿ ಉಲ್ಲಂಘಿಸಿ ವಿದೇಶಿ ದೇಣಿಗೆ ಪಡೆದಿರುವ ಬಗ್ಗೆ ಇ.ಡಿಯು ಕಳೆದ ವರ್ಷ ಆಗಸ್ಟ್‌ನಲ್ಲಿ ಕೇಂದ್ರ ಗೃಹ ಸಚಿವಾಲಯಕ್ಕೆ ವಿವರವಾದ ಪತ್ರ ಕಳುಹಿಸಿದೆ' ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಈ ಪ್ರಕರಣ ಸಂಬಂಧ ಹೊಸತಾದ ಪೂರಕ ಮಾಹಿತಿಗಳನ್ನು ಇ.ಡಿಯು ಇತ್ತೀಚೆಗೆ ಗೃಹ ಸಚಿವಾಲಯದೊಂದಿಗೆ ಹಂಚಿಕೊಂಡಿದೆ ಎಂದು ತಿಳಿದುಬಂದಿದೆ.

'ಎಎಪಿಯು ಈವರೆಗೆ ಸುಮಾರು ₹7.08 ಕೋಟಿ ಸಾಗರೋತ್ತರ ದೇಣಿಗೆ ಸ್ವೀಕರಿಸಿದೆ. ದೇಣಿಗೆ ನೀಡಿದ ವಿದೇಶಿಗರ ಗುರುತು ಮತ್ತು ರಾಷ್ಟ್ರೀಯತೆಯನ್ನು ಮರೆಮಾಚಿ, ಸುಳ್ಳು ಮಾಹಿತಿ ನೀಡಿದೆ. ದೇಣಿಗೆ ನೀಡಿರುವ ಕೆನಡಾ ಮೂಲದ ಕೆಲವು ಜನರ ಹೆಸರುಗಳು ಮತ್ತು ಅವರ ರಾಷ್ಟ್ರೀಯತೆಗಳನ್ನೂ ಮರೆಮಾಚಲಾಗಿದೆ' ಎಂದು ಇ.ಡಿಯು ಗೃಹ ಸಚಿವಾಲಯಕ್ಕೆ ಮಾಹಿತಿ ನೀಡಿದೆ.

ಎಎಪಿಗೆ ದೇಣಿಗೆ ನೀಡಿದ ವಿದೇಶಿಗರ ಹೆಸರುಗಳು, ಅವರ ರಾಷ್ಟ್ರೀಯತೆ, ಪಾಸ್‌ಪೋರ್ಟ್ ವಿವರ, ದೇಣಿಗೆ ನೀಡಿದ ಮೊತ್ತ, ದೇಣಿಗೆಯ ವಿಧಾನ ಮತ್ತು ಸ್ವೀಕರಿಸಿದ ಬ್ಯಾಂಕ್ ಖಾತೆ ಸಂಖ್ಯೆ, ವಿಳಾಸ, ಫೋನ್ ಸಂಖ್ಯೆಗಳು, ಇಮೇಲ್, ಸಮಯ ಮತ್ತು ದಿನಾಂಕದ ಬಗ್ಗೆ ಸಮಗ್ರ ವಿವರಗಳನ್ನು ತನಿಖಾ ಏಜೆನ್ಸಿಯು ಗೃಹ ಸಚಿವಾಲಯಕ್ಕೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

2015 ಮತ್ತು 2016ರ ನಡುವೆ ಅಮೆರಿಕ ಮತ್ತು ಕೆನಡಾದಲ್ಲಿ ತನ್ನ ಸಾಗರೋತ್ತರ ವಿಭಾಗದ ಸ್ವಯಂ ಸೇವಕರ ಮೂಲಕ ಎಎಪಿ ನಡೆಸಿದ ದೇಣಿಗೆ ಸಂಗ್ರಹದ ಕೆಲವು ಕಾರ್ಯಕ್ರಮಗಳಲ್ಲಿ ಎಫ್‌ಸಿಆರ್‌ಎ ಉಲ್ಲಂಘಿಸಿರುವುದು ವರದಿಯಾಗಿದೆ ಎಂದು ಇ.ಡಿಯು ಸಚಿವಾಲಯಕ್ಕೆ ತಿಳಿಸಿದೆ.

ಕೇಜ್ರಿವಾಲ್ ನ್ಯಾಯಾಂಗ ಬಂಧನ ವಿಸ್ತರಿಸಲು ಇ.ಡಿ ಕೋರಿಕೆ

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜೂನ್ 2ರಂದು ನ್ಯಾಯಾಲಯಕ್ಕೆ ಶರಣಾಗಲಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನ್ಯಾಯಾಂಗ ಬಂಧನ ಅವಧಿಯನ್ನು ವಿಸ್ತರಿಸುವಂತೆ ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ಕೋರ್ಟ್‌ಗೆ ಮನವಿ ಮಾಡಿದೆ.

ಇ.ಡಿ ಮತ್ತು ಸಿಬಿಐ ವಿಶೇಷ ನ್ಯಾಯಾಧೀಶೆ ಕಾವೇರಿ ಬವೇಜಾ ಅವರ ಮುಂದೆ ಇ.ಡಿಯು ಈ ಸಂಬಂಧ ಅರ್ಜಿ ಸಲ್ಲಿಸಿದೆ.

ಕೇಜ್ರಿವಾಲ್ ಅವರಿಗೆ ಈ ಮೊದಲು ವಿಧಿಸಿರುವ ನ್ಯಾಯಾಂಗ ಬಂಧನವು ಸೋಮವಾರಕ್ಕೆ ಕೊನೆಗೊಂಡಿದ್ದು, ನ್ಯಾಯಾಂಗ ಬಂಧನ ಅವಧಿಯನ್ನು ವಿಸ್ತರಿಸಬೇಕು ಎಂದು ಈ ಅರ್ಜಿಯಲ್ಲಿ ಮನವಿ ಮಾಡಲಾಗಿದೆ.


ಸುಪ್ರೀಂ ಕೋರ್ಟ್ ಆದೇಶದ ಅನುಸಾರ ಕೇಜ್ರಿವಾಲ್ ಅವರು ಜೂನ್ 1ರವರೆಗೆ ಮಧ್ಯಂತರ ಜಾಮೀನಿನ ಮೇಲೆ ಹೊರಗಿದ್ದು, ಜೂನ್ 2ರಂದು ಕೋರ್ಟ್‌ಗೆ ಶರಣಾಗಲಿದ್ದಾರೆ.

ಇ.ಡಿಯು ಈ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಲು ಕೇಜ್ರಿವಾಲ್ ಮತ್ತು ಸಹ ಆರೋಪಿ ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳಿವೆ ಎಂದೂ ನ್ಯಾಯಾಲಯಕ್ಕೆ ತಿಳಿಸಿದೆ.

ಕೇಂದ್ರ ತನಿಖಾ ಏಜೆನ್ಸಿಯು ಈ ಇಬ್ಬರು ರಾಜಕಾರಣಿಗಳ ವಿರುದ್ಧ ಸಲ್ಲಿಸಿರುವ ಪೂರಕ ಚಾರ್ಜ್ ಶೀಟ್‌ಗಳಲ್ಲಿ ಈ ಅಂಶಗಳನ್ನು ಸೇರಿಸಿದೆ. ಈ ಚಾರ್ಜ್‌ಶೀಟ್ ಬಗ್ಗೆ ಇ.ಡಿಯ ವಾದವನ್ನು ನ್ಯಾಯಾಧೀಶರು ಮಂಗಳವಾರ ಕೂಡ ಆಲಿಸಲಿದ್ದಾರೆ.

ಹಗರಣಕ್ಕೆ ಸಂಬಂಧಿಸಿದಂತೆ ಇ.ಡಿ ಮತ್ತು ಸಿಬಿಐ ದಾಖಲಿಸಿರುವ ಹಣ ಅಕ್ರಮ ವರ್ಗಾವಣೆ ಮತ್ತು ಭ್ರಷ್ಟಾಚಾರ ಪ್ರಕರಣಗಳಲ್ಲಿ ಕವಿತಾ ಅವರ ನ್ಯಾಯಾಂಗ ಬಂಧನವನ್ನು ನ್ಯಾಯಾಧೀಶರು ಜೂನ್ 2ರವರೆಗೆ ವಿಸ್ತರಿಸಿದರು.

ಮೆಟ್ರೊ ರೈಲುಗಳಲ್ಲಿ ಕೇಜ್ರಿವಾಲ್‌ಗೆ ಬೆದರಿಕೆ ಬರಹ



ದೆಹಲಿ ಮೆಟ್ರೊ ರೈಲುಗಳಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಬೆದರಿಕೆ ಹಾಕುವ ಬರಹ ಗೀಚಲಾಗಿದೆ. ಈ ಘಟನೆಯ ಹಿಂದೆ ಬಿಜೆಪಿ ಮತ್ತು ಪ್ರಧಾನ ಮಂತ್ರಿ ಕಚೇರಿಯ ಕೈವಾಡವಿದೆ ಎಂದು ಆಮ್ ಆದ್ಮಿ ಪಕ್ಷ ಸೋಮವಾರ ಆರೋಪಿಸಿದೆ.

'ಬಿಜೆಪಿಯು ದೆಹಲಿಯಲ್ಲಿ ಎಲ್ಲ ಏಳು ಲೋಕಸಭಾ ಸ್ಥಾನಗಳನ್ನು ಕಳೆದುಕೊಳ್ಳಲಿರುವ ಸಂಗತಿಯಿಂದ ಗಲಿಬಿಲಿಗೊಂಡಿದೆ. ಹಾಗಾಗಿಯೇ ಅದು ಕೇಜ್ರಿವಾಲ್ ಅವರನ್ನು ಗುರಿಯಾಗಿಸಿಕೊಂಡು ಇಂತಹ ವಿಭಿನ್ನ ಷಡ್ಯಂತ್ರಗಳನ್ನು ಹೆಣೆಯುತ್ತಿದೆ' ಎಂದು ಎಎಪಿ ನಾಯಕಿ, ದೆಹಲಿ ಸಚಿವೆ ಆತಿಶಿ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

'ರಾಜೀವ್ ಚೌಕ, ಪಟೇಲ್ ಚೌಕ ಮತ್ತು ಪಟೇಲ್ ನಗರ ಈ ಮೂರು ಮೆಟ್ರೊ ನಿಲ್ದಾಣಗಳ ಗೋಡೆಗಳ ಮೇಲೂ ವ್ಯಕ್ತಿಯೊಬ್ಬ ಗೀಚುಬರಹ ಬರೆದು ಕೇಜ್ರಿವಾಲ್‌ಗೆ ಬೆದರಿಕೆ ಹಾಕಿದ್ದಾನೆ. ಕೇಜ್ರಿವಾಲ್ ಅವರ ಪ್ರಾಣಕ್ಕೆ ಈಗ ಅಪಾಯವಿದೆ' ಎಂದು ಆತಿಶಿ ದೂರಿದ್ದಾರೆ.

'ಅವರು ಮಾರ್ಚ್ 21ರಂದು ಕೇಜ್ರಿವಾಲ್ ಅವರನ್ನು ಬಂಧಿಸಿದರು. ನಂತರ ತಿಹಾರ್ ಜೈಲಿನಲ್ಲಿ ಇರಿಸಿ, ಅವರಿಗೆ 15 ದಿನಗಳವರೆಗೆ ಇನ್ಸುಲಿನ್ ನೀಡುವುದನ್ನು ನಿಲ್ಲಿಸಿದರು. ಆಗ ನಾವು ನ್ಯಾಯಾಲಯವನ್ನು ಸಂಪರ್ಕಿಸಬೇಕಾಯಿತು. ಜೈಲಿನಿಂದ ಹೊರಗೆ ಬಂದ ಕೇಜ್ರಿವಾಲ್ ಅವರನ್ನು ಗುರಿಯಾಗಿಸಲು ಅವರು ಸ್ವಾತಿ ಮಲಿವಾಲ್ ಅವರನ್ನು ಬಳಸಿಕೊಂಡರು. ಆದರೆ, ಸ್ವಾತಿ ಮೇಲೆ ಹಲ್ಲೆ ನಡೆದ ಆರೋಪಗಳು ಸುಳ್ಳೆಂದು ಸಾಬೀತುಪಡಿಸುವ ವಿಡಿಯೊಗಳನ್ನು ಬಹಿರಂಗಪಡಿಸಿದ ನಂತರ ಅವರ ಈ ಷಡ್ಯಂತ್ರವು ಫಲಿಸಲಿಲ್ಲ' ಎಂದು ಆತಿಶಿ ಬಿಜೆಪಿ ವಿರುದ್ಧ ಕಿಡಿಕಾರಿದ್ದಾರೆ.

'ಗೀಚುಬರಹದ ಚಿತ್ರಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಲಾಗಿದೆ. ಈ ನಿಲ್ದಾಣಗಳು ಸಿ.ಸಿ.ಟಿ.ವಿ. ಕ್ಯಾಮೆರಾಗಳ ನಿಗಾದಲ್ಲಿವೆ. ದಿನದ 24 ತಾಸು ಮೆಟ್ರೊ ನಿಲ್ದಾಣಗಳಲ್ಲಿ ಭದ್ರತಾ ಸಿಬ್ಬಂದಿಯ ಕಾವಲಿರುತ್ತದೆ. ಆದಾಗ್ಯೂ ಪೊಲೀಸರು ಏಕೆ ಕ್ರಮ ತೆಗೆದುಕೊಂಡಿಲ್ಲ. ಸೈಬರ್ ಸೆಲ್ ಎಲ್ಲಿದೆ? ಇದೆಲ್ಲವೂ ಬಿಜೆಪಿಯ ಸಂಚಿನಿಂದ ನಡೆಯುತ್ತಿದೆ ಎನ್ನುವುದನ್ನು ತೋರಿಸುತ್ತದೆ' ಎಂದು ಅವರು ಆರೋಪಿಸಿದ್ದಾರೆ.

ತನಿಖೆ ಆರಂಭಿಸಿದ ದೆಹಲಿ ಪೊಲೀಸರು

ಅರವಿಂದ ಕೇಜ್ರಿವಾಲ್ ಅವರನ್ನು ಉದ್ದೇಶಿಸಿ ಮೆಟ್ರೊದ ಹಲವು ರೈಲುಗಳಲ್ಲಿ ಮತ್ತು ಮೂರು ನಿಲ್ದಾಣಗಳ ಗೋಡೆಗಳ ಮೇಲೆ ಬೆದರಿಕೆಯ ಸಂದೇಶ ಗೀಚಿರುವುದು ಕಂಡುಬಂದ ನಂತರ ಘಟನೆಯ ಬಗ್ಗೆ ದೆಹಲಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಈ ವಿಧ್ವಂಸ ಕೃತ್ಯದ ಬಗ್ಗೆ ಪೊಲೀಸರು ತನಿಖೆಯನ್ನು ಪ್ರಾರಂಭಿಸಿದ್ದಾರೆ. ಸಂಬಂಧಪಟ್ಟ ಮೆಟ್ರೊ ಪೊಲೀಸ್ ಠಾಣೆಯಲ್ಲಿ ಸೂಕ್ತ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೊಲೀಸ್ ಅಧಿಕಾರಿಯ ಪ್ರಕಾರ, ಮೆಟ್ರೊ ರೈಲುಗಳು ಮತ್ತು ನಿಲ್ದಾಣಗಳಲ್ಲಿ ಬರೆಯಲಾದ ಕೆಲವು ಸಂದೇಶಗಳ ಚಿತ್ರಗಳನ್ನು ಇನ್‌ಸ್ಟಾಗ್ರಾಮ್‌ನಲ್ಲಿ 'ankit.goel_91' ಖಾತೆ ಮೂಲಕ ಹಂಚಿಕೊಳ್ಳಲಾಗಿದೆ.

ಗೀಚು ಬರಹದ ಸಂದೇಶವೊಂದರಲ್ಲಿ 'ಸಿ.ಎಂ ದೆಹಲಿ ಬಿಟ್ಟು ತೊಲಗಿ, ₹45 ಕೋಟಿಯ ಸಿ.ಎಂ ನಿವಾಸ, ನಿಮ್ಮ ಉಚಿತ ಕೊಡುಗೆಗಳು ನಮಗೆ ಇನ್ನು ಬೇಕಿಲ್ಲ' ಎಂದಿದೆ.

ಸುದೀರ್ಘವಾದ ಮತ್ತೊಂದು ಗೀಚು ಬರಹದಲ್ಲಿ, 'ಜಲ ಮಂಡಳಿ ಪಾರದರ್ಶಕ ಲೆಕ್ಕಪರಿಶೋಧನೆ ಆಗಬೇಕು ಮತ್ತು ಇದರಲ್ಲಿ ಸಂಬಂಧಪಟ್ಟ ವ್ಯಕ್ತಿ/ನಾಯಕನನ್ನು ಹೊಣೆಯಾಗಿಸಬೇಕು. ಅಬಕಾರಿ ನೀತಿಯಲ್ಲಿ ನಿಮ್ಮ ಪಕ್ಷ ಹಾಗೂ ನಾಯಕರು ಪಡೆದ ಕಿಕ್‌ಬ್ಯಾಕ್ ಕುರಿತು ನಿಮ್ಮ ಅಂತಿಮ ಹೇಳಿಕೆ ಏನು? ರಾಘವ್ ಚಡ್ಡಾ ಅವರ ನೇತ್ರ ಚಿಕಿತ್ಸೆಗೆ ಏಮ್ಸ್ ಅಥವಾ ಸಫ್ದರ್‌ಜಂಗ್ ಅಥವಾ ಭಾರತದ ಯಾವುದಾದರೂ ಆಸ್ಪತ್ರೆ ನಿಮಗೆ ಕಾಣಿಸಲಿಲ್ಲವೇ? ಅಂತಿಮವಾಗಿ ಎಎಪಿಯಿಂದ ನಿರೀಕ್ಷಿಸುವುದು ಇವೆಲ್ಲವುಗಳಿಗೆ ಉತ್ತರ' ಎಂಬ ಅಂಶಗಳಿವೆ.

ಶಂಕಿತ ನಾಲ್ವರು ಐ.ಎಸ್ ಉಗ್ರರ ಬಂಧಿಸಿದ ಎಟಿಎಸ್

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಇಲ್ಲಿನ ಸರದಾರ್ ವಲ್ಲಭಭಾಯ್ ಪಟೇಲ್ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಾಲ್ವರು ಶಂಕಿತ ಐ.ಎಸ್ ಉಗ್ರರನ್ನು ಗುಜರಾತ್ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಸೋಮವಾರ ಬಂಧಿಸಿದೆ.

ಶಂಕಿತ ಉಗ್ರರೆಲ್ಲರೂ ಶ್ರೀಲಂಕಾ ಪ್ರಜೆಗಳು. ಇವರು 'ಮುಸ್ಲಿಮರ ವಿರುದ್ಧದ ದೌರ್ಜನ್ಯ'ಕ್ಕಾಗಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರನ್ನು ಗುರಿಯಾಗಿಸಿ, ಪಾಕಿಸ್ತಾನದ ಅಬು ಎಂಬುವನ ನೆರವಿನಿಂದ ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಲು ಬಯಸಿದ್ದರು ಎಂದು ಎಟಿಎಸ್ ಹೇಳಿದೆ.

ಬಂಧಿತರನ್ನು ಮೊಹಮ್ಮದ್ ನುಸ್ರತ್ ಗನಿ (33), ಮೊಹಮ್ಮದ್ ನಫ್ರಾನ್ (27), ಮೊಹಮ್ಮದ್ ಫಾರಿಸ್ (35) ಮತ್ತು ಮೊಹಮ್ಮದ್ ರಸ್ದಿನ್ (43) ಎಂದು ಗುರುತಿಸಲಾಗಿದೆ. ಶಂಕಿತರು ನಿಷೇಧಿತ ಐ.ಎಸ್ ಉಗ್ರ ಸಂಘಟನೆಯ ಸಕ್ರಿಯ ಸದಸ್ಯರು ಎಂದು ಗುಜರಾತ್ ಡಿಜಿಪಿ ವಿಕಾಸ್ ಸಹಾಯ್ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

'ನಾಲ್ವರು ಭಯೋತ್ಪಾದಕರು ಮೇ 18 ಅಥವಾ 19 ರಂದು ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಲು ರೈಲು ಅಥವಾ ವಿಮಾನದ ಮೂಲಕ ಅಹಮದಾಬಾದ್ ತಲುಪುವ ಸಾಧ್ಯತೆಯಿದೆ' ಎಂಬ ಗುಪ್ತಚರ ಮಾಹಿತಿ ಎಟಿಎಸ್‌ನ ಡಿಎಸ್‌ಪಿ ಹರ್ಷ ಉಪಾಧ್ಯಾಯ ಅವರಿಗೆ ಲಭಿಸಿತ್ತು. ಹೀಗಾಗಿ, ಎಟಿಎಸ್ ಅಧಿಕಾರಿಗಳ ತಂಡಗಳು ನಿಗಾ ಇರಿಸಿದ್ದವು. ಇವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಇವರಿಗೆ ಪಾಕಿಸ್ತಾನದ ಅಬು ಎಂಬಾತ ಭಯೋತ್ಪಾದನಾ ಚಟುವಟಿಕೆಗಳನ್ನು ನಡೆಸಲು ಶ್ರೀಲಂಕಾದ ಕರೆನ್ಸಿಯಲ್ಲಿ 4 ಲಕ್ಷ ರೂಪಾಯಿ ನೀಡಿರುವ ಮಾಹಿತಿ ಲಭಿಸಿತು. ಶಂಕಿತರ ಮೊಬೈಲ್ ಫೋನ್‌ಗಳಲ್ಲಿ ಅಹಮದಾಬಾದ್‌ನ ನಾನಾ ಚಿಲೋಡಾ ಪ್ರದೇಶದಲ್ಲಿ ಶಸ್ತ್ರಾಸ್ತ್ರಗಳನ್ನು ಬಚ್ಚಿಟ್ಟಿರುವ ಅನೇಕ ಚಿತ್ರಗಳು ಪತ್ತೆಯಾದವು ಎಂದು ಸಹಾಯ್ ಮಾಹಿತಿ ನೀಡಿದರು.

ಶಂಕಿತರ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ, ಶಸ್ತ್ರಾಸ್ತ್ರ ಕಾಯ್ದೆ ಮತ್ತು 120 ಬಿ (ಅಪರಾಧ ಪಿತೂರಿ), 121 (ಎ) (ಭಾರತ ಸರ್ಕಾರದ ವಿರುದ್ಧ ಸಮರ) ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ರಸ್ತೆ ಅಪಘಾತ: 18 ಮಂದಿ ಸಾವು

ಕವರ್ಧಾ/ಛತ್ತೀಸಗಢ (ಪಿಟಿಐ): ಛತ್ತೀಸಗಢದ ಕಬೀರ್‌ಧಾಮ್ ಜಿಲ್ಲೆಯಲ್ಲಿ ಸೋಮವಾರ ಮಧ್ಯಾಹ್ನ ಮಿನಿ ಗೂಡ್ಸ್ ವಾಹನವೊಂದು ಕಂದಕಕ್ಕೆ ಉರುಳಿದ್ದರಿಂದ 18 ಮಂದಿ ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ.

'ಕುಕ್ದೂರ್ ಪೊಲೀಸ್ ಠಾಣಾ ವ್ಯಾಪ್ತಿಯ ಬಹಪಾನಿ ಗ್ರಾಮದ ಬಳಿಯ ಬಂಜಾರಿ ಘಾಟ್‌ನಲ್ಲಿ ಈ ಅಪಘಾತ ಸಂಭವಿಸಿದೆ. ಈ ಅವಘಡದಲ್ಲಿ 12 ಮಹಿಳೆಯರು ಮತ್ತು ಒಬ್ಬ ಪುರುಷ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಒಂಬತ್ತು ಮಂದಿ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗಾಯಾಳುಗಳ ಪೈಕಿ ಐವರು ಮಹಿಳೆಯರು ಚಿಕಿತ್ಸೆಗೆ ಸ್ಪಂದಿಸದೆಯೇ ಮೃತಪಟ್ಟಿದ್ದಾರೆ' ಎಂದು ಕಬೀರ್‌ಧಾಮ್ ಪೊಲೀಸ್ ವರಿಷ್ಠಾಧಿಕಾರಿ ಅಭಿಷೇಕ್ ಪಲ್ಲವ ತಿಳಿಸಿದ್ದಾರೆ.

ಕೇರಳದಲ್ಲಿ ಭಾರಿ ಮಳೆ: ತುರ್ತು ಕೇಂದ್ರ ಆರಂಭ



ತಿರುವನಂತಪುರದಲ್ಲಿ ಮಳೆಯಿಂದಾಗಿ ರಸ್ತೆಯು ಜಲಾವೃತವಾಗಿತ್ತು –ಪಿಟಿಐ ಚಿತ್ರ

ತಿರುವನಂತಪುರ (ಪಿಟಿಐ): ಕೇರಳದಾದ್ಯಂತ ಮಳೆಯ ಆರ್ಭಟ ಮುಂದುವರಿದಿದ್ದು, ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ತುರ್ತು ಕಾರ್ಯಾಚರಣೆ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ರಾಜ್ಯ ಸರ್ಕಾರ ಸೋಮವಾರ ತಿಳಿಸಿದೆ.

ರಜಾದಿನಗಳನ್ನು ಕಳೆಯಲು ಬರುವ ಪ್ರವಾಸಿಗರು ಎಚ್ಚರವಹಿಸುವಂತೆ ವಿಶೇಷ ನಿರ್ದೇಶನ ನೀಡಲಾಗಿದೆ ಎಂದು ಸಚಿವ ಕೆ. ರಾಜನ್ ತಿಳಿಸಿದ್ದಾರೆ.

ಗುಡ್ಡಗಾಡು ಪ್ರದೇಶಗಳಲ್ಲಿ ಭೂಕುಸಿತದ ಸಾಧ್ಯತೆ ಇರುವುದರಿಂದ ಕಠಿಣ ಕ್ರಮಕೈಗೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ಭಾರಿ ಮಳೆಯಿಂದಾಗಿ ರಸ್ತೆಗಳೂ ಕುಸಿಯುವ ಸಾಧ್ಯತೆ ಇದೆ ಎಂದು ವಿಪತ್ತು ನಿರ್ವಹಣಾ ಅಧಿಕಾರಿಗಳು ಎಚ್ಚರಿಸಿದ್ದಾರೆ. ಇಂಥ ಪ್ರದೇಶಗಳಲ್ಲಿ ಸೂಚನಾ ಫಲಕಗಳನ್ನು ಹಾಕಲಾಗಿದೆ ಎಂದರು.

ಗುಡ್ಡಗಾಡು ಪ್ರದೇಶಗಳಲ್ಲಿ ರಾತ್ರಿ ಸಂಚಾರ ನಿಷೇಧಿಸಲು ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದರು.

ಮಳೆಯಿಂದಾಗಿ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಇದೆ. ಹೀಗಾಗಿ, ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿತಗಳಿಗೆ ಸೂಚಿಸಲಾಗಿದೆ ಎಂದು ಆರೋಗ್ಯ ಸಚಿವರು ಎಚ್ಚರಿಕೆ ನೀಡಿದ್ದಾರೆ.

ಕೋವ್ಯಾಕ್ಸಿನ್: ಬಿಎಚ್‌ಯು ವರದಿಗೆ ಐಸಿಎಂಆರ್ ಕಿಡಿ

ಇದು ಕಳಪೆ ಮಾದರಿಯ ಅಧ್ಯಯನ– ಐಸಿಎಂಆರ್ ಮುಖ್ಯಸ್ಥ ಡಾ. ರಾಜೀವ್ ಬಹಲ್ ಆಕ್ಷೇಪ

ನವದೆಹಲಿ (ಪಿಟಿಐ): ಭಾರತ್ ಬಯೋಟೆಕ್ ಸಂಸ್ಥೆ ಅಭಿವೃದ್ಧಿಪಡಿಸಿರುವ ಕೋವಿಡ್ ತಡೆಯುವ ಕೋವ್ಯಾಕ್ಸಿನ್ ಲಸಿಕೆ ಪಡೆದ ಮೂರನೇ ಒಂದರಷ್ಟು ಜನರಲ್ಲಿ ವರ್ಷದ ಬಳಿಕ ಅಡ್ಡಪರಿಣಾಮಗಳು ಕಂಡುಬಂದಿವೆ ಎಂದು ಬನಾರಸ್ ಹಿಂದೂ ವಿಶ್ವವಿದ್ಯಾಲಯದ (ಬಿಎಚ್‌ಯು) ಸಂಶೋಧಕರು ನಡೆಸಿರುವ ಅಧ್ಯಯನಕ್ಕೆ ಬಳಸಿರುವ ವಿಧಾನವು ಅತ್ಯಂತ ಕಳಪೆಯಾಗಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ತಿಳಿಸಿದೆ.

ಕೋವ್ಯಾಕ್ಸಿನ್ ಲಸಿಕೆ ಪಡೆದ ಶೇ 30ರಷ್ಟು ಜನರಲ್ಲಿ ವರ್ಷದ ಬಳಿಕ ಪಾರ್ಶ್ವವಾಯು, ನರ ಸಂಬಂಧಿತ ಸಮಸ್ಯೆ ಮತ್ತು ಉಸಿರಾಟದ ಅಸ್ವಸ್ಥತೆ ಸೇರಿ ಹಲವು ಅಡ್ಡ ಪರಿಣಾಮಗಳು ಕಂಡುಬಂದಿವೆ ಎಂದು ಅಧ್ಯಯನ ವರದಿ ಹೇಳಿತ್ತು. 2022ರ ಜನವರಿಯಿಂದ 2023ರ ಆಗಸ್ಟ್ ನಡುವಣ ಅವಧಿಯಲ್ಲಿ ಈ ಸಂಶೋಧನೆ ಕೈಗೊಂಡು ವರದಿ ಸಿದ್ಧಪಡಿಸಲಾಗಿದೆ ಎಂದು ಬಿಎಚ್‌ಯು ಹೇಳಿತ್ತು.



ಈ ಸಂಶೋಧನಾ ವರದಿಗೆ ಆಕ್ಷೇಪ ವ್ಯಕ್ತಪಡಿಸಿದ ಐಸಿಎಂಆರ್, ಅತ್ಯಂತ ಕಳಪೆ ವಿಧಾನದಲ್ಲಿ ಮಾದರಿಗಳನ್ನು ಸಂಗ್ರಹಿಸಲಾಗಿದೆ. ಈ ವರದಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದೆ. ಅಲ್ಲದೆ, ಈ ಅಧ್ಯಯನ ವರದಿಯಿಂದ ತಾನು ಅಂತರ ಕಾಯ್ದುಕೊಳ್ಳಲು ನಿರ್ಧರಿಸಿದೆ.

'ಕೋವ್ಯಾಕ್ಸಿನ್ ಲಸಿಕೆಯ ಅಡ್ಡಪರಿಣಾಮಗಳ ಬಗ್ಗೆ ಬಿಎಚ್‌ಯು ನಡೆಸಿದ ಅಧ್ಯಯನ ಸಮರ್ಪಕವಾಗಿಲ್ಲ. ಸಂಶೋಧನಾ ಲೇಖನ ತಪ್ಪು ದಾರಿಗೆ ಎಳೆಯುತ್ತದೆ. ಐಸಿಎಂಆರ್‌ಗೂ ಈ ಅಧ್ಯಯನಕ್ಕೂ ಸಂಬಂಧ ಇಲ್ಲ. ಬಿಎಚ್‌ಯುನ ಈ ಸಂಶೋಧನೆಗೆ ನಾವು ಯಾವುದೇ ಆರ್ಥಿಕ ಅಥವಾ ತಾಂತ್ರಿಕ ನೆರವು ಒದಗಿಸಿಲ್ಲ' ಎಂದು ಐಸಿಎಂಆರ್ ಮಹಾನಿರ್ದೇಶಕ (ಡಿಜಿ) ಡಾ. ರಾಜೀವ್ ಬಹಲ್ ಹೇಳಿದ್ದಾರೆ.

ಈ ವರದಿಯಲ್ಲಿ ಲಸಿಕೆ ಪಡೆಯದವರ ಹೋಲಿಕೆ ಮಾಡುವ ಪ್ರಯತ್ನ ನಡೆಸಿಲ್ಲ. ಎಲ್ಲ ಅಡ್ಡ ಪರಿಣಾಮಗಳನ್ನೂ ಕೋವ್ಯಾಕ್ಸಿನ್ ಲಸಿಕೆ ಜೊತೆ ನಂಟು ಬೆಸೆಯುವ ಅರ್ಥದಲ್ಲಿ ತಜ್ಞರು ಹೇಳಿಕೆ ನೀಡಿದ್ದಾರೆ. ಇದೊಂದು ಅತ್ಯಂತ ಕಳಪೆ ಮಾದರಿಯ ಅಧ್ಯಯನ ಎಂದು ಬಹಲ್ ಹೇಳಿದ್ದಾರೆ.

ಈ ಸಂಬಂಧ ಸಂಶೋಧಕರು ಮತ್ತು ಅಧ್ಯಯನ ಪ್ರಕಟಿಸಿರುವ ಜರ್ನಲ್‌ನ ಸಂಪಾದಕರಿಗೆ ಪತ್ರ ಬರೆದಿರುವ ಬಹಲ್, ಅಧ್ಯಯನದ ವರದಿಯಲ್ಲಿ ಐಸಿಎಂಆರ್ ಹೆಸರು ತೆಗೆದು ತಪ್ಪು ಸರಿಪಡಿಸುವಂತೆಯೂ ಸೂಚಿಸಿದ್ದಾರೆ. ಇದನ್ನು ಸರಿಪಡಿಸದಿದ್ದರೆ ಕಾನೂನು ಕ್ರಮಕ್ಕೆ ಮುಂದಾಗಬೇಕಾಗುತ್ತದೆ ಎಂದೂ ಎಚ್ಚರಿಸಿದ್ದಾರೆ.

ಕೋವ್ಯಾಕ್ಸಿನ್ ಪಡೆದವರಲ್ಲಿ ಅಧ್ಯಯನಕ್ಕೆ ಒಳಪಡಿಸಿದ 926 ಮಂದಿಯ ಪೈಕಿ ಶೇ. 30ರಷ್ಟು ಜನರಿಗೆ ಗಂಭೀರ ಅಡ್ಡ ಪರಿಣಾಮಗಳು ಎದುರಾಗಿವೆ. ಈ ಲಸಿಕೆ ಪಡೆದವರ ಪೈಕಿ ಶೇ. 1 ರಷ್ಟು ಮಂದಿ ಪಾರ್ಶ್ವವಾಯು ಹಾಗೂ ದೇಹದ ಆರೋಗ್ಯಕರ ಜೀವಪ್ರತಿಕಾಯಗಳನ್ನು ಕೊಲ್ಲುವ ರೋಗಗಳಿಗೆ (ಆಟೋ ಇಮ್ಯೂನ್ ಡಿಸೀಜಸ್) ಒಳಗಾಗುತ್ತಾರೆ. ಈ ರೋಗಕ್ಕೆ ತುತ್ತಾದವರಲ್ಲಿ ನರ ದೌರ್ಬಲ್ಯ ಎದುರಾಗಲಿದ್ದು, ಕೈ ಹಾಗೂ ಕಾಲುಗಳು ದುರ್ಬಲವಾಗುತ್ತವೆ ಎಂದು ವರದಿಯಲ್ಲಿ ವಿವರಿಸಲಾಗಿತ್ತು.

ಇದಲ್ಲದೆ, ಇವರ ಪೈಕಿ ಶೇ. 50 ರಷ್ಟು ಮಂದಿ ಉಸಿರಾಟದ ಸೋಂಕಿನಿಂದ ಬಳಲಿದ ಬಗ್ಗೆಯೂ ಮಾಹಿತಿ ನೀಡಿದ್ದರು. ಶೇ. 30 ರಷ್ಟು ಮಂದಿ ದೈಹಿಕ ಸಮಸ್ಯೆಗಳು ಎದುರಾಗುತ್ತಿವೆ ಎಂದಿದ್ದರು. ಚರ್ಮದ ಸಮಸ್ಯೆ, ನರ ದೌರ್ಬಲ್ಯ ಹಾಗೂ ಮೂಳೆ ಮತ್ತು ಮಾಂಸಖಂಡಗಳ ಸಮಸ್ಯೆಯಿಂದಲೂ ಹಲವರು ಬಾಧಿತರಾಗಿದ್ದಾರೆ ಎಂದು ವರದಿ ಹೇಳಿತ್ತು.

ಸಂಕ್ಷಿಪ್ತ ಸುದ್ದಿ

'ಅಸಾಂಜ್ ಗಡೀಪಾರು ಪ್ರಶ್ನಿಸಬಹುದು'

ಲಂಡನ್(ಎಪಿ): ಬೇಹುಗಾರಿಕೆ ಪ್ರಕರಣದಲ್ಲಿ ಅಮೆರಿಕಕ್ಕೆ ಗಡೀಪಾರು ಮಾಡುವುದನ್ನು ಪ್ರಶ್ನಿಸಿ ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸಾಂಜ್ ಅವರು ಮೇಲ್ಮನವಿ ಸಲ್ಲಿಸಬಹುದು ಎಂದು ಲಂಡನ್ ಕೋರ್ಟ್ ಸೋಮವಾರ ಹೇಳಿದೆ. ಇದರಿಂದಾಗಿ ದೀರ್ಘಕಾಲದ ಕಾನೂನು ಹೋರಾಟ ಮತ್ತಷ್ಟು ವಿಳಂಬವಾಗಲಿದೆ.

ಹೈಕೋರ್ಟ್ ನ್ಯಾಯಮೂರ್ತಿಗಳಾದ ವಿಕ್ಟೋರಿಯಾ ಶಾರ್ಪ್ ಮತ್ತು ಜೆರೆಮಿ ಜಾನ್ಸನ್ ಅವರು, 'ಬ್ರಿಟನ್ ಸರ್ಕಾರದ ಗಡೀಪಾರು ಆದೇಶವನ್ನು ಪ್ರಶ್ನಿಸಿ ಅಸಾಂಜ್ ಅರ್ಜಿ ಸಲ್ಲಿಸಬಹುದು' ಎಂದರು.

ಅಸಾಂಜ್ ವಿರುದ್ಧ 18 ಬೇಹುಗಾರಿಕೆ ಪ್ರಕರಣಗಳು ದಾಖಲಾಗಿವೆ.

'ಚೀನಾ ಬೆದರಿಕೆ ನಿಲ್ಲಿಸಲಿ'

ತೈಪೆ (ರಾಯಿಟರ್ಸ್): ತೈವಾನ್ ಮೇಲೆ ಚೀನಾವು ತನ್ನ ಮಿಲಿಟರಿ ಮತ್ತು ರಾಜಕೀಯ ಬೆದರಿಕೆ ಹಾಕುವುದನ್ನು ನಿಲ್ಲಿಸಬೇಕು ಎಂದು ತೈವಾನ್ ಅಧ್ಯಕ್ಷ ಲಾಯ್ ಚಿಂಗ್– ಟೆ ಹೇಳಿದರು.

ತೈಪೆಯಲ್ಲಿ ಸೋಮವಾರ ಅಧ್ಯಕ್ಷೀಯ ಕಚೇರಿ ಹೊರಗೆ ಜನರನ್ನು ಉದ್ದೇಶಿಸಿ ಮಾತನಾಡಿದ ಅವರು 'ಶಾಂತಿಯೊಂದೇ ನಮ್ಮ ಆಯ್ಕೆಯಾಗಿದೆ. ತೈವಾನ್ ಜನರ ಆಯ್ಕೆಯನ್ನು ಚೀನಾ ಗೌರವಿಸಬೇಕು' ಎಂದರು.

ಇದಕ್ಕೆ ಪ್ರತಿಕ್ರಿಯಿಸಿರುವ ಚೀನಾ 'ತೈವಾನ್ ದ್ವೀಪದಾದ್ಯಂತ ಶಾಂತಿ ಮತ್ತು ಸ್ಥಿರತೆಯನ್ನು ಹಾಳುಮಾಡಲು ಪ್ರಯತ್ನಿಸುತ್ತಿರುವ ಅಪಾಯಕಾರಿ ಸೂಚನೆಗಳನ್ನು ಲಾಯ್ ನೀಡುತ್ತಿದ್ದಾರೆ' ಎಂದಿದೆ.

ಲಾಯ್ ತಮ್ಮ ಭಾಷಣದಲ್ಲಿ 'ಮಿಲಿಟರಿ ಮತ್ತು ರಾಜಕೀಯವಾಗಿ ತೈವಾನ್ ಅನ್ನು ಚೀನಾ ಬೆದರಿಸಬಾರದು. ಶಾಂತಿ ಮತ್ತು ಸ್ಥಿರತೆ ಕಾಪಾಡಿಕೊಳ್ಳಲು ಶ್ರಮಿಸುತ್ತೇನೆ' ಎಂದಿದ್ದರು.

ಚೀನಾ: ಶಾಲೆಯಲ್ಲಿ ಚಾಕುವಿನಿಂದ ಇರಿದು ಇಬ್ಬರ ಹತ್ಯೆ

ಬೀಜಿಂಗ್ (ಪಿಟಿಐ): ಚೀನಾದಲ್ಲಿ ಮಹಿಳೆಯೊಬ್ಬರು ಶಾಲೆಗೆ ನುಗ್ಗಿ ಮನಬಂದಂತೆ ಚಾಕುವಿನಿಂದ ಇರಿದ ಪರಿಣಾಮ ಇಬ್ಬರು ಮೃತಪಟ್ಟಿದ್ದು, 10 ಮಂದಿ ಗಾಯಗೊಂಡಿದ್ದಾರೆ.


ಪೂರ್ವ ಚೀನಾದ ಜಿಯಾಂಗ್‌ಕ್ಸಿ ಪ್ರದೇಶದ ಗ್ಯುಕ್ಸಿ ನಗರದಲ್ಲಿ 45 ವರ್ಷದ ಮಹಿಳೆಯು ಪ್ರಾಥಮಿಕ ಶಾಲೆಯೊಂದರಲ್ಲಿ ಈ ಕೃತ್ಯ ಎಸಗಿದ್ದು ಆಕೆಯನ್ನು ಪೊಲೀಸರು ಬಂಧಿಸಿದ್ದಾರೆ.

ಇಮ್ರಾನ್ ಖಾನ್ ಖುಲಾಸೆ

ಇಸ್ಲಾಮಾಬಾದ್ (ಪಿಟಿಐ): ಎರಡು ಧ್ವಂಸ ಪ್ರಕರಣಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿದ್ದ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಪಾಕಿಸ್ತಾನ್ ತೆಹ್ರೀಕ್–ಎ–ಇನ್ಸಾಫ್ ಪಕ್ಷದ (ಪಿಟಿಐ) ಇತರ ನಾಯಕರನ್ನು ಇಲ್ಲಿನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಸೋಮವಾರ ಖುಲಾಸೆಗೊಳಿಸಿದೆ.

2022ರ ಮಾರ್ಚ್‌ನಲ್ಲಿ ನಡೆದ ರ‍್ಯಾಲಿ ಸಂದರ್ಭದಲ್ಲಿ ನಡೆದ ಎರಡು ಧ್ವಂಸ ಪ್ರಕರಣಗಳ ವಿಚಾರಣೆ ನಡೆಸಿದ ಕೋರ್ಟ್ ಈ ಆದೇಶ ಪ್ರಕಟಿಸಿತು.

ಮತ್ತೆ 'ವಿಶ್ವಾಸ' ಗೆದ್ದ ಪ್ರಚಂಡ



ಪುಷ್ಪ ಕಮಲ್ ದಹಲ್

ಕಠ್ಮಂಡು (ಪಿಟಿಐ): ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಲ್ 'ಪ್ರಚಂಡ' ಅವರು ಸೋಮವಾರ ವಿಶ್ವಾಸಮತ ಸಾಬೀತುಪಡಿಸುವಲ್ಲಿ ಯಶಸ್ವಿಯಾದರು. ಇದರೊಂದಿಗೆ ಅಧಿಕಾರ ವಹಿಸಿಕೊಂಡ 18 ತಿಂಗಳಲ್ಲಿ ನಾಲ್ಕು ಬಾರಿ ವಿಶ್ವಾಸಮತ ಪರೀಕ್ಷೆ ಎದುರಿಸಿದಂತಾಯಿತು.

ಸಂಸತ್ತಿನ 275 ಮಂದಿ ಸದಸ್ಯರ ಪೈಕಿ 157 ಮಂದಿ ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳದ ನಾಯಕ ಪ್ರಚಂಡ ಅವರ ನೇತೃತ್ವದ ಸರ್ಕಾರದ ಪರವಾಗಿ ಮತ ಚಲಾಯಿಸಿದರು.

ಪ್ರಮುಖ ವಿರೋಧ ಪಕ್ಷ ನೇಪಾಳಿ ಕಾಂಗ್ರೆಸ್ ಮತದಾನವನ್ನು ಬಹಿಷ್ಕರಿಸಿ, ಉಪಪ್ರಧಾನಿ ಮತ್ತು ಗೃಹ ಸಚಿವ ರವಿ ಲಾಮಿಚ್ಛಾನೆ ವಿರುದ್ಧ ಘೋಷಣೆ ಕೂಗಿತು. ಇದರಿಂದ ಕಲಾಪವು ವಿಳಂಬವಾಯಿತು. ಸ್ಪೀಕರ್ ದೇವ್ ರಾಜ್ ಘಿಮಿರೆ, ಪ್ರಚಂಡ ಅವರು ವಿಶ್ವಾಸ ಮತ ಗೆದ್ದಿರುವುದಾಗಿ ಘೋಷಿಸಿದರು.

ಜನತಾ ಸಮಾಜವಾದಿ ಪಕ್ಷವು ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂಪಡೆದ ಕಾರಣ ಪ್ರಚಂಡ ಅವರಿಗೆ ವಿಶ್ವಾಸಮತ ಸಾಬೀತು ಮಾಡುವ ಸವಾಲು ಎದುರಾಗಿತ್ತು. ಪ್ರಚಂಡ ಅವರ ಸರ್ಕಾರಕ್ಕೆ ಕನಿಷ್ಠ 138 ಸದಸ್ಯರ ಬೆಂಬಲ ಅಗತ್ಯವಿತ್ತು.

ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಸಾವು

ಒಂದನೇ ಪುಟದಿಂದ...

ಮಧ್ಯಪ್ರಾಚ್ಯದಲ್ಲಿನ ಅಸ್ಥಿರತೆಯ ನಡುವೆ ಈ ಹೆಲಿಕಾಪ್ಟರ್ ದುರಂತ ನಡೆದಿದೆ. ರೈಸಿ ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇರಾನ್ ದೇಶವು, ರಷ್ಯಾಕ್ಕೆ ಉಕ್ರೇನ್ ಯುದ್ಧದಲ್ಲಿ ಬಳಕೆ ಮಾಡಲು ಬಾಂಬ್‌ಗಳನ್ನು ಹೊತ್ತೊಯ್ಯುವ ಡ್ರೋನ್‌ಗಳನ್ನು ಪೂರೈಸಿತ್ತು.

ಹೆಲಿಕಾಪ್ಟರ್ ಪತನದ ಕೆಲವು ಗಂಟೆಗಳ ನಂತರ ಘೋಷಣೆಯೊಂದನ್ನು ಹೊರಡಿಸಿದ ಪರಮೋಚ್ಚ ನಾಯಕ ಖಮೇನಿ, ದೇಶದ ಉಪಾಧ್ಯಕ್ಷ ಮೊಹಮ್ಮದ್ ಮೊಖಬರ್ ಅವರು ಹೊಸದಾಗಿ ಚುನಾವಣೆ ನಡೆಯುವವರೆಗೆ ಹಂಗಾಮಿ ಅಧ್ಯಕ್ಷರಾಗಿ ಕೆಲಸ ಮಾಡಲಿದ್ದಾರೆ ಎಂದು ಹೇಳಿದ್ದಾರೆ. ಮೊಖಬರ್ ಅವರು ಕೂಡ ಖಮೇನಿ ಅವರಿಗೆ ಆಪ್ತರು ಎನ್ನಲಾಗಿದೆ. ಇರಾನ್ ಸಂವಿಧಾನದ ಪ್ರಕಾರ, ಹೊಸ ಅಧ್ಯಕ್ಷರ ಆಯ್ಕೆಗೆ 50 ದಿನಗಳಲ್ಲಿ ಚುನಾವಣೆ ನಡೆಯಬೇಕಿದೆ.

ಹೆಲಿಕಾಪ್ಟರ್ ಪತನಕ್ಕೆ ಕಾರಣ ಏನು ಎಂಬುದನ್ನು ಸರ್ಕಾರಿ ಮಾಧ್ಯಮವು ತಿಳಿಸಿಲ್ಲ. ಹೆಲಿಕಾಪ್ಟರ್‌ಗೆ ಬೆಂಕಿ ಹೊತ್ತಿಕೊಂಡಿದ್ದ ದೃಶ್ಯಾವಳಿಯನ್ನು ಟರ್ಕಿ ಬಿಡುಗಡೆ ಮಾಡಿದೆ. ಬೆಂಕಿ ಹೊತ್ತಿಕೊಂಡ ಸ್ಥಳವು ಅಜರ್‌ಬೈಜಾನ್–ಇರಾನ್ ಗಡಿಯಿಂದ 20 ಕಿ.ಮೀ. ದಕ್ಷಿಣದಲ್ಲಿ, ಕಡಿದಾದ ಪರ್ವತವೊಂದರ ಪಕ್ಕದಲ್ಲಿ ಇದೆ.

ಘಟನೆಯಲ್ಲಿ ಯಾರೊಬ್ಬರೂ ಬದುಕಿ ಉಳಿದಿಲ್ಲ ಎಂದು ಇರಾನ್ ಹೇಳಿದೆ. ಅಧ್ಯಕ್ಷರ ಸಾವಿನ ಕಾರಣಕ್ಕೆ ನೆರೆಯ ಪಾಕಿಸ್ತಾನವು ಒಂದು ದಿನದ ಶೋಕ ಘೋಷಿಸಿದೆ.

ಇರಾನ್‌ನಲ್ಲಿ ಐದು ದಿನಗಳ ಕಾಲ ಶೋಕ ಘೋಷಿಸಲಾಗಿದೆ ಎಂದು ಖಮೇನಿ ಅವರ ಸಂದೇಶದಲ್ಲಿ ಹೇಳಲಾಗಿದೆ. ರೈಸಿ ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇರಾನ್ ದೇಶವು, ಇಸ್ರೇಲ್ ಮೇಲೆ ಭಾರಿ ಪ್ರಮಾಣದ ವಾಯು ದಾಳಿ ನಡೆಸಿತ್ತು. ರೈಸಿ ಅವರು 2021ರಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಇರಾನ್ ಒಳಗೆ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಬಿಕ್ಕಟ್ಟುಗಳ ಕಾರಣಕ್ಕೆ ಭಿನ್ನಾಭಿಪ್ರಾಯ ಹೆಚ್ಚುತ್ತಿರುವ ಹೊತ್ತಿನಲ್ಲಿ ಈ ದುರಂತ ನಡೆದಿದೆ. ಇರಾನ್ ಜನರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿ ಹಮಾಸ್ ಬಂಡುಕೋರ ಸಂಘಟನೆಯು ಶೋಕ ಸಂದೇಶ ರವಾನಿಸಿದೆ. ಹಮಾಸ್‌ಗೆ ಇರಾನ್‌ನ ಬೆಂಬಲ ಇದೆ.

ರೈಸಿ ಅವರು ಬದುಕಿ ಬರಲಿ ಎಂದು ಪ್ರಾರ್ಥಿಸಿ ಇರಾನ್ ದೇಶದಾದ್ಯಂತ ಪ್ರಾರ್ಥನೆಗಳು ನಡೆದಿದ್ದವು ಎಂದು ಅಲ್ಲಿನ ರಾಷ್ಟ್ರೀಯ ದೂರದರ್ಶನ ವಾಹಿನಿಯು ವರದಿ ಪ್ರಸಾರ ಮಾಡಿತ್ತು.

ಮುಖ್ಯಾಂಶಗಳು

- ಹೆಲಿಕಾಪ್ಟರ್ ಪತನದ ಹಿಂದೆ ತಮ್ಮ ಕೈವಾಡ ಇಲ್ಲ: ಇಸ್ರೇಲ್ ಸ್ಪಷ್ಟನೆ
- ಇಬ್ರಾಹಿಂ ರೈಸಿ ಸಾವಿಗೆ ಹೂಥಿ ಹಾಗೂ ಹಿಜ್ಬುಲ್ಲಾ ಬಂಡುಕೋರರ ಶೋಕ
- ಶೋಕದ ಸಮಯದಲ್ಲಿ ಇರಾನ್ ಜೊತೆ ಇರುತ್ತೇವೆ: ಪ್ರಧಾನಿ ನರೇಂದ್ರ ಮೋದಿ



ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಅವರು ಇದ್ದ ಹೆಲಿಕಾಪ್ಟರ್ ಪತನಗೊಂಡ ಸ್ಥಳದಲ್ಲಿ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಸಿಬ್ಬಂದಿ –ಎಎಫ್‌ಪಿ ಚಿತ್ರ

ಭಾರತದಲ್ಲಿ ಇಂದು ಶೋಕಾಚರಣೆ

ನವದೆಹಲಿ (ಪಿಟಿಐ): ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ನಿಧನರಾಗಿರುವ ಕಾರಣ ಮಂಗಳವಾರ ಭಾರತದಲ್ಲಿ ಶೋಕಾಚರಣೆ ಘೋಷಿಸಲಾಗಿದೆ.

ರಾಷ್ಟ್ರಧ್ವಜವನ್ನು ಅರ್ಧಕ್ಕೆ ಇಳಿಸಲು ಮತ್ತು ಯಾವುದೇ ಅಧಿಕೃತ ಕಾರ್ಯಕ್ರಮಗಳನ್ನು ನಡೆಸದೆ ಇರಲು ತೀರ್ಮಾನಿಸಲಾಗಿದೆ ಎಂದು ಗೃಹ ಇಲಾಖೆಯ ವಕ್ತಾರರು ತಿಳಿಸಿದ್ದಾರೆ.

ಪೋಶೆ ಅಪಘಾತದಲ್ಲಿ ಇಬ್ಬರ ಸಾವು: ಬಾಲಕನ ತಂದೆ ವಿರುದ್ಧ ಪ್ರಕರಣ ದಾಖಲು

ಬಾಲಕನಿಗೆ ಪ್ರಬಂಧ ಬರೆಯಲು ಆದೇಶ

ಪುಣೆ (ಪಿಟಿಐ): ವಿಲಾಸಿ ಕಾರು 'ಪೋಶೆ' ಚಾಲನೆ ಮಾಡಿ ಇಬ್ಬರ ಸಾವಿಗೆ ಕಾರಣವಾಗಿದ್ದ ಬಾಲಕನಿಗೆ, ರಸ್ತೆ ಸುರಕ್ಷತೆ ಮತ್ತು ಪರಿಹಾರ ಕುರಿತು 300 ಪದಗಳ ಪ್ರಬಂಧ ಬರೆಯಬೇಕು ಎಂದು ಆದೇಶಿಸಿ, ಬಾಲನ್ಯಾಯ ಮಂಡಳಿಯು ಜಾಮೀನು ನೀಡಿದೆ.

ಈ ಪ್ರಕರಣದಲ್ಲಿ ಬಾಲಕನ ತಂದೆ, ರಿಯಲ್ ಎಸ್ಟೇಟ್ ಉದ್ಯಮಿ ವಿರುದ್ಧವು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಬಾಲಕನನ್ನು ವಯಸ್ಕನಾಗಿಯೇ ಪರಿಗಣಿಸಿ ವಿಚಾರಣೆಗೆ ಒಳಪಡಿಸಲು ಕೋರ್ಟ್‌ನ ಅನುಮತಿ ಕೋರುವುದಾಗಿ ತಿಳಿಸಿದ್ದಾರೆ.

ಭಾನುವಾರ ಇಲ್ಲಿನ ಕಲ್ಯಾಣಿ ನಗರದಲ್ಲಿ ಪೋಶೆ ಕಾರನ್ನು 17 ವರ್ಷ ವಯಸ್ಸಿನ ಬಾಲಕ ಚಾಲನೆ ಮಾಡುತ್ತಿದ್ದ. ಒಂದು ಹಂತದಲ್ಲಿ ಚಾಲಕನ ನಿಯಂತ್ರಣದ ತಪ್ಪಿದ ಕಾರು ಡಿಕ್ಕಿಯಾಗಿ ಬೈಕ್‌ನಲ್ಲಿ ತೆರಳುತ್ತಿದ್ದ ಇಬ್ಬರು ಮೃತಪಟ್ಟಿದ್ದರು.

ಪೊಲೀಸರ ಪ್ರಕಾರ, ಅಪಘಾತ ನಡೆದ ಸಂದರ್ಭದಲ್ಲಿ ಬಾಲಕನು ಮದ್ಯ ಸೇವಿಸಿದ್ದ. ನ್ಯಾಯಮಂಡಳಿಯು ಬಾಲಕನನ್ನು ಮದ್ಯವ್ಯಸನ ನಿರ್ಮೂಲನಾ ಕೇಂದ್ರಕ್ಕೆ ಸಮಾಲೋಚನೆಗಾಗಿ ಕಳುಹಿಸಬೇಕು ಎಂದು ಸೂಚಿಸಿತು.

ಅಪಘಾತದ ಹಿಂದೆಯೇ ಪೊಲೀಸರು ಬಾಲಕನನ್ನು ಬಾಲ ನ್ಯಾಯಮಂಡಳಿ ಎದುರು ಹಾಜರುಪಡಿಸಿದ್ದರು. ಅಲ್ಲಿ ಗಂಟೆಯೊಳಗೆ ಜಾಮೀನು ದೊರೆತಿತ್ತು. ಜಾಮೀನು ನೀಡಿದ ನ್ಯಾಯಮಂಡಳಿಯು, 'ಕಾನೂನು ಸಂಘರ್ಷವನ್ನು ಎದುರಿಸುತ್ತಿರುವ ಬಾಲಕನು ಪ್ರಾದೇಶಿಕ ಸಾರಿಗೆ ಕಚೇರಿಗೆ ಭೇಟಿ ನೀಡಿ ರಸ್ತೆ ಸಂಚಾರ ನಿಯಮಗಳನ್ನು ಅರಿಯಬೇಕು ಹಾಗೂ 'ರಸ್ತೆ ಸುರಕ್ಷತೆ ಹಾಗೂ ಅದರ ಪರಿಹಾರೋಪಾಯಗಳು' ಕುರಿತು 15 ದಿನದಲ್ಲಿ 300 ಪದಗಳ ಪ್ರಬಂಧ ಸಲ್ಲಿಸಬೇಕು' ಎಂದು ಆದೇಶಿಸಿತ್ತು.

ಈ ಮಧ್ಯೆ ಪೊಲೀಸರು ಬಾಲಕನರ ವಿರುದ್ಧ ಐಪಿಸಿ ಸೆಕ್ಷನ್ 304 ಹಾಗೂ ಮೋಟಾರು ವಾಹನ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿದ್ದಾರೆ.

ಸ್ನೇಹಿತರ ಗುಂಪೊಂದು ಬೈಕ್‌ನಲ್ಲಿ ಕಲ್ಯಾಣಿ ನಗರದಲ್ಲಿ ತೆರಳುವಾಗ ನಸುಕಿನ ಜಾವ 3.15ಕ್ಕೆ ಅಪಘಾತ ಸಂಭವಿಸಿತ್ತು. ಪೋಶೆ ಕಾರು ಡಿಕ್ಕಿ ರಭಸಕ್ಕೆ 24 ವರ್ಷ ವಯಸ್ಸಿನ ಅನಿಸ್ ಅವಾಧಿಯ, ಅಶ್ವಿನಿ ಕಾಸ್ಟಾ ಮೃತಪಟ್ಟಿದ್ದರು. ಇಬ್ಬರೂ ಮಧ್ಯಪ್ರದೇಶದವರು.

ಅಪಘಾತದ ಗಂಭೀರತೆ ಹಿನ್ನೆಲೆಯಲ್ಲಿ ಬಾಲಕನನ್ನು ವಯಸ್ಕನೆಂದೇ ಪರಿಗಣಿಸಿ ವಿಚಾರಣೆಗೆ ಒಳಪಡಿಸಲು ಅನುಮತಿ ಕೋರಿ ಭಾನುವಾರವೇ ಮನವಿ ಸಲ್ಲಿಸಿದ್ದೆವು. ಆದರೆ, ಅದು ತಿರಸ್ಕೃತಗೊಂಡಿತು. ಈಗ ಸೆಷನ್ಸ್ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಿದ್ದೇವೆ ಎಂದು ಪುಣೆ ಪೊಲೀಸ್ ಕಮಿಷನರ್ ಅಮಿತೇಶ್ ಕುಮಾರ್ ಅವರು ತಿಳಿಸಿದರು.

ಬಾಲಕನ ರಕ್ತ ಪರೀಕ್ಷೆಯ ವರದಿ ಇನ್ನೂ ಬರಬೇಕಿದೆ. ಸ್ಥಳದ ಬಳಿ ಪಡೆಯಲಾದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳ ಪ್ರಕಾರ, ಅಪಘಾತದ ಸಂದರ್ಭದಲ್ಲಿ ಬಾಲಕ ಮದ್ಯ ಸೇವಿಸಿದ್ದ ಎಂಬುದು ಸ್ಪಷ್ಟವಾಗಿತ್ತು. ಪೂರಕವಾದ ಎಲ್ಲ ಅಂಶಗಳನ್ನು ನಾವು ಕೋರ್ಟ್‌ಗೆ ಹಾಜರುಪಡಿಸಲಿದ್ದೇವೆ ಎಂದು ಕಮಿಷನರ್ ತಿಳಿಸಿದರು.

ಬಾಲನ್ಯಾಯ ಕಾಯ್ದೆಯ ಸೆಕ್ಷನ್ 75 ಮತ್ತು 77ರ ಅನ್ವಯ ಬಾಲಕನ ತಂದೆಯ ವಿರುದ್ಧ ಮೊಕದ್ದಮೆ ದಾಖಲು ಮಾಡಿಕೊಂಡಿದ್ದು, ಈ ಪ್ರಕರಣದ ತನಿಖೆಯನ್ನು ಅಪರಾಧ ವಿಭಾಗಕ್ಕೆ ವರ್ಗಾಹಿಸಲಾಗಿದೆ ಎಂದು ತಿಳಿಸಿದರು.

ರೈಸಿ ಸಾವು: ಅನಿಶ್ಚಿತತೆಯ ಹೊಸ ಅಧ್ಯಾಯ

ಇರಾನ್ ದೇಶವು ತನ್ನ ಪರಮೋಚ್ಚ ನಾಯಕನ ಸ್ಥಾನಕ್ಕೆ ಉತ್ತರಾಧಿಕಾರಿಯನ್ನು ಅರಸುತ್ತಿರುವ ಹೊತ್ತಿನಲ್ಲಿ ಎದುರಾಗಿರುವ ಅಧ್ಯಕ್ಷ ಇಬ್ರಾಹಿಂ ರೈಸಿ ಅವರ ಹಠಾತ್ ಸಾವು ಅಸ್ಥಿರತೆಯ ಹೊಸದೊಂದು ಅಧ್ಯಾಯಕ್ಕೆ ನಾಂದಿ ಹೇಳಿದೆ. 63 ವರ್ಷ ವಯಸ್ಸಿನ ರೈಸಿ ಅವರು ಇರಾನ್‌ನ ಪರಮೋಚ್ಚ ನಾಯಕನ ಸ್ಥಾನಕ್ಕೆ ಪ್ರಮುಖ ಅಭ್ಯರ್ಥಿ ಎಂದು ಪರಿಗಣಿತವಾಗಿದ್ದರು.

ರೈಸಿ ಅವರ ಸಾವಿಗೆ ಮೊದಲೇ ಇರಾನ್‌ನ ಆಡಳಿತ ವ್ಯವಸ್ಥೆಯು ಆಂತರಿಕ ರಾಜಕೀಯ, ಧಾರ್ಮಿಕ ಸಂಘರ್ಷಗಳಲ್ಲಿ ಮುಳುಗಿತ್ತು. ಆಂತರಿಕ ಪ್ರತಿಭಟನೆಗಳು, ದುರ್ಬಲ ಅರ್ಥವ್ಯವಸ್ಥೆ, ಇಸ್ರೇಲ್ ಜೊತೆಗಿನ ಸಂಘರ್ಷದ ಕಾರಣದಿಂದಾಗಿ ಅಸ್ಥಿರತೆ ಮನೆಮಾಡುವ ಭೀತಿ ಇದೆ, ಹೀಗಾಗಿ ಇರಾನ್‌ನ ಆಂತರಿಕ ಹಾಗೂ ವಿದೇಶಿ ನೀತಿಗಳಲ್ಲಿ ದೊಡ್ಡ ಬದಲಾವಣೆಗಳು ಆಗುವ ಸಾಧ್ಯತೆ ಇಲ್ಲ ಎಂದು ತಜ್ಞರು ಅಂದಾಜಿಸಿದ್ದಾರೆ. ದೇಶ ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬುದನ್ನು ಖಮೇನಿ ನಿರ್ಧರಿಸಿದ್ದಾರೆ, ಹೊಸ ಅಧ್ಯಕ್ಷರು ಅದರಲ್ಲಿ ಹೆಚ್ಚಿನ ಬದಲಾವಣೆ ತರಲಿಕ್ಕಿಲ್ಲ ಎಂದು ಅವರು ಅಂದಾಜು ಮಾಡಿದ್ದಾರೆ.

ಪ್ರಾದೇಶಿಕವಾಗಿ ಕೆಲವು ಬಂಡುಕೋರ ಸಂಘಟನೆಗಳಿಗೆ ಬೆಂಬಲ ಒದಗಿಸುವುದು, ಅಣ್ವಸ್ತ್ರಗಳಿಗೆ ಬಿಡಿಭಾಗ ಅಭಿವೃದ್ಧಿಪಡಿಸುವುದು ಮುಂತಾದ ವಿಚಾರಗಳಲ್ಲಿ ನೀತಿಗಳು ಬದಲಾವಣೆ ಕಾಣುವುದಿಲ್ಲ ಎಂದು ಇಂಟರ್‌ನ್ಯಾಷನಲ್ ಕ್ರೈಸಿಸ್ ಗ್ರೂಪ್‌ನ ಇರಾನ್ ನಿರ್ದೇಶಕ ಅಲಿ ವಾಯೆಜ್ ಹೇಳಿದ್ದಾರೆ.

ಅಧ್ಯಕ್ಷರಾಗಿ ರೈಸಿ ಅವರು ತೋರಿದ ಸಾಧನೆಯ ಕುರಿತ ಟೀಕೆಗಳು, ಖಮೇನಿ ನಂತರ ಪರಮೋಚ್ಚ ಸ್ಥಾನಕ್ಕೆ ಅವರು ಸೂಕ್ತ ವ್ಯಕ್ತಿಯೇ ಎಂಬ ಪ್ರಶ್ನೆಯನ್ನು ಮೂಡಿಸಿತ್ತು ಎಂದು ತಜ್ಞರು ಹೇಳಿದ್ದಾರೆ.

(ನ್ಯೂಯಾರ್ಕ್ ಟೈಮ್ಸ್)

ಯಾರು ಈ ಮೊಖಬರ್?

ದುಬೈ (ಎಪಿ): ಇರಾನ್‌ನ ಹಂಗಾಮಿ ಅಧ್ಯಕ್ಷ ಆಗಿ ನೇಮಕಗೊಂಡ ಉಪಾಧ್ಯಕ್ಷ ಮೊಹಮ್ಮದ್ ಮೊಖಬರ್ ಅವರು ಇರಾನ್‌ನ ಆಡಳಿತ ವ್ಯವಸ್ಥೆಯಲ್ಲಿ ಹೆಚ್ಚಾಗಿ ತೆರೆಯ ಮರೆಯಲ್ಲೇ ಇದ್ದವರು.

ಮೊಖಬರ್ ಸಾರ್ವಜನಿಕವಾಗಿ ಹೆಚ್ಚು ಕಾಣಿಸಿಕೊಳ್ಳದೆ ಇದ್ದರೂ, ದೇಶದ ಅಧಿಕಾರ ವ್ಯವಸ್ಥೆಯಲ್ಲಿ ಪ್ರಮುಖ ಹುದ್ದೆಗಳನ್ನು ಹೊಂದಿದ್ದವರು. ಅದರಲ್ಲೂ ಮುಖ್ಯವಾಗಿ, ದೇಶದ ದಾನ–ದತ್ತಿ ಸಂಸ್ಥೆಗಳಲ್ಲಿ ಪ್ರಮುಖ ಹೊಣೆ ನಿರ್ವಹಿಸಿದ್ದಾರೆ.

ಮೊಖಬರ್ ಅವರು ಇಮಾಮ್ ಖೊಮೆನಿ ಅವರ ಆದೇಶಗಳ ಅನುಪಾಲನೆಯ ಹೆಸರಿನ ಸಂಸ್ಥೆಯೊಂದರ ಹೊಣೆ ಹೊತ್ತಿದ್ದರು. ಅಮೆರಿಕದ ಪ್ರಕಾರ, ಈ ಸಂಸ್ಥೆಯು ಕೋಟ್ಯಂತರ ಡಾಲರ್ ಮೌಲ್ಯದ ಆಸ್ತಿಗಳ ಮೇಲ್ವಿಚಾರಣೆ ನಡೆಸುತ್ತದೆ, ದೇಶದ ಅರ್ಥ ವ್ಯವಸ್ಥೆಯ ಬಹುತೇಕ ಎಲ್ಲ ವಲಯಗಳಲ್ಲಿಯೂ ಇದು ಪಾಲು ಹೊಂದಿದೆ.

'ಈ ಸಂಸ್ಥೆಯು ಭಿನ್ನ ಅಭಿಪ್ರಾಯಗಳನ್ನು ಹೇಳುವವರ ಹಕ್ಕುಗಳನ್ನು ಬಹಳ ವ್ಯವಸ್ಥಿತವಾಗಿ ಉಲ್ಲಂಘಿಸಿದೆ. ಧಾರ್ಮಿಕ ಅಲ್ಪಸಂಖ್ಯಾತರ, ರಾಜಕೀಯ ವಿರೋಧಿಗಳ, ದೇಶಭ್ರಷ್ಟ ಇರಾನಿಯನ್ನರ ಆಸ್ತಿಗಳನ್ನು ಮತ್ತು ಜಮೀನನ್ನು ಕಿತ್ತುಕೊಳ್ಳುವ ಕೆಲಸ ಮಾಡುತ್ತದೆ' ಎಂದು 2021ರಲ್ಲಿ ಮೊಖಬರ್ ಅವರಿಗೆ ನಿರ್ಬಂಧಗಳನ್ನು ವಿಧಿಸುವ ಸಂದರ್ಭದಲ್ಲಿ ಅಮೆರಿಕ ಹೇಳಿತ್ತು.



ಅಹಮದಾಬಾದ್‌ನಲ್ಲಿ ಮೊದಲ ಕ್ವಾಲಿಫೈಯರ್ • ಕೋಲ್ಕತ್ತ– ಹೈದರಾಬಾದ್ ಸೆಣಸಾಟ ಇಂದು

ಪವರ್ ಹಿಟ್ಟರ್‌ಗಳ ಹಣಾಹಣಿಗೆ ವೇದಿಕೆ ಸಜ್ಜು

ಒಟ್ಟು ಬಲಾಬಲ 26
ಕೋಲ್ಕತ್ತಗೆ ಜಯ 17
ಹೈದರಾಬಾದ್‌ಗೆ ಜಯ 9

ಐಪಿಎಲ್‌ನಲ್ಲಿ ಈ ಬಾರಿ ಸಾಧನೆ


ಟ್ರಾವಿಸ್ ಹೆಡ್

ಇನಿಂಗ್ಸ್	ಒಟ್ಟು ರನ್	ಸರಾಸರಿ	
12	533	48.45	
ಸ್ಟ್ರೈಕ್ ರೇಟ್	ಗರಿಷ್ಠ ರನ್	ಶತಕ	ಅರ್ಧಶತಕ
201.1	102	1	4

ಸುನಿಲ್ ನಾರಾಯಣ್

ಇನಿಂಗ್ಸ್	ಒಟ್ಟು ರನ್	ಸರಾಸರಿ	ಅರ್ಧಶತಕ
12	461	38.42	4
ಸ್ಟ್ರೈಕ್ ರೇಟ್	ಗರಿಷ್ಠ ರನ್	ಶತಕ	ಒಟ್ಟು ವಿಕೆಟ್
182.94	109	1	15

ಪಂದ್ಯ ಆರಂಭ: ರಾತ್ರಿ 7.30. ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್



ಎಎಫ್‌ಪಿ ಚಿತ್ರ



ಪಿಟಿಐ ಚಿತ್ರ

ಅಹಮದಾಬಾದ್ (ಪಿಟಿಐ): ಯಶಸ್ಸಿನ ಅಲೆಯಲ್ಲಿ ತೇಲುತ್ತಿರುವ ಕೋಲ್ಕತ್ತ ನೈಟ್‌ರೈಡರ್ಸ್ ತಂಡ ಮತ್ತು ಅನಿಶ್ಚಿತ ಆಟವಾಡುವ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು, 'ಪವರ್ ಹಿಟ್ಟರ್'ಗಳ ಹಣಾಹಣಿ ಎನಿಸಿರುವ ಐಪಿಎಲ್‌ನ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಮಂಗಳವಾರ ಮುಖಾಮುಖಿಯಾಗಲಿವೆ.

ಈ ಸಲದ ಆವೃತ್ತಿಯಲ್ಲಿ ಕೆಕೆಆರ್, ಪ್ಲೇಆಫ್‌ಗೆ ಸ್ಥಾನ ಖಚಿತಪಡಿಸಿಕೊಂಡ ಮೊದಲ ತಂಡವೆನಿಸಿದೆ. ಪಂಜಾಬ್ ಕಿಂಗ್ಸ್ ತಂಡವನ್ನು ಭಾನುವಾರ ಕೊನೆಯ ಲೀಗ್ ಪಂದ್ಯದಲ್ಲಿ ನಾಲ್ಕು ವಿಕೆಟ್‌ಗಳಿಂದ ಸೋಲಿಸಿದ ಹೈದರಾಬಾದ್, 17 ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನಕ್ಕೇರಿದೆ.

ಹೈದರಾಬಾದ್ ತಂಡವು, ಪಂಜಾಬ್ ಕಿಂಗ್ಸ್ ವಿರುದ್ಧ ಅಮೋಘ ಜಯ ಸಾಧಿಸಿತ್ತು. ಅದರ ಪಂದ್ಯ ಮಳೆಯಿಂದ ಬಾಧಿತವಾಗಿರಲಿಲ್ಲ. ಆದರೆ ಎರಡು ಬಾರಿಯ ಚಾಂಪಿಯನ್ ಕೋಲ್ಕತ್ತ ತಂಡದ ಎರಡು ಪಂದ್ಯಗಳು ಮಳೆಯ ಪಾಲಾಗಿದ್ದವು. ಮೇ 11ರಂದು ಅದು ಕೊನೆಯ ಬಾರಿ ಪೂರ್ಣ ಪಂದ್ಯ ಆಡಿತ್ತು. ಆದರೆ ತಂಡ 20 ಪಾಯಿಂಟ್‌ಗಳೊಂದಿಗೆ ಲೀಗ್ ವ್ಯವಹಾರವನ್ನು ಮೊದಲ ಸ್ಥಾನದಲ್ಲಿ ಮುಗಿಸಿದೆ.

ಮಳೆಯಿಂದ ಎರಡು ಪಂದ್ಯಗಳು ಕೊಚ್ಚಿಹೋಗುವ ಮೊದಲು ಶ್ರೇಯಸ್ ಅಯ್ಯರ್ ಬಳಗ ತನ್ನ ಕೊನೆಯ ನಾಲ್ಕು ಪಂದ್ಯಗಳನ್ನು ಗೆದ್ದುಕೊಂಡಿತ್ತು. ತಂಡದ ಪರ ಎರಡನೇ ಅತಿ ಹೆಚ್ಚು ರನ್ ಗಳಿಸಿರುವ ವಿಕೆಟ್ ಕೀಪರ್ ಫಿಲ್ ಸಾಲ್ಟ್ (435 ರನ್) ಅವರು ಟಿ20 ವಿಶ್ವಕಪ್‌ಗೆ ಸಜ್ಜಾಗಲು ತವರಿಗೆ ಮರಳಿರುವ ಕಾರಣ ಆ ಸ್ಥಾನ ತುಂಬುವ ಸವಾಲು ಕೋಲ್ಕತ್ತಕ್ಕೆ ಇದೆ.

ಸಾಲ್ಟ್ ಮತ್ತು ಸುನಿಲ್ ನಾರಾಯಣ್ (461) ನೀಡಿರುವ ಸಿಡಿಲಬ್ಬರದ ಆರಂಭದಿಂದ ತಂಡಕ್ಕೆ ಸಾಕಷ್ಟು ಲಾಭವಾಗಿದೆ. ಮಧ್ಯಮ ಸರದಿಯಲ್ಲಿ ಶ್ರೇಯಸ್ ಅಯ್ಯರ್ (287) ಯಶಸ್ಸು ಗಳಿಸುತ್ತಿದ್ದಾರೆ.

ಸಾಲ್ಟ್ ಬದಲಿಗೆ ಸ್ಥಾನ ಪಡೆಯುವ ನಿರೀಕ್ಷೆಯಲ್ಲಿದ್ದ ರಹಮಾನುಲ್ಲಾ ಗುರ್ಬಾಜ್ ಅವರಿಗೆ ಮಳೆಯಿಂದಾಗಿ ಅಭ್ಯಾಸದ ಅವಕಾಶ ತಪ್ಪಿಹೋಯಿತು. ನಿತೀಶ್ ರಾಣಾ ಅವರು ಲಯದಲ್ಲಿರುವುದು ಕೆಕೆಆರ್‌ಗೆ ಬಲ ಮೂಡಿಸಿದೆ. ಆ್ಯಂಡ್ರೆ ರಸೆಲ್ ಕೊನೆಯಲ್ಲಿ ವೇಗವಾಗಿ ರನ್ ಗಳಿಸಬಲ್ಲ ಸಮರ್ಥ.

ಬೀಸಾಟದ ವಿಷಯದಲ್ಲಿ ಸನ್‌ರೈಸರ್ಸ್, ಹೆಚ್ಚುಕಮ್ಮಿ ಕೋಲ್ಕತ್ತಕ್ಕೆ ಸರಿಸಮನಾಗಿಯೇ ಇದೆ. ಹೀಗಾಗಿ ಕಾಗದದ ಮೇಲಂತೂ ಒಳ್ಳೆಯ ಹೋರಾಟ ನಿರೀಕ್ಷಿಸಬಹುದು.

ಎಡಗೈ ಆಟಗಾರ ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ಶರ್ಮಾ ಜೋಡಿ ಎದುರಾಳಿ ಬೌಲರ್‌ಗಳಲ್ಲಿ ನಡುಕ ಹುಟ್ಟಿಸಿದೆ. ಇವರಿಬ್ಬರೂ 200ಕ್ಕಿಂತ ಹೆಚ್ಚಿನ ಸ್ಟ್ರೈಕ್‌ರೇಟ್‌ನಲ್ಲಿ ರನ್‌ಗಳನ್ನು ಗಳಿಸುತ್ತಿದ್ದಾರೆ. ಆ ಹಾದಿಯಲ್ಲಿ ದಾಖಲೆಗಳನ್ನು ಮುರಿದಿದ್ದಾರೆ. ಹೆಡ್ ಅವರಂತೂ ಒಂದು ಶತಕ, ನಾಲ್ಕು ಅರ್ಧ ಶತಕಗಳಿರುವ 533 ರನ್ ಬಾಚಿದ್ದಾರೆ. ಅವರ ನಿರ್ಭೀತಿಯ ಆಟ, ಉದಯೋನ್ಮುಖ ಆಟಗಾರ ಅಭಿಷೇಕ್ (467 ರನ್) ಅವರ ಬ್ಯಾಟಿಂಗ್ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದೆ. ಅಭಿಷೇಕ್ ಹಾಲಿ ಐಪಿಎಲ್‌ನಲ್ಲಿ ಸರ್ವಾಧಿಕ 41 ಸಿಕ್ಸರ್‌ಗಳನ್ನು ಚಚ್ಚಿದ್ದಾರೆ. ಕೆಲವು ಪಂದ್ಯಗಳಲ್ಲಿ ಕಳೆಗುಂದಿದಂತೆ ಕಂಡಿದ್ದ ಹೆನ್ರಿಚ್ ಕ್ಲಾಸೆನ್ ಆಟ ಭಾನುವಾರ ಮತ್ತೆ ಅರಳಿದೆ. ಅವರು ಪಂಜಾಬ್ ವಿರುದ್ಧ ಬಿರುಸಿನ 42 ರನ್ ಗಳಿಸಿದ್ದರು.

ಕಳೆದ ವರ್ಷ ಏಕದಿನ ವಿಶ್ವಕಪ್ ಫೈನಲ್ ಆತಿಥ್ಯ ವಹಿಸಿದ್ದ ಅಹಮದಾಬಾದಿನಲ್ಲಿ ಎರಡನೆಯದಾಗಿ ಆಡುವ ತಂಡ ಹೆಚ್ಚು ಯಶಸ್ಸು ಕಂಡಿದೆ. ಪೂರ್ಣಗೊಂಡ ಐಪಿಎಲ್‌ನ ಆರು ಪಂದ್ಯಗಳಲ್ಲಿ ನಾಲ್ಕರಲ್ಲಿ ಎರಡನೇಯದಾಗಿ ಆಡಿದ ತಂಡಗಳು ಯಶಸ್ವಿಯಾಗಿ ಗುರಿಮುಟ್ಟಿವೆ.

ರನ್ನುಗಳ ಗುಡ್ಡೆಹಾಕಿ ಎದುರಾಳಿಗಳನ್ನು ಕಂಗೆಡಿಸುವ ಇತ್ತಂಡಗಳ ಶೈಲಿಗೆ ವಿರುದ್ಧವಾಗಿ, ಈ ಮೈದಾನದಲ್ಲಿ ಕಳೆದ 12 ಇನಿಂಗ್ಸ್‌ಗಳಲ್ಲಿ ಎರಡು ಸಲ ಮಾತ್ರ ತಂಡಗಳು 200 ಅಥವಾ ಹೆಚ್ಚಿನ ಮೊತ್ತ ಗಳಿಸಿವೆ. ಇದರರ್ಥ ಬೌಲರ್‌ಗಳಿಗೂ ಇಲ್ಲಿ ಮಿಂಚುವ ಅವಕಾಶಗಳಿವೆ.

ಮಿಚೆಲ್ ಸ್ಟಾರ್ಕ್ ನೇತೃತ್ವದ ವೇಗಿಗಳಿಗೆ ಬೆಂಬಲ ನೀಡಲು, ಕೆಕೆಆರ್ ಬಳಿ ಪರಿಣಾಮಕಾರಿ ಸ್ಪಿನ್ನರ್‌ಗಳ ಬ್ಯಾಟರಿ ಇದೆ. ಆದರೆ ಪ್ಯಾಟ್ ಕಮಿನ್ಸ್ ಬಳಗ ಬೌಲರ್‌ಗಳ ಸಾಂಘಿಕ ಪ್ರದರ್ಶನ ನೆಚ್ಚಿಕೊಂಡಿದೆ.

ಮಾರ್ಚ್‌ನಲ್ಲಿ ಈ ಬಾರಿ ಈ ತಂಡಗಳ ಏಕೈಕ ಮುಖಾಮುಖಿಯಲ್ಲೂ ರನ್ ಹೊಳೆ ಹರಿದಿದ್ದು, ಕೆಕೆಆರ್ ನಾಲ್ಕು ರನ್‌ಗಳಿಂದ ಎಸ್‌ಆರ್‌ಎಚ್ ಮೇಲೆ ಜಯಗಳಿಸಿತ್ತು.



ಬಿಸಿಸಿಐ ನಿರ್ಮಿಸಲು ಉದ್ದೇಶಿಸಿರುವ ಒಳಾಂಗಣ ನೆಟ್ಸ್‌ನ ನೀಲನಕ್ಷೆ –ಎಕ್ಸ್ ಚಿತ್ರ

ಈಶಾನ್ಯದ ಆರು ರಾಜ್ಯಗಳಲ್ಲಿ ಒಳಾಂಗಣ ಕ್ರಿಕೆಟ್ ಅಕಾಡೆಮಿ

ನವದೆಹಲಿ (ಪಿಟಿಐ): ಈಶಾನ್ಯದ ಆರು ರಾಜ್ಯಗಳಲ್ಲಿ ಒಳಾಂಗಣ ಕ್ರಿಕೆಟ್ ಅಕಾಡೆಮಿಗಳಿಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಸೋಮವಾರ ಶಂಕುಸ್ಥಾಪನೆ ನೆರವೇರಿಸಿತು.

ಈ ಅಕಾಡೆಮಿಗಳಿಂದ ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್ ಮತ್ತು ಸಿಕ್ಕಿಂನ ಆಟಗಾರರಿಗೆ ನೆರವಾಗಲಿದೆ. ಈ ಅಕಾಡೆಮಿಗಳು ಶಿಲ್ಲಾಂಗ್, ಇಟಾನಗರ, ಕೊಹಿಮಾ, ಐಜಾಲ್, ಇಂಫಾಲ್ ಮತ್ತು ಗ್ಯಾಂಗ್ಟಕ್‌ನಲ್ಲಿ ತಲೆಯೆತ್ತಲಿವೆ.

ಈಶಾನ್ಯ ಭಾಗದಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ವಿನೂತನ ಅಕಾಡೆಮಿಗಳಿಗೆ ಬಿಸಿಸಿಐನಿಂದ ಶಂಕುಸ್ಥಾಪನೆ ನೆರವೇರಿಸಿದ್ದು, ಸಂತಸ ಮೂಡಿಸಿದೆ ಎಂದು ಮಂಡಳಿ ಕಾರ್ಯದರ್ಶಿ ಜಯ್ ಶಾ 'ಎಕ್ಸ್'ನಲ್ಲಿ ಬರೆದಿದ್ದಾರೆ.

ಇಲ್ಲಿನ ಕ್ರಿಕೆಟಿಗರು ಮಳೆಗಾಲದ ಅವಧಿಯಲ್ಲಿ ತರಬೇತಿ ಪಡೆಯಲು ಕೋಲ್ಕತ್ತ, ಬೆಂಗಳೂರು, ಚೆನ್ನೈ, ಮುಂಬೈ ಅಥವಾ ಅಹಮದಾಬಾದ್ ಕೇಂದ್ರಗಳಿಗೆ ಹೋಗಬೇಕಾಗುತಿತ್ತು.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು, ಈಶಾನ್ಯ ಕ್ರಿಕೆಟ್ ಅಭಿವೃದ್ಧಿ ಸಮಿತಿಯನ್ನೂ ಸ್ಥಾಪಿಸಿದ್ದು, ಇದಕ್ಕೆ ಬಂಗಾಳ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಅವಿಷೇಕ್ ದಾಲ್ಮಿಯಾ ಮುಖ್ಯಸ್ಥರಾಗಿದ್ದಾರೆ.

ಈಶಾನ್ಯ ಭಾಗದ ಆರು ರಾಜ್ಯಗಳ ಕ್ರಿಕೆಟಿಗರಿಗೆ ಈ ವಿಶ್ವದರ್ಜೆಯ ಅಕಾಡೆಮಿಯಿಂದ ಲಾಭವಾಗಲಿದೆ. ಒಳಾಂಗಣ ನೆಟ್ಸ್, ಒಳಾಂಗಣ ಈಜು ಕೊಳ, ಫಿಟ್ನೆಸ್ ಸೆಂಟರ್ ಸೇರಿ ವರ್ಷದುದ್ದಕ್ಕೂ ತರಬೇತಿಗೆ ಈ ಅಕಾಡೆಮಿಗಳಲ್ಲಿ ಅವಕಾಶವಾಗಲಿದೆ.

ಮಿಜೋರಾಮ್‌ನಲ್ಲಿ ಹೊಸ ಪೆವಿಲಿಯನ್ ಕೂಡ ಸ್ಥಾಪಿಸಲಾಗಿದೆ. ಈ ಮೂಲ ಸೌಲಭ್ಯಗಳ ಮೂಲಕ ದೊಡ್ಡ ಹೆಜ್ಜೆ ಇಡಲಾಗಿದ್ದು, ಮುಂದೆ ಒಳ್ಳೆಯ ದಿನಗಳು ಬರಲಿವೆ ಎಂದು ಅವರು ಹೇಳಿದರು.

ಎನ್‌ಸಿಎ ವಿಸ್ತರಣೆ: ಇದೇ ವೇಳೆ, ಅತ್ಯಾಧುನಿಕ ಸೌಲಭ್ಯವಿರುವ ವಿಸ್ತರಿತ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯನ್ನು ಬೆಂಗಳೂರಿನಲ್ಲಿ ಅಭಿವೃದ್ಧಿಪಡಿಸುವ ಪ್ರಕ್ರಿಯೆಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಈಗಾಗಲೇ ಕೈಗೊಂಡಿದೆ.

ತೆಲಂಗಾಣದ ಕೂಲಿ ಕಾರ್ಮಿಕ ಕುಟುಂಬದ ಪ್ರತಿಭೆ

ಪ್ಯಾರಾ ಅಥ್ಲೆಟಿಕ್ಸ್: ದೀಪ್ತಿಗೆ ಚಿನ್ನ



ಭಾರತದ ದೀಪ್ತಿ ಜೀವಾಂಜಿ

ಕೊಬೆ (ಜಪಾನ್) (ಪಿಟಿಐ): ಭಾರತದ ದೀಪ್ತಿ ಜೀವಾಂಜಿ ಇಲ್ಲಿ ನಡೆಯುತ್ತಿರುವ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ 400 ಮೀಟರ್ ಟಿ20 ವಿಭಾಗದ ಓಟದಲ್ಲಿ ವಿಶ್ವದಾಖಲೆಯೊಂದಿಗೆ ಚಿನ್ನ ಗೆದ್ದರು.

ಸೋಮವಾರ ನಡೆದ ಸ್ಪರ್ಧೆಯಲ್ಲಿ 21 ವರ್ಷದ ಪ್ಯಾರಾ ಓಟಗಾರ್ತಿ ದೀಪ್ತಿ 55.07 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಈ ಮೂಲಕ ಕಳೆದ ವರ್ಷ ಪ್ಯಾರಿಸ್‌ನಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಅಮೆರಿಕದ ಬ್ರೆನ್ನಾ ಕ್ಲಾರ್ಕ್ (55.12 ಸೆಕೆಂಡು) ನಿರ್ಮಿಸಿದ್ದ ದಾಖಲೆಯನ್ನು ಮುರಿದರು.

ತೆಲಂಗಾಣದ ವಾರಂಗಲ್ ಜಿಲ್ಲೆಯ ಕಲ್ಲೆಡಾ ಗ್ರಾಮದ ಕೂಲಿ ಕಾರ್ಮಿಕ ಕುಟುಂಬದ ದೀಪ್ತಿ, ಕಳೆದ ವರ್ಷ ಏಷ್ಯನ್ ಪ್ಯಾರಾ ಕ್ರೀಡಾಕೂಟದ ಟಿ20 400 ಮೀಟರ್ ಓಟದಲ್ಲಿ (56.69 ಸೆ) ಏಷ್ಯನ್ ದಾಖಲೆಯೊಂದಿಗೆ ಚಿನ್ನ ಗೆದ್ದಿದ್ದರು. ಅವರು ಸಾಮಾನ್ಯ ಅಥ್ಲೀಟ್‌ಗಳೊಂದಿಗೆ ಜೂನಿಯರ್ ಮತ್ತು ಸೀನಿಯರ್ ಚಾಂಪಿಯನ್‌ಷಿಪ್‌ಗಳಲ್ಲಿ ಸ್ಪರ್ಧಿಸಿ, ಹಲವು ಪದಕಗಳನ್ನು ಗೆದ್ದಿದ್ದಾರೆ.

ಭಾನುವಾರ ನಡೆದ ಹೀಟ್ಸ್‌ನಲ್ಲಿ 56.18 ಸೆಕೆಂಡ್‌ಗಳಲ್ಲಿ ಕ್ರಮಿಸಿದ್ದ ದೀಪ್ತಿ, ಏಷ್ಯನ್ ದಾಖಲೆಯೊಂದಿಗೆ ಫೈನಲ್‌ಗೆ ಅರ್ಹತೆ ಪಡೆದಿದ್ದರು. ಟಿ20 ವಿಭಾಗವು ಬೌದ್ಧಿಕ ಭಿನ್ನತೆ ಹೊಂದಿರುವ ಕ್ರೀಡಾಪಟುಗಳಿಗೆ ಮೀಸಲಾಗಿದೆ. ಟರ್ಕಿಯ ಐಸೆಲ್ ಒಂಡರ್ (55.19 ಸೆ) ಬೆಳ್ಳಿ ಗೆದ್ದರೆ, ಈಕ್ವೆಡಾರ್‌ನ ಲಿಜಾನ್‌ಶೆಲಾ ಅಂಗುಲೋ (56.68 ಸೆ) ಕಂಚಿನ ಪದಕವನ್ನು ತಮ್ಮದಾಗಿಸಿಕೊಂಡರು.

ಯೋಗೇಶ್ ಕಥುನಿಯಾ ಪುರುಷರ ಎಫ್‌56 ವಿಭಾಗದ ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ 41.80 ಮೀಟರ್ ಸಾಧನೆಯೊಂದಿಗೆ ಬೆಳ್ಳಿ ಪದಕ ಜಯಿಸಿದರು. ನಂತರ ಭಾಗ್ಯಶ್ರೀ ಮಹಾವ್ ರಾವ್ ಜಾಧವ್ ಅವರು ಮಹಿಳೆಯರ ಶಾಟ್‌ಪಟ್ ಎಫ್ 34 ವಿಭಾಗದಲ್ಲಿ (7.56 ಮೀ) ಬೆಳ್ಳಿ ಪಡೆದರು.

ಕೂಟದಲ್ಲಿ ಭಾರತದ ಪದಕಗಳ ಸಂಖ್ಯೆ ಐದಕ್ಕೆ ಏರಿಕೆಯಾಗಿದೆ. ಭಾನುವಾರ ನಿಶಾದ್ ಕುಮಾರ್ (ಟಿ47 ಹೈಜಂಪ್) ಮತ್ತು ಪ್ರೀತಿ ಪಾಲ್ (ಟಿ35 200 ಮೀ ಓಟ) ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದಿದ್ದರು.

ಟೆನಿಸ್: ಸುಮಿತ್ ನಗಾಲ್‌ಗೆ ನಿರಾಸೆ

ಜಿನೇವಾ (ಪಿಟಿಐ): ಭಾರತದ ಅಗ್ರಗಣ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಜಿನೇವಾ ಓಪನ್ ಟೆನಿಸ್ ಟೂರ್ನಿಯಲ್ಲಿ ಆರಂಭಿಕ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು.

ಭಾನುವಾರ ನಡೆದ 32ರ ಘಟ್ಟದ ಪಂದ್ಯದಲ್ಲಿ ವಿಶ್ವದ 94ನೇ ರ್‍ಯಾಂಕ್‌ನ ನಗಾಲ್ 6-7 (7), 3-6 ಅಂತರದಲ್ಲಿ 19ನೇ ಕ್ರಮಾಂಕದ ಸೆಬಾಸ್ಟಿಯನ್ ಬೇಜ್ ಅವರಿಗೆ ಮಣಿಸಿದರು.

'ಕ್ಲೇ ಕೋರ್ಟ್ ಸ್ಪೆಷಲಿಸ್ಟ್' ಆಗಿರುವ ಅರ್ಜೆಂಟೀನಾದ ಬೇಜ್ ಒಂದು ಗಂಟೆ 52 ನಿಮಿಷಗಳ ಹೋರಾಟದಲ್ಲಿ 26 ವರ್ಷದ ನಗಾಲ್ ಅವರನ್ನು ಹಿಮ್ಮೆಟ್ಟಿಸಿ, ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ನಗಾಲ್ ಆರಂಭದಲ್ಲಿ 4-1 ರಿಂದ ಮುನ್ನಡೆ ಸಾಧಿಸಿದ್ದರು. ಆದರೆ, ಪ್ರಸಕ್ತ ಋತುವಿನಲ್ಲಿ ಕ್ಲೇ ಕೋರ್ಟ್‌ನಲ್ಲೇ ಎರಡು ಪ್ರಶಸ್ತಿ (ರಿಯೋ ಓಪನ್, ಚಿಲಿ ಓಪನ್) ಗೆದ್ದುಕೊಂಡಿರುವ ಬೇಜ್, ನಂತರದಲ್ಲಿ ಹಿಡಿತ ಸಾಧಿಸಿದರು. ಮೊದಲ ಸೆಟ್ ಅನ್ನು ಟೈಬ್ರೇಕರ್ ಮೂಲಕ ಗೆದ್ದುಕೊಂಡ ಅವರು, ಎರಡನೇ ಸೆಟ್ ಅನ್ನು ಕೇವಲ 38 ನಿಮಿಷದಲ್ಲಿ ವಶಮಾಡಿಕೊಂಡರು.

'ಈ ಸೋಲಿನಿಂದ ಎದೆಗುಂದಿಲ್ಲ. ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ನಡೆಯುವ ಟೂರ್ನಿಗೆ ಸಿದ್ಧತೆ ನಡೆಸಲು ಸಹಕಾರಿಯಾಯಿತು' ಎಂದು ನಗಾಲ್ ಸೋಲಿನ ನಂತರ ಪ್ರತಿಕ್ರಿಯಿಸಿದ್ದಾರೆ.

ಒಲಿಂಪಿಕ್ಸ್: ಬೋಪಣ್ಣಗೆ ಬಾಲಾಜಿ ಅಥವಾ ಭಾಂಬ್ರಿ ಜೊತೆಗಾರ



ರೋಹನ್ ಬೋಪಣ್ಣ

ನವದೆಹಲಿ (ಪಿಟಿಐ): ಭಾರತದ ಅಗ್ರಗಣ್ಯ ಟೆನಿಸ್ ಡಬಲ್ಸ್ ಆಟಗಾರ ರೋಹನ್ ಬೋಪಣ್ಣ ಅವರಿಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎನ್. ಶ್ರೀರಾಮ್ ಬಾಲಾಜಿ ಅಥವಾ ಯೂಕಿ ಭಾಂಬ್ರಿ ಅವರಲ್ಲೊಬ್ಬರು ಜೊತೆಗಾರ ಆಗಲಿದ್ದಾರೆ.

ತಂಡದ ಸಂಯೋಜನೆಯನ್ನು ಆಯ್ಕೆ ಸಮಿತಿ ನಿರ್ಧರಿಸುವುದಾದರೂ, ಬೋಪಣ್ಣ ಅವರ ಆಯ್ಕೆಗೆ ಎಐಟಿಎ ಒಪ್ಪಿಗೆ ನೀಡುವ ಸಾಧ್ಯತೆಯಿದೆ.

ಡಬಲ್ಸ್ ವಿಶ್ವ ಕ್ರಮಾಂಕದಲ್ಲಿ ಬೋಪಣ್ಣ ನಾಲ್ಕನೇ ಸ್ಥಾನದಲ್ಲಿದ್ದಾರೆ. ಅವರು ಅಗ್ರ 10ರಲ್ಲಿ ಇರುವ ಕಾರಣ ನಿಯಮಗಳ ಪ್ರಕಾರ ತಮ್ಮ ಜೊತೆಗಾರರನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿದೆ.

ಪ್ಯಾರಿಸ್ ಒಲಿಂಪಿಕ್ಸ್‌ನ ಪುರುಷರ ಡಬಲ್ಸ್‌ನ ಡ್ರಾ 32 ತಂಡಗಳನ್ನು ಒಳಗೊಂಡಿರುತ್ತದೆ. ಅಲ್ಲಿ ಒಂದು ರಾಷ್ಟ್ರವು ಗರಿಷ್ಠ ಎರಡು ತಂಡಗಳನ್ನು ಮಾತ್ರ ಹೊಂದಲು ಅವಕಾಶವಿದೆ.

ವಿಶ್ವ ಬೆಂಚ್‌ಪ್ರೆಸ್: ಕೋಚ್ ಆಗಿ ಸತೀಶ್



ಸತೀಶ್ ಕುಮಾರ್

ಬೆಂಗಳೂರು: ಭಾರತ ಪವರ್ ಲಿಫ್ಟಿಂಗ್ ಫೆಡರೇಷನ್‌ನ ಅಧ್ಯಕ್ಷ ಸತೀಶ್ ಕುಮಾರ್ ಕುದ್ರೋಳಿ ಅವರು, ಅಮೆರಿಕದ ಆಸ್ಟಿನ್‌ನಲ್ಲಿ ಇದೇ 22 ರಿಂದ ಜೂನ್ 2ರವರೆಗೆ ನಡೆಯಲಿರುವ ವಿಶ್ವ ಬೆಂಚ್ ಪ್ರೆಸ್ ಸ್ಪರ್ಧೆಯಲ್ಲಿ ಭಾಗವಹಿಸುವ ಭಾರತ ತಂಡದ ಮುಖ್ಯ ತರಬೇತುದಾರರಾಗಿ ಆಯ್ಕೆಯಾಗಿದ್ದಾರೆ.

ಅವರು ಕರ್ನಾಟಕ ಪವರ್‌ಲಿಫ್ಟಿಂಗ್ ಸಂಸ್ಥೆಯ ಗೌರವ ಕಾರ್ಯದರ್ಶಿ ಆಗಿದ್ದಾರೆ.

ಸಿಂಧು ಮೇಲೆ ನಿರೀಕ್ಷೆಯ ಭಾರ



ಪಿ.ವಿ. ಸಿಂಧು

ಕೌಲಾಲಂಪುರ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು, ಕೆಲ ವಾರಗಳ ವಿರಾಮದ ಬಳಿಕ ಮಂಗಳವಾರ ಇಲ್ಲಿ ಆರಂಭವಾಗುವ ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ಗೆ ಮುನ್ನ ನಡೆಯುವ ಈ ಟೂರ್ನಿಯಲ್ಲಿ ಮಾಜಿ ವಿಶ್ವ ಚಾಂಪಿಯನ್ ಸಿಂಧು ಉತ್ತಮ ಪ್ರದರ್ಶನದ ಮೂಲಕ ಆತ್ಮವಿಶ್ವಾಸ ವೃದ್ಧಿಸಿಕೊಳ್ಳುವತ್ತ ಚಿತ್ತ ಹರಿಸಿದ್ದಾರೆ.

ಉಬರ್ ಮತ್ತು ಥಾಯ್ಲೆಂಡ್ ಓಪನ್ ಟೂರ್ನಿಯಿಂದ ದೂರ ಉಳಿದಿದ್ದ 28 ವರ್ಷದ ಆಟಗಾರ್ತಿ ಇಲ್ಲಿ ಕಣಕ್ಕೆ ಇಳಿಯುತ್ತಿದ್ದಾರೆ. ಬಿಡಬ್ಲ್ಯುಎಫ್ ವರ್ಲ್ಡ್ ಟೂರ್ ಸೂಪರ್ 500 ಹಂತದ ಟೂರ್ನಿ ಇದಾಗಿದ್ದು, ಲಯಕ್ಕೆ ಮರಳುವ ವಿಶ್ವಾಸದಲ್ಲಿದ್ದಾರೆ. ಕಳೆದ ವರ್ಷ ಮೊಣಕಾಲಿನ ಗಾಯಕ್ಕಾಗಿ ವಿಶ್ರಾಂತಿ ಪಡೆದು, ಚೇತರಿಸಿಕೊಂಡ ಬಳಿಕ ಅವರಿಗೆ ಫಾರ್ಮ್ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಮತ್ತು ಕಂಚು ಗೆದ್ದಿರುವ ಸಿಂಧು, ಪ್ರಸಕ್ತ ಋತುವಿನ ಆರು ಟೂರ್ನಿಗಳಲ್ಲಿ ಎರಡರಲ್ಲಿ ಮಾತ್ರ ಕ್ವಾರ್ಟರ್‌ಫೈನಲ್ ಹಂತ ತಲುಪಿದ್ದರು.

ಯುವ ಆಟಗಾರ್ತಿಯರಾದ ಅಶ್ಮಿತಾ ಚಾಲಿಹಾ, ಆಕರ್ಷಿ ಕಶ್ಯಪ್ ಮತ್ತು ಮಾಳವಿಕಾ ಬನ್ಸೋಡ್ ಅವರು ಕ್ವಾಲಿಫೈಯರ್ ಹಂತದಲ್ಲಿ ಸ್ಪರ್ಧಿಸಲಿದ್ದಾರೆ. ಕಿರಣ್ ಜಾರ್ಜ್, ಪುರುಷರ ಸಿಂಗಲ್ಸ್‌ನಲ್ಲಿ ಸ್ಪರ್ಧೆಯಲ್ಲಿರುವ ಭಾರತದ ಏಕೈಕ ಆಟಗಾರನಾಗಿದ್ದು, ಜಪಾನ್‌ನ ಟಕುಮಾ ಒಬಯಾಶಿ ಅವರನ್ನು ಎದುರಿಸಲಿದ್ದಾರೆ.



ತೇಜರಾಜ್ ಕಿತ್ತೂರು ಎದುರಿನ ಪಂದ್ಯದಲ್ಲಿ ಗೆದ್ದ ಬೆಂಗಳೂರಿನ ಸಾಕೇತ್ ಸಿ, ಷಟಲ್ ಹಿಂತಿರುಗಿಸಿದರು –ಪ್ರಜಾವಾಣಿ ಚಿತ್ರ/ಸತೀಶ್ ಬಡಿಗೇರ್

ಬ್ಯಾಡ್ಮಿಂಟನ್: ಅನಿರುದ್ಧ್ ಸ್ವರೂಪ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ದಾವಣಗೆರೆ: ಬೆಂಗಳೂರಿನ ಅನಿರುದ್ಧ್ ಕಶ್ಯಪ್ ಹಾಗೂ ಸ್ವರೂಪ್ ಪಾಲಾಕ್ಷಯ್ಯ ಅವರು ರಾಜ್ಯ ರ್‍ಯಾಂಕಿಂಗ್ ಸಬ್ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಗೆದ್ದಿದ್ದಾರೆ.

ಇಲ್ಲಿನ ನೇತಾಜಿ ಸುಭಾಷ್ ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ನಡೆದ 17 ವರ್ಷದೊಳಗಿನ ಬಾಲಕರ ವಿಭಾಗದ ಪಂದ್ಯದಲ್ಲಿ ಅನಿರುದ್ಧ್ 18-20, 15-9, 15-13 ರಿಂದ ನಕುಲನ್ ಹರಿ ಎನ್.ಡಿ ಎದುರು ಜಯಿಸಿದರು.

ಇನ್ನೊಂದು ಪಂದ್ಯದಲ್ಲಿ ಸ್ವರೂಪ್ 15-10, 15-13 ರಿಂದ 12ನೇ ಶ್ರೇಯಾಂಕದ ಇಂದ್ರಾಜ್ ವಿನೋದ್ ವಿರುದ್ಧ ಗೆದ್ದರು.

ಇತರ ಪ್ರಮುಖ ಪಂದ್ಯಗಳಲ್ಲಿ ಬೆಂಗಳೂರಿನ ಪರಿಣ್ ಅರೋರಾ 15-10, 11-15, 15-12 ರಿಂದ ಮುರಳಿ ಕೃಷ್ಣ ಎದುರು, ಶಿವಮೊಗ್ಗದ ಅಭಿರಾಮ್ ಗಜಾನನ ಐತಾಳ್ 17-19, 15-13, 15-9 ರಿಂದ ದಿಯಾನ್ ಹಿತೇನ್ ಶಾ ವಿರುದ್ಧ, ರಾಯಚೂರಿನ ಕರಜಗಿ ವಿಷ್ಣು 14-16, 15-12, 15-6 ರಿಂದ ಶಶಾಂಕ್ ಬಿ.ವಿ ಎದುರು, ಕೊಡಗಿನ ವಿಶಾಲ್ ಡಿ.ಆನಂದ್ 9-15, 15-13, 15-12 ರಿಂದ ಹರ್ಷಿತ್ ಎಸ್.ಗೌಡ ವಿರುದ್ಧ ಹಾಗೂ ಚಾಮರಾಜನಗರದ ನೀಲೇಶ್ ಜಯರಾಜ್ 15-10, 9-15, 17-15 ರಿಂದ ಸತ್ಯಶಿಶ್ ಶರ್ಮಾ ಎದುರು, ಬೆಂಗಳೂರಿನ ಸಾಕೇತ್ ಸಿ. 15-9, 15-5 ರಿಂದ ತೇಜರಾಜ್ ಕಿತ್ತೂರು ವಿರುದ್ಧ ಜಯಿಸಿದರು.

ದಿಯಾಗೆ ಜಯ: 17 ವರ್ಷದೊಳಗಿನ ಬಾಲಕಿಯ ವಿಭಾಗದ ಪಂದ್ಯದಲ್ಲಿ ಅಗ್ರಶ್ರೇಯಾಂಕಿತೆ, ಮೈಸೂರಿನ ದಿಯಾ ಭೀಮಯ್ಯ 15-7, 15-1ರಿಂದ ಹಂಸಾ ಮುರಳೀಧರ ಅವರನ್ನು ಮಣಿಸಿದರು.

ಇತರ ಪ್ರಮುಖ ಪಂದ್ಯಗಳಲ್ಲಿ ಬೆಂಗಳೂರಿನ ಸಮೀಕ್ಷಾ ಎಚ್.ಎನ್. 15-12 15-9 ರಿಂದ ದೇವಾಂಶಿ ಭಾಟಿಯಾ ಎದುರು, ಧಾರವಾಡದ ಅಭಿಶ್ರೀ 15-5, 15-6 ರಿಂದ ಜಾಹ್ನವಿ ಡಿ.ರಾಜು ಎದುರು, ಬೆಂಗಳೂರಿನ ಸೆಲ್ವಸಮೃದ್ಧಿ ಸೆಲ್ವಪ್ರಭು 15-7, 15-13ರಿಂದ ನಯೋನಿಕಾ ಪ್ರಶಾಂತ್ ವಿರುದ್ಧ, ಬೆಂಗಳೂರಿನ ನೇಹಾ ಕೃಪೇಶ್ 15-8, 15-6 ರಿಂದ ಜೊಹಾನಾ ಅಹಿಲಾನ್ ಎದುರು ಹಾಗೂ ಬೆಂಗಳೂರಿನ ಗೌರಿ ಭಟ್ 15-2, 15-2ರಿಂದ ತಿಯಾರಾ ಮುರಳೀಧರ್ ವಿರುದ್ಧ ಗೆದ್ದರು.

ಶಾರ್ಜಾ ಚೆಸ್: ಮುನ್ನಡೆಯಲ್ಲಿ ಅರವಿಂದ್

ಶಾರ್ಜಾ (ಪಿಟಿಐ): ಅಮೆರಿಕದ ಸ್ಯಾಮ್ ಶಂಕ್ಲಾಡ್ ಜೊತೆ ಆರನೇ ಸುತ್ತಿನ ಪಂದ್ಯವನ್ನು ಸುಲಭವಾಗಿ 'ಡ್ರಾ' ಮಾಡಿಕೊಂಡ ಭಾರತದ ಗ್ರ್ಯಾಂಡ್‌ಮಾಸ್ಟರ್ ಅರವಿಂದ್ ಚಿದಂಬರಂ, ಶಾರ್ಜಾ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಸೋಮವಾರ ಅಗ್ರಸ್ಥಾನ ಕಾಪಾಡಿಕೊಂಡರು.

ಅವರು ಆರು ಸುತ್ತುಗಳಿಂದ ಐದು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಅವರಿಗೆ ಉನ್ನತ ಚೆಸ್ ಆಟಗಾರರ ಕನಸಾದ 2,700ರ ರೇಟೆಡ್ ಕ್ಲಬ್ ಸೇರಲು ಕೇವಲ ಎರಡು ಪಾಯಿಂಟ್ ಅಷ್ಟೇ ಅಗತ್ಯವಿದೆ. ಈ ಟೂರ್ನಿಯಲ್ಲಿ ಇನ್ನು ಮೂರು ಸುತ್ತುಗಳು ಉಳಿದಿವೆ.

ಅರ್ಜುನ್ ಇರಿಗೇಶಿ ಕಪ್ಪು ಕಾಯಿಗಳಲ್ಲಿ ಆಡಿ, ರಷ್ಯಾದ ಡೇನಿಲ್ ಯುಫಾ ಅವರನ್ನು 42 ನಡೆಗಳಲ್ಲಿ ಸೋಲಿಸಿದರು. 6 ಮಂದಿ ಆಟಗಾರರು– ಬರ್ದಿಯಾ ಡೆನ್ಯವರ್, ಅಮಿನ್ ತಬಾತಬೇಯಿ (ಇರಾನ್), ಹ್ಯಾನ್ಸ್ ನೀಮನ್, ಶಂಕ್ಲಾಡ್ (ಇಬ್ಬರೂ ಅಮೆರಿಕ) ಮತ್ತು ಅರ್ಜುನ್ ತಲಾ 4.5 ಪಾಯಿಂಟ್ಸ್ ಕಲೆಹಾಕಿ 2ನೇ ಸ್ಥಾನದಲ್ಲಿದ್ದಾರೆ.

ಲೈಸೆನ್ಸ್ ನವೀಕರಣ: ಹೈಕೋರ್ಟ್‌ಗೆ ಬಿಟಿಸಿ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಸಿಗೆ ಋತುವಿನಲ್ಲಿ ಆನ್‌ಕೋರ್ಸ್ ಮತ್ತು ಆಫ್ ಕೋರ್ಸ್ ರೇಸಿಂಗ್, ಬೆಟ್ಟಿಂಗ್ ನಡೆಸಲು ಅವಕಾಶ ನೀಡುವಂತೆ ಕೋರಿ ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಸೋಮವಾರ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿದೆ. ಲೈಸೆನ್ಸ್ ನವೀಕರಣಕ್ಕೆ ಸರ್ಕಾರ ಏಪ್ರಿಲ್‌ನಿಂದ ನಿರಾಕರಿಸುತ್ತ ಬಂದಿದೆ.

ಲೈಸೆನ್ಸ್ ನವೀಕರಣಕ್ಕೆ ಸಂಬಂಧಿಸಿ ಬಿಟಿಸಿ ಮಾತ್ರವಲ್ಲ, ಕರ್ನಾಟಕ ಟ್ರೇನರ್‌ಗಳ ಸಂಘವೂ ನ್ಯಾಯಾಲಯದ ಮೊರೆ ಹೋಗಿದೆ ಎಂದು ವಿಶ್ವಸನೀಯ ಮೂಲಗಳಿಂದ ತಿಳಿದುಬಂದಿದೆ. ಕರ್ನಾಟಕ ರೇಸ್ ಹಾರ್ಸ್ ಮಾಲೀಕರ ಸಂಘವೂ ಇಂಥ ಅರ್ಜಿ ಸಲ್ಲಿಸಲು ಚಿಂತನೆ ನಡೆಸುತ್ತಿದೆ ಎನ್ನಲಾಗಿದೆ. ಕಳೆದ ಶನಿವಾರವೇ ಬೇಸಿಗೆ ರೇಸ್ ಆರಂಭವಾಗಬೇಕಿತ್ತು.

'ನಿಜ, ನಮ್ಮ ಮುಂದೆ ಹೈಕೋರ್ಟ್ ಮುಂದೆ ಹೋಗದೇ ಅನ್ಯಮಾರ್ಗವಿರಲಿಲ್ಲ' ಎಂದು ಬಿಟಿಸಿ ಉನ್ನತ ಮೂಲಗಳು ಹೆಸರು ಬಹಿರಂಗಪಡಿಸಬಾರದೆಂಬ ಷರತ್ತಿನ ಮೇಲೆ 'ಪ್ರಜಾವಾಣಿ'ಗೆ ತಿಳಿಸಿವೆ. 'ಏಪ್ರಿಲ್ ಆರಂಭದಿಂದ ರಾಜ್ಯ ಸರ್ಕಾರದ ಜೊತೆ ನಾವು ಮಾತುಕತೆ ನಡೆಸಲು ನಮ್ಮೆಲ್ಲಾ ಪ್ರಯತ್ನ ನಡೆಸಿದ್ದೇವೆ. ಆದರೆ, ಹಣಕಾಸು ಖಾತೆ ಸಹ ಹೊಂದಿರುವ ಮುಖ್ಯಮಂತ್ರಿ (ಸಿದ್ದರಾಮಯ್ಯ) ಅವರು ಲೈಸೆನ್ಸ್ ನವೀಕರಣಕ್ಕೆ ನಿರಾಕರಿಸುತ್ತಿದ್ದಾರೆ' ಎಂದು ತಿಳಿಸಿವೆ.

'ಆರಂಭದಲ್ಲಿ ಚುನಾವಣೆಯ ಕಾರಣ ಹೇಳಲಾಗಿತ್ತು. ಬಿಡುವಿಲ್ಲದ ಅವರ ವೇಳಾಪಟ್ಟಿ ಅರ್ಥವಾಗುತ್ತದೆ. ರಾಜ್ಯದಲ್ಲಿ ಮತದಾನ ಮುಗಿಯುವವರೆಗೆ ನಾವು ಕಾದೆವು. ಆದರೂ ಪರಿಸ್ಥಿತಿಯಲ್ಲಿ ಏನೂ ಪ್ರಗತಿಯಾಗಿಲ್ಲ. ಇದನ್ನೇ ನಂಬಿ ಜೀವನ ನಡೆಸುವವರಿದ್ದಾರೆ. ನ್ಯಾಯಾಲಯದ ಮೊರೆಹೋಗುವುದೇ ಉಳಿದಿರುವ ಆಯ್ಕೆ ಎಂದು ಕ್ಲಬ್‌ನ ಬಹುತೇಕ ಮಂದಿ ಭಾವನೆ ವ್ಯಕ್ತಪಡಿಸಿದರು.

ಲೈಸೆನ್ಸ್ ನವೀಕರಣ ಆಗದ ಕಾರಣ ನಮಗಷ್ಟೇ ಅಲ್ಲ, ಟ್ರೇನರ್‌ಗಳು, ಮಾಲೀಕರು, ಜಾಕಿಗಳು, ಕ್ಲಬ್‌ನ ಕಾರ್ಮಿಕರ ಮೇಲೂ ಪರಿಣಾಮ ಆಗುತ್ತಿದೆ' ಎಂದು ತಿಳಿಸಿವೆ.

ಪ್ರಕರಣ ಆಗುಹೋಗುಗಳನ್ನು ಬಲ್ಲವರ ಪ್ರಕಾರ, ಸರ್ಕಾರದ ಗಟ್ಟಿ ನಿಲುವಿಗೆ ಕಾರಣ, ತನ್ನ ವಿರುದ್ಧ ಬಿಟಿಸಿ, ಸುಪ್ರೀಂ ಕೋರ್ಟ್‌ನಲ್ಲಿ ಇರುವ ಪ್ರಕರಣವನ್ನು ವಾಪಸು ಪಡೆಯಲು ನಿರಾಕರಿಸಿರುವುದು. ದಶಕದ ಹಿಂದೆ ಟರ್ಫ್ ಕ್ಲಬ್ ಜಾಗದ ಲೀಸ್ ಅವಧಿ ಮುಗಿದಿದ್ದು, ಅದು ರೇಸ್‌ಕೋರ್ಸ್ ರಸ್ತೆಯಿಂದ ನಗರದ ಹೊರ ವಲಯಕ್ಕೆ ಸ್ಥಳಾಂತರಿಬೇಕು ಎಂಬುದು ಸರ್ಕಾರದ ನಿಲುವು.

ಶತಮಾನದ ಹಿಂದೆ ಆಗಿನ ಮೈಸೂರು ಮಹಾರಾಜರು ಭೋಗ್ಯದ ಮೇಲೆ ನೀಡಿರುವ ಜಾಗದಲ್ಲೇ ಚಟುವಟಿಕೆ ನಡೆಸುತ್ತೇನೆಂಬುದು ಬಿಟಿಸಿ ನಿಲುವಾಗಿದೆ. ಈ ಪ್ರಕರಣದ ಸಂಬಂಧ ಅರ್ಜಿಯ ವಿಚಾರಣೆ ಇನ್ನೂ ನಿಗದಿಯಾಗಬೇಕಿದೆ. ಸುಪ್ರೀಂ ಕೋರ್ಟ್‌ನಿಂದ ಈ ಸಂಬಂಧದ ಅರ್ಜಿ ಹಿಂಪಡೆಯುವವರೆಗೂ ಮಾತುಕತೆಗೆ ಆಸಕ್ತಿ ತೋರದಿರಲು ಸರ್ಕಾರ ನಿರ್ಧರಿಸಿದೆ ಎನ್ನಲಾಗಿದೆ.

ಖಾಸಗಿ ಮಾತುಕತೆ ಪ್ರಸಾರ ಮಾಡಿಲ್ಲ: ಸ್ಟಾರ್ ಸ್ಪಷ್ಟನೆ

ನವದೆಹಲಿ (ಪಿಟಿಐ): ರೋಹಿತ್ ಶರ್ಮಾ ಅವರನ್ನು ಒಳಗೊಂಡ ಖಾಸಗಿ ಮಾತುಕತೆಯ ಯಾವುದೇ ಆಡಿಯೊವನ್ನು ಬಿತ್ತರಗೊಳಿಸಿಲ್ಲ ಎಂದು ಐಪಿಎಲ್ ಅಧಿಕೃತ ಪ್ರಸಾರ ವಾಹಿನಿ ಸ್ಟಾರ್ ಸ್ಪೋರ್ಟ್ಸ್ ಸೋಮವಾರ ಸ್ಪಷ್ಟಪಡಿಸಿದೆ.

ಕೆಕೆಆರ್ ಸಹಾಯಕ ಕೋಚ್ ಅಭಿಷೇಕ್ ನಾಯರ್ ಜೊತೆ ನಡೆಸಿದ್ದ ಮಾತುಕತೆಯ ವಿಡಿಯೊವನ್ನು ಬಿತ್ತರಿಸದಂತೆ ಮನವಿ ಮಾಡಿದ್ದರೂ ಅದನ್ನು ಪ್ರಸಾರ ಮಾಡಿ ತನ್ನ ಖಾಸಗಿತನಕ್ಕೆ ಚ್ಯುತಿ ತರಲಾಗಿದೆ ಎಂದು ಮುಂಬೈ ಇಂಡಿಯನ್ಸ್ ಆಟಗಾರ ರೋಹಿತ್ ಶರ್ಮಾ 'ಎಕ್ಸ್'ನಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದರು.

ಮೇ 16ರಂದು ರೋಹಿತ್, ಲಖನೌ ಸೂಪರ್‌ಜೈಂಟ್ಸ್ ವಿರುದ್ಧ ಪಂದ್ಯಕ್ಕೆ ಮೊದಲು ಧವಳ ಕುಲಕರ್ಣಿ ಜೊತೆ ಮಾತನಾಡುತ್ತಿದ್ದಾಗ ಕ್ಯಾಮೆರಾ ಕಣ್ಣುಗಳು ತಮ್ಮ ಕಡೆಯಿದ್ದುದನ್ನು ಗಮನಿಸಿದ್ದರು. ಬ್ರಾಡ್‌ಕಾಸ್ಟರ್‌ಗೆ ಆಡಿಯೊ ಬಂದ್ ಮಾಡುವಂತೆ ಅವರು ಮನವಿ ಮಾಡಿದ್ದರು. ಆಟಗಾರರ ಚಲನವಲನಗಳನ್ನು ಪ್ರಸಾರ ಮಾಡುವಾಗ ಸಂಯಮ ವಹಿಸಬೇಕು ಎಂದೂ ಅವರು ಬರೆದಿದ್ದರು. ಆದರೆ ಆಟಗಾರರ ಖಾಸಗಿತನವನ್ನು ಗೌರವಿಸುತ್ತಿರುವುದಾಗಿ ಸ್ಟಾರ್ ಹೇಳಿದೆ.

ಮೇ 16ರಂದು ರೋಹಿತ್ ಸ್ನೇಹಿತರೊಂದಿಗೆ ಇರುವುದನ್ನು ಸಾಂದರ್ಭಿಕವಾಗಿ ತೋರಿಸಿತ್ತು. ಯಾವುದೇ ಆಡಿಯೊ ರೆಕಾರ್ಡ್ ಮಾಡಿಲ್ಲ ಎಂದು ಹೇಳಿದೆ.

ಕಾಯ್ದಿಟ್ಟ ಆಟಗಾರ: ಮೆಕ್‌ಗುರ್ಕ್, ಶಾರ್ಟ್

ನವದೆಹಲಿ (ಪಿಟಿಐ): ಭರ್ಜರಿ ಹೊಡೆತಗಳ ಆಟಗಾರ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಮತ್ತು ಮ್ಯಾಥ್ಯೂ ಶಾರ್ಟ್ ಅವರು ಅಮೆರಿಕ– ವೆಸ್ಟ್ ಇಂಡೀಸ್‌ನಲ್ಲಿ ಮುಂದಿನ ತಿಂಗಳು ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ತಂಡದ ಕಾಯ್ದಿಟ್ಟ ಆಟಗಾರರಾಗುವ ಸಾಧ್ಯತೆಯಿದೆ.

22 ವರ್ಷದ ಮೆಕ್‌ಗುರ್ಕ್ ಐಪಿಎಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆರಂಭ ಆಟಗಾರರಾಗಿ ಕೆಲವು ಸ್ಫೋಟಕ ಇನಿಂಗ್ಸ್‌ಗಳನ್ನು ಆಡಿದ್ದರು. ಆದರೆ ಅವರು ಇನ್ನೂ ಟಿ20 ಅಂತರರಾಷ್ಟ್ರೀಯ ತಂಡಕ್ಕೆ ಪದಾರ್ಪಣೆ ಮಾಡಿಲ್ಲ. ವಿಶ್ವಕಪ್ 15 ಸದಸ್ಯರ ತಂಡಕ್ಕೆ ಆಯ್ಕೆಯಾಗಿರಲಿಲ್ಲ.

ಅನುಭವಿಗಳಾದ ಡೇವಿಡ್ ವಾರ್ನರ್, ಟ್ರಾವಿಸ್ ಹೆಡ್ ಮತ್ತು ಮಿಚೆಲ್ ಮಾರ್ಷ್ ಅವರು ಮೊದಲ ಮೂರು ಕ್ರಮಾಂಕದಲ್ಲಿ ಆಡುವ ಕಾರಣ ಮೆಕ್‌ಗುರ್ಕ್‌ಗೆ ಅವಕಾಶ ಸಿಕ್ಕಿರಲಿಲ್ಲ.

ಏಷ್ಯನ್ ರಿಲೆ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಚಿನ್ನ

4x400 ಮೀ. ರಿಲೆ ತಂಡದ ದಾಖಲೆ



ಭಾರತದ 4X400 ಮೀಟರ್ ಮಿಶ್ರ ರಿಲೆ ತಂಡದ ಅಮೋಜ್ ಜೇಕಬ್, ಜ್ಯೋತಿಕಾ ಶ್ರೀ ದಂಡಿ, ಮುಹಮ್ಮದ್ ಅಜ್ಮಲ್, ಶುಭಾ ವೆಂಕಟೇಶನ್ ಎಕ್ಸ್ ಚಿತ್ರ

ಬ್ಯಾಂಕಾಕ್ (ಪಿಟಿಐ): ಭಾರತದ 4X400 ಮೀಟರ್ ಮಿಶ್ರ ರಿಲೆ ತಂಡವು ಏಷ್ಯನ್ ರಿಲೆ ಚಾಂಪಿಯನ್‌ಷಿಪ್‌ನ ಚೊಚ್ಚಲ ಆವೃತ್ತಿಯಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ರಾಷ್ಟ್ರೀಯ ದಾಖಲೆ ನಿರ್ಮಿಸಿತು. ಆದರೆ, ಪ್ಯಾರಿಸ್ ಒಲಿಂಪಿಕ್ಸ್ ಗೆ ನಿಗದಿ ಪಡಿಸಿದ್ದ ಅರ್ಹತಾ ಮಟ್ಟ ತಲುಪುವಲ್ಲಿ ವಿಫಲವಾಯಿತು.

ಮುಹಮ್ಮದ್ ಅಜ್ಮಲ್, ಜ್ಯೋತಿಕಾ ಶ್ರೀ ದಂಡಿ, ಅಮೋಜ್ ಜೇಕಬ್ ಮತ್ತು ಶುಭಾ ವೆಂಕಟೇಶನ್ ಅವರನ್ನೊಳಗೊಂಡ ತಂಡ 3 ನಿಮಿಷ 14.12 ಸೆಕೆಂಡುಗಳಲ್ಲಿ ಗುರಿ ತಲುಪಿತು.

ಕಳೆದ ವರ್ಷ ಹಾಂಗೌಝೌ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದ ಭಾರತ ತಂಡ 3 ನಿಮಿಷ 14.34 ಸೆಕೆಂಡುಗಳಲ್ಲಿ ಗುರಿ ತಲುಪಿತ್ತು.

ರಿಲೆ ಓಟದ ಎಲ್ಲಾ ನಾಲ್ಕು ಲೆಗ್‌ಗಳಲ್ಲೂ ಭಾರತ ಮುನ್ನಡೆ ಸಾಧಿಸಿತು. ಶ್ರೀಲಂಕಾ (3 ನಿಮಿಷ 17 ಸೆ.) ಹಾಗೂ ವಿಯೆಟ್ನಾಂ (3 ನಿಮಿಷ 18.45 ಸೆ) ಕ್ರಮವಾಗಿ ಎರಡನೇ ಹಾಗೂ ಮೂರನೇ ಸ್ಥಾನ ಪಡೆಯಿತು.

ಮಿಶ್ರ 4 × 400 ಮೀಟರ್ ರಿಲೆ ಸ್ಪರ್ಧೆಯಲ್ಲಿ ಕೇವಲ ಹದಿನಾರು ತಂಡಗಳು ಮಾತ್ರ ಸ್ಪರ್ಧಿಸುವುದರಿಂದ ಭಾರತವು ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವುದು ಕಠಿಣವಾಗಿದೆ. ಈ ತಿಂಗಳ ಆರಂಭದಲ್ಲಿ ಬಹಾಮಾಸ್‌ನ ನಾಸೌದಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ರಿಲೆಗಳಲ್ಲಿ ಹದಿನಾಲ್ಕು 4 × 400 ಮಿ. ಮಿಶ್ರ ತಂಡಗಳು ಈಗಾಗಲೇ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿವೆ. ಜೂನ್ 30ರೊಳಗೆ ದೇಶಗಳ ಅತ್ಯುತ್ತಮ ಸಮಯದ ಆಧಾರದ ಮೇಲೆ ಕೇವಲ ಎರಡು ಸ್ಥಾನಗಳನ್ನು ಭರ್ತಿ ಮಾಡಲು ಮಾತ್ರ ಉಳಿದಿದೆ.

ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸುವ ಪಟ್ಟಿಯಲ್ಲಿ ಜೆಕ್ ಗಣರಾಜ್ಯ (3ನಿ 11.98 ಸೆ) ಮತ್ತು ಇಟಲಿ (3ನಿ 13.56 ಸೆ) ಕ್ರಮವಾಗಿ 15 ಮತ್ತು 16ನೇ ಸ್ಥಾನದಲ್ಲಿವೆ. ಎರಡನೇ ದಿನವಾದ ಮಂಗಳವಾರ ಪುರುಷರ ಮತ್ತು ಮಹಿಳೆಯರ 4 × 400 ಮೀಟರ್ ರಿಲೆ ರೇಸ್‌ನಲ್ಲಿ ಭಾರತ ಸ್ಪರ್ಧಿಸಲಿದೆ.